ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 12, ಸಂಚಿಕೆ : 3 ಜನವರಿ–ಮಾರ್ಚ್ 2024
Volume : 12, Issue : 3 January - March 2024

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಹೆಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal   ISSN: 2278-2192
Included in UGC - CARE List
Volume 12, Issue 3, January - March 2024

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size	:	Dy 1/8
Paper Used	:	70 GSM
Pages	:	128
Price	:	Rs. 50

ಮುಖಪುಟ ಚಿತ್ರ : **ಕೊನಾರ್ಕ್ ಸೂರ್ಯ ದೇವಾಲಯದ ಬಳಿ ಇರುವ ಶಿಲ್ಪ**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002 / 7019225774

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ಆಧುನಿಕ ಕನ್ನಡ ಸಾಹಿತ್ಯ ಮತ್ತು ಯಕ್ಷಗಾನ ಛಂದಸ್ಸು
❖ ಶಿವಕುಮಾರ ಅಳಗೋಡು / 7

2. ಅಜ್ಞಾತನೊಬ್ಬನ ಆತ್ಮಚರಿತ್ರೆ : ಜನಪದೀಯ ಅಂಶಗಳು
❖ ಡಾ. ವಿಜಯಕುಮಾರ ಎಚ್. ವಿಶ್ವಮಾನವ
ಡಾ. ಆಶಾರಾಣಿ ಎಂ.ಪಿ.
ಡಾ ಮಹಾಂತ ಗೌಡ
ಡಾ. ಧನಂಜಯ ಪಿ.ಕೆ. / 16

3. ಗೈರ ಸಮಜೂತಿ : ಕಥನ ಕಲೆಯ ಹೊಸ ಮಜಲು
❖ ವಿಕ್ರಮ ವಿಸಾಜಿ / 23

4. ಕುವೆಂಪು ಕವಿತೆಗಳು ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯದ ಒಳನೋಟ
❖ ಡಾ. ದೊರೇಶ / 28

5. ಮಾಧವಿಯ ಮೌನ
❖ ಡಾ. ಸಂಗೀತ ಪಿ. / 36

6. ಮೈಸೂರು ಸಂಸ್ಥಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡಯರ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು
❖ ಡಾ. ಮೋಹನ್ ಕೆ.ಎನ್. / 43

7. ಉರಿಯ ಚಿಗುರ ಉತ್ಕಲೆ : ವಿಶ್ಲೇಷಣೆ
❖ ಡಾ. ಸೀತಾ ಹೆಚ್.ಎನ್. / 50

8. ಸ್ವಧರ್ಮ, ಮನಃಸಾಕ್ಷಿ ಮತ್ತು 'ಧರ್ಮಯುದ್ಧ'ವೆಂಬ ಕಾದಂಬರಿ
❖ ಕೃಷ್ಣಪ್ರಕಾಶ ಉಳಿತ್ತಾಯ, ಈಶಾವಾಸ್ಯ / 55

9. ಅಲ್ಲಮನ ಅನುಭಾವ
❖ ಡಾ. ಎ.ಸಿ ವಾಲಿ / 58

10. ಕರ್ನಾಟಕ ಸಂಗೀತಕ್ಕೆ ಮೈಸೂರು ವಾಗ್ಗೇಯಕಾರರ ಕೊಡುಗೆ
❖ ವಿಜಯಾ / 63

11. ನಾಶವಾದ ನೈಜ ಸಂಸ್ಕೃತಿ
❖ ರೇಶ್ಮಾ ಭಟ್/ 72

12. ಚಂಗಾಳ್ವ ರಾಜಮನೆತನದ ಸಮಕಾಲೀನ ಸಾಂಸ್ಕೃತಿಕ ಅಧ್ಯಯನ

❖ ಡಾ. ಸುರೇಶ ಬಿ.ಸಿ.
ಡಾ. ಮೋಹನ್ ಕೆ.ಎನ್.
ಡಾ. ಸಬೀರಾ ಫೀರ್ದೋಸ್ / 79

13. ಕರ್ನಾಟಕದಲ್ಲಿನ ಭೂ ಸುಧಾರಣೆಗಳು

❖ ಡಾ. ರಮೇಶ ಟಿ. / 84

14. ಅಳಿವಿನಂಚಿನಲ್ಲಿರುವ ಗಿಡಮೂಲಿಕೆಗಳು ಮತ್ತು ನಾಗಬನ

❖ ಆರ್. ದುರ್ಗಾ ಮೆನನ್ / 94

15. ಠಾಗೋರ್ ಮತ್ತು ಕುವೆಂಪುರವರ ವಿಶ್ವಮಾನವತ್ವದ ಪರಿಕಲ್ಪನೆ

❖ ಡಾ ಮಹಾಂತ ಗೌಡ
ಡಾ. ಧನಂಜಯ ಪಿ.ಕೆ. / 98

16. ತೇಜಸ್ವಿ ಕಾದಂಬರಿಗಳಲ್ಲಿ ಶ್ರೀ ಸಾಮಾನ್ಯರ ವಿಶಿಷ್ಟ ಲೋಕ

❖ ಡಾ. ಶಂಕರೇಗೌಡ.ಎನ್.ಎಸ್. / 103

17. ಕುಂಬಾರಕಿಯ ತತ್ತ್ವದಲ್ಲಿ ಶಿಶುನಾಳ ಶರೀಫರ ಚಿಂತನೆ

❖ ಡಾ. ರವಿಶಂಕರ್ ಎ.ಕೆ. / 110

18. ಅನ್ಯಭಾಷಿಕರಿಗಾಗಿ ಕನ್ನಡ

❖ ಗಿರೀಶ ಭಟ್ ಅಜಕ್ಕಳ/ 116

19. ಶೋಕಚಕ್ರ ನಾಟಕ : ಕೆಲವು ಟಿಪ್ಪಣಿಗಳು

❖ ಡಾ ಪಿ.ಬಿ. ಪ್ರಸನ್ನ / 120

20. ರಾಘವಾಂಕನ ಹರಿಶ್ಚಂದ್ರ ಕಾವ್ಯ : ವಿಭಿನ್ನ ಆಯಾಮಗಳು

❖ ಡಾ. ದೇವಿಕ ಎಸ್. / 125

ಸಂಪಾದಕೀಯ

ಚಿಂತನ ಬಯಲು ತ್ರೈಮಾಸಿಕ ಪತ್ರಿಕೆ ಹನ್ನೆರಡು ವರ್ಷಗಳನ್ನು ಪೂರ್ತಿಗೊಳಿಸಿದೆ. ಆರಂಭದ ಎರಡು ಪ್ರಾಯೋಗಿಕ ಸಂಚಿಕೆಗಳನ್ನು ಸೇರಿಸಿದರೆ ಈಗಾಗಲೇ 48 ಸಂಚಿಕೆಗಳು ಬಂದು ಇದು 49ನೇ ಸಂಚಿಕೆಯಾಗಿದೆ. ಹನ್ನೆರಡು ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಈ ಸಂಚಿಕೆಯನ್ನು ಹೆಚ್ಚು ಲೇಖನಗಳು ಹಾಗೂ ಹೆಚ್ಚು ಪುಟಗಳೊಂದಿಗೆ ವಿಶೇಷ ಸಂಚಿಕೆಯಾಗಿ ರೂಪಿಸಲಾಗಿದೆ.

ಈಚೆಗೆ ಹೆಚ್ಚು ಹೆಚ್ಚು ಸಂಶೋಧಕರು ಹಾಗೂ ಸಹಾಯಕ/ ಸಹ ಪ್ರಾಧ್ಯಾಪಕರು ಕನ್ನಡದಲ್ಲಿ ಸಂಶೋಧನ ಲೇಖನಗಳನ್ನು ಬರೆಯುತ್ತಿದ್ದಾರೆ. ಆದರೆ ಎಲ್ಲವೂ ಉತ್ತಮ ಗುಣಮಟ್ಟದ ಲೇಖನಗಳು ಎಂದು ಹೇಳಲು ಸಾಧ್ಯವಿಲ್ಲ. ಇದ್ದುದರಲ್ಲಿ ಉತ್ತಮ ಲೇಖನಗಳು ಆಯ್ಕೆಯಾಗಿ ಪ್ರಕಟವಾಗುತ್ತವೆ. ಎಷ್ಟೋ ಬಾರಿ ಲೇಖನಗಳು ಆಯ್ಕೆಯಾಗದೆ ಹೋದಾಗ ಅವನ್ನು ಬರೆದವರು 'ಲೇಖನಗಳು ಹೇಗಿರಬೇಕು ಎನ್ನುವುದನ್ನಾದರೂ ಹೇಳಿ' ಎನ್ನುವ ಒತ್ತಾಯವನ್ನೂ ಮಾಡುತ್ತಾರೆ. ಲೇಖನಗಳು ಹೇಗಿರಬೇಕು ಎಂದು ಹೇಳುವುದಕ್ಕಿಂತ ಹೇಗಿರಬಾರದು ಎನ್ನುವುದು ಸುಲಭ. ಕಾಲೇಜುಗಳಲ್ಲಿ ಬೋಧಿಸುತ್ತಿರುವ ಪ್ರಾಧ್ಯಾಪಕರು ಕೂಡ ಯಾವುದೋ ಇಂಗ್ಲಿಷ್ ಲೇಖನದ ಗೂಗಲ್/ ಕೃತಕ ಬುದ್ಧಿಮತ್ತೆಯ ಅನುವಾದವನ್ನು, ಪರಿಷ್ಕರಿಸುವ ಗೋಜಿಗೂ ಹೋಗದೆ ಹಾಗೆಹಾಗೆಯೇ ಕಳುಹಿಸುವುದನ್ನು ಕಂಡಾಗ ದುಃಖವಾಗುತ್ತದೆ. ಯಾವ ಶ್ರಮವೂ ಇಲ್ಲದೆ ಸಂಶೋಧನ ಲೇಖನಗಳು ಅಥವಾ ವಿಮರ್ಶಾ ಲೇಖನಗಳು ಸಿದ್ಧವಾಗಬೇಕು ಎಂದರೆ ಹೇಗಾದೀತು?

ಕನ್ನಡದಲ್ಲಿ ಉತ್ತಮವಾದ ವಿಮರ್ಶೆ ಮತ್ತು ಸಂಶೋಧನ ಲೇಖನಗಳು ಹೆಚ್ಚು ಹೆಚ್ಚು ಬರಬೇಕು ಎನ್ನುವ ನಿಟ್ಟಿನಲ್ಲಿ ಹನ್ನೆರಡು ವರ್ಷಗಳ ಹಿಂದೆ ಈ ಪತ್ರಿಕೆಯನ್ನು ಆರಂಭಿಸಲಾಯಿತು. ಇಷ್ಟು ವರ್ಷಗಳಲ್ಲಿ ಅಂಚೆ ವೆಚ್ಚ ಒಂದು ಬದಲಾಗಿಲ್ಲ. ಅದು ಬಿಟ್ಟರೆ ವೇತನವೂ ಸೇರಿದಂತೆ ಉಳಿದೆಲ್ಲವೂ ಎಷ್ಟು ಏರಿದೆ ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ಹನ್ನೆರಡು ವರ್ಷಗಳಲ್ಲಿ ಚಂದಾಹಣವನ್ನು ಒಂದು ಪೈಸೆಯೂ ಏರಿಸಿಲ್ಲ! ಪತ್ರಿಕೆಯ ಕಳೆದ 48 ಸಂಚಿಕೆಗಳಲ್ಲಿ ಒಟ್ಟು ಸುಮಾರು ಇನ್ನೂರಕ್ಕಿಂತ ಹೆಚ್ಚು ಸಂಶೋಧಕ/ ಲೇಖಕ/ ಲೇಖಕಿಯರ ಲೇಖನಗಳು ಪ್ರಕಟವಾಗಿವೆ. ಆದರೆ ಪತ್ರಿಕೆಯನ್ನು ತರಿಸಿಕೊಂಡು ಓದುವ ಸಂಶೋಧಕರು/ ಬೋಧಕರು ಕಡಿಮೆಯೇ! ಹಾಗೆಂದು ಲೇಖನಕ್ಕೆ ಸಂಭಾವನೆಯಾಗಿ ಕಳುಹಿಸಿದ ಚೆಕ್ಕನ್ನು ನಗದು ಮಾಡಿಸುವುದಿಲ್ಲವೆಂಬ ಹಠದಿಂದ ಕೂತ ಲೇಖಕರೂ ಇದ್ದಾರೆ!

ಪತ್ರಿಕೆಯ ಜಾಲತಾಣ ಈಗ ಸಿದ್ಧವಾಗಿದೆ. ಅಲ್ಲಿ ಕೆಲವು ಹಳೆಯ ಸಂಚಿಕೆಗಳೂ ಲಭ್ಯವಿವೆ. ಓದುಗರು ಈ ಜಾಲತಾಣಕ್ಕೆ ಭೇಟಿ ನೀಡಬಹುದು.

www.chinthanabayalu.in

ಓದುಗರ ಪ್ರತಿಕ್ರಿಯೆ ಮತ್ತು ಪ್ರೋತ್ಸಾಹ ಇರಲಿ.

–ಸಂ.

ಆಧುನಿಕ ಕನ್ನಡ ಸಾಹಿತ್ಯ ಮತ್ತು ಯಕ್ಷಗಾನ ಛಂದಸ್ಸು

ಶಿವಕುಮಾರ ಅಳಗೋಡು
ಕನ್ನಡ ಉಪನ್ಯಾಸಕರು, ಪೂರ್ಣಪ್ರಜ್ಞ ಕಾಲೇಜು, ಉಡುಪಿ

ಒಂದೂವರೆ ಸಾವಿರಕ್ಕೂ ಹೆಚ್ಚು ವರ್ಷಗಳ ಲಿಖಿತ ಪರಂಪರೆಯನ್ನು ಹೊಂದಿರುವ ಕನ್ನಡ ಸಾರಸ್ವತ ಲೋಕವು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳೆನ್ನುವ ಸ್ವರೂಪ ವೈವಿಧ್ಯದಿಂದ ಸಮೃದ್ಧವಾಗಿದೆ. ಚಂಪೂಯುಗದಲ್ಲಿ ವೃತ್ತಗಳು, ಕಂದಪದ್ಯ, ನಡುಗನ್ನಡ ಕಾಲದಲ್ಲಿ ಷಟ್ಪದಿ, ರಗಳೆ, ತ್ರಿಪದಿ, ಸಾಂಗತ್ಯ ಮೊದಲಾದ ವಿಭಿನ್ನ ಬಗೆಯ ಛಂದಸ್ಸುಗಳು ಕಾವ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಚ್ಚಿನ ಪದ್ಯಗಳು ಮುಕ್ತಛಂದದ ವ್ಯಾಪ್ತಿಗೆ ಒಳಪಟ್ಟರೂ ಕೆಲವು ಕವನಗಳು ಪ್ರಾಸವಿರಹಿತವಾಗಿ ಮಾತ್ರಾಗಣ ಪ್ರಧಾನವಾದ ಬಂಧದಲ್ಲಿದ್ದು, ಗಾನಸೌಂದರ್ಯವನ್ನು ಉಳಿಸಿಕೊಂಡಿವೆ.

ಕನ್ನಡ ಸಾಹಿತ್ಯ ಹಾಗೂ ಕರಾವಳಿ ಕರ್ನಾಟಕದ ಪರಿಪೂರ್ಣ ಕಲೆಯಾದ ಯಕ್ಷಗಾನಕ್ಕೆ ಅವಿನಾಭಾವ ಸಂಬಂಧವಿದೆ. ಅನೇಕ ಯಕ್ಷಗಾನ ಪ್ರಸಂಗಗಳಿಗೆ ಕನ್ನಡದ ಶ್ರೇಷ್ಠ ಕವಿಗಳಾದ ಕುಮಾರವ್ಯಾಸ, ಲಕ್ಷ್ಮೀಶ, ತೊರವೆ ನರಹರಿ ಇವರ ಕಾವ್ಯಗಳು ಮೂಲವಾಗಿವೆ. ಕೆಲವು ಯಕ್ಷಗಾನ ಕವಿಗಳು ಮೂಲ ಕವಿಗಳ ಕೆಲವು ಪದ್ಯಗಳನ್ನು ಯಥಾವತ್ತಾಗಿ ತಮ್ಮ ಪ್ರಸಂಗಗಳಲ್ಲಿ ಬಳಸಿ ಅವರಿಗೆ ಗೌರವ ಸಲ್ಲಿಸಿರುವುದೂ ಇದೆ.

ವಿಭಿನ್ನ ಕಥಾಹಂದರವನ್ನು ಛಂದೋಬದ್ಧ ಪದ್ಯಸಾಹಿತ್ಯದ ಮೂಲಕ ಸುಂದರವಾಗಿ ನಿರೂಪಿಸುವುದೇ ಪ್ರಸಂಗ. ಪ್ರಸಂಗದ ಪದ್ಯಗಳಿಗೆ ಛಂದಸ್ಸೇ ಜೀವಾಳ. ತಾಳದ ಮೂಲವಾಗಿರುವ ಛಂದಸ್ಸು ಪದ್ಯದ ಆಯ, ಅಳತೆ, ವ್ಯಾಪ್ತಿಗಳನ್ನು ವಿವರಿಸುವ ಶಾಸ್ತ್ರವಾಗಿದೆ. ಇದು ಪದ್ಯದ ಸೌಂದರ್ಯವನ್ನು ವೃದ್ಧಿಸಿ, ದೋಷವನ್ನು ನಿವಾರಿಸಿ, ಸಹೃದಯನ ಮನಸ್ಸಿಗೆ ಆಹ್ಲಾದವನ್ನು ಒದಗಿಸಿಕೊಡುತ್ತದೆ. ಯಕ್ಷಗಾನ ಪ್ರಸಂಗದ ಪದ್ಯಗಳೆಲ್ಲವೂ ನಿರ್ದಿಷ್ಟವಾದ ಛಂದೋಬಂಧದಲ್ಲಿದ್ದು ವರಣ, ಪಲ್ಲವಿ, ಅನುಪಲ್ಲವಿ, ಮುಡಿ, ಅನುಪದ, ಶಿಖಾಪದ ಪ್ರಾಸ, ಗಣ, ಮಾತ್ರೆ ಮೊದಲಾದ ಮುಖ್ಯ ಅಂಶಗಳನ್ನು ಗರ್ಭೀಕರಿಸಿಕೊಂಡಿರುತ್ತವೆ. ಪ್ರಸಂಗಸಾಹಿತ್ಯವು ಮಾತ್ರಾಗಣ, ಅಂಶಗಣ, ಅಕ್ಷರಗಣಗಳ ಛಂದಸ್ಸನ್ನು ಹೊಂದಿರುವುದರೊಂದಿಗೆ ಮಾತ್ರಾಗಣ ಹಾಗೂ ಅಂಶಗಣಗಳ ಮಿಶ್ರಛಂದಸ್ಸನ್ನೂ ಚೆನ್ನಾಗಿ ಬಳಸಿಕೊಂಡಿದೆ.

ಆಧುನಿಕ ಕನ್ನಡ ಸಾಹಿತ್ಯದ ಕೆಲವು ಕವನಗಳಲ್ಲಿ ಹೊಸಗನ್ನಡದ ಛಂದೋಲಯಗಳನ್ನು ಗುರುತಿಸಬಹುದು. ಇವು ಯಕ್ಷಗಾನ ಛಂದಸ್ಸಿಗೆ ಬಹಳ ಹತ್ತಿರವಾಗಿವೆ. ಕೆ.ಎಸ್.ನ, ಪು.ತಿ.ನ, ಬೇಂದ್ರೆ, ಬಿ.ಎಂ.ಶ್ರೀ, ಕುವೆಂಪು, ವಿ.ಸೀ ಮೊದಲಾದವರ ಕವನಗಳಲ್ಲಿನ ಛಂದೋಲಯಕ್ಕೂ ಯಕ್ಷಗಾನ ಛಂದಸ್ಸಿಗೂ ಇರುವ ನಿಕಟ ಸಂಬಂಧವನ್ನು ಹೀಗೆ ವಿವೇಚಿಸಬಹುದು.

'ಮಾರವಿ ಏಕ' ಛಂದಸ್ಸು

ಮಾರವಿ ಏಕದ ಆರು ಪಾದಗಳಲ್ಲಿ ನಾಲ್ಕು ಮಾತ್ರೆಗಳ ಎರಡು ಗಣಗಳು ಹಾಗೂ ಮೂರು, ಆರನೆಯ ಪಾದಗಳಲ್ಲಿ ನಾಲ್ಕು ಮಾತ್ರೆಗಳ ಎರಡು ಗಣಗಳೊಂದಿಗೆ ಒಂದು ಗುರುವಿರುತ್ತದೆ. ಈ ಆರೂ ಪಾದಗಳಲ್ಲಿಯೂ ಆದಿಪ್ರಾಸವಿದ್ದು, ಮೂರನೆಯ ಪಾದದ ಗುರು ಸ್ಥಾನದಲ್ಲಿ ಅಂತ್ಯಪ್ರಾಸದ ಸೌಂದರ್ಯವಿರುತ್ತದೆ. ಮಾರವಿ ಏಕಕ್ಕೆ ನಾಲ್ಕೇ ಪಾದಗಳು ಎನ್ನುವ ಮತಭೇದವೂ ಇದೆ. ಚತುಷ್ಪಾದದ ಮಾರವಿ ಏಕದಲ್ಲಿ ಕೆಲವು ಕವಿಗಳು ಒಂದು ಮತ್ತು ಮೂರನೆಯ ಪಾದದಲ್ಲಿನ ಮೂರನೆಯ ಗಣಸ್ಥಾನದಲ್ಲಿ ಆದಿಪ್ರಾಸವನ್ನು ತೊರೆದು ಬರೆದಿರುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಪ್ರಾಸಸಹಿತವಾಗಿ ಬರೆದ ನಿದರ್ಶನಗಳೂ ಇವೆ. ಈ ಮಾರವಿ ಏಕ ಛಂದೋಬಂಧವು ಕನ್ನಡದ 'ಅಕ್ಕರಿಕೆ' ಎನ್ನುವ ಛಂದಸ್ಸಿಗೆ ಹೋಲಿಕೆಯಾಗುತ್ತದೆ. ಸಮವೃತ್ತವಾದ ಒಂದು ಅಕ್ಕರಿಕೆಯು ಯಕ್ಷಗಾನದ ಎರಡು ಮಾರವಿ ಏಕದ ಪದ್ಯಗಳಿಗೆ ಸಮ. ಅರ್ಥಾತ್ ಒಂದು ಮಾರವಿ ಏಕವು ಅರ್ಧ ಅಕ್ಕರಿಗೆ ಸಮ.

ಕೆ.ಎಸ್. ನರಸಿಂಹಸ್ವಾಮಿಯವರ 'ಕನ್ನಡ ಮಾಧ್ಯಮ' ಕವನವು ಮಂದಾನಿಲ ಲಯವನ್ನು ಹೊಂದಿದ್ದು, ಯಕ್ಷಗಾನದ 'ಮಾರವಿ ಏಕ'ದ ಲಕ್ಷಣವನ್ನು ಬಹುವಾಗಿ ಹೋಲುತ್ತದೆ. ಮಾರವಿ ಏಕದಲ್ಲಿ ಆದಿಪ್ರಾಸ ಕಡ್ಡಾಯವಾಗಿದ್ದು, ಅಂತ್ಯಪ್ರಾಸವೂ ಅಗತ್ಯವಾಗಿ ಇರಬೇಕಾಗುತ್ತದೆ. ಆದರೆ ಇಲ್ಲಿ ಅಂತ್ಯಪ್ರಾಸವಿದ್ದರೂ ಆದಿಪ್ರಾಸವಿಲ್ಲ. ಎರಡು, ಮೂರನೆಯ ಪಾದದಲ್ಲಿ ಪ್ರಾಸವಿರುವಂತೆ ಕಾಣಿಸಿದರೂ ಮೊದಲ ಹಾಗೂ ಕೊನೆಯ ಪಾದವು ಆದಿಪ್ರಾಸವಿರಹಿತವಾಗಿದೆ.

ಶಿಕ್ಷಣ । ಮಾಧ್ಯಮ । ವಾದರೆ । ಸಾಲದು ।	**4।4।4।4।**
ಕನ್ನಡ । ಕವಿಗಳಿ । ಗೆ ॥	**4।4।ಗು**
ಕನ್ನಡ । ಲಿಪಿಯಲಿ । ಏನಿದು । ಸಂಸ್ಕೃತ ।	**4।4।4।4।**
ಪದಗಳ । ಮೆರವಣಿ । ಗೆ ॥	**4।4।ಗು**

ಬಿ. ಎಂ. ಶ್ರೀಯವರ 'ಬಿಂಕದ ಸಿಂಗಾರಿ' (ಶ್ರೀ ಸಾಹಿತ್ಯ, ಪು: 89) ಕವನವು ಚತುರ್ಮಾತ್ರಾಗಣ ಪ್ರಧಾನವಾದ ಮಂದಾನಿಲ ಲಯದಲ್ಲಿದ್ದು, ಯಕ್ಷಗಾನದ ಮಾರವಿ ಏಕ ಛಂದಸ್ಸಿನ ಪದ್ಯವನ್ನು ಯಥಾವತ್ತಾಗಿ ಹೋಲುತ್ತದೆ. ಈ ಪದ್ಯದ ಮೂರನೆಯ ಪಾದದ ಕೊನೆಯ ಗಣದಲ್ಲಿ ಮೂರು ಮಾತ್ರೆಗಳು ಮಾತ್ರ ಇದ್ದರೂ ಅದು ಹಾಡುವಾಗ ನಾಲ್ಕು ಮಾತ್ರೆಯನ್ನೇ ಹೊಂದುವುದರಿಂದ ಅದನ್ನು ನಾಲ್ಕು ಮಾತ್ರೆಯ ಗಣವೆಂದೇ ಪರಿಗಣಿಸಬೇಕಾಗುತ್ತದೆ.

ಚಿಮ್ಮುತ । ನಿರಿಯನು । ಬನದಲಿ । ಬಂದಳು ।	**4।4।4।4।**
ಬಿಂಕದ । ಸಿಂಗಾ । ರಿ ॥	**4।4।ಗು**
ಹೊಮ್ಮಿದ । ಹಸುರಲಿ । ಮೆರೆಯಿತು । ಹಕ್ಕಿ$ ।	**4।4।4।4।**
ಕೊರಳಿನ । ದನಿದೋ । ರಿ ॥	**4।4।ಗು**

ಯಕ್ಷಗಾನ ಕವಿ ದೇವಿದಾಸನ 'ಕೃಷ್ಣ ಸಂಧಾನ' ಪ್ರಸಂಗದಲ್ಲಿ ಬಳಕೆಯಾದ ಆದಿ, ಅಂತ್ಯಪ್ರಾಸಸಹಿತವಾದ 'ಮಾರವಿ ಏಕ'ದ ಪದ್ಯ ಹೀಗಿದೆ–

ಲಾಲಿಸು । ಕೌರವ । ವಿಪ್ರರ । ಪೌರುಷ ।	**4।4।4।4।**
ದೇಳಿಗೆ । ಭೋಜನ । ದಿ ॥	**4।4।ಗು।**

ಲೀಲೆಗ । ಳಲ್ಲದೆ । ಮೆರೆವುದೆ । ರಿಪು ಸ । 4।4।4।4।
ಮ್ಮೇಳದ । ಸಮ್ಮುಖ । ದಿ ॥ 4।4।ಗು।

(ಕೃಷ್ಣ ಸಂಧಾನ ಮತ್ತು ಭೀಷ್ಮಪರ್ವ, ಪು: 10)

'ಆರ್ಯಸವಾಯ್ ಏಕ' ಛಂದಸ್ಸು

ಚತುರ್ಮಾತ್ರಾಗಣ ಪ್ರಧಾನವಾದ ಮಂದಾನಿಲ ಲಯದ ಆರ್ಯಸವಾಯ್ ಏಕವನ್ನು ಯಕ್ಷಗಾನದಲ್ಲಿ ವಿಫುಲವಾಗಿ ಬಳಸಲಾಗಿದೆ. ಈ ಬಂಧದಲ್ಲಿ ನಾಲ್ಕು ಪಾದಗಳಿದ್ದು ವಿಷಮ ಪಾದಗಳು ಮಾರವಿ ಏಕದಂತೆಯೇ ಇರುತ್ತವೆ. ಸಮಪಾದಗಳಲ್ಲಿ ಮಾರವಿ ಏಕದ ಸಮಪಾದಗಳ ಗಣಕ್ಕಿಂತ ಚತುರ್ಮಾತ್ರೆಯ ಗಣವೊಂದು ಹೆಚ್ಚಿದ್ದು ಗುರುವಿರುತ್ತದೆ. ಸಮಪಾದಗಳ ಕೊನೆಯಲ್ಲಿ ಅಂತ್ಯಪ್ರಾಸದ ಸೊಬಗು ಕಾಣಿಸುತ್ತದೆ.

ಕುವೆಂಪುರವರ 'ಪ್ರೇಮಕಾಶ್ಮೀರ' ಕವನಸಂಕಲನದ 'ಆತ್ಮನಿವೇದನೆ' ಕವನದಲ್ಲಿ ಈ ಬಂಧವನ್ನು ಹೋಲುವ ರಚನೆಯನ್ನು ಕಾಣಬಹುದು. ಈ ಕವನದ ಕೊನೆಯ ಪಾದದಲ್ಲಿ ಆದಿಪ್ರಾಸವಿಲ್ಲದಿದ್ದರೂ ಮೊದಲ ಮೂರು ಪಾದಗಳಲ್ಲಿದೆ. ಸಮಪಾದಗಳ ಕೊನೆಯಲ್ಲಿ ಅಂತ್ಯಪ್ರಾಸವು ಚೆನ್ನಾಗಿ ಹೊಂದಿಕೊಂಡಿದೆ.

ಕಣ್ಣನು । ಮೋಹಿಪ । ಪೀತಾಂ । ಬರವನು । 4।4।4।4।
ಬಣ್ಣದ । ಬಳೆಗಳ । ಧರಿಸು ಸ । ಖಿ ॥ 4।4।4।ಗು।
ಚೆನ್ನನ । ಮೋಹಿಸು । ವೆದೆಯನು । ಹಾರವು । 4।4।4।4।
ಸಿಂಗರಿ । ಸಲಿ ಹೇ । ನಳಿನ ಮು । ಖಿ ॥ 4।4।4।ಗು।

ಹಟ್ಟಿಯಂಗಡಿ ರಾಮಭಟ್ಟರ 'ಸುಭದ್ರಾ ಕಲ್ಯಾಣ (ಶರಸೇತು) ಪ್ರಸಂಗದಲ್ಲಿನ ಆರ್ಯಸವಾಯ್ ಏಕದ ಪದ್ಯ ಹೀಗಿದೆ–

ಎಲೆ ಮಾ । ನವ ನೀ । ಸಲೆ ಕೈ । ಚಳಕದಿ । 4।4।4।4।
ಬಲಿದಿಹ । ಸೇತುವು । ದೇನಾ । ಯ್ತು ॥ 4।4।4।ಗು।
ಬಲಿಮುಖ । ರೈ ನಾವ್ । ಬಲುಭಟ । ರೈ ನೀವ್ । 4।4।4।4।
ಸಲುವುದೆ । ನಿಮಗೀ । ಪೌರುಷ । ವು ॥ 4।4।4।ಗು।

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು, ಪು: 257)

'ನಾಟಿ ಝಂಪೆ' ಛಂದಸ್ಸು

ಯಕ್ಷಗಾನದ ನಾಟಿ ಝಂಪೆಯು ಪಂಚಮಾತ್ರಾಗಣಪ್ರಧಾನವಾದ 'ಕುಸುಮ ಷಟ್ಪದಿ'ಯ ಮಾತ್ರಾಮೌಲ್ಯವನ್ನೇ ಹೊಂದಿ, ಚತುಷ್ಪಾದಗಳಿಂದ ಶೋಭಿಸುವ ಲಲಿತಲಯದ ಛಂದೋಬಂಧವಾಗಿದೆ. ಕೆ.ಎಸ್. ನರಸಿಂಹಸ್ವಾಮಿಯವರ ಕವನದಲ್ಲಿ ಅರ್ಧ ನಾಟಿ ಝಂಪೆಯ ಸ್ವರೂಪವನ್ನು ಕಾಣಬಹುದು.

ಬಂದಿಹೆನು । ಬಲುದೂರ । ಉರುಳಿಹುದು । ಬಹುಕಾಲ । 5।5।5।5।
ಕಾಮಭೋ । ಗದ ಕನಸ । ಕಂಡೆವ । ಲ್ಲ ॥ 5।5।5।ಗು।

ಮಧುರಚೆನ್ನರ 'ನನ್ನ ನಲ್ಲ' (ಶತಮಾನದ ಕಾವ್ಯ, ಪು : 42) ಕವನದಲ್ಲಿ ನಾಲ್ಕು ಪಾದಗಳ ಪೂರ್ಣ 'ನಾಟಿ ಝಂಪೆ'ಯ ಬಂಧಕ್ಕೆ ಸಮನಾದ ರಚನೆ ಗೋಚರಿಸುತ್ತದೆ.

ಮನೆ ಹತ್ತಿ । ಉರಿದಲ್ಲಿ । ದೂರ ಸರಿ । ಯಲು ಬಹುದು । 5।5।5।5।
ಮನಹತ್ತಿ । ಉರಿದರೆ । ಲ್ಲೋಡಬಹು । ದೊ ॥ 5।5।5।ಗು।

ಅನುತಾಪ । ವಿದ್ದಲ್ಲಿ । ತಂಪು ತೊಡೆ । ಯಲು ಬಹುದು । |5|5|5|5|

ಮನದ ಕಿ । ಚ್ಚಿನ್ನೆಂತು । ನಂದಬಹು । ದೊ ॥ 5|5|5|ಗು|

ಎಸ್. ವಿ. ಪರಮೇಶ್ವರ ಭಟ್ಟರ 'ಒಂದು ರಾತ್ರಿ' ಕವನದಲ್ಲಿ (ಶತಮಾನದ ಕಾವ್ಯ, ಪು : 124) ಅರ್ಧ ನಾಟಿ ಝಂಪೆಯನ್ನು ಹೋಲುವ ರಚನೆಯಿದೆ. ಈ ರಚನೆಯು 2+3=5 ಈ ರೀತಿಯಲ್ಲಿದ್ದು ಹಾಡುವುದಕ್ಕೆ ಸೊಗಸಾಗಿ ಹೊಂದಿಕೊಳ್ಳುವಂತಹದ್ದಾಗಿದೆ.

ತಿಳಿಮುಗಿಲ । ತೊಟ್ಟಲಲಿ । ಮಲಗಿದ್ದ । ಚಂದಿರನ । 5|5|5|5|

ಗಾಳಿ ಜೋ । ಗುಳ ಹಾಡಿ । ತೂಗುತ್ತಿ । ತ್ತು ॥ 5|5|5|ಗು

ಸು.ರಂ. ಎಕ್ಕುಂಡಿಯವರ 'ಯೋಧ ಮತ್ತು ಹೆಂಗಸು' (ಅದೇ, ಪು: 192) ಕವನದಲ್ಲಿಯೂ ಇದೇ ಬಂಧವನ್ನು ಹೋಲುವ ರಚನೆಯಿದೆ.

ಉರಿಬಿಸಿಲು । ಕೆಂಪುಹುಡಿ । ಮೈತುಂಬ । ಧೂಳಿಡಿಗಿ । 5|5|5|5|

ಕುದುರೆಯಿಳಿ । ದನು ಯೋಧ । ಜನರ ಕಂ । ಡು ॥ 5|5|5|ಗು|

ಯಕ್ಷಗಾನ ಸಭಾಲಕ್ಷಣ ಪದ್ಯದಲ್ಲಿ ನಾಟಿ ಝಂಪೆಯ ಅರ್ಧಾಂಶ ಹೀಗಿದೆ–

ಭರದಿಂದ । ರಕ್ಕಸರ । ಪುರವ ಸಾ । ಧ್ಯವ ಮಾಡಿ । 5|5|5|5|

ಹರಿ ಮೊದಲು । ನಿನ್ನ ನ । ರ್ಚಿಸಿ ಮೆಚ್ಚಿ । ಸಿ ॥ 5|5|5|ಗು|

(ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ, ಪು: 8)

'ತುಜಾವಂತು ಝಂಪೆ' ಛಂದಸ್ಸು

ತುಜಾವಂತು ಝಂಪೆಯು ಲಲಿತಲಯದ ನಾಲ್ಕುಪಾದಗಳ ಹಿರಿದಾದ ಛಂದೋಬಂಧವಾಗಿದೆ. ಯಕ್ಷಗಾನ ಪ್ರಸಂಗಸಾಹಿತ್ಯದಲ್ಲಿ ವಿಫುಲವಾಗಿ ಬಳಕೆಯಾಗಿರುವ ಈ ಬಂಧವನ್ನು ಹೋಲುವ ರಚನೆ ಅಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬಹಳ ಇದೆ. ಕುವೆಂಪು ಅವರ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು' (ಕುವೆಂಪು ಸಮಗ್ರ ಕಾವ್ಯ, ಪು: 368) ಕವನದಲ್ಲಿ ತುಜಾವಂತು ಝಂಪೆಯನ್ನೇ ಯಥಾವತ್ತಾಗಿ ಹೋಲುವ ರಚನೆಯೊಂದು ಹೀಗಿದೆ–

ಆವ ಕಾ । ಲದ ಶಾಸ್ತ್ರ । ಏನು ಹೇ । ಳಿದರೇನು । 5|5|5|5|

ಎದೆಯ ದನಿ । ಗೂ ಮಿಗಿಲು । ಶಾಸ್ತ್ರವಿಹು । ದೇನು ॥ 5|5|5|ಪು|

ಎಂದೊ ಮನು । ಬರೆದಿಟ್ಟು । ದಿಂದೆಮಗೆ । ಕಟ್ಟೇನು । 5|5|5|5|

ನಿನ್ನೆದೆಯ । ದನಿಯೆ ಋಷಿ । ಮನು ನಿನಗೆ । ನೀನು ॥ 5|5|5|ಪು|

ಡಿ. ವಿ. ಜಿ. ಅವರ ಕಗ್ಗಗಳ ಪೂರ್ವಾರ್ಧದಲ್ಲಿ ತುಜಾವಂತು ಝಂಪೆಯ ವಿನ್ಯಾಸವನ್ನೂ ಉತ್ತರಾರ್ಧದಲ್ಲಿ ನಾಟಿಝಂಪೆಯ ವಿನ್ಯಾಸವನ್ನೂ ಚೆನ್ನಾಗಿ ಗುರುತಿಸಬಹುದು.

ನಾಟಕವ । ನೋಡು ಬ್ರ । ಹ್ಮಾಂಡ ರಂ । ಗಸ್ಥಳದಿ । 5|5|5|5|

ಕೋಟಿನಟ । ರಾಂತಿಹರು । ಚಿತ್ರಪಾ । ತ್ರಗಳ ॥ 5|5|5|ಪು|

ಆಟಕ್ಕೆ । ಕಥೆಯಿಲ್ಲ । ಮೊದಲಿಲ್ಲ । ಕಡೆಯಿಲ್ಲ । 5|5|5|5|

ನೋಟಕರು । ಮಾಟಕರೆ । ಮಂಕುತಿ । ಮ್ಮ ॥ 5|5|5|ಗು|

ವಿ. ಸೀತಾರಾಮಯ್ಯನವರ 'ಅಭೀಃ' (ಶತಮಾನದ ಕಾವ್ಯ, ಪು : 32)

ಕವನದಲ್ಲಿಯೂ ಅರ್ಧ ತುಜಾವಂತು ಝಂಪೆಯ ಸ್ವರೂಪವಿದೆ–

ಕಾಡಮೌ । ನವ ಸೀಳಿ । ಹಬ್ಬುತಿದೆ । ಕೇಳುತಿದೆ । 5।5।5।5।

ಬಿತ್ತರದ । ದಿಕ್ತಟಗ । ಳಬ್ಧಿ ದಾ । ಟುತಿದೆ ॥ 5।5।5।ಪ।

ಇವರ 'ಬೇಡ' ಕವನದ (ಅದೇ, 34) ಸಾಲಿನಲ್ಲಿಯೂ ಯಕ್ಷಗಾನದ ಅರ್ಧ 'ತುಜಾವಂತು ಝಂಪೆ'ಗೆ ಸಂವಾದಿಯಾಗಿರುವ ರಚನೆಯಿದೆ–

ಎನ್ನ ಬಾ । ಳಿನ ಕತೆಗೆ । ನೀ ಬೆರೆತು । ಬಹ ಮುನ್ನ । 5।5।5।5।

ಎನ್ನ ಪ್ರೇ । ಮದ ಸುಗ್ಗಿ । ಗಾಲ ಮುಗಿ । ದಿತ್ತು ॥ 5।5।5।ಪ।

ಮುದ್ದಣನ 'ಕುಮಾರ ವಿಜಯ' ಯಕ್ಷಗಾನ ಪ್ರಸಂಗದಲ್ಲಿ ತುಜಾವಂತು ಝಂಪೆಯ ಬಳಕೆ ಹೀಗಿದೆ–

ಶರಣರನು । ರಕ್ಷಿಸುತ । ದುರುಳರನು । ಶಿಕ್ಷಿಸುತ । 5।5।5।5।

ಅರಿಗಳೊಡ । ನತಿ ಧೈರ್ಯ । ಧರಿಸುವುದು । ಶೌರ್ಯ । 5।5।5।ಪ।

ಪುರಹರನ । ಪಾದವನು । ನೆರೆ ನಂಬು । ಧರ್ಮವನು । 5।5।5।5।

ತೊರೆಯದಿರು । ಹಮ್ಮಿನೊಳು । ತರಳ ನೀ । ಬಾಳು । 5।5।5।ಪ।

(ಮುದ್ದಣನ ಕುಮಾರ ವಿಜಯ, ಪು: 32)

'ಭೈರವಿ ಝಂಪೆ' ಛಂದಸ್ಸು

ಯಕ್ಷಗಾನದಲ್ಲಿ ಭೈರವಿ ಝಂಪೆಯು ಲಲಿತಲಯದ ಪಂಚಮಾತ್ರಾಗಣದಿಂದ ಕೂಡಿರುವ ಅತ್ಯಂತ ಕಿರಿದಾದ ಝಂಪೆಯಾಗಿದೆ. ನಾಲ್ಕು ಪಾದಗಳ ತುಜಾವಂತು ಝಂಪೆಯ ಅರ್ಧಭಾಗವನ್ನು ಆದಿಪ್ರಾಸಸಹಿತವಾಗಿ ನಾಲ್ಕು ಪಾದಗಳಾಗಿ ಹೊಂದಿಸಿ ರಚಿಸಿದಾಗ ಅದು ಭೈರವಿ ಝಂಪೆಯ ಬಂಧಕ್ಕೆ ಸಮನಾಗುತ್ತದೆ. ವಿ. ಸೀಯವರ ಕವನದಲ್ಲಿ ಭೈರವಿ ಝಂಪೆಯ ರಚನೆ ಚೆನ್ನಾಗಿ ಕಾಣಿಸುತ್ತದೆ.

ಸರ್ವದಾ । ನೀನಿರುವೆ । ಸಖಿಯಾಗಿ । ಬಳಿಯಲ್ಲಿ । 5।5।5।5।

ಸುಖದಲ್ಲಿ । ದುಃಖದಲಿ । ಸ್ನೇಹಮಯಿ । ಯಾಗಿ ॥ 5।5।5।ಪ।

ಪಾರ್ತಿಸುಬ್ಬ ಕವಿ ರಚಿಸಿದ 'ಸೀತಾಕಲ್ಯಾಣ' ಯಕ್ಷಗಾನ ಪ್ರಸಂಗದಲ್ಲಿ ಭೈರವಿ ಝಂಪೆ ಹೀಗಿದೆ–

ಧರಣಿಯನು । ಶೋಧಿಸು । ತ್ತಿರಲು ಕ । ನ್ಯಾರತ್ನ । 5।5।5।5।

ದೊರಕಲಾ । ಸುರಮುನಿಪ । ಬಂದು ಮುದ । ದಿಂದ ॥ 5।5।5।ಪ।

'ಮಧುಮಾಧವಿ ತ್ರಿವುಡೆ' ಛಂದಸ್ಸು

ಯಕ್ಷಗಾನದಲ್ಲಿ ಮಧುಮಾಧವಿ ತ್ರಿವುಡೆಯು ಚತುಷ್ಪಾದಗಳ ಭಾಮಿನೀ ಷಟ್ಪದಿಯ ಮಿಶ್ರಲಯದ ಛಂದೋಬಂಧವಾಗಿದ್ದು ಆದಿಪ್ರಾಸದಿಂದ ಕೂಡಿರುವಂತಹದ್ದಾಗಿದೆ. ಇಲ್ಲಿನ ಮೂರು, ನಾಲ್ಕು ಮಾತ್ರೆಗಳು 2+1(1+1+1), 2+2(2+1+1, 1+1+1+1) ಈ ಸ್ವರೂಪದಲ್ಲಿರುತ್ತವೆ. ಬಿ.ಎಂ. ಶ್ರೀಕಂಠಯ್ಯನವರ 'ಕಾರಿಹೆಗ್ಗಡೆಯ ಮಗಳು' (ಶ್ರೀ ಸಾಹಿತ್ಯ, ಪು : 101) ಕವನದಲ್ಲಿ ಈ ಬಂಧವನ್ನು ಯಥಾವತ್ತಾಗಿ ಹೋಲುವ ರಚನೆಯನ್ನು ಕಾಣಬಹುದು–

ಪಡುವ । ದಿಬ್ಬದ । ಗೌಡ । ನೊಬ್ಬನು । **3।4।3।4।**

ಬಿಡದೆ । ತೊರೆಯನ । ಕೂಗಿ । ಕೊಂಡನು । **3।4।3।4।**

ತಡೆಯ । ದೀಗಲೆ । ಗಡುವ । ಹಾಯಿಸು । **3।4।3।4।**

ಕೊಡುವೆ । ಕೇಳಿದ । ಹೊನ್ನ । ನು ॥ **3।4।3।ಗು।**

ಕುವೆಂಪುರವರ **'ತನುವು ನಿನ್ನದು'** ಕವನದಲ್ಲಿ (ಕುವೆಂಪು ಸಮಗ್ರ ಕಾವ್ಯ, ಪು : 600) 'ಮಧುಮಾಧವಿ ತ್ರಿವುಡೆ'

ತನುವು । ನಿನ್ನದು । ಮನವು । ನಿನ್ನದು । **3।4।3।4।**

ಎನ್ನ । ಜೀವನ । ಧನವು । ನಿನ್ನದು । **3।4।3।4।**

ನಾನು । ನಿನ್ನವ । ನೆಂಬ । ಹೆಮ್ಮೆಯ । **3।4।3।4।**

ಋಣವು । ಮಾತ್ರವೆ । ನನ್ನ । ದು ॥ **3।4।3।ಗು।**

ದೇವಿದಾಸನ 'ಕೃಷ್ಣ ಸಂಧಾನ' ಪ್ರಸಂಗದಲ್ಲಿ ಬಳಕೆಯಾದ ಮಧುಮಾಧವಿ ತ್ರಿವುಡೆ ಹೀಗಿದೆ–

ಮಗುಳೆ । ಪುರುಷೋ । ತ್ತಮನ । ಸುಪ್ಪ । **3।4।3।4।**

ತ್ತಿಗೆಯ । ನೇರಿಸಿ । ಸಿರಿ ಪ । ದಾಂಬುಜ । **3।4।3।4।**

ಯುಗಳ । ವರ್ಚಿಸಿ । ನಮಿಸಿ । ಪೇಳಿದ । **3।4।3।4।**

ನಗುತ । ತನ್ನಯ । ಸತಿಯೊ । ಳು ॥ **3।4।3।ಗು।**

(ಕೃಷ್ಣ ಸಂಧಾನ ಮತ್ತು ಭೀಷ್ಮಪರ್ವ, ಪು: 22)

'ಯಮುನಾಕಲ್ಯಾಣಿ ತ್ರಿವುಡೆ' ಛಂದಸ್ಸು

ಯಕ್ಷಗಾನದಲ್ಲಿ ಈ ಬಂಧವು ಭಾಮಿನೀ ಷಟ್ಪದಿಯ ಮಿಶ್ರಲಯವನ್ನು ಹೊಂದಿ, ನಾಲ್ಕು ಪಾದಗಳಿಂದ ಕೂಡಿರುವಂತಹದ್ದು. ಗೋಪಾಲಕೃಷ್ಣ ಅಡಿಗರ 'ಮೋಹನ ಮುರಲಿ' (ಶತಮಾನದ ಕಾವ್ಯ, ಪು : 146) ಕವನವು ಯಕ್ಷಗಾನದ 'ಯಮುನಾಕಲ್ಯಾಣಿ ತ್ರಿವುಡೆ' ಬಂಧವನ್ನು ಯಥಾವತ್ತಾಗಿ ಹೋಲುತ್ತದೆ.

ಯಾವ । ಮೋಹನ । ಮುರಲಿ । ಕರೆಯಿತೊ । **3।4।3।4।**

ದೂರ । ತೀರಕೆ । ನಿನ್ನ । ನು । **3।4।3।ಗು।**

ಯಾವ । ಬೃಂದಾ । ವನವು । ಸೆಳೆಯಿತೊ । **3।4।3।4।**

ನಿನ್ನ । ಮಣ್ಣಿನ । ಕಣ್ಣ । ನು ॥ **3।4।3।ಗು।**

ಕುವೆಂಪು ಅವರ 'ದೋಣಿಹಾಡು' ಕವನವು (ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ) ಯಮುನಾಕಲ್ಯಾಣಿ ಬಂಧಕ್ಕೆ ಸಮನಾದ ಮಾತ್ರಾ ವಿನ್ಯಾಸವನ್ನು ಹೊಂದಿದೆ.

ಮುದ್ದಣನ 'ಕುಮಾರ ವಿಜಯ' ಪ್ರಸಂಗದ ಮಂಗಲ ಪದ್ಯದಲ್ಲಿ ಯಮುನಾಕಲ್ಯಾಣಿ ತ್ರಿವುಡೆ ಹೀಗಿದೆ–

ಈಶ । ಮುನಿಜನ । ಪೋಷ । ಪಾವನ । **3।4।3।4।**

ವೇಷ । ಪುಷ್ಕರ । ಕೇಶ । ಗೆ ॥ **3।4।3।ಗು।**

ದೋಷ । ರಹಿತ ಗಿ । ರೀಶ । ರವಿ ಸಂ । **3।4।3।4।**

ಕಾಶ । ತ್ರಿಪುರರ । ನಾಶ । ಗೆ ॥ **3।4।3।ಗು।**

(ಮುದ್ದಣನ ಕುಮಾರ ವಿಜಯ, ಪು: 180)

'ಶಂಕರಾಭರಣ ಮಟ್ಟೆ' ಛಂದಸ್ಸು

ಯಕ್ಷಗಾನದಲ್ಲಿ ಉತ್ಸಾಹಲಯದ ಭೋಗ ಷಟ್ಪದಿಯ ಅರ್ಧ ಭಾಗವೇ 'ಶಂಕರಾಭರಣ ಮಟ್ಟೆ' ಎನ್ನುವ ಹೆಸರಿನಿಂದ ಗುರುತಿಸಿಕೊಂಡಿದೆ. ಹೆಚ್ಚಾಗಿ ವೀರರಸದ ಅಭಿವ್ಯಕ್ತಿಯಲ್ಲಿ ಈ ಬಂಧದ ಪದ್ಯವನ್ನು ಬಳಸಲಾಗುತ್ತದೆ. ಇಲ್ಲಿರುವ ತ್ರಿಮಾತ್ರಾಗಣಗಳನ್ನು ಬ್ರಹ್ಮಗಣಗಳಂತೆ ಸಂಯೋಜಿಸಿ. ಕೊನೆಯ ಗುರುವನ್ನು ಅಂತೆಯೇ ಇಟ್ಟರೆ ಅದು 'ಶಂಕರಾಭರಣ ಏಕ'ವೆನ್ನುವ ಛಂದಸ್ಸಾಗುತ್ತದೆ. ಬಿ. ಎಂ. ಶ್ರೀಕಂಠಯ್ಯನವರ 'ಕಾಣಿಕೆ' (ಶ್ರೀ ಸಾಹಿತ್ಯ, ಪು : 59) ಕವನದಲ್ಲಿ ಯಕ್ಷಗಾನದ 'ಶಂಕರಾಭರಣ ಮಟ್ಟೆ'ಯ ಸ್ವರೂಪವಿದೆ.

ಮೊದಲು । ತಾಯ । ಹಾಲ । ಕುಡಿದು ।	**3।3।3।3।**
ಲಲ್ಲೆ । ಯಿಂದ । ತೊದಲಿ । ನುಡಿದು ।	**3।3।3।3।**
ಕೆಳೆಯ । ರೊಡನೆ । ಬೆಳೆದು । ಬಂದ । ಮಾತ । ದಾವು । ದು ॥	**3।3।3।3।3।3।ಗು**

ಪು. ತಿ. ನ ಅವರ 'ರಂಗವಲ್ಲಿ' (ಶತಮಾನದ ಕಾವ್ಯ, ಪು : 81) ಕವನದಲ್ಲಿಯೂ ಇದೇ ಸ್ವರೂಪದ ರಚನೆಯನ್ನು ಕಾಣಬಹುದು–

ಮಾಗಿ । ಬಂದು । ಗಿರಿಗೆ । ಹಗಲು ।	**3।3।3।3।**
ಹಿತದ । ಬಿಸಿಲ । ಹೊದಿಸಿ । ದಂದು ।	**3।3।3।3।**
ಹಸುಳೆ । ಗೂಡಿ । ಬೆಟ್ಟ । ತುದಿಯ । ಗುಡಿಗೆ । ನಡೆದ । ನು ॥	**3।3।3।3।3।3।ಗು**

ಹಟ್ಟಿಯಂಗಡಿ ರಾಮಭಟ್ಟರ 'ಧ್ರುವಚರಿತ್ರೆ' ಪ್ರಸಂಗದಲ್ಲಿ (ಪು, 68) ಶಂಕರಾಭರಣ ಮಟ್ಟೆ ಪದ್ಯ–

ಪರಮ । ವಿಭವ । ದಿಂದ । ಧರ್ಮ ।	**3।3।3।3।**
ಸರಣಿ । ವಿಡಿದು । ಸಕಲ । ರಾಜ್ಯ ।	**3।3।3।3।**
ಧುರವ । ನಾಂತು । ಶಕ್ರ । ನಂತೆ । ಮೆರೆವು । ತಿರ್ದ । ನು ॥	**3।3।3।3।3।3।ಗು**

'ಬೇಗಡೆ ರೂಪಕ' ಛಂದಸ್ಸು

ಬೇಗಡೆ ರೂಪಕವು ತ್ರಿಮಾತ್ರಾಗಣಪ್ರಧಾನವಾದ ಛಂದೋಬಂಧವಾಗಿದೆ. ಡಾ. ಎನ್. ನಾರಾಯಣ ಶೆಟ್ಟರು ದಾಖಲಿಸಿದ ಈ ಬಂಧವನ್ನು ವಿವರಿಸುವ ಸೂತ್ರಪದ್ಯ ಹೀಗಿದೆ–

ಸಾಗೆ ಭಾನು ಭೋಗಿ ಭೂಷ ।
ರಾಗಿ ತಗಣ ವ್ಯಾಪ ಕಂ ॥
ತೂಗಿ ಪಾದ ಯೋಗ ನಾಲ್ಕು ।
ಬೇಗ ಡೆಯೊಳು ರೂಪ ಕಂ ॥ 1 ॥ (ಯಕ್ಷಗಾನ ಛಂದೋಂಬುಧಿ, ಪು: 194)

ಇಲ್ಲಿ 'ಭಾನು' ಹಾಗೂ 'ಭೋಗಿಭೂಷ' ಎನ್ನುವುದು ಸಂಜ್ಞಾಪದಗಳು. ಭಾನು ಎಂದರೆ ಸೂರ್ಯ ಎಂದರ್ಥ. ಆದಿತ್ಯರ ಸಂಖ್ಯೆ ಹನ್ನೆರಡು. ಹನ್ನೆರಡು ಮಾತ್ರೆಗಳು ಎನ್ನುವುದನ್ನು ಸೂಚಿಸಲು ಈ ಸಂಕೇತವನ್ನು ಬಳಸಿದ್ದಾರೆ. 'ಭೋಗಿಭೂಷ' ಎಂದರೆ ರುದ್ರ ಅರ್ಥಾತ್ ಶಿವ. ರುದ್ರರ ಸಂಖ್ಯೆ ಹನ್ನೊಂದು. ಅಂದರೆ ಹನ್ನೊಂದು ಮಾತ್ರೆಗಳು. ಮೊದಲು ತಿಳಿಸಿದ ಹನ್ನೆರಡು ಮಾತ್ರೆಗಳು ಹಾಗೂ ಈ ಹನ್ನೊಂದು ಮಾತ್ರೆಗಳು ಒಟ್ಟು ಇಪ್ಪತ್ಮೂರು ಮಾತ್ರೆಗಳಾಗುತ್ತವೆ. ಇವೆಲ್ಲವೂ 'ತಗಣ' ಅಥವಾ

ತ್ರಿಮಾತ್ರಾಗಣದ ರೀತಿಯಲ್ಲಿಯೇ ವಿನ್ಯಾಸಗೊಂಡಿರುತ್ತವೆ. ಇದು ಬೇಗಡೆ ರೂಪಕ ತಾಳದ ಪೂರ್ವಾರ್ಧಕ್ಕೆ ಮಾತ್ರ ಅನ್ವಯಿಸಿ ಹೇಳಿದ್ದಾಗಿದೆ. ಉತ್ತರಾರ್ಧವೂ ಹೀಗೆಯೇ ಇದ್ದು, ಅಲ್ಲಿಯೂ ಇಪ್ಪತ್ತಮೂರು ಮಾತ್ರೆಗಳ ತ್ರಿಮಾತ್ರಾಗಣಗಳಿರುತ್ತವೆ. ಹಾಗಾಗಿ ಈ ಛಂದೋಬಂಧದ ಒಟ್ಟು ಮಾತ್ರಾಮೌಲ್ಯವು 23+23 ಒಟ್ಟು 46 ಆಗಿರುತ್ತದೆ. ನಾಲ್ಕೂ ಪಾದಗಳಲ್ಲಿಯೂ ಆದಿಪ್ರಾಸದ ಸೌಂದರ್ಯವಿರುತ್ತದೆ. ಈ ಛಂದೋಬಂಧದ ವಿಷಮ ಪಾದಗಳನ್ನು ಅಂದರೆ ಒಂದು ಮತ್ತು ಮೂರನೇ ಪಾದಗಳನ್ನು ಎರಡಾಗಿಸಿದರೆ ಅದು 'ತಲಷಟ್ಪದಿ'ಯಾಗುತ್ತದೆ. ನಾಲ್ಕು ಪಾದಗಳನ್ನು ಷಟ್ಪಾದವನ್ನಾಗಿಸಿ, ತ್ರಿಮಾತ್ರಾಗಣದ ಸ್ಥಾನದಲ್ಲಿ ಬ್ರಹ್ಮಗಣವನ್ನು ವ್ಯವಸ್ಥೆಗೊಳಿಸಿದರೆ ಅದು 'ಬ್ರಹ್ಮಷಟ್ಪದ' ಎಂಬ ಛಂದೋಬಂಧವಾಗುತ್ತದೆ. ಈ ಬಂಧದ ಲಕ್ಷ್ಯಪದ್ಯ ಹೀಗಿದೆ–

ಸುಲಲಿ । ತಾಂಗಿ । ಸಲಿಲ । ಜಾಕ್ಷಿ ।	**3।3।3।3।**
ಛಲವಿ । ದೇನೆ । ಮೋಹ । ನೆ ॥ ಪ ॥	**3।3।3।ಗು।**
ತುಂಬಿ । ಗುರುಳೆ । ರಂಭೆ । ಶಾತ ।	**3।3।3।3।**
ಕುಂಭ । ಕುಂಭ । ನಿಭಕು । ಚೆ ।	**3।3।3।ಗು।**
ಹಂಬ । ಲಿಸದಿ । ರಬಲೆ । ಭಯವಿ ।	**3।3।3।3।**
ದೆಂಬ । ರೇನೆ । ಮೋಹ । ನೆ ॥ 1 ॥ (ಅದೇ,)	**3।3।3।ಗು।**

ಈ ಲಕ್ಷ್ಯ ಪದ್ಯದ ನಾಲ್ಕು ಪಾದಗಳಿಗೆ ಯುಗ್ಮಪಾದಗಳ ಪಲ್ಲವಿಯು ಸೇರಿ ಆರುಪಾದಗಳಾಗಿ ರೂಪುಗೊಂಡಿರುವುದು ಗಮನಾರ್ಹ. ಇದೇ ಬಂಧದ ಸಮಪಾದಗಳಲ್ಲಿನ ಮೂರು ತಗಣಗಳಲ್ಲಿ ಒಂದನ್ನು ತೆಗೆದು ಉಳಿದೆಲ್ಲ ಗಣಗಳನ್ನು ಅಂತೆಯೇ ಇಟ್ಟು ಸಂಯೋಜಿಸಿದರೆ, ಅದು ತ್ರಿಮಾತ್ರಾಗಣ ಪ್ರಧಾನವಾದ 'ಶಂಕರಾಭರಣ ರೂಪಕ'ವಾಗುತ್ತದೆ. ಅಥವಾ ಪಾರ್ತಿಸುಬ್ಬ ಕವಿ ಬಳಸಿದ 'ನಾದನಾಮಕ್ರಿಯೆ ಮಟ್ಟೆ'ಯಾಗುತ್ತದೆ. ಪಾರ್ತಿಸುಬ್ಬ ವಿರಚಿತ 'ಪಂಚವಟಿ–ವಾಲಿಸಂಹಾರ' ಪ್ರಸಂಗದ ಒಂದು ಪದ್ಯ ಹೀಗಿದೆ–

ಭಾನು । ತನುಜ । ಭಳಿರೆ । ಯನುಜ ।	**3।3।3।3।**
ಬಂದೆ । ಯಾಮ । ಮ ॥	**3।3।ಗು।**
ಏನು । ಕಾರ । ಣೆನ್ನ । ಕರೆದೆ ।	**3।3।3।3।**
ಎಲೆಪ । ರಾಕ್ರ । ಮ ॥ 1 ॥	**3।3।ಗು।**

(ಪಾರ್ತಿಸುಬ್ಬನ ಯಕ್ಷಗಾನಗಳು, ಪು: 176)

ಗೋವಿಂದ ಪೈ ಅವರ ಗಿಳಿವಿಂಡು ಕವನ ಸಂಕಲನದಲ್ಲಿನ 'ತಾಯೆ ಬಾರ ಮೊಗವ ತೋರ' ಪದ್ಯವು ಯಕ್ಷಗಾನದ 'ಬೇಗಡೆ ರೂಪಕ' ಛಂದಸ್ಸಿನ ಪದ್ಯಕ್ಕೆ ಸಮವಾಗಿದೆ.

ತಾಯೆ । ಬಾರ । ಮೊಗವ । ತೋರ ।	**3।3।3।3।**
ಕನ್ನ । ಡಿಗರ । ಮಾತೆ । ಯೆ ॥	**3।3।3।ಗು।**
ಹರಸು । ತಾಯೆ । ಸುತರ । ಕಾಯೆ ।	**3।3।3।3।**
ನಮ್ಮ । ಜನ್ಮ । ದಾತೆ । ಯೆ ॥	**3।3।3।ಗು।**

ಪರಾಮರ್ಶನ ಗ್ರಂಥಗಳು

1. ಕೃಷ್ಣ ಭಟ್ಟ ಕುಕ್ಕಿಲ (ಸಂ); ಪಾರ್ತಿಸುಬ್ಬನ ಯಕ್ಷಗಾನಗಳು; ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ, ಸಂಪಾಜೆ, 2009
2. ಕುವೆಂಪು; ಕುವೆಂಪು ಸಮಗ್ರ ಕಾವ್ಯ; ಕನ್ನಡ ವಿಶ್ವವಿದ್ಯಾಲಯ, ಹಂಪಿ; 2000
3. ಗೋಪಾಲಕೃಷ್ಣ ಶಾಸ್ತ್ರಿ ಮೂಡಂಬೈಲು; ಮುದ್ದಣನ ಕುಮಾರ ವಿಜಯ; ಮುದ್ದಣ ಪ್ರಕಾಶನ, ನಂದಳಿಕೆ, 2015
4. ದೇವಿದಾಸ; ಕೃಷ್ಣಸಂಧಾನ ಮತ್ತು ಭೀಷ್ಮ ಪರ್ವ; ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ, 1944
5. ನಾರಾಯಣ ಶೆಟ್ಟಿ, ಎನ್; ಯಕ್ಷಗಾನ ಛಂದೋಂಬುಧಿ; ಯಕ್ಷಕಲಾ ಪ್ರಧ್ಮಾಪನಾ ಪ್ರಕಾಶನ, ಕಿನ್ನಿಗೋಳಿ; 2005
6. ವಸನ್ತ ಭಾರದ್ವಾಜ, ಕಬ್ಬಿನಾಲೆ; ಯಕ್ಷಗಾನ ಛಂದಸ್ಸು–ಒಂದು ಅಧ್ಯಯನ, ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ; 1998
7. ವಸನ್ತ ಭಾರದ್ವಾಜ, ಕಬ್ಬಿನಾಲೆ; ಯಕ್ಷಗಾನ ಛಂದೋಗತಿ; ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, 2000
8. ವೆಂಕಟೇಶ ಮೂರ್ತಿ ಎಚ್.ಎಸ್ (ಸಂ); ಶತಮಾನದ ಕಾವ್ಯ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2001
9. ಪಾದೇಕಲ್ಲು ವಿಷ್ಣು ಭಟ್ಟ (ಸಂ); ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು; ಯಕ್ಷಗಾನ ಕೇಂದ್ರ, ಉಡುಪಿ; 2005
10. ರಾಮರಾಯ ಕಡಂದಲೆ, ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ; ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ; 2002

❖❖❖

ಗಾಳಿಯಲ್ಲಿ ಮೂಡಿದೆ
ಒಂದು ದಾರಿ
ಇದು ಪರಿಮಳದ ಪಥವೆಂದು
ಕೈಯ ತೋರಿ

ಅಜ್ಞಾತನೊಬ್ಬನ ಆತ್ಮಚರಿತ್ರೆ : ಜನಪದೀಯ ಅಂಶಗಳು

ಡಾ. ವಿಜಯಕುಮಾರ ಎಚ್. ವಿಶ್ವಮಾನವ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ, ಕನಾಟಕ
ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಡಾ. ಆಶಾರಾಣಿ ಎಂ.ಪಿ.
ಪೋಸ್ಟ್ ಡಾಕ್ಟರಲ್ ಫೆಲೋ, ಕನಾಟಕ
ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಡಾ ಮಹಾಂತ ಗೌಡ
ಕನ್ನಡ ಸಹಾಯಕ ಪ್ರಾಧ್ಯಾಪಕರು
ದೇವಾನಾಂಪ್ರಿಯ ಅಶೋಕ ಸ.ಪ್ರ.ದ.ಕಾಲೇಜು, ಮಸ್ಕಿ

ಡಾ. ಧನಂಜಯ ಪಿ.ಕೆ.
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ.
ಮಹಿಳಾ ಕಾಲೇಜು, ಕೆ.ಆರ್. ಪೇಟೆ, ಮಂಡ್ಯ

ಪೀಠಿಕೆ

'ಅಜ್ಞಾತನೊಬ್ಬನ ಆತ್ಮರಿತ್ರೆ' ಡಾ. ಕೃಷ್ಣಮೂರ್ತಿ ಹನೂರು ಅವರು ರಚಿಸಿರುವ ಒಂದು ವಿಶಿಷ್ಟ ಐತಿಹಾಸಿಕ ಕಾದಂಬರಿ. 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿಗಳು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ' 'ಮುಸ್ಸಂಜೆ' ಕಥಾ ಸಂಕಲನಗಳು. ಇವುಗಳ ಜೊತೆಗೆ 'ಹಾದಿಯೊಳಗಣ ಜ್ಯೋತಿ'–ಪ್ರವಾಸ ಕಥನ, ಸಂಪಾದನೆ ಮತ್ತು ಜೀವನ ಚರಿತ್ರೆಗಳನ್ನು ಒಳಗೊಂಡಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. 'ಅಜ್ಞಾತನೊಬ್ಬನ ಆತ್ಮಚರಿತ್ರೆ' 2012ರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಮುಡಿಗೇರಿಸಿಕೊಂಡ ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು. "ಇದು ಇತಿಹಾಸವೋ, ದಂತಕತೆಯೋ, ಜಾನಪದ ಆಖ್ಯಾಯಿಕೆಯೋ, ಕಾವ್ಯಮಯ ಕಥನವೋ ಎಂದು ವರ್ಗೀಕರಿಸಲು ಯತ್ನಿಸುವುದು ಅದರ ಶ್ರೀಮಂತ ಕ್ರಿಯಾಪರಿಸರಕ್ಕೆ ಅನ್ಯಾಯ ಬಗೆದಂತೆ"–ಎಂದು ಗಿರೀಶ ಕಾರ್ನಾಡರು ಕಾದಂಬರಿಯ ಬೆನ್ನುಡಿಯಲ್ಲಿ ಹೇಳಿರುವ ಮಾತುಗಳು 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಒಳಗೊಂಡಿರುವ ಸಾಧ್ಯತೆಯನ್ನು ಎತ್ತಿ ತೋರಿಸುತ್ತದೆ.

ಯುದ್ಧವೆಂದರೆ ವಿಜಯದ ಸಂಕೇತ, ಪರಾಕ್ರಮದ ದ್ಯೋತಕ ಎನ್ನುವುದಕ್ಕಿಂತ ಭಿನ್ನವಾದ ಇನ್ನೊಂದು ಮುಖವನ್ನು ಈ ಕಾದಂಬರಿ ತೋರಿಸುತ್ತದೆ. ಸ್ವಾರ್ಥಕ್ಕಾಗಿ ಯುದ್ಧವನ್ನು ಪ್ರೇರೇಪಿಸುವ ಸಾಮ್ರಾಜ್ಯದಾಹಿಗಳು ತಮಗಾಗಿ ಪ್ರಾಣತೆತ್ತ ಸೈನಿಕರ ಖಾಸಗಿ ಬದುಕಿನ ಏರುಪೇರುಗಳ ಬಗ್ಗೆ ಯೋಚನೆ ಮಾಡುವುದಿಲ್ಲ. ಇದರ ಬಗ್ಗೆ ಇತಿಹಾಸದ ಪುಟಗಳು ಏನನ್ನೂ ಹೇಳುವುದಿಲ್ಲ. ಹಾಗಾಗಿ ಯುದ್ಧದ ಘೋರ ಪರಿಣಾಮ, ಸಾವು, ನೋವುಗಳ ದುರ್ಭರ ಬದುಕಿನ ಚಿತ್ರಗಳು ಇತಿಹಾಸದ ಗರ್ಭದೊಳಗೆ ನಿಗೂಢವಾಗಿಯೇ ಹುದುಗಿ ಮರೆಯಾಗಿವೆ ಹಾಗೂ ಮರೆಯಾಗುತ್ತಿವೆ. ಇದಕ್ಕೆ ಉತ್ತರವೆಂಬಂತೆ ಯುದ್ಧಾನಂತರದ ಬದುಕಿನ ಶೋಧನೆ ಮತ್ತು ದರ್ಶನವೇ ಹನೂರರ ಕಾದಂಬರಿಯ ಜೀವಾಳ. "ನನ್ನ ಮೂವತ್ತು ವರ್ಷಗಳ ಜಾನಪದದ ಸಂಬಂಧದ ಐತಿಹಾಸಿಕ ಸಂಗತಿಗಳನ್ನು ಕಥೆ, ದಂತಕಥೆಗಳನ್ನು ಸೃಜನಶೀಲ ಬರೆಹ ರೂಪದಲ್ಲಿ ಇರಿಸಬೇಕೆನಿಸಿತು. ಆರಂಭಕ್ಕೆ ಈ ಕಾದಂಬರಿ ಮೂವತ್ತು ಪುಟಗಳ

ದೀರ್ಘ ಕಥೆಯಾಗಿತ್ತು. ತದನಂತರ ಆರೇಳು ವರ್ಷಗಳಲ್ಲಿ ಇದೀಗಿನ ರೂಪ ಪಡೆದಿದೆ. ಕಾದಂಬರಿಯಲ್ಲಿ ಹೈದರ್, ಟಿಪ್ಪು, ಶ್ರೀರಂಗಪಟ್ಟಣ ನಿಮಿತ್ತ ಮಾತ್ರವಷ್ಟೇ, ಇತಿಹಾಸದ ಕಾಲಗರ್ಭದಲ್ಲಿ ಅಡಗಿ ಹೋದ ಅಜ್ಞಾತ ಸಂಗತಿಗಳನ್ನು ಪುನರ್ ಪರಿಶೀಲಿಸುವುದೇ ಸದರಿ ಕಥನದ ಮುಖ್ಯ ಉದ್ದೇಶ." (ಅಜ್ಞಾತನೊಬ್ಬನ ಆತ್ಮಚರಿತ್ರೆ, ಪುಟ–6) ಎಂದಿರುವ ಹನೂರರು 'ಇತಿಹಾಸದ ಕಾಲಗರ್ಭದಲ್ಲಿ ಅಡಗಿದ ಅಜ್ಞಾತ ಸತ್ಯಸಂಗತಿಗಳನ್ನು ಪುನರ್ ಪರಿಶೀಲಿಸುತ್ತಾ ಕಾದಂಬರಿಯಲ್ಲಿ ದಳಪತಿಯೊಬ್ಬನ ನೆನಪಿನ ಭಿತ್ತಿಗಳ ಮೂಲಕ ಯುದ್ಧದ ವಿಫಲತೆ, ಜನಜೀವನದ ಮೇಲೆ ಅದು ಬೀರುವ ಅನರ್ಥಪರಿಣಾಮಗಳ ಪರಂಪರೆಗಳನ್ನು ದಾಖಲಿಸುತ್ತಾರೆ. ಮುಖ್ಯ ಪಾತ್ರವಾದ ದಳಪತಿಯೂ ಒಬ್ಬ ಅಜ್ಞಾತನೇ, ಅವನ ಅನುಭವಗಳು ಯಾರ ಬದುಕಿನಲ್ಲಿ ಬೇಕಾದರೂ ಸಂಭವಿಸಬಹುದು. ಯಾವ ಪ್ರದೇಶದಲ್ಲಾದರೂ ನಡೆಯಬಹುದು. ಕಾದಂಬರಿಯ ಕಥಾ ಹಂದರ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಬದುಕಿದ ಅವರ ಸೈನ್ಯದ ಒಬ್ಬ ದಳಪತಿಯ ಆತ್ಮಕತೆಯ ರೀತಿಯಲ್ಲಿ ನಿರೂಪಿತವಾಗಿರುವ ವಿಭಿನ್ನ ಐತಿಹಾಸಿಕ ಕಾದಂಬರಿ, ಇದರಲ್ಲಿ ಆತನ ಭೂತಕಾಲದ ವರ್ತನೆಗಳು ಹಾಗೂ ಆ ಅನುಭವಗಳನ್ನು ಆತ್ಮವಿಶ್ಲೇಷಣೆಯ ಮೂಲಕ ಮರು ಚಿಂತನೆಗೊಳಪಡಿಸಲಾಗಿದೆ. ಕಥಾ ನಿರೂಪಣೆಗೆ ಪೂರಕವಾಗಿ ಇತಿಹಾಸದ ತುಣುಕುಗಳು, ಮೈಸೂರಿನ ಸುತ್ತಮುತ್ತ ಪ್ರದೇಶದ ಗ್ರಾಮೀಣ ಜನಜೀನವ, ಅವರ ನಂಬಿಕೆ, ನಡೆವಳಿಕೆ, ಆಚಾರ, ಸಂಪ್ರದಾಯಗಳು ಕೂಡ ತಳುಕು ಹಾಕಿಕೊಂಡಿವೆ. ಪ್ರಕೃತಿಯ ನಿಗೂಢತೆ, ಅದರ ಅನಂತ ವ್ಯಾಪಾರ, ಅದು ಜೀವಜಗತ್ತಿನ ಮೇಲೆ ಬೀರುವ ಪರಿಣಾಮ ಮತ್ತು ಅದರೊಂದಿಗೆ ಸಾವಯವಗೊಳ್ಳುವ ಅಧ್ಯಾತ್ಮದ ಪರಿವೇಷಗಳೂ ಕಾದಂಬರಿಯಲ್ಲಿ ಸಮರಸವಾಗಿ ಚಿತ್ರಣಕೊಂಡಿವೆ.

ಈ ಕಾದಂಬರಿಯ ರಚನೆಗೆ ಪ್ರೇರಣೆಯನ್ನು ಕಾದಂಬರಿಕಾರರೇ ಪ್ರಸ್ತಾಪಿಸಿರುವಂತೆ 'ದಳಪತಿಯೇ ಬರೆದನೆನ್ನಲಾದ ದಫ್ತರ ಮತ್ತು ಒಂದು ವೀರಗಲ್ಲಿನ ಶಾಸನ. ಕಾವೇರಿ ನದೀತೀರದ ಮಲೆಮಾದೇಶ್ವರ ಬೆಟ್ಟದ ಕಾವೇರಿಪುರ ಊರಿನ ಹೊರವಲಯದಲ್ಲಿ ದಟ್ಟವಾದ ಮರಗಳು ಬೆಳೆದಿರುವ ಒಂದು ತೋಪಿನಲ್ಲಿ ಸಂತನೊಬ್ಬನ ಜೀವೈಕ್ಯಮಂಟಪ ಇದೆ. ಇದರಿಂದ ನೂರು ಹೆಜ್ಜೆ ದೂರದಲ್ಲಿ ಇರುವ ಒಂದು ವೀರಗಲ್ಲಿನ ಶಾಸನವಿದೆ. ಇವೆರಡನ್ನೂ ಕಾದಂಬರಿಕರು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಅಧ್ಯಯನ ಮಾಡುತ್ತಾರೆ. ಇದು ಸಾಮಾನ್ಯವಾದ ವೀರಗಲ್ಲಿನಂತಿಲ್ಲದೆ ಅದರಲ್ಲಿ ಒಂದು ಕುದುರೆಯಿದ್ದು, ಅದರ ಮುಂಗಾಲಿನ ಕೆಳಗೆ ಕೈಮುಗಿದು ತಲೆಗಾಗಿ ಕುಳಿತಿರುವ ಗಡ್ಡಧಾರಿ ವ್ಯಕ್ತಿಯೊಬ್ಬನ ಚಿತ್ರವೂ ಕಲ್ಲಿನ ಮೇಲ್ತುದಿಯಲ್ಲಿ ಸೂರ್ಯಚಂದ್ರರ ಚಿತ್ರವೂ ಅದರ ಕೆಳಗೆ ಕನ್ನಡದಲ್ಲಿ ಬರೆದ ಒಂದು ಶಾಸನವೂ ಇರುತ್ತದೆ. ಇದಕ್ಕೂ ಮೊದಲು ಕಾದಂಬರಿಕಾರರಿಗೆ ದೊರೆತಿದ್ದ ಸುಲೇಮಾನ್ ಸಾಬರ ಬಳಿಯಲ್ಲಿರುವ ಕುದುರೆ ದೇಸಿಗಯ್ಯನ ಧಫ್ತರದ ಮಾಹಿತಿಗಳಿಗೂ ಸಾದೃಶ್ಯವಿರುವುದನ್ನು ಕಂಡು ಕುತೂಹಲಕ್ಕೆ ಒಳಗಾಗಿ ತಮ್ಮ ಸಂಶೋಧನೆ ಮುಂದುವರಿಸುತ್ತಾರೆ. ಕಾವೇರಿಪುರದ ಸುಲೇಮಾನ್ ಸಾಬರ ಬಳಿಯಲ್ಲಿ ಇದ್ದ ಈ ಪರಿಷ್ಕೃತ ನಕಲು ಪ್ರತಿಯೂ ಮತ್ತು ದೇಸಿಗಯ್ಯ ಬರೆದ ಮೂಲಪ್ರತಿ ಕಾದಂಬರಿಕಾರರಿಗೆ ಲಭಿಸುತ್ತವೆ. ಈ ಎರಡೂ ಆಕರಗಳೊಂದಿಗೆ ತಮ್ಮ 30 ವರ್ಷಗಳ ಜಾನಪದ ಕ್ಷೇತ್ರದ ಅಧ್ಯಯನದ ಅನುಭವ, ಪ್ರವಾಸಿಗರು ಕಂಡ ಭಾರತ ಹಾಗೂ ಇತರ ಐತಿಹಾಸಿಕ ಗ್ರಂಥಗಳ ಅಧ್ಯಯನದ ಮಾಹಿತಿಗಳನ್ನೂ ಎ.ಕೆ.

ರಾಮಾನುಜನ್, ಬಿ.ಪಿ.ವೀರೇಂದ್ರಕುಮಾರ್ ಮುಂತಾದ ವಿದ್ವಾಂಸರೊಂದಿಗಿನ ಚರ್ಚೆ, ಸಮಾಲೋಚನೆಗಳ ಫಲಶ್ರುತಿಯನ್ನೂ ಸೇರಿಸಿ ಈ ಕೃತಿಯನ್ನು ರಚಿಸಿರುವುದಾಗಿ ಕಾದಂಬರಿಕಾರರು ಹೇಳಿದ್ದಾರೆ. ಕ್ಷೇತ್ರಕಾರ್ಯದಿಂದ ಸಂಗ್ರಹಿಸಲಾದ ಕೆಲವು ಭಿನ್ನ ಐತಿಹಾಸಿಕ ವೃತ್ತಾಂಶಗಳನ್ನೂ ದಳಪತಿಯ ಜೀವನ ವೃತ್ತಾಂತಕ್ಕೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ದಂತಕತೆಗಳನ್ನೂ ಕಾದಂಬರಿಯ ಕೊನೆಯ ಪುಟಗಳಲ್ಲಿ ಟಿಪ್ಪಣಿಯಾಗಿ ಕೊಟ್ಟಿದ್ದಾರೆ. ಇದು ಕಾದಂಬರಿಗೆ ಮತ್ತಷ್ಟು ಜೀವಂತಿಕೆಯನ್ನು ತಂದುಕೊಟ್ಟಿದೆ. ಕಾದಂಬರಿಯ ಶೈಲಿ, ನಿರೂಪಣೆಯ ಧಾಟಿಯೂ ವಿಶಿಷ್ಟವಾಗಿದೆ. ಭಾಷೆಯ ನಿರೂಪಣೆಯಲ್ಲಿ ಮೈಸೂರಿನ ಸುತ್ತುಮುತ್ತಲಿನ ಭಾಷೆಯ ಸೊಗಡು ಎದ್ದು ಕಾಣುತ್ತದೆ. ಕೆಲವು ವಿಶಿಷ್ಟ ಪದಪ್ರಯೋಗಗಳು, ನುಡಿಗಟ್ಟುಗಳು, ಗಾದೆಗಳು, ನಿರೂಪಣೆಯ ಸೊಗಸುಗಾರಿಕೆಯನ್ನು ಕಾದಂಬರಿಯ ಉದ್ದಕ್ಕೂ ಅವಿನಾಭಾವಿಯಾಗಿ ಹರಿಯುವ ರೂಪಶಕ್ತಿಯಾಗಿ ಬಳಕೆಯಾಗಿರುವ ಭಾಷೆ ಕಾದಂಬರಿಯಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿರುವುದನ್ನು ಗಮನಿಸಬಹುದು.

ಸಂಸ್ಕೃತಿ ಎಂದರೆ ಒಂದು ಸಮುದಾಯ ಅಥವಾ ಒಂದು ಪ್ರದೇಶದ ಜನರು ನಡೆಸುವ ವ್ಯಾಪಾರ, ವ್ಯವಹಾರಗಳು ಮಾತ್ರವೇ ಆಗಿರದೆ ಅವರ ಬದುಕು, ಭಾವನೆಗಳಲ್ಲಿ ಸಮರಸಗೊಂಡ ಗುಣಸ್ವಭಾವಗಳು, ಧರ್ಮಚಿಂತನೆ, ಆಧ್ಯಾತ್ಮದ ಜ್ಞಾನ ಮತ್ತು ಅಂತಃಶಕ್ತಿಯ ವಿಕಾಸಕ್ಕೆ ಪ್ರೇರಣೆಯಾಗತಕ್ಕ ಚಟುವಟಿಕೆ ಇತ್ಯಾದಿ ಸಮಸ್ತವೂ ಆಗಿರುತ್ತದೆ. ನೀಲಗಾರರು ಹಾಡುವ ಧರೆಗೆ ದೊಡ್ಡವರಾದ ಮಂಟೇಸ್ವಾಮಿ, ಸಿದ್ಧಪ್ಪಾಜಿ, ದೊಡ್ಡಮ್ಮ ತಾಯಿಗಳ ಪದ, ಜನಪದರ ಮೇಲೆ ರಾಜಕೀಯ ಬದುಕಿನ ಒತ್ತಡ, ಮಲೆಮಾದೇಶ್ವರ ಬೆಟ್ಟದ ಆದಿವಾಸಿಗಳ ಹಾಡು, ಪೂಜೆ, ನಂಬಿಕೆಗಳು, ಶನಿದೇವರ, ಮಾದಯ್ಯನ, ಮಂಟೇಸ್ವಾಮಿಯ ಕತೆ ಹೇಳುವ ಗುಡ್ಡರ ಪ್ರಸ್ತಾಪ, ಊರಿನ ಜಾತ್ರೆ, ಸಹಕಾರ ತತ್ವ, ಜನಹಿತ ಕಾರ್ಯಗಳನ್ನು ಮಾಡುವ ಸಂತರ ಜೀವನಗಾಥೆಗಳು, ಬಸವನ ಮೆರವಣಿಗೆ, ಆಳುವ ವರ್ಗದ ಬಗೆಗಿನ ಅಸಹಾಕಾರ, ಕೋಪ, ಬಿದಿರ ಕಿರೀಟಕ್ಕೆ ಬೆಂಕಿಕೊಟ್ಟು ಉರಿಯುವ ಬೆಂಕಿಗೆ ದವಸ ಧಾನ್ಯಗಳನ್ನು ಎಸೆಯುವ ಪ್ರಕ್ರಿಯೆ, ಹೆಣ್ಣಿನ ತಂದೆಗೆ ತೆರಕೊಡುವ ಪದ್ಧತಿ, ವಿವಾಹದ ವರ್ಣನೆ, ಸೋಬಾನೆ ಹಾಡುಗಳು, ಗಂಗಾಪೂಜೆ ಮತ್ತು ವಿಧಿವಿಧಾನಗಳು, ತೊಟ್ಟಿಲು ಶಾಸ್ತ್ರ, ತೊಟ್ಟಿಲು ತೂಗುವ ಸಂಭ್ರಮದೊಳಗೆ ಶ್ರೇಣೀಕೃತ ಸಮಾಜದ ಭಾಗವಹಿಸುವಿಕೆ, (ಪಾರ್ವತಿಯ ಶಿರದ ಹೂವಿನ ಪ್ರಸಾದದಿಂದ ಹುಟ್ಟುವವರು ಶ್ರೀಮಂತರು, ಅಧಿಕಾರಲಾಲಸಿಗಳು, ಯುದ್ಧಪ್ರೇಮಿಗಳು, ಕತ್ತಿಯ ಮೇಲೆ ಬದುಕುವ ಅಲ್ಪಾಯುಷಿಗಳು, ಕಾಲಿನ ಹೂವಿನ ಪ್ರಸಾದದಿಂದ ಹುಟ್ಟುವವರು ಬಡವರು, ಶ್ರಮಜೀವಿಗಳು, ಆರೋಗ್ಯವಂತರು, ದೀರ್ಘಾಯುಷಿಗಳು, ಸುಖಪುರುಷರು), ಮಕ್ಕಳ ಅಳು ನಗುಗಳ ಕುರಿತಾದ ಜನಪದರ ನಂಬಿಕೆ, ಯಕ್ಷಗಾನ ಬಯಲಾಟ, ದೊಂಬರಾಟ, ಕೋಪ, ಹೊಡೆದಾಟ, ಜಗಳ, ಕಲಹಗಳು ಹಳ್ಳಿಯ ಆಟಗಳ ವಿವರ, (ಕುಂಟಬಿಲ್ಲೆ, ಚೆಂಡಾಟ), ಗುಡ್ಡರು, ನೀಲಗಾರರು, ಹಗಲು ವೇಷದವರು, ಬಯಲಾಟದವರು ಸೂತ್ರದ ಗೊಂಬೆಯಾಟದವರು, ದಾಸಯ್ಯರು, ದೊಂಬರು–ಹೀಗೆ ಬಹುಸಂಸ್ಕೃತಿಯುಳ್ಳ ಜನವರ್ಗದ ವಿವಿಧ ಕಸುಬಿನ, ವೃತ್ತಿಯ ಪರಿಚಯ, ನಂಬಿಕೆ, ಮೂಢನಂಬಿಕೆಗಳು, ತಾಳತಂಬೂರಿಗಳ ಮೂಲಕ ದಾಸಯ್ಯರುಗಳು ಹೇಳುವ ಕತೆ, ಸ್ಥಳಪುರಾಣಗಳು,

ಹೀಗೆ ಬಹುಬಗೆಯಲ್ಲಿ ಹಾಸುಹೊಕ್ಕಾಗಿರುವ ಗ್ರಾಮೀಣ ಸಂಸ್ಕೃತಿಯ ದಟ್ಟ ವಿವರಗಳು ಕಾದಂಬರಿಯ ಉದ್ದಕ್ಕೂ ಇವೆ. ಇವು ಕಾದಂಬರಿಯ ಮೌಲ್ಯವನ್ನು ಹೆಚ್ಚಿಸಿವೆ.

ಹುಲಿಬೇಟೆಯ ವಿವರ ಮುಗಿದು ಟಿಪ್ಪುವಿನ ಆದೇಶ ಮತ್ತು ಪೂರ್ಣಯ್ಯನವರ ಸಲಹೆ ಪಡೆದು ಹದನಪುರ ಮತ್ತು ಕನಕಗಿರಿಯ ಕಡೆಗೆ ಹೊರಡುವ ಸಂದರ್ಭದಲ್ಲಿ ದಫ್ತರಿನ ಮೊದಲ ಚಿತ್ರದ ಪ್ರಸ್ತಾಪವಿದೆ. ಹಾಳೆಯ ಮಧ್ಯಭಾಗದಲ್ಲಿ ಮೂರು ಹುಲಿಗಳ ಚಿತ್ರ – ಜೋಲುಮೋರೆ, ಶಕ್ತಿಹೀನ, ನಿರೀಕ್ಷೆ – ಅಸಹಾಯಕತೆ, ವ್ಯರ್ಥಹೋರಾಟ, ಬದುಕಿನ ಅರ್ಥಹೀನತೆ, ನೆಮ್ಮದಿಯ ಹುಡುಕಾಟ, ಮೇಲ್ಭಾಗದಲ್ಲಿ ಅಸಹಾಯಕತೆಯನ್ನು ಅಭಿವ್ಯಕ್ತಿಸುವ ಟಿಪ್ಪುವಿನ ವಾರೆಮುಖದ ಚಿತ್ರ. ಹೈದರಾಲಿ ಮತ್ತು ಕಾಬಾದ ಕಡೆಗಿನ ಗೋಡೆಯತ್ತ ನೆಟ್ಟ ಆತನ ನೋಟ. ಮಸೀದಿಯ ಬಳಿಯಿರುವ ಒಂಟಿ ಮರ, ಮರದ ರೆಂಬೆಯ ಮೇಲೆ ಹಾರಲು ಹವಣಿಸುವ ಹಕ್ಕಿಯ ಚಿತ್ರ, ಮಸೀದಿಯ ಬಳಿಯ ಒಂಟಿ ಮರ–ಒಂದು ಹಕ್ಕಿಯ ಚಿತ್ರ–ಈಗಲೋ ಆಗಲೋ ಹಾರುವ ನಿರೀಕ್ಷೆ–ದಳಪತಿಯ ಬೀಳುವಿಕೆ, ವಿವಾಹವಾಗಿ ಬರುವಾಗ ಗಾಡಿ ಮಗುಚಿದ್ದು, ದಳಪತಿಯ, ಬಾಲ್ಯ, ಯೌವನ, ವಿವಾಹದ ನೆನಪು ಮತ್ತು ಅವನ ತಂದೆ ಹೊಳೆಯಲ್ಲಿ ಬಿದ್ದು ಸತ್ತ ವಿಚಾರದ ಬಳಿಕ ಎರಡನೆಯ ಚಿತ್ರವಿದೆ. ವ್ಯಕ್ತಿಯೊಬ್ಬ ಕೆಸರಿನಲ್ಲಿ ಬಿದ್ದು ಕೈಚಾಚುತ್ತಿರುವ ಚಿತ್ರ. ಸ್ವಚ್ಛಜಲವನ್ನು ಪ್ರತಿನಿಧಿಸುವ ರೇಖೆಗಳು, ಹಾವು, ಜೇನು, ಮೊಸಳೆ, ಕುದುರೆ, ನಾಯಿಗಳ ಚಿತ್ರ – ಮನುಷ್ಯನ ಆಸೆ, ಬಯಕೆ, ಬದುಕಿನ ನಶ್ವರತೆ, ಕಷ್ಟಜೀವನದ ವ್ಯಥೆ ಇಲ್ಲೂ ಮರದ ಚಿತ್ರವಿದೆ. ಕಾವೇರಿಪುರದಲ್ಲಿ ಯಕ್ಷಗಾನ ಬಯಲಾಟ ನಡೆದ ಪ್ರಸಂಗದ ಬಳಿಕ ಮೂರನೆಯ ಚಿತ್ರವಿದೆ. ಅಜ್ಞಾತವಾಸದ ಚಿತ್ರ, ಬೃಹನ್ನಳೆಯ ವೇಷಧಾರಿಯ ಚಿತ್ರ, ಮಲ್ಲರ ಕಾಳಗವನ್ನು ನೆನಪಿಸುವ ಚಿತ್ರ, ರಣಕೇಳಿಯ ಅನಂತರದ ಪರಿಸ್ಥಿತಿಯನ್ನು ಸೂಚಿಸುವ ಚಿತ್ರಗಳು. ದೂರದಲ್ಲಿ ಬೆಟ್ಟ, ಗುಡ್ಡಗಳು. ಮಾರಿಗುಡಿಯಲ್ಲಿ ರಖಾವು ಹೆಣ್ಣು ಹೇಳಿದ ಕತೆ ಕೇಳಿ ಅವಳ ಕಣ್ಣಿಗೆ ಬೀಳದೆ ಹೊರಟಲ್ಲಿ ನಾಲ್ಕನೆಯ ಚಿತ್ರವನ್ನು ಬಿಡಿಸಲಾಗಿದೆ. ಇಲ್ಲಿ ಹೆಣ್ಣುಮಕ್ಕಳ ಸಂಭ್ರಮದ ವಾತಾವರಣವಿದೆ. ಗುಡಿಸಲು, ಚಪ್ಪರ, ರಂಗೋಲಿ, ಹಕ್ಕಿಗಳು, ಹಸೆ, ಹಣತೆ, ಮಗುವಿನ ತೊಟ್ಟಿಲು ತೂಗುವ ಕಲ್ಪನೆ. ಹಾಳೆಯ ಮೇಲ್ಭಾಗದಲ್ಲಿ ತೊರೆ, ಅದರ ದಡದಲ್ಲಿ ದುಗುಡವೇ ಮೂರ್ತಿವೆತ್ತು ಅನ್ಯಮನಸ್ಕನಾಗಿ ಕುಳಿತ ವ್ಯಕ್ತಿಯ ಚಿತ್ರದೂರದಲ್ಲಿ ಬೆಟ್ಟ, ಗುಡ್ಡಗಳು. ಕೊನೆಯ ಬಾರಿ ಶ್ರೀರಂಗಪಟ್ಟಣಕ್ಕೆ ವಿದಾಯ ಕೋರಿ ಕಾವೇರಿಪುರಕ್ಕೆ ಬರುವ ದಾರಿಯಲ್ಲಿ ಹುಣಸೆಮರದ ಪೊಟರೆಯಲ್ಲಿ ರಾತ್ರಿ ಕಳೆದು ಮರುದಿನ ತಾಳತಂಬೂರಿಯವರೊಂದಿಗೆ ಬಂದ ದಳಪತಿಯ ಗಾಯಕ್ಕೆ ಸಂತನೊಬ್ಬ ಔಷಧಿ ಕಟ್ಟಿ ಪಾಯಸದ ಊಟನೀಡಿ ಸತ್ಕರಿಸಿ ಉಪಚರಿಸಿದ ವಿಚಾರದ ಬಳಿಕ ದಫ್ತರಿನ ಕೊನೆಯ ಚಿತ್ರ ಶುಭ್ರವಾಗಿ ಹರಿಯುವ ಹೊಳೆನೀರು, ಅದರಲ್ಲಿ ಪ್ರತಿಫಲಿಸುವ ಸೂರ್ಯಕಿರಣಗಳು, ನಕ್ಷತ್ರಗಳಂತೆ ಹೊಳೆಯುವ ಮೀನುಗಳು, ಗಿಡಮರಬಳ್ಳಿ ಹೂವುಗಳು, ಚಿಟ್ಟೆ, ದುಂಬಿಗಳು. ಬೃಹತ್ತಾದ ಮರ, ಮರದ ಬುಡದಲ್ಲಿ ಸಂತರು, ನೀರಿನಲ್ಲಿ ಧ್ಯಾನಸ್ಥನಾಗಿ ಸೂರ್ಯನಮಸ್ಕಾರ ಮಾಡುತ್ತಿರುವ ಗಡ್ಡಮೀಸೆಧಾರಿ, ಕಟ್ಟೆಯ ಮೇಲೆ ಪದ್ಮಾಸನಸ್ಥನಾಗಿ ಕುಳಿತ ಸಂತ, ಅವನ ಮುಂದಿನ ತಾಳೆ ಓಲೆಗಳು, ಅವನ ಮಾತುಗಳನ್ನು ಆಲಿಸಲು ಕುಳಿತಿರುವ ಇತರ ಸಂತರು, ಅವರ ಸುತ್ತ ಕುಳಿತ ಹಾವು, ಜಿಂಕೆ, ಹುಲಿ, ಆನೆಗಳು, ಮರದ ಮೇಲಿನ ಹಕ್ಕಿಗಳು, ಸೂರ್ಯ, ಚಂದ್ರ, ಆಕಾಶ, ಬೆಟ್ಟ, ಗುಡ್ಡ, ಕತ್ತಿಯನ್ನು ನೆಲದೊಳಗೆ ಹೂತುಹಾಕುವ ಬಳಲಿದ ವ್ಯಕ್ತಿ, ಆತನ

ಮುಖದ ನಿರಾಳತನ – ಇಡೀ ಚಿತ್ರ ಸರ್ವ ಜೀವರಾಶಿಗಳನ್ನು ಪ್ರೀತಿಸುವ ನೆಲೆಯಲ್ಲಿ ವಿಶ್ವಮಾನವತೆಯನ್ನು ಪ್ರತಿನಿಧಿಸುವಂತಿದ್ದು, ಜನಪದ ಸಂಸ್ಕೃತಿಯ ಜೀವಾಳವೂ ಆಗಿದೆ.

ಕಾದಂಬರಿಯಲ್ಲಿನ ಎಲ್ಲಾ ಪಾತ್ರಗಳು ತಮ್ಮ ವೃತ್ತಿಪರವಾದ ಬದುಕಿನ ಭಾಗವಾಗಿ ಪ್ರಾರಂಭದಲ್ಲಿ ಕಾಣಿಸಿಕೊಂಡರೂ ಬರಬರುತ್ತಾ ಬದುಕಿನ ಜೀವಾಳವಾದ, ಸಮಾಜದ ಸಂಸ್ಕೃತಿಯಾದ ಜನಪದೀಯ ಅಂಶಗಳಿಂದ ಕೂಡಿದ ಜನನಾಯಕರಾಗಿಯೇ ಜೀವ ಪಡೆಯುತ್ತಾ ಬೆಳೆಯುತ್ತವೆ. ಇದು ಕಾದಂಬರಿಯಲ್ಲಿನ ಬಹುತೇಕ ಪಾತ್ರಗಳಲ್ಲಿ ಅಭಿವ್ಯಕ್ತಿಗೊಂಡಿರುವ ಪ್ರಧಾನ ಅಂಶವಾಗಿದೆ. ಕಾದಂಬರಿಯ ಪ್ರಧಾನ ಪಾತ್ರ ದಳಪತಿ, ಆತನ ಭೂತ, ವರ್ತಮಾನಗಳ ಬದುಕಿನ ವಿವರಗಳೇ ಕಾದಂಬರಿಯ ಉದ್ದಕ್ಕೂ ನಿರೂಪಿತವಾಗಿರುವ ಮುಖ್ಯ ವಿಚಾರಗಳಾಗಿವೆ. ಉಳಿದ ಪಾತ್ರಗಳೆಲ್ಲ ಆ ಪಾತ್ರದ ಪರಿಪೋಷಣೆಗಾಗಿಯೇ ಚಿತ್ರಣಗೊಂಡಿವೆ. ದಳವಾಯಿಯ ಪಾತ್ರ ಪರಿಕಲ್ಪನೆಯಲ್ಲಿ ವಿಭಿನ್ನ ಮುಖಗಳಿವೆ. ಆತನ ಮಹತ್ವಾಕಾಂಕ್ಷೆ, ಸಾಹಸ, ದುಷ್ಟತನಗಳಿಂದ ಕೂಡಿದ ಕ್ರೌರ್ಯದ ಒಂದು ಮುಖ–ಇದು ಕಾದಂಬರಿಯ ವೇದಿಕೆಯಲ್ಲಿ ಪ್ರೋಕ್ಷವಾಗಿ ಕಾಣಿಸಿಕೊಳ್ಳುತ್ತವೆ. ಆತ್ಮಾವಲೋಕನ, ಆತ್ಮಶೋಧನೆ; 'ಅಂಥ ದೈವ ನನ್ನ ಪಾಲಿಗೆ ಇದ್ದರೆ ಅದು ನನ್ನ ಕೃತ್ಯಗಳನ್ನು ಕೇಳುವ ಕಿವಿಯೇ ಬೇಡ ಎನ್ನಬಹುದು. ಆ ದೈವದ ಘಾಸಲೆಯಲ್ಲಾದರೂ ನಿಲ್ಲುವ ಯೋಗ್ಯತೆ ನನಗುಂಟೇ ಜೀವನ ಪರ್ಯಂತ ಹಿಂಸೆ ನೀಡುವುದನ್ನು ಅರಮನೆಯ ಕಾನೂನು, ಯುದ್ಧ, ಸಾಹಸಗಳೊಂದಿಗೆ ಭಟ್ಟಿ ಸಾರಾಯಿ ಗಡಂಗುಗಳನ್ನು ಪತ್ತೆಹಚ್ಚುವ ಕೆಲಸದಲ್ಲಿ ರಾಜನ ಕಣ್ಣಿಗೂ ಮಣ್ಣೆರಚಿ ಮಾಡುತ್ತಿದ್ದ ಅಕ್ರಮ, ಅವ್ಯವಹಾರಗಳು, ಪೂರ್ಣಯ್ಯನವರ ಮಧ್ಯಸ್ಥಿಕೆಯಿಂದ ಸಾರಾಯಿ ಸೇವನೆಯನ್ನು ಕಾನೂನು ಬದ್ದಗೊಳಿಸಿ ತೆರಿಗೆ ವಸೂಲು ಮಾಡುವ ಹುನ್ನಾರ ತಪ್ಪಿದ್ದು' ಹೀಗೆ ಹತ್ತು ಹಲವು ನೆನಪುಗಳು ಮನದಾಳದಿಂದ ಮೇಲೇಳುತ್ತವೆ. ವ್ಯಕ್ತಿತ್ವದಲ್ಲಿ ಸಂಪೂರ್ಣ ಬದಲಾವಣೆ, ಗ್ರಾಮದ ಜನರ ಬದುಕಿನ ಭಾಗವಾಗುವುದು, ಮನೆಗಿಂತ ಸಂತನ ಸಮಾಧಿಯಿದ್ದ ಈಶ್ವರನ ಗುಡಿಯ ಸಮೀಪದ ಮಂಟಪದ ವಾಸ ಹಿತವಾಗುವುದು, ದೇಸಿಗಯ್ಯನಾಗಿ ಸಾತ್ವಿಕ ಬದುಕಿಗೆ ಒಪ್ಪಿಕೊಂಡ ನಿಶ್ಚಿಂತ ಮನಸ್ಥಿತಿ ಲೋಕದಲ್ಲಿ ದುಷ್ಟರು ಇರುವಂತೆಯೇ ಉತ್ತಮರೂ ತೀರ್ಥಜಲದಂತೆ ಇರುತ್ತಾರೆಂಬ ಸಮಾಧಾನ ಈ ಎಲ್ಲ ವಿವರಗಳು ದಳಪತಿಯ ಪಾತ್ರದಲ್ಲಿ ಕಾಣುತ್ತೇವೆ.

ಪ್ರಾಣಿಗಳಿಗೆ, ಹೆಣ್ಣುಗಳಿಗೆ ಕೊಟ್ಟ ಹಿಂಸೆ ಸೈನಿಕರಿಗೆ ತೋರಿದ ಕ್ರೌರ್ಯಗಳ ನೆನಪು, ಪಾಪಪ್ರಜ್ಞೆ, ಭಯ, ಮನಸಾಕ್ಷಿಯ ತಿವಿತ, ಸಾಯಬೇಕೆನ್ನುವ ಒತ್ತಡ, ಬದುಕುವ ಆಸೆ, ವರ್ತಮಾನದಲ್ಲಿ ನಿಂತವನಿಗೆ ಭೂತದ ನೆನಪುಗಳ ಕಾಟ, ಹೆಂಡತಿಗೆ ಮಾಡಿದ ಅನ್ಯಾಯಗಳ ಪಾಪಪ್ರಜ್ಞೆ, ಮನಸ್ಸು ಪರಿವರ್ತನೆಗೊಂಡುದಕ್ಕೆ ಸಾಕ್ಷಿಯಾಗಿದೆ. ಹೆಂಡತಿ, ತಂದೆ, ಕುದುರೆಗಳನ್ನು ಕೊಲ್ಲಲು ಎತ್ತಿದ ಕೈ ಹಿಂಜರಿಯುವುದು, ಕಳ್ಳತನಕ್ಕೆ ಹವಣಿಸಿದ ಮನಸ್ಸು ಕಟ್ಟಿಗೆಯನ್ನು ಕಡಿಸುವಂತೆ ಮಾಡುವುದು, ಕೊಳ್ಳೆ ದರೋಡೆಗಳನ್ನು ಮಾಡುತ್ತಿದ್ದ ಕೈ ಭಿಕ್ಷಾನ್ನಕ್ಕೆ ಒಡ್ಡುವುದು, ಮಗುವಿನ ತೊಟ್ಟಿಲು ಹೊರುವುದು, ಇದೆಲ್ಲ ದಳಪತಿಯ ಸಾತ್ವಿಕತೆಗೆ ಸಾಕ್ಷಿ. ಯೌವನದ ರಕ್ತದ ಕುದಿತ ಕಡಿಮೆಯಾಗಿ ಕೃತ್ಯ ಮತ್ತು ಕತ್ತಿಯ ಗಾಯ, ಮನಸ್ಸು ಮತ್ತು ದೇಹವನ್ನು ಮಾಗಿಸುವುದು, ಕ್ರೌರ್ಯಗಳ ಜಾಗದಲ್ಲಿ ಮಾನವೀಯತೆ, ದೇವರ ಬಗೆಗಿನ ನಂಬಿಕೆ, ಧ್ಯಾನದಲ್ಲಿ ಆಸಕ್ತಿ, ರಾಜಕೀಯ ಜೀವನದಲ್ಲಿ ಜನರಿಗೆ ಸಿಂಹಸ್ವಪ್ನವಾಗಿ ಸದಾ ಅತೃಪ್ತಿ, ಸ್ವಾರ್ಥ ತುಂಬಿದ್ದ ದಳಪತಿ

ಗ್ರಾಮೀಣ ಬದುಕಿನ ಅಜ್ಞಾತಲೋಕದಲ್ಲಿ ನೆಮ್ಮದಿಯನ್ನು ಅನುಭವಿಸುವುದು, ಇವೆಲ್ಲ ಒಂದಾಗಿ ಕಥಾಪಾತ್ರವನ್ನು ಎತ್ತರಿಸುವ ವಿಧಾನ ಗಮನಾರ್ಹ. ಬಹಿರಂಗದ ದುಷ್ಟತನಗಳು ಅವನತಿಗೊಂಡು ಅಂತರಂಗದ ಸಜ್ಜನಿಕೆಗಳು ವಿಕಸನಗೊಳ್ಳುವ ಪ್ರಕ್ರಿಯೆ ಕಾದಂಬರಿಯ ಪ್ರಧಾನ ಅಂಶವಾಗಿದೆ.

ದಳಪತಿಯ ತಂದೆ ಹೈದರಾಲಿಯ ಅರಮನೆಯಲ್ಲಿ ಹೊರಗಿನ ಕೆಲಸಗಳಿಗೆ ನಿಯುಕ್ತನಾಗಿದ್ದ ಓರ್ವ ದಲಿತ. ರಾಜನ ಆದೇಶದಂತೆ ಮರಣದಂಡನೆಗೊಳಪಟ್ಟ ತಪ್ಪಿತಸ್ಥರನ್ನು ಕೊಲ್ಲುವ ಕಟುಕ ಕೂಡ. ಈತನ ಸ್ವರೂಪ ಮತ್ತು ಸ್ವಭಾವಗಳ ಸುಂದರ ಚಿತ್ರಣ ಕಾದಂಬರಿಯಲ್ಲಿದೆ. ಕಳ್ಳಕಾಕರನ್ನು ನೋಡಿಕೊಳ್ಳುವುದು, ನಿಗದಿಯಾದ ದಿನ ಅವರ ಕೈಕಾಲು ಊನಗೊಳಿಸುವುದು, ಸೆರೆಯಲ್ಲಿ ಬಿದ್ದವರಿಗೆ ಅನ್ನ ನೀರು ಕಾಣಿಸುವುದು, ಅರಮನೆಯ ಬಾಣಸದವರಿಗೆ ಮಾಂಸ ಒದಗಿಸುವುದು, ರಾತ್ರಿ ಗಸ್ತು ತಿರುಗುವುದು– ಆತನ ಕೆಲಸ, ವೃತ್ತಿಯಲ್ಲಿ ಕಟುಕ, ಪ್ರವೃತ್ತಿಯಲ್ಲಿ ಕಾಮುಕ್ತ, ಸ್ವಭಾವದಲ್ಲಿ ಕ್ರೂರಿ, ಏಳೆಂಟು ಜನ ಹೆಂಡಿರನ್ನು ಕಟ್ಟಿಕೊಂಡರೂ ಯಾರನ್ನೂ ಬಾಳಿಸದ ದುಷ್ಟ. ಮಗನ ಬಗ್ಗೆ ಪ್ರತಿ ತನ್ನಂಥ ಬದುಕು ಮಗನಿಗೆ ಬೇಡವೆಂಬ ವಿವೇಕ, ತನ್ನಂತೆ ತನ್ನ ಮಕ್ಕಳು ಕಷ್ಟಪಡಬಾರದು ಎನ್ನುವ ಕಳಕಳಿ. ಈ ಎಲ್ಲಾ ಅಂಶಗಳು ಜನಪದರ ಬದುಕಿನ ವೈವಿಧ್ಯಮಯ ಅಂಶಗಳ ಪ್ರತೀಕವೇ ಆಗಿವೆ. ಹೈದರಾಲಿಯ ಕುತಂತ್ರಗಳು, ಸಾಮಾಜ್ಯದಾಹ, ವಂಚನೆಯ ಜಾಲಗಳು, ಚಿತ್ರದುರ್ಗ, ಬಿದನೂರು ಸಂಸ್ಥಾನಗಳನ್ನು ವಶಪಡಿಸಿದ ರೀತಿ, ಅವನಿಗೆ ತಗಲಿದ ಭೀಕರ ಕಾಯಿಲೆ, ಪಶ್ಚಾತ್ತಾಪ, ದುರ್ಮರಣ. ಸಾವಿನ ಸಮಯದಲ್ಲಿ ಜ್ಞಾನೋದಯವಾದುದಕ್ಕೆ ಕುರುಹಾಗಿ ಮಗನಿಗೆ ಬರೆದ ಪತ್ರ ಅಲ್ಲಿನ ವಿಷಾದದ ಮಾತುಗಳಾದ 'ಸಾಮಾಜ್ಯ ಸಾಧನೆಗಿಂತ ಮನುಷ್ಯ ಸಂಬಂಧ ದೊಡ್ಡದು. ಗೆದ್ದ ಅರಸು ಗುಡಿ ಕಟ್ಟಿಸಬಹುದು. ಆದರೆ ಅವನಿಗೆ ಪ್ರಾರ್ಥನೆಗೆ ಹೊತ್ತೇ ಇರುವುದಿಲ್ಲ. ದೇಶ ಆಳುವವನ ಅಂತ್ಯ ಸೆರೆಮನೆಯಲ್ಲಿ ಇಲ್ಲ ರಣರಂಗದಲ್ಲಿ. ಎಲ್ಲದರಿಂದ ಬಿಡುಗಡೆ ಹೊಂದುವುದೇ ಸುಖವೆನಿಸುತ್ತದೆ.' ಎನ್ನುವ ಮಾತುಗಳೂ ಸಹ ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಜೀವನ ಕ್ರಮದ ವಿವಿಧ ಹಂತಗಳಾಗಿ ಪ್ರತಿಬಿಂತವಾಗಿವೆ. ಇದು ಕಾದಂಬರಿಯ ನೀಡುವ ಸಂದೇಶವೂ ಹೌದು.

ಬದುಕು ನಿಲ್ಲುವುದು ಪ್ರೀತಿಯಿಂದಲೇ ಹೊರತು ಭೀತಿಯಿಂದಲ್ಲ. ಅಧ್ಯಾತ್ಮದ ಭೂಮಿಕೆಯಲ್ಲಿ ಲೋಕಕಲ್ಯಾಣಕ್ಕಾಗಿ ಜೀವನವನ್ನು ಮುಡುಪಿಟ್ಟ ಮಹಾತ್ಮರ ಬದುಕಿನ ರೀತಿ ನೀತಿಗಳನ್ನು ಅರ್ಥಮಾಡಿಕೊಂಡು ನೆಲದ ಸಂಸ್ಕೃತಿಯ ಪೋಷಕಾಂಶಗಳನ್ನು ಹೀರಿ ಸರ್ವ ಜೀವರಾಶಿಗಳನ್ನು ಪ್ರೀತಿಸಿ ಬೆಳೆಯುವುದೇ ಮಾನವ ಧರ್ಮ. ಪ್ರಪಂಚದಲ್ಲಿ ಯಾವ ವ್ಯಕ್ತಿಯೂ ಪೂರ್ಣ ಕೆಟ್ಟವನೂ ಅಲ್ಲ, ಒಳ್ಳೆಯವನೂ ಆಗಿರಲಾರ, ಕಾಲ, ದೇಶ, ಪರಿಸರ, ಸಂದರ್ಭಗಳು ವ್ಯಕ್ತಿಯ ಗುಣ ಸ್ವಭಾವಗಳ ಮೇಲೆ ಪರಿಣಾಮವನ್ನು ಬೀರುತ್ತವೆ. ಎತ್ತರೆತ್ತರಕ್ಕೆ ಬೆಳೆದು ರೆಂಬೆ ಕೊಂಬೆಗಳಲ್ಲಿ ದಿಕ್ಕು ದಿಕ್ಕುಗಳಿಗೆ ರೆಕ್ಕೆ ಬಡಿದು ಹಾರುವ ಹತ್ತಾರು ಪಕ್ಷಿಗಳಿಗೆ ಆಶ್ರಯ ನೀಡುವ ಅರಳಿಮರದಂತೆ ವಿಶ್ವಮಾನವತೆಯನ್ನು ರೂಢಿಸಿಕೊಂಡಾಗ ಮಾತ್ರ ಮಾನವ ಅಂತರಂಗ ವಿಕಾಸಗೊಳ್ಳುತ್ತದೆ. ಆಗಲೇ ಬದುಕು ಅರ್ಥಪೂರ್ಣವಾಗುತ್ತದೆ. ಸಾವು ನೋವುಗಳಿಂದ ಕೂಡಿದ ಸ್ವಾರ್ಥ ಮೂಲವಾದ ಯುದ್ಧದಿಂದಲ್ಲ.

ಕಾದಂಬರಿಯ ಇತರ ಅಂಶಗಳನ್ನು ಗಮನಿಸಿದರೆ ವೀರಗಲ್ಲಿನಲ್ಲಿ ಕೆತ್ತಿದ ಕುದುರೆಯ

ವೀರನ ಚಿತ್ರ, ಪೂರ್ಣಯ್ಯನವರ ಬಳಿಗೆ ಬಂದ ದಳಪತಿಯು ಕುದುರೆಯನ್ನು ನೋಡಿ ನಾಯಿಗಳ ಬೊಗಳುವಿಕೆ, ಬಿದಿರ ಕಿರೀಟಕ್ಕೆ ಬೆಂಕಿ ಹಚ್ಚುವುದು, ಕತ್ತಿ ಮೊಂಡಾಗುವುದು, ದಳಪತಿ ಬೃಹನ್ನಳೆಯ ಪಾತ್ರವನ್ನು ಧರಿಸುವುದು, ಕತೆ ಹೇಳುವವರು ಕಾವೇರಿಪುರದ ತಲೆಮಾರಿನ ಕತೆ ಮುಗಿಸಿದಾಗ ಹುಡುಗನೊಬ್ಬನ ವಿಡಂಬನಾತ್ಮಕ ಹಾಡು, ಕುಣಿತ, ದಳವಾಯಿಯ ಕನಸುಗಳು, ಪ್ರಕೃತಿಯ ಸಾನಿಧ್ಯದಲ್ಲಿ ಮನುಷ್ಯನ ನಿರಾಳತನ, ಅರಳಿ ಮರದ ಬೆಳೆಯುವಿಕೆ, ವಿವಿಧ ಜಾತಿಯ ಹಕ್ಕಿಗಳಿಗೆ ಆಶ್ರಯ ಇತ್ಯಾದಿ ಅಂಶಗಳು ಕಾದಂಬರಿಯಲ್ಲಿನ ಜನಪದರ ಬದುಕನ್ನು ಅನಾವರಣಗೊಳಿಸುವ ಸಂಗತಿಗಳಾಗಿವೆ.

ಸಮಾರೋಪ

ಒಟ್ಟಾರೆ ಹನೂರರ ಕಾದಂಬರಿ ಜನಪದ ಸಂಸ್ಕೃತಿಯ ಅನೇಕ ಸಂಗತಿಗಳನ್ನು ಕೇಂದ್ರವಾಗಿ ಮಾಡಿಕೊಂಡ ಕತೆಯಾಗಿದೆ. ನಿರೂಪಣಾ ವಿಧಾನದಲ್ಲಿ ಕೆಲವೊಮ್ಮೆ ಅತಿದೀರ್ಘ ಎನ್ನಿಸಿದರೂ ಕಾದಂಬರಿಗೆ ಇದು ಪೂರಕವೇ ಆಗಿರುವುದನ್ನು ಗಮನಿಸಬಹುದು. ಇದೊಂದು ಜನಪದ ಆತ್ಮಕಥನದಂತಿದ್ದು ಜನಪದರ ಬದುಕಿನ ಮಹತ್ವ ಸಂಗತಿಗಳನ್ನು ಅಂತರ್ಗತಮಾಡಿಕೊಂಡಿರುವ ಕಾರಣ ಇದು ಜನಪದ ಸಂಕಥನದ ಮಾದರಿಯಾಗಿಯೂ ಗಮನ ಸೆಳೆಯುತ್ತದೆ.

ಪರಾಮರ್ಶನ ಕೃತಿಗಳು ಮತ್ತು ಲೇಖನಗಳು

1. ಅಜ್ಞಾತನೊಬ್ಬನ ಆತ್ಮಚರಿತ್ರೆ: ಕೃಷ್ಣಮೂರ್ತಿ ಹನೂರು, ಅಂಕಿತ ಪ್ರಕಾಶನ, ಬೆಂಗಳೂರು, 2012
2. ಅಪ್ರಮೇಯ : ಎಸ್. ಆರ್. ವಿಜಯಶಂಕರ, ಸಪ್ನ ಬುಕ್ ಹೌಸ್, ಬೆಂಗಳೂರು, 2016
3. ಆತ್ಮಕತೆಯ ಮೂಲಕ ಲೋಕಕರೆ: ಲೇಖನ, ಮಲ್ಲೇಪುರಂ ಜಿ. ವೆಂಕೇಶ, ಪ್ರಜಾವಾಣಿ ದಿನಪತ್ರಿಕೆ, 7ನೇ ಜನವರಿ 2013
4. ರಾಜಕೀಯದಂತರಂಗದ ಕರಾಳ ದರ್ಶನ: ಲೇಖನ: ನರಹಳ್ಳಿ ಬಾಲಸುಬ್ರಹ್ಮಣ್ಯಂ, ಪ್ರಜಾವಾಣಿ, ದಿನಪತ್ರಿಕೆ, ಏಪ್ರಿಲ್ 20, 2013.
5. ನೆಲ ಸಂಸ್ಕೃತಿ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಭಿನವ, ಬೆಂಗಳೂರು, ದ್ವಿತೀಯ ಮುದ್ರಣ 2021

❖❖❖

ಕಲ್ಲಿನ ದೋಣಿಯು
ಮಿಡಿಯುತ್ತಿದ್ದಂತೆಯೇ
ಮಣ್ಣಿನ ದೋಣಿಯು
ತೇಲತೊಡಗಿತು

ಗೈರ ಸಮಜೂತಿ : ಕಥನ ಕಲೆಯ ಹೊಸ ಮಜಲು

ವಿಕ್ರಮ ವಿಸಾಜಿ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಲಬುರಗಿ

ರಾಘವೇಂದ್ರ ಪಾಟೀಲರ ಕಥನ ಕಲೆ ಕನ್ನಡದಲ್ಲಿ ತನ್ನದೇ ಆದ ವಿಶಿಷ್ಟ ಸ್ವರೂಪ ಪಡೆದುಕೊಂಡಿದೆ. ಘಟನೆಗಳ ಆಳದಿಂದ, ಪಾತ್ರಗಳ ಆಳವಾದ ಸಂವೇದನೆಯಿಂದ ರೂಪಿಸಲ್ಪಟ್ಟ ಕಥನ ಕಲೆಯಿದು. ಹೊರಗಿನ ಬೆಂಬಲವಿಲ್ಲದೆ, ಕಥೆಯ ಒಳಸುಳಿಗಳಿಂದಲೇ ನಿರ್ಮಾಣವಾದದ್ದು. ತಮ್ಮ ಕಥನಗಾರಿಕೆಯ ಮೂಲಕ ಪಾತ್ರಗಳ ನೈಜ ದನಿಯನ್ನು, ಬದುಕಿನ ಸಂಕೀರ್ಣ ದನಿಯನ್ನು ಅವರ ಕಥೆಗಳು ಹಿಡಿಯಲೆತ್ನಿಸಿವೆ. ಯಾವುದೇ ಕಥನ ಕಲೆಯಲ್ಲಿ ಮುಖ್ಯವಾದದ್ದೆಂದರೆ ಕಥೆಗಾರ ತನ್ನ ನೈಜ ಶೈಲಿಯನ್ನು ಕಂಡುಕೊಳ್ಳುವುದು ಮತ್ತು ಪಾತ್ರಗಳ ನೈಜ ದನಿಯನ್ನು ಹುಡುಕುವುದು. ಜೊತೆಗೆ ಅನುಭವಗಳ ಆಳದಲ್ಲಿರುವ ನೈಜ ಸಂವೇದನೆಯನ್ನು ಗುರುತಿಸುವುದು. ಇವೆಲ್ಲ ಸೇರಿ ಒಂದು ದರ್ಶನಕ್ಕಾಗಿ ದುಡಿಯುತ್ತಿರುತ್ತವೆ. ಇವೆಲ್ಲ ಪಾಟೀಲರ ಕಥೆಗಳಲ್ಲಿ, ಕಾದಂಬರಿಯಲ್ಲಿ ಮೊದಲಿನಿಂದಲೂ ಕಂಡುಬರುವ ಬಹುಮುಖ್ಯವಾದ ಅಂಶಗಳು. ಪ್ರಸ್ತುತ ಕಾದಂಬರಿ 'ಗೈರ ಸಮಜೂತಿ'ಯಲ್ಲಿಯೂ ಅವರ ಕಥನ ಕಲೆಯ ಈ ವಿಶಿಷ್ಟ ಅಂಶಗಳು ದಾಖಲಾಗಿವೆ. ಹೀಗಾಗಿ ಈ ಕಾದಂಬರಿ ಅವರ ಕಥನ ಕಲೆಯ ಹೊಸ ಮಜಲನ್ನು ಕಾಣಿಸುವಲ್ಲಿ ಯಶಸ್ವಿಯಾಗಿದೆ.

'ಗೈರ ಸಮಜೂತಿ' ಶೀರ್ಷಿಕೆ ಬಗೆದಷ್ಟು ಹೊಸ ಅರ್ಥಗಳನ್ನು ಹೊರಡಿಸತೊಡಗಿದೆ. ಅದು ಕೇವಲ ತಪ್ಪು ತಿಳುವಳಿಕೆ ಮಾತ್ರವಲ್ಲ. ಅದನ್ನು ರಾಘವೇಂದ್ರ ಪಾಟೀಲರು ಈಗಾಗಲೇ ತಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಅನೇಕ ಸಲ ಜೀವನದಲ್ಲಿ ನಾವು ತಳೆದ ನಿಲುವುಗಳು ಸರಿಯೆನಿಸಿ ನಂತರದಲ್ಲಿ ತಪ್ಪು ಎನಿಸಬಹುದು. ಅಥವಾ ಮೊದಲೇ ತಪ್ಪು ಅಂತ ಅನ್ನಿಸಿದ್ದು ಕಾಲಾನಂತರದಲ್ಲಿ ಸರಿ ಅನಿಸಬಹುದು. ಅಥವಾ ತಪ್ಪೆಂದು ಗೊತ್ತಾದದ್ದನ್ನು ಸರಿಪಡಿಸಿಕೊಳ್ಳಲು ಇಡೀ ಜೀವನದ ತುಂಬಾ ಒದ್ದಾಡಬಹುದು. ಅಥವಾ ಸರಿಯಾಗಿದ್ದುದನ್ನು ತಪ್ಪೆಂದು ಭಾವಿಸಿದ್ದಕ್ಕೆ ಪಶ್ಚಾತ್ತಾಪ ಪಡಬಹುದು. ಅಥವಾ ಸರಿ ಯಾವುದೋ ತಪ್ಪು ಯಾವುದೋ ಅದನ್ನು ಹಣೆಬರಹ ಅಂದುಕೊಂಡು ಬದುಕಬಹುದು. ಒಂದರ್ಥದಲ್ಲಿ ಇಡೀ ಜೀವನವೇ ಸಮಜೂತಿ ಮತ್ತು ಗೈರ ಸಮಜೂತಿಗಳ ನಡುವಿನ ಚದುರಂಗದಾಟ. ಈ ಚದುರಂಗದಾಟದಲ್ಲಿ ನಾವೆಲ್ಲರೂ ದಾಳಗಳೆ. ಇಂಥದ್ದೊಂದು ಸರಿತಪ್ಪುಗಳ ಸಂಕೀರ್ಣ ಜಾಲದಲ್ಲಿ ಇಲ್ಲಿನ ಪಾತ್ರಗಳು ಜೀವಪಡೆದಿವೆ.

ಕೃಷ್ಣಾಜೀ, ವಚ್ಚಕ್ಕ, ಸತ್ಯಬೋಧರಂಥ ಪಾತ್ರಗಳ ಆಂತರಿಕ ಸಂಘರ್ಷ ಮತ್ತು ಚೈತನ್ಯವನ್ನು 'ಗೈರ ಸಮಜೂತಿ' ಕಾದಂಬರಿ ಒಟ್ಟಿಗೆ ಕಾಣಿಸಿದೆ. ಅವರ ಬದುಕಿನ ಪದರುಗಳಿಂದ ಇದೆಲ್ಲ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಮನುಷ್ಯನ ಬಾಳಿನ ಅಸಂಖ್ಯ ಅನುಭವಗಳಲ್ಲಿಯ ಕೆಲ ಕುದಿಬಿಂದುಗಳಲ್ಲಿ ಇವರು ನಿಂತಿದ್ದಾರೆ. ಇದು ಅವರ ಆಯ್ಕೆಯಲ್ಲ. ಬದುಕು ಅವರೆದುರು ಎಸೆದಹೋದ ದಾಳವಿದು. ಇಂಥ ಕ್ರೂರ

ದಾಳವನ್ನು ಎದುರಿಸುತ್ತಲೇ ಬದುಕಲು ಬೇಕಾದ ಒಂದು ಸಹಜಲೋಕವನ್ನು ಇವರೆಲ್ಲ ನಿರ್ಮಿಸಿಕೊಳ್ಳಲು ಹಾತೊರೆದಿದ್ದಾರೆ. ಇನ್ನು ಈ ಬದುಕು ಬದುಕೋದು ಸಾಧ್ಯವಿಲ್ಲ... ಅಂದುಕೊಳ್ಳುವಾಗಲೇ ಬದುಕಿನ ಇನ್ನೊಂದು ಮಗ್ಗಲು ತೆರೆದುಕೊಂಡು ಇಲ್ಲ ಇಂಥ ಕಷ್ಟದಲ್ಲೂ ಬದುಕಬಹುದು ಅಂತ ಹೇಳತೊಡಗುತ್ತದೆ. ಇಡೀ ಕಾದಂಬರಿಯಲ್ಲಿ ಬದುಕಿನ ಪ್ರಪಾತಗಳು ಮತ್ತು ಇಂಥ ಪ್ರಪಾತಗಳಿಂದ ಎದ್ದು ಬರುತ್ತಿರುವ ಮನುಷ್ಯರ ಲೋಕವಿದೆ. ಇದನ್ನೆಲ್ಲ ತಮ್ಮ ಕಲೆಗಾರಿಕೆಯ ಆವರಣದಲ್ಲಿ ರಾಘವೇಂದ್ರ ಪಾಟೀಲರು ನಿರ್ವಹಿಸಿದ್ದಾರೆ. ಘಟನೆಗಳನ್ನು ಕೇವಲ ಘಟನೆಗಳನ್ನಾಗಿ ನೋಡದೆ ಅವುಗಳನ್ನು ಮನುಷ್ಯ ಸಂವೇದನೆಯ ಭಾಗಗಳಾಗಿ ನೋಡುತ್ತಿರುವುದರಿಂದ ಇಲ್ಲಿ ಜೀವನಾನುಭವಗಳು ಜೀವನ ಕಲೆಯಾಗಿ ನಿರ್ಮಾಣಗೊಂಡಿವೆ.

ಸ್ವಾತಂತ್ರ್ಯ ಹೋರಾಟದ ಕಾಲಘಟ್ಟ ಮತ್ತು ನಂತರದ ಕಾಲಘಟ್ಟ ಕಾದಂಬರಿಯಲ್ಲಿದೆ. ಯಾಕೆಂದರೆ ಕಥೆ 1937ರ ಆಸುಪಾಸಿನದು. ಅಚ್ಚುತ ಮತ್ತು ವತ್ಸಲಾರ ಮದುವೆ ನಡೆದ ವರ್ಷವಿದು. ದೇಶದಲ್ಲಿ ಚಳುವಳಿಗಳ ಪ್ರಭಾವ ಮತ್ತು ಅದಕ್ಕೆ ಹಳ್ಳಿಗಳ ಸ್ಪಂದನೆ ಯಾವ ಬಗೆಯದು ಎಂಬ ಜಿಜ್ಞಾಸೆಯನ್ನು ಈ ಕಾದಂಬರಿ ಹುಟ್ಟಿಹಾಕಿದೆ. ಕೃಷ್ಣಾಜೀ ತರಹದವರ ಹೋರಾಟಗಳು ಹಳ್ಳಿಯಲ್ಲಿ ಉಂಟುಮಾಡುವ ತಲ್ಲಣಗಳನ್ನು ಕಾದಂಬರಿ ಪರಿಣಾಮಕಾರಿಯಾಗಿ ಬಿಚ್ಚಿಟ್ಟಿದೆ. ಕಾದಂಬರಿಯ ಆರಂಭದಲ್ಲಿಯೇ ಸ್ವಾತಂತ್ರ್ಯ ಚಳುವಳಿಯ ಅಲೆಗಳು ಭಾರತದ ಗ್ರಾಮೀಣ ಪ್ರದೇಶಗಳನ್ನು ಆವರಿಸಿಕೊಳ್ಳುತ್ತಿದ್ದ ವಿಧಾನವನ್ನು ಕಾಣಿಸಿದೆ. ತಮ್ಮ ವರ್ತನೆಗಳ ಮೂಲಕ ಗ್ರಾಮದ ಅಧಿಕಾರ ವ್ಯವಸ್ಥೆ ಮತ್ತು ಬ್ರಿಟಿಷ್ ಸರಕಾರ ಎರಡಕ್ಕೂ ಕೃಷ್ಣಾಜೀ ಮುಜುಗರ ಉಂಟುಮಾಡಿದ್ದಾರೆ. ಈ ಕೃಷ್ಣಾಜೀಯ ಆರಂಭದ ಬದುಕು ಅಂಥ ಸುಖಕರವೇನೂ ಅಲ್ಲ. ತಾಯಿಯನ್ನು ಬಾಲ್ಯದಲ್ಲಿಯೇ ಕಳೆದುಕೊಂಡು ಬೆಳದವರು. ಅವರನ್ನು ಸಲುಹಿದ ವರ್ಣನೆಗಳನ್ನು ಗಮನಿಸಬೇಕು 'ಹೆಂತಾ ಮಡೀ ಅಂದರೂ ಮನ್ಯಾಗಿನ ಪರದೇಶಿ ಕೂಸಿನ್ನ ನೋಡಿಕೋಲಿಕ್ಕೆ ಆಗೂದುಲ್ಲಂತ ಹೆಂಗ ಅನಲಿಕ್ಕಾಗತದ! ಅವರು ಹತ್ತಿಯ ಬತ್ತಿಯನ್ನು ಹಾಲಾಗ ಎದ್ದಿ ಸೀಪಿಸಿ ಸೀಪಿಸಿ ಇಂವನ್ನ ಸಾಕಿದರು'. ಇಂಥ ಹಲವಾರು ವರ್ಣನೆಗಳು ಬೇರೆ ಬೇರೆಯ ಸಂದರ್ಭಗಳಲ್ಲಿ ಎದುರಾಗುತ್ತವೆ. ಗ್ರಾಮೀಣ ಜೀವನದ ಭಾವಜಗತ್ತು ಇಂಥಲ್ಲಿ ಅನಾವರಣಗೊಂಡಿದೆ. ಇವು ಕಾವ್ಯಾತ್ಮಕವಷ್ಟೇ ಅಲ್ಲ, ಬದುಕಿನ ಪರಮಾರ್ಥವನ್ನು ಹೊಳೆಯಿಸುವಂಥವು. ತಮ್ಮ ಸಹಜ ನಿಷ್ಪತ್ತಿಯಲ್ಲಿಯೇ ಬದುಕಿನ ತಾತ್ವಿಕ ಎಳೆಗಳನ್ನು ಜೋಡಿಸಿಟ್ಟಿವೆ.

ಇಲ್ಲಿನ ಪಾತ್ರಗಳಿಗೆ ಅದಮ್ಯ ಜೀವನೋತ್ಸಾಹವಿದೆ. ಆದರೆ ಜೀವನ ಪಡೆದುಕೊಂಡ ತಿರುವುಗಳ ಬಗ್ಗೆ ಅಂದಾಜಿಲ್ಲ. ಅವರು ಎಷ್ಟು ಕ್ರಾಂತಿಕಾರಿಗಳೊ ಅಷ್ಟೇ ಮುಗ್ಧರು. ಕಾಲಕಾಲಕ್ಕೆ ಎದುರಾದ ಸವಾಲುಗಳನ್ನು ಎದುರಿಸದೇ ಅವರಿಗೆ ಬೇರೆ ದಾರಿಯಿಲ್ಲ. ಅಲ್ಲದೆ ಇಲ್ಲಿನ ಬಹುತೇಕ ಪಾತ್ರಗಳಿಗೆ ನಿರ್ದಿಷ್ಟ ಗುರಿಯಿಲ್ಲ. ಆದರೆ ಅವುಗಳಿಗೆ ತಮ್ಮದೇ ಆದ 'ಸ್ಥಿತಿ' ಇದೆ. ಅಂಥ ಸ್ಥಿತಿಯನ್ನು ಮೀರಲು ಅವು ಯತ್ನಿಸುತ್ತಿವೆ. ಜೀವನದಲ್ಲಿ ಮೀರುವುದು ಏನನ್ನು? ಹೇಗೆ? ಎಂಥ ಸಂದರ್ಭದಲ್ಲಿ? ಎಂಬ ಜೀವನದ ಜಿಜ್ಞಾಸೆಯೂ ಕಾದಂಬರಿಯಲ್ಲಿ ಅಪೂರ್ವವಾಗಿ ಘಟಿಸಿದೆ. ಹಾಗಂತ ಇಲ್ಲಿನ ಪಾತ್ರಗಳಿಗೆ ಯಾವುದೇ ಆದರ್ಶಗಳಿಲ್ಲವೆಂತಲ್ಲ. ಇವು ಎಂಥ ಕಡುಕಷ್ಟದಲ್ಲೂ ತಮ್ಮ ಆದರ್ಶಗಳನ್ನು ರೂಪಿಸಿಕೊಳ್ಳಲು, ಬಾಳಲು ಹಟತೊಟ್ಟಿವೆ.

ಅವರ ಬದುಕಿನಲ್ಲಿಯೇ ಇಂಥದ್ದೊಂದು ನಂಬಿಕೆ ನಿಹಿತವಾಗಿದೆ. ಆದರ್ಶವೂ ಕೂಡ ಅವುಗಳಿಗೆ ಒಂದು ತಣ್ಣನೆಯ ಭಾವಜಗತ್ತು. ಇಂಥ ಆದರ್ಶಗಳನ್ನಿಟ್ಟುಕೊಳ್ಳುವುದು ಅವರಿಗೆ ಒಂದು ಹೆಚ್ಚುಗಾರಿಕೆಯ ಸಂಗತಿ ಕೂಡ ಅಲ್ಲ. ಅವು ಸಹಜವಾದ ಸ್ಪಂದನೆಗಳು. ಬಾಳಿನಲ್ಲಿ ಇದನ್ನು ನಿರ್ವಹಿಸುವುದು ಅವರ ಪಾಲಿಗೆ ದೈವಸಂಕಲ್ಪ. ಇಲ್ಲವಾದರೆ ದೇವರ ಆಜ್ಞೆಗೆ ವಿರುದ್ಧವಾಗಿ ವರ್ತಿಸಿದಂತೆ. ಕೆಲವೊಮ್ಮೆ ಇಲ್ಲಿನ ಪಾತ್ರಗಳು ತಮ್ಮ ವ್ಯಕ್ತಿತ್ವವನ್ನು ಲೌಕಿಕದ ಎಳೆಗಳಿಂದ ಕಟ್ಟಿಕೊಂಡಂತೆಯೇ ಅಲೌಕಿಕದ ಎಳೆಗಳಿಂದಲೂ ಕಟ್ಟಿಕೊಂಡಿವೆ.

ಬದುಕಿನ ಆಕಸ್ಮಿಕ, ವಿಚಿತ್ರ ತಿರುವುಗಳಲ್ಲಿ ನಿಂತ ಪಾತ್ರಗಳು ತಮ್ಮನ್ನು ನಿರೂಪಿಸಿಕೊಳ್ಳುವ ವಿಚಿತ್ರ ಒತ್ತಡಕ್ಕೆ ಒಳಗಾಗಿವೆ. ರಾಘಪ್ಪ ತನ್ನ ಜೀವನಕ್ಕೆ ಮಾಡಿಕೊಂಡ ಹಾನಿ, ಅಚ್ಯುತ ಮತ್ತು ವಚ್ಚಕ್ಕನ ಜೀವನದಲ್ಲಿ ಸಂಭವಿಸಿದ ದುರಂತ ತಿರುವು, ಕಾರಣವಿಲ್ಲದೆ ಕೊಲೆಯಾದ ಅಚ್ಯುತ, ಕೃಷ್ಣಾಜೀಯ ತ್ಯಾಗ, ಅನೇಕ ಹೆಣ್ಣುಮಕ್ಕಳ ಸಂಘರ್ಷಮಯ ಜೀವನ ಇಂಥದ್ದೊಂದು ನಿಬಿಡಲೋಕ ಕಾದಂಬರಿಯಲ್ಲಿದೆ. ಇಲ್ಲಿನ ಹೆಣ್ಣುಮಕ್ಕಳಂತೂ ಮಹಾನ್ ಧೈರ್ಯವಂತರು. ಸಾಂಪ್ರದಾಯಿಕತೆ ಅವರನ್ನು ಕುಗ್ಗಿಸಿಲ್ಲ. ಜೀವನದ ಎಂಥ ದುರಂತವನ್ನೂ ಅವರು ದಾಟಬಲ್ಲರು. ಅವರ ಸಾಮಾನ್ಯ ತಿಳುವಳಿಕೆಯಲ್ಲಿಯೇ ಅಸಾಧಾರಣವಾದ ಶಕ್ತಿಯಿದೆ. ಅವರೆಲ್ಲ ಪರಸ್ಪರ ಸಂತೈಸಿಕೊಳ್ಳಬಲ್ಲರು. ಅಂಬಕ್ಕ ಮತ್ತು ವಚ್ಚಕ್ಕನ ಸಂಬಂಧವಂತೂ ಕಾದಂಬರಿಯ ಅಪೂರ್ವ ಸನ್ನಿವೇಶಗಳಲ್ಲೊಂದು. ಬದುಕಿನ ಬೆಂಕಿಗೆ ಅವರು ನಾಶವಾಗಲಿಲ್ಲ. ಬದಲಿಗೆ ಪುಟಕ್ಕಿಟ್ಟ ಚಿನ್ನದಂತೆ ಹೊಸದಾಗಿ ರೂಪುಗೊಂಡರು. 'ಎಲ್ಲರೂ ಹಿಂಗ ಅತಕೋತ ಕೂತರ ಹೆಂಗ? ಆಗಬೇಕಾದ ಕ್ರಿಯಾ ಅಂತೂ ಆಗಬೇಕ, ಹೌದಲ್ಲೋ? ಈಗ ನೀವ ಇದನ್ನ ನಿರ್ವಹಿಸಬೇಕಾದವರು...' ಎಂಬ ಮಾತುಗಳಿಗೆ ಕಾದಂಬರಿಯಲ್ಲಿನ ಸಂದರ್ಭ ಮೀರಿಯೂ ಅರ್ಥದ ಸ್ತರಗಳಿವೆ. ಬದುಕಿನ ದಾರ್ಶನಿಕತೆಯಂತ ಈ ಮಾತು ಹಲವು ಸಂದರ್ಭಗಳಲ್ಲಿ ಅನುರಣಿಸಿದೆ. ವಚ್ಚಕ್ಕನ ಮದುವೆಯ ವಿವರಗಳು ಕಣ್ಣಿಗೆ ಕಟ್ಟಿದಂತಿವೆ. ಈ ದಟ್ಟ ವಿವರಗಳು ಆಕೆಯ ಗಂಡನ ಸಾವನ್ನು ಇನ್ನಷ್ಟು ಕಾಡುವಂತೆ ಮಾಡಿವೆ. ಐನಾಪುರ ಮತ್ತು ಬೆಟಗೇರಿ ಎರಡು ಹಳ್ಳಿಗಳ ಈ ಕಥೆ ನೂರಾರು ಉಪಕಥೆಗಳನ್ನು ಇಲ್ಲಿ ಹುಟ್ಟುಹಾಕಿದೆ. ದುಃಖದಲ್ಲೂ, ಸುಖದಲ್ಲೂ ನಮ್ಮ ಹಳ್ಳಿಗಳು ಎಷ್ಟು ಸಮೃದ್ಧವಾಗಿವೆ ಎಂಬುದನ್ನು ಕೂಡ ಈ ಕಾದಂಬರಿ ಕಾಣಿಸಿದೆ. ಮನುಷ್ಯರ ಜೀವಂತಿಕೆ ಎಂದರೆ ಏನು? ಎಂಬುದಕ್ಕೂ ಇಲ್ಲಿನ ಹಲವು ಘಟನೆಗಳು ಸಾಕ್ಷಿ ನುಡಿಯುತ್ತಿವೆ. ಸತ್ಯಬೋಧರ ಪಾತ್ರವೂ ಮುಖ್ಯವಾದದ್ದೆ. ಅವರು ಬಾಲ ವಿಧವೆ ವಚ್ಚಕ್ಕನಲ್ಲಿ ಆತ್ಮವಿಶ್ವಾಸ ತುಂಬಿದರು. ಬದುಕಿನ ಈ ಘೋರ ನರಕವನ್ನು ದಾಟಲು ಆಕೆಗೆ ನೆರವು ನೀಡಿದರು. ಕಾದಂಬರಿಯಲ್ಲಿ ಕಂಡು ಬರುವ ಒಂದು ಅನಾನುಕೂಲ ಎಂದರೆ ಕೆಲವು ಕಡೆ ಬೇಗ ಬೇಗ ಕಥೆ ಒಪ್ಪಿಸುವ ಅವಸರ. ಕಾದಂಬರಿ ಅಲ್ಲಲ್ಲಿ ಮಾತುಗಳನ್ನು ಹೆಚ್ಚು ಆಶ್ರಯಿಸಿದಂತೆ ಕೊಂಚ ಮೌನವನ್ನೂ ನಿರೂಪಣೆಯ ಭಾಗವಾಗಿಸಿಕೊಳ್ಳಬಹುದಿತ್ತು.

ಅಚ್ಯುತನ ದುರಂತ ಸಾವು ಕಾದಂಬರಿಯ ಕೇಂದ್ರ ಘಟನೆಯಾಗಿದೆ. ಗೈರಸಮಜೂತಿಯಿಂದಾಗಿ ನಿರಪರಾಧಿಯೊಬ್ಬನ ಹತ್ಯೆಯಾಗಿದೆ. ಅಚ್ಯುತನ ಸಾವು ಬೆಟಗೇರಿಯಲ್ಲಿನ ಬದುಕುಗಳನ್ನು ಗಾಢವಿಷಾದದಲ್ಲಿ ಮುಳುಗಿಸಿದೆ. ಬದುಕಿನ ವಿಚಿತ್ರ

ಆಟದೆದುರು ಎಲ್ಲರೂ ಅಸಹಾಯಕರಾಗಿಬಿಟ್ಟಿದ್ದಾರೆ. ಯಾರಿಗೋ ತಾಗಬೇಕಾದ ಗುಂಡು ಇನ್ಯಾರದೋ ಬೆನ್ನಿಗೆ ನಾಟಿಬಿಟ್ಟಿದೆ. ಇನ್ನು ಎಲ್ಲರಿಗೂ ಒಂದೇ ಚಿಂತೆ. ಪುಟ್ಟ ವಿಧವೆ ವಚ್ಚಕ್ಕನ ಗತಿಯೇನು? ಅಚ್ಯುತ ಮತ್ತು ಆಕೆಯ ಋಣಾನುಬಂಧ ಇಷ್ಟು ಬೇಗ ಮುಗಿಯಿತೆ? ಅವಳೀಗ ಜೀವನವನ್ನು ವೈಧವ್ಯದಲ್ಲಿಯೇ ಕಳೆಯಬೇಕೆ? ಅಥವಾ ಇದನ್ನು ಮೀರಲು ಸಾಧ್ಯವಿದೆಯೆ? ಹಲವು ಧಾರ್ಮಿಕ, ಸಾಮಾಜಿಕ ಮತ್ತು ನೈತಿಕ ಪ್ರಶ್ನೆಗಳನ್ನು ಕಾದಂಬರಿ ಹುಟ್ಟುಹಾಕಿದೆ. ಅವರೆಲ್ಲರ ಪಾಲಿಗೆ ಈ ಆಕಸ್ಮಿಕ ದುರಂತವು ಬದುಕನ್ನು ನೋಡುವ ಕ್ರಮಗಳನ್ನೇ ಬದಲಿಸಿಬಿಟ್ಟಿದೆ. 'ಅನಿವಾರ್ಯತೆ'ಯೇ ಮನುಷ್ಯ ಬದುಕನ್ನು ರೂಪಿಸಿಕೊಳ್ಳಲು ಒಂದು ತೋರುಬೆರಳಾಗಿದೆ.

ವಚ್ಚಕ್ಕನಿಗೆ ವಿದ್ಯಾಭ್ಯಾಸ ಮಾಡಿಸಲು ನಿರ್ಧರಿಸಲಾಗುತ್ತದೆ. ಆಕೆ ಕಲಿಕೆಗೆ ತೊಡಗಿದ ಮೇಲೆ ಬಿಡುಗಡೆ ಅನುಭವಿಸತೊಡಗುತ್ತಾಳೆ. ಅವಳ ಕಲ್ಪನಾಲೋಕ ಗರಿಗೆದರಿ ಮನಸ್ಸು ಹೊಸ ಪ್ರಶ್ನೆಗಳನ್ನು ಕೇಳತೊಡಗುತ್ತದೆ 'ಕಾಕರೀ... ಮುಹೂರ್ತ ಮೀರಿದರೂ ಮೀರವಲ್ಲದ್ಯಾಕಂತ ಲೀಲಾವತಿಯ ಮದಿವೀ ಮಾಡಿದ್ದರ... ಏನ ಆಗತಿತ್ತರೀ...?' ಎಂದು ಸತ್ಯಬೋಧರಿಗೆ ಕೇಳುತ್ತಾಳೆ. ಆಕೆಯ ವೈಯಕ್ತಿಕ ಅನುಭವಗಳೂ ಸೇರಿಕೊಂಡು ಇಲ್ಲಿನ ಸಾಮಾಜಿಕ ಮಡಿವಂತಿಕೆಯೂ ಅವಳಿಗೆ ಕಾಡತೊಡಗಿದೆ. ಭಗವದ್ಗೀತೆ, ಅಮರಕೋಶ, ವೇದಗಳು, ಉಪನಿಷತ್ತು, ವೈದ್ಯಕೀಯ ಪುಸ್ತಕಗಳು ಇತ್ಯಾದಿಗಳ ಓದು ಇಲ್ಲಿಯ ದ್ವಂದ್ವಗಳನ್ನು ಅರಿಯಲು ಆಕೆಗೆ ನೆರವು ನೀಡಿವೆ. ಮುಂದೆ 'ಜಯಂತಿ'ಯಲ್ಲಿ ಪ್ರಕಟವಾಗುವ ಆಕೆಯ ಪುಟ್ಟ ಬರಹ ಬದುಕಿನ ಸಂತೋಷವನ್ನೂ, ನೆಮ್ಮದಿಯನ್ನೂ ಇಮ್ಮಡಿಗೊಳಿಸಿದೆ. ವೈಧವ್ಯವನ್ನು ಮೀರಲು ಆಕೆ ಈಗ ಹೊಸದೊಂದು ಜಗತ್ತು ಕಟ್ಟಿಕೊಂಡಿದ್ದಾಳೆ.

ಕಾದಂಬರಿಯೊಳಗೆ ಸಾಹಿತ್ಯದ ಚರ್ಚೆಯೂ ಇದೆ. ಕನ್ನಡದ ವಿವಿಧ ಬರಹಗಾರರು ಅಲ್ಲಲ್ಲಿ ಬಂದು ಹೋಗಿದ್ದಾರೆ. ಕಥೆಗಾರರಿಗೆ ಮುಖ್ಯವಾದದ್ದೇನು? ಕಥನಕ್ರಮವನ್ನು ನಿರ್ವಹಿಸುವುದು ಹೇಗೆ? ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಅದಕ್ಕೆ ತನ್ನದೇ ಆದ ಉತ್ತರಗಳನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ. ವಿಚಿತ್ರವೆಂದರೆ ಕೃಷ್ಣಶರ್ಮರು ಅಚ್ಯುತನ ಕೊಲೆಯನ್ನು ನೆನಪಿಸಿಕೊಂಡು ಆಡುವ ಮಾತಿನಲ್ಲಿ ಈ ಕಲಾಮೀಮಾಂಸೆ ನಡೆದಿದೆ. ಅವರ ಕಥನ ಮೀಮಾಂಸೆಗೂ, ಅಚ್ಯುತನ ಕೊಲೆ ನಡೆದ ರೀತಿಗೂ ಇಲ್ಲಿ ಅವರಿಗೆ ಸಾಮ್ಯತೆ ಕಂಡಿದೆ. ಅಂದರೆ ಕಥೆ ಹೇಗೆ ತರ್ಕಗಳ ಮೇಲೆ ಕಟ್ಟುವ ಘಟನಾ ಸರಣಿ ಅಲ್ಲವೊ ಹಾಗೆಯೇ ಅಚ್ಯುತನ ಕೊಲೆಗೂ ಕೂಡ ಯಾವ ತರ್ಕವೂ ಹೊಂದುತ್ತಿಲ್ಲ. ಅಸಲಿಗೆ ಅವನನ್ನು ಕೊಲೆ ಮಾಡುವ ಉದ್ದೇಶ ಪೊಲೀಸರಿಗೂ ಇರಲಿಲ್ಲ. ಯಾರನ್ನೊ ಹೊಡೆಯಬೇಕೆಂದವರು ತಪ್ಪು ತಿಳುವಳಿಕೆಯಿಂದಾಗಿ ಅಚ್ಯುತನನ್ನು ಹೊಡೆದುಹಾಕಿದರು. ಕಥೆ ತನ್ನ ತರ್ಕವನ್ನು ತಾನೇ ಕಟ್ಟಿಕೊಳ್ಳುವ ಸ್ವಾಯತ್ತ ಅನುಭವವಾಗಿರುವಂತೆ ಅಚ್ಯುತನ ಕೊಲೆ ಕೂಡ ಸ್ವಾಯತ್ತ ಘಟನೆಯಾಗಿದೆ. ಅದಕ್ಕೆ ಯಾವ ಹಿನ್ನೆಲೆಯೂ ಇಲ್ಲ. ಕಾದಂಬರಿಯೊಳಗೆ ನಡೆಯುತ್ತಿರುವ ಕಥನಮೀಮಾಂಸೆಗೂ ಕಾದಂಬರಿಯ ವಸ್ತುವಿಗೂ ವಿಚಿತ್ರ ಸಂಬಂಧ ಏರ್ಪಟ್ಟಿದೆ. ಅವೆರಡೂ ಸಮಾನ ಪಾತಳಿಯ ಮೇಲೆ ಚಲಿಸುತ್ತಿವೆ (ಇಲ್ಲಿಯೇ ನನಗೆ ಕರಿಟೊಪಿಗೆರಾಯನ ಕಥೆ ನೆನಪಾಗುತ್ತಿದೆ). ಕಲಾಮೀಮಾಂಸೆ ಮತ್ತು ಜೀವನ ಮೀಮಾಂಸೆಗಳು ಸೂಕ್ಷ್ಮವಾಗಿ ತೆರೆದುಕೊಳ್ಳುತ್ತಿವೆ. ಕೃಷ್ಣಶರ್ಮರು,

ಗೌರೀಶರು ಮತ್ತು ವಾಡಪ್ಪಿ ಅವರು ನಡೆಸುತ್ತಿರುವ ಚರ್ಚೆ ಕಲಾಮೀಮಾಂಸೆಯ ಸೀಮೆಗಳನ್ನು ದಾಟಿ ಮುನ್ನಡೆದಿದೆ. ಕಲೆ ಮತ್ತು ಜೀವನದ ಅನೇಕ ನಿಗೂಢ ಪ್ರಶ್ನೆಗಳನ್ನು ಮೈಮೇಲೆಳುದುಕೊಂಡು ಚರ್ಚಿಸುತ್ತಿದೆ. ಕಲೆ ಮತ್ತು ಜೀವನದ ಅನೂಹ್ಯ ಸಂಬಂಧವನ್ನು ಅರಿಯಲು ಯತ್ನಿಸುತ್ತಿದೆ. ಇದೆಲ್ಲ ಒಂದು ಅಸಾಧಾರಣ ಸೃಷ್ಟಿಶೀಲತೆಯ ಭಾಗವಾಗಿ, ಕಾದಂಬರಿಯ ಒಳ ಅಂಗವಾಗಿ ತೆರೆದುಕೊಂಡಿದೆ. ಅಂತೆಯೇ ಕಾದಂಬರಿಯ ಒಳಗಿನ ನಿರೂಪಣೆಯ ಜಗತ್ತು ರಾಘವೇಂದ್ರ ಪಾಟೀಲರು ಇಲ್ಲಿಯವರೆಗೆ ಮಾಡಿರುವ ಕಥನಮೀಮಾಂಸೆಯ ವಿಸ್ತರಣೆಗೆ ಸಾಕ್ಷಿಯಾಗಿದೆ. ಇದು ಕೂಡ ತನ್ನ ಸೀಮೆಗಳನ್ನು ಮೀರಿ ಮುನ್ನಡೆದಿರುವುದು ಕನ್ನಡ ಕಾದಂಬರಿಯ ಲೋಕದಲ್ಲಿ ಒಂದು ಅಚ್ಚರಿಯ ಸಂಗತಿ.

❖❖❖

ಬಾಲ್ಯದೂರಿನ ಮಣ್ಣ
ಕಣ್ಣೊಳಗೆ
ಕಾಪಿಟ್ಟುಕೊಂಡರೆ ಸಾಕು
ಆ ಮಣ್ಣ ನೋಡುತಿರೆ
ನೆನಪುಗಳ ಭರತವು ಉಕ್ಕೇರಿ
ಎದೆಗೆ ಅಪ್ಪಳಿಸುತ್ತಿರಬೇಕು

ಕುವೆಂಪು ಕವಿತೆಗಳಲ್ಲಿ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯದ ಒಳನೋಟ

ಡಾ. ದೊರೇಶ

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಣಾವರ

ನನಸಾದುದೋ ಶತಮಾನದ
ಶತ ಶತಮಾನದ ಕನಸಿಂದು:
ಸ್ವಾತಂತ್ರ್ಯದ ಸಂಗ್ರಾಮದಿಂ
ಗತಿಸಿದ ಹುತಾತ್ಮರ
ಬಲಿದಾನಂ ಫಲಿಸಿತೋ ಇಂದು !
ಹೇ ತ್ರಿವರ್ಣ ಕೇತನ,
ನೀನೆ ನಮ್ಮ ಚೇತನ;
ಪ್ರೇಮ ಧೈರ್ಯ ಸತ್ಯ ಧರ್ಮ ಶಾಂತಿ ಚಿರನಿಕೇತನ ! **–ಕುವೆಂಪು**

ಪೀಠಿಕೆ

ಭಾರತೀಯ ಮನಸ್ಸುಗಳ ಸ್ವರಾಜ್ಯದ ಕಲ್ಪನೆ ಒಂದು ಬೃಹತ್ ರಾಷ್ಟ್ರೀಯ ಆಂದೋಲನವಾಗಿ ಬೆಳೆಯುವುದರ ಹಿಂದೆ ಕನ್ನಡ ಸಾಹಿತ್ಯದ ಪಾತ್ರ ದೊಡ್ಡದಿದೆ. ಸಂಸ್ಥಾನಗಳಾಗಿ ಹರಿದುಹಂಚಿ ಹೋಗಿದ್ದ ಭಾರತ ಒಂದು ರಾಷ್ಟ್ರವಾಗಿ ಒಗ್ಗೂಡಿ, ಸ್ವಾತಂತ್ರ್ಯವೆಂಬ ಕನಸು ಅರಳಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ನೀಡಿದ ಕೊಡುಗೆ ಅಸದೃಶ. ನಮ್ಮ ನೆಲದಲ್ಲಿ ನಾವೇ ಪರಕೀಯರಾಗಿದ್ದೇವೆ, ಈ ಬಂಧನದಿಂದ ಹೇಗಾದರೂ ಹೊರಬರಬೇಕು, ಅದಕ್ಕಾಗಿ ಸಂಘಟಿತ ಹೋರಾಟ ಅನಿವಾರ್ಯ ಎಂಬ ಪ್ರಜ್ಞೆ ಪ್ರತಿಯೊಬ್ಬ ಭಾರತೀಯನಲ್ಲೂ ಮೂಡಿದ್ದರ ಹಿಂದೆ ಕನ್ನಡ ಕವಿಗಳು ಬೀರಿದ ಪ್ರಭಾವ ಕಲ್ಪನೆಗೂ ಮೀರಿದ್ದು. ಇಂತಹದೊಂದು ಪ್ರಜ್ಞಾಪ್ರವಾಹದ ಓಟದಲ್ಲಿ ಕನ್ನಡನಾಡು ಒಂದಾಗಿ ಸಾಗಿದ್ದು ಇತಿಹಾಸ. ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಹೋರಾಟಗಾರರ ಬಗ್ಗೆ ಮಾತನಾಡುವಾಗಲೆಲ್ಲ ನಮ್ಮ ಗಮನಕ್ಕೆ ಬರುವ ಮುಖ್ಯವಾದ ವಿಷಯವೆಂದರೆ, ಕನ್ನಡದ ಅನೇಕ ಸಾಹಿತಿಗಳು ಅಕ್ಷರವನ್ನು ತಮ್ಮ ಹೋರಾಟದ ಒಂದು ಪ್ರಮುಖ ಅಸ್ತ್ರವನ್ನಾಗಿಸಿಕೊಂಡಿದ್ದರು ಎನ್ನುವುದು. ಹೀಗೆ ನಮ್ಮ ಕನ್ನಡ ಸಾಹಿತ್ಯ ನಮ್ಮ ರಾಷ್ಟ್ರೀಯ ಚಳವಳಿಯ ಒಂದು ಅವಿಭಾಜ್ಯ ಅಂಗವಾಗಿತ್ತು. ರಾಷ್ಟ್ರೀಯ ಪ್ರಜ್ಞೆ ಹಾಗೂ ಸ್ವದೇಶಾಭಿಮಾನವನ್ನು ಮೂಡಿಸುವ ಮತ್ತು ಚಾಲನೆಯಲ್ಲಿಡುವ ಕೆಲಸವನ್ನು ನಿರಂತರವಾಗಿ ಕನ್ನಡ ಸಾಹಿತ್ಯ ಮಾಡಿತು.

*****

ಪಾಶ್ಚಿಮಾತ್ಯ ನವೋದಯದ ಎರವಲಾದ ನವೋದಯದ ಚಿಂತನೆಗಳನ್ನು ಭಾರತದ ವಸಾಹತುಕಾಲೀನ ಸಂದರ್ಭಕ್ಕೆ ಬಳಸಿಕೊಂಡು ಪ್ರಯೋಗಿಸಿದ್ದರಲ್ಲಿ ಕನ್ನಡ ಕವಿಗಳ ಜಾಣ್ಮೆ ಇದೆ. ಏಕೆಂದರೆ ಇಲ್ಲಿನ ಜಾತಿ, ವರ್ಗ, ಲಿಂಗ, ಭಾಷೆ, ಜನಾಂಗ ಮೊದಲಾದ ವೈವಿಧ್ಯಗಳು, ವೈರುಧ್ಯಗಳನ್ನು ಮೀರುವ ಎಚ್ಚರಬೇಕಿತ್ತು. ಈ

ದಿಸೆಯಲ್ಲಿ ನವೋದಯ ಸಾಹಿತಿಗಳು ಹುಟ್ಟು ಹಾಕಿದ ಸೃಷ್ಟಿಶೀಲತೆ ಮಹತ್ತ್ವದ್ದು. ಇಲ್ಲಿನ ಬಹುಮುಖಿ ಸಾಂಸ್ಕೃತಿಕ ನೆಲೆಗಳನ್ನು ಏಕಮುಖಿಯನ್ನಾಗಿಸುವ ಜರೂರು, ಅನಿವಾರ್ಯತೆಗಳು ಅಂದು ಇದ್ದವು. ಈ ಮಾತು ಕನ್ನಡದ ಸಂದರ್ಭಕ್ಕೂ ಅನ್ವಯವಾಗುತ್ತದೆ. ಏಕೆಂದರೆ ವಸಾಹತುಶಾಹಿ ಪ್ರಭುತ್ವದಲ್ಲಿ ಭಾರತವೂ ದಾಸ್ಯಕ್ಕೆ ಒಳಗಾಗುವುದರ ಜೊತೆಗೆ ಪ್ರಾಂತೀಯ ನೆಲೆಗಳನ್ನೂ ಛಿದ್ರಗೊಳಿಸಿತ್ತು. ಇಂಥ ವಿಚ್ಛಿದ್ರತೆಗೆ ಬ್ರಿಟಿಷರಲ್ಲಿ ಯಾವುದೇ ಬಗೆಯ ತಾತ್ವಿಕ ತಳಹದಿಗಳು ಇರಲಿಲ್ಲ. ಬದಲಾಗಿ 'ಒಡೆದು ಆಳುವ' ಕುತಂತ್ರವೊಂದೆ ಇದ್ದದ್ದು. ಇದನ್ನು ಗ್ರಹಿಸಿದ ಅಂದಿನ ಸೃಷ್ಟಿಶೀಲ ಜಗತ್ತು, ದೇಶ ಮತ್ತು ಪ್ರಾಂತ್ಯಗಳನ್ನು ಒಟ್ಟೊಟ್ಟಿಗೆ ಪ್ರತಿಕ್ರಿಯಿಸುವಂತೆ ಮಾಡಬೇಕಾಗಿತ್ತು. ಆಗ ಇವರಿಗೆ ದೊರೆತದ್ದು ಭಾರತೀಯರ ಪಾರಂಪರಿಕ ಧರ್ಮ, ಆಚರಣೆ, ಚರಿತ್ರೆ–ಪುರಾಣ–ಐತಿಹ್ಯಗಳಂಥ ಪರಿಕರಗಳು. ಈ ಪರಿಕರಗಳನ್ನು ಪಾಶ್ಚಿಮಾತ್ಯ ಪರಿಕಲ್ಪನೆಗಳ ಹಿನ್ನೆಲೆಗಳಿಂದಲೆ ಭಾರತೀಯರಿಗೆ ಉಣಬಡಿಸಿದರು. ಆ ಮೂಲಕ ಸಾಂಸ್ಕೃತಿಕವಾಗಿ ಅನಾವರಣಗೊಳ್ಳುವುದು ಇಲ್ಲಿ ಪ್ರಧಾನವಾಗಿತ್ತು. ಇದರ ಪರಿಣಾಮವಾಗಿ ಇಲ್ಲಿನ ನೆಲ, ಜಲ, ಪರಿಸರಗಳೆಲ್ಲವೂ ಸಾಂಸ್ಕೃತಿಕ ಆಯಾಮಗಳನ್ನು ಪಡೆದು ಪೂಜ್ಯತೆಗೆ ಒಳಗಾದವು.

ಭೂಮಿಯನ್ನು ಆರಾಧನೆಯ ನೆಲೆಗಳಿಗೆ ಕೊಂಡೊಯ್ದ ಅಂದಿನ ನವೋದಯ ಸಾಹಿತ್ಯ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿಗಳನ್ನು ಜನರಲ್ಲಿ ಹುಟ್ಟು ಹಾಕಿತು. ಬಂಗಾಳಿ, ಒರಿಯಾ, ಭಾಷೆಗಳಿಗೂ ಪಸರಿಸುವಂತೆ ಆಯಿತು. ಇದರಿಂದ ಸ್ವದೇಶ, ಸ್ವಧರ್ಮ, ಸ್ವಭಾಷೆ, ನವೋದಯ ಕಾವ್ಯ ಜನರಿಗೆ ಅರ್ಥವಾಗಲು ಅನೇಕ ರೂಪಕ–ಪ್ರತೀಕಗಳನ್ನು ಸೃಷ್ಟಿಸಿತು. ಅಂಥವುಗಳಲ್ಲಿ ತಾಯಿ, ಮಾತೆ, ಲಕ್ಷ್ಮಿ, ಜನನಿ, ಕಾಳಿ, ಚಂಡಿ, ದುರ್ಗೆ ಮೊದಲಾದ ರೂಪಕಗಳು ಸಹ ಬಳಕೆ ಆದವು. ಇವುಗಳಿಂದ ದೇಶ ಹಾಗೂ ಪ್ರಾಂತೀಯ ಘಟಕಗಳು ಕ್ರಿಯಾಶೀಲವಾದವು. ಆದ್ದರಿಂದಲೇ ಭಾರತಮಾತೆ, ಭೂದೇವಿ, ದುರ್ಗೆ, ಕನ್ನಡಮ್ಮ, ಕರ್ನಾಟಕಮಾತೆ, ತನುಜಾತೆ, ಭುವನೇಶ್ವರಿ ಮೊದಲಾದ ರೂಪಕಗಳು ಚಾಲ್ತಿಗೆ ಬಂದದ್ದು. ವಸಾಹತುಶಾಹಿ ಪ್ರಭುತ್ವಕ್ಕೆ ಪ್ರಬಲ ಪ್ರತಿರೋಧಗಳನ್ನು ಒಡ್ಡಿದ ಈ 'ಹೆಣ್ಣುಸಂಕಥನ'ದ ಹಲವು ರೂಪಕಗಳು ಸಾಂಸ್ಕೃತಿಕವಾಗಿ ಮಹತ್ವದವು. ಏಕೆಂದರೆ ಈ ಸಂಕಥನ ಹೆಣ್ಣಿನ ಎರಡು ಚಹರೆಗಳನ್ನು ಅನಾವರಣಗೊಳಿಸಿತ್ತು. ಶಾಂತ ಸ್ವರೂಪದ ಹಾಗೂ ಉಗ್ರ (ರೌದ್ರ) ರೂಪದ ಎರಡೂ ಚಹರೆಗಳೂ ರಾಷ್ಟ್ರೀಯ ಅಂತೆಯೆ ಪ್ರಾಂತೀಯ ನೆಲೆಗಳಲ್ಲಿ ಸದೃಢ ಭೂಮಿಕೆಯನ್ನು ನಿರ್ಮಿಸಿದ್ದು ಗಮನಾರ್ಹ. ಆದ್ದರಿಂದಲೆ ಮಮತೆ, ಶಾಂತಿ, ಸಹನೆಗಳ ಜೊತೆಗೆ ರೋಷ, ಕೆಚ್ಚು, ಬಲಿದಾನಗಳಂತ ಕ್ರಾಂತಿಕಾರಕ ರೂಪಗಳು ಅಂದಿನ ಸ್ವಾತಂತ್ರ್ಯ ಹೋರಾಟಗಳಲ್ಲಿ ಕಾಣಿಸಿಕೊಂಡದ್ದು. ಈ ಮಾತು ಕನ್ನಡದ ಸಂದರ್ಭಕ್ಕೂ ಅನ್ವಯಿಸುತ್ತದೆ.

ಕಳೆದ ಶತಮಾನದ ಸಾಹಿತ್ಯವನ್ನು ನಿರ್ವಚಿಸಿಕೊಳ್ಳುವಾಗ ಅಗಾಧ ಪಾಂಡಿತ್ಯ ಹಾಗೂ ಸಾಮಾಜಿಕ ಬದ್ಧತೆಯ ಶ್ರೀ ಕುವೆಂಪು ಇಡೀ ಕಾಲಮಾನವನ್ನು ಆವರಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕನ್ನಡ ನವೋದಯ ಸಾಹಿತ್ಯಕ್ಕೆ ಪ್ರೇರಣೆಯಾಗಿದ್ದ ಹಲವಾರು ಅಂಶಗಳಲ್ಲಿ ಬ್ರಿಟಿಷ್ ವಸಾಹತುವನ್ನು ಧಿಕ್ಕರಿಸುವ ಸಂದರ್ಭದಲ್ಲಿ ದೇಶಿಯತೆಯನ್ನು ಕಟ್ಟುವ ಕೆಲಸವನ್ನು ಕನ್ನಡದ ನವೋದಯದ ಸಾಹಿತಿಗಳು ಮಾಡಿದರು. ದೇಶಪ್ರೇಮದ ಕಾದಂಬರಿಗಳು, ಕವನಗಳು, ನಾಟಕಗಳು ಹಾಗೂ ಇತರ ಸಾಹಿತ್ಯ ಪ್ರಕಾರಗಳು ವಿಫುಲವಾಗಿ ಕಂಡುಬಂದವು. ದೇಶಿಯತೆಯನ್ನು ಎತ್ತಿಹಿಡಿಯುವ ಸಂದರ್ಭದಲ್ಲಿ

ಹಲವಾರು ಆಂತರಿಕ ವಿಷಯಗಳೊಂದಿಗೆ ಹೋರಾಟವನ್ನು ಮಾಡುವುದು ಕೂಡ ಅನಿವಾರ್ಯವಾಗಿತ್ತು. ಅನ್ಯಭಾಷೆಗಳ ಹಿಡಿತ, ಸಾಮಾಜಿಕ ಅನಿಷ್ಟಗಳು, ದೇಶೀಯ ಪ್ರಭುತ್ವ ಇವೇ ಮೊದಲಾದವು ಮುಖ್ಯವಾದವು. ಒಂದು ಕಡೆಯಿಂದ ಬ್ರಿಟಿಷರನ್ನು ಓಡಿಸಬೇಕೆಂಬ ಹಠ. ಇನ್ನೊಂದು ಕಡೆ ಭಾಷಿಕವಾಗಿ ಕರ್ನಾಟಕ ಒಂದಾಗಬೇಕೆಂಬ ಆಶಯ, ಈ ಕಾಲದ ಕನ್ನಡದ ಬಹುತೇಕ ಲೇಖಕರಲ್ಲಿತ್ತು. ಹಾಗಾಗಿ ದೇಶಭಕ್ತಿಯ ರಚನೆಗಳಲ್ಲಿ ರಾಜ್ಯನಿಷ್ಠೆಯ ಅಂಶಗಳೂ ಸೇರಿಕೊಂಡಿವೆ. ಈ ಹಿನ್ನಲೆಯಲ್ಲಿ ಕುವೆಂಪು ಅವರ ದೇಶಭಕ್ತಿಗೀತೆಗಳಿಗೆ ರಾಷ್ಟ್ರೀಯತೆ ಮತ್ತು ದೇಶಿಯತೆಯು ಜೊತೆಜೊತೆಯಾಗಿ ಪ್ರೇರಣೆಗೊಂಡು ಅಭಿವ್ಯಕ್ತಗೊಂಡವು. ಪಾಂಚಜನ್ಯ, ಇಕ್ಷುಗಂಗೋತ್ರಿ ಮುಂತಾದ ಅನೇಕ ಕವನ ಸಂಕಲನಗಳ ಕವಿತೆಗಳಲ್ಲಿ ಸ್ವಾತಂತ್ರ್ಯ ಸಂದರ್ಭದ ರಾಷ್ಟ್ರೀಯತೆಯ ಅಭಿಮಾನ ಮತ್ತು ದೇಶಿಯತೆಯ ಅಸ್ಮಿತೆಗಳು ಢಾಳಾಗಿ ಗೋಚರಿಸುತ್ತವೆ.

ಕುವೆಂಪು ಅವರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯಬೇಕು ಎನ್ನುವ ಆಶಯದೊಂದಿಗೆ ಅಖಂಡ ಕರ್ನಾಟಕ ಒಂದಾಗಬೇಕು ಎನ್ನುವ ಆಶಯವೂ ಇತ್ತು. ಹಾಗಾಗಿ ಭಾರತವು ಜನನಿ. ಕರ್ನಾಟಕ ತನುಜಾತೆ ಎನ್ನುವ ಪರಿಕಲ್ಪನೆ ಇಲ್ಲಿ ಮೂಡಿಬಂದಿದೆ. ನಾಡಿನ ಸ್ವಾತಂತ್ರ್ಯದ ತುಡಿತ ಕುವೆಂಪು ಅವರ ಹಲವು ಕವನಗಳಲ್ಲಿ ಅಭಿವ್ಯಕ್ತವಾಗಿದೆ. ವೀರತನವನ್ನು ಈ ನಾಡಿನ ಜನರಲ್ಲಿ ತುಂಬಿಸುತ್ತಾ

ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ !
ಹಿಗ್ಗದೆಯೆ ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ !
ಭರತಖಂಡದ ಹಿತವೆ
ನನ್ನ ಹಿತ ಎಂದು,
ಭರತಮಾತೆಯ ಮತವೆ
ನನ್ನ ಮತ ಎಂದು
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು, (ಪಾಂಚಜನ್ಯ) ಎಂದು ಹೇಳಿರುವುದನ್ನು ಗಮನಿಸಬಹುದು. ಸಾವಿಗೆ ಅಳುಕಬೇಕಿಲ್ಲ. ಸತ್ತರೂ ಆತ್ಮ ಅಚ್ಯುತ, ಮೃತ್ಯು ನಶ್ವರ ಎನ್ನುವ ತೀರ್ಮಾನಕ್ಕೆ ಬರುವ ಕವಿಯಲ್ಲಿ ಆಶಾವಾದವು ಎದ್ದುಕಾಣುತ್ತದೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ದೇಶವನ್ನು ತಾಯಿ ಎಂದು ನಮ್ಮ ಹೋರಾಟಗಾರರು ಗ್ರಹಿಸಿದರು. ಇನ್ನೂ ಮುಂದೆ ಹೋದ ಕೆಲವರು 'ಭಾರತಾಂಬೆ' 'ದೇವಿ' ಇತ್ಯಾದಿ ಪರಿಕಲ್ಪನೆಗಳನ್ನು ನೀಡಿದರು. ಹೋರಾಟಕ್ಕೆ ಜನರನ್ನು ಒಟ್ಟುಗೂಡಿಸಲು ಇದು ಅನಿವಾರ್ಯವೂ ಆಗಿತ್ತು. ಕುವೆಂಪು ಅವರಿಗೆ ಪ್ರೇರಣೆ ನೀಡಿದ ಈ ಅಂಶ ದೇಶದ ಸ್ವಾತಂತ್ರ್ಯ ಹೋರಾಟದ ಹೊತ್ತಿನಲ್ಲಿ ಕುವೆಂಪು ಅವರ ಪ್ರಖರ ದೇಶಾಭಿಮಾನ ಮತ್ತು ದಾಸ್ಯದ ಬಿಡುಗಡೆಯ ಕಾವು ಪ್ರಜ್ವಲಿಸಲು ಅನುವು ಮಾಡಿಕೊಟ್ಟಿತು. ಯಾವುದೋ ಕಣ್ಣಿಗೆ ಕಾಣದ ದೇವರನ್ನು ಪೂಜಿಸುವುದಕ್ಕಿಂತ

ದೇಶವನ್ನು ದೇವರೆಂದು ಯಾಕೆ ಗ್ರಹಿಸಬಾರದು? ಸ್ವಾತಂತ್ರ್ಯಕ್ಕಾಗಿ ದೈವದ ನೆಪ ಮಾಡುವ ಬದಲು ದೇಶವನ್ನೇ ದೇವರೆಂದು ಕರೆದು ದೇಶಭಕ್ತಿಯ ಪಾರಮ್ಯವನ್ನು ಸ್ವಾತಂತ್ರ್ಯದ ಸಂದರ್ಭದಲ್ಲಿ ಒಡಮೂಡಿಸಿದರು. ಹಾಗಾಗಿ

ನೂರು ದೇವರನೆಲ್ಲಾ ನೂಕಾಚೆ ದೂರ

ಭಾರತಾಂಬೆಯೆ ದೇವಿ ಎಮಗಿಂದು ಪೂಜಿಸುವ ಬಾರ (ಇಂದಿನ ದೇವರು)

ಎಂದು ಕರೆ ಕೊಟ್ಟಿರುವುದನ್ನು ಗಮನಿಸಬಹುದು. ಎಲ್ಲಾ ದೇವರುಗಳನ್ನು ತಿರಸ್ಕರಿಸಿ, ಮನುಷ್ಯನೇ ದೇವರು ಎನ್ನುವ ನಿಲುವಿಗೆ ಕವಿ ಬಂದಿರುವುದನ್ನು ಗಮನಿಸಬಹುದು. ಈ ಮಾನವತಾವಾದದ ಪ್ರೇರಣೆಯೇ ಕವಿಗೆ ದೇಶೀಯ ಚಿಂತನೆಯನ್ನು ಗಟ್ಟಿಗೊಳಿಸಲು ಕಾರಣವಾಗಿದೆ.

ಸ್ವಾತಂತ್ರ್ಯದ ಸಂದರ್ಭದಲ್ಲಿ ಬರೆಯುತ್ತಿದ್ದ ಕುವೆಂಪು ಅವರನ್ನ ಅನೇಕ ವ್ಯಕ್ತಿಗಳು ಮತ್ತು ಸಂಗತಿಗಳು ಪ್ರಭಾವಿಸಿದವು. ವಿವೇಕಾನಂದರ ಕ್ರಾಂತಿಕಾರಿ ಚಿಂತನೆಗಳು, ಶ್ರೀ ರಾಮಕೃಷ್ಣ ಪರಮಹಂಸರ ಅನುಭಾವ ಮತ್ತು ಅರವಿಂದರ ಆಧ್ಯಾತ್ಮಿಕ ದೃಷ್ಟಿಯನ್ನು ರೂಪಿಸಿದವು ಮತ್ತು ಪ್ರೇರೇಪಿಸಿದವು. ಅಂದು ಕುವೆಂಪು ಪ್ರತಿಪಾದಿಸುತ್ತಿದ್ದ 'ಮನುಷ್ಯತ್ವದ ಏಕತೆ'ಯ ಕಲ್ಪನೆಗೆ ಗಾಂಧೀಜಿಯವರು ರಾಷ್ಟ್ರೀಯತೆಯ ಆಂದೋಲನದ ಸಂದರ್ಭದಲ್ಲಿ ಬಳಸುತ್ತಿದ್ದ ಸರ್ವೋದಯ ಎಂಬ ಪದ ಅತ್ಯಂತ ಸೂಕ್ತವೂ, ಪ್ರಿಯವೂ ಆಗಿ ಕಂಡು ಬಂದದ್ದರಿಂದ, ಕುವೆಂಪು ಸರ್ವೋದಯವನ್ನು ಒಂದು ಯುಗ ಮಂತ್ರ ಎಂದು ಸ್ವೀಕರಿಸುತ್ತಾರೆ. 'ಹಿಂದಾಯಿತು ಓರೋರ್ವರ ಕಾಲ! ಇದು ಸರ್ವರ ಕಾಲ! ಎಂದು ಘೋಷಿಸುತ್ತಾರೆ. ಸ್ವಾತಂತ್ರ್ಯೋತ್ತರ ಭಾರತದ ಹೊಸ್ತಿಲಿನಲ್ಲಿ 'ಸ್ವಾತಂತ್ರ್ಯೋದಯ ಮಹಾ ಪ್ರಗಾಥ'ದ ಮೂಲಕ ಸ್ವಾತಂತ್ರ್ಯೋದಯ ಸಂಭ್ರಮವನ್ನು ಹಾಡಿದ ಕವಿ, ಅನಂತರ ಉದ್ದಕ್ಕೂ ಈ ದೇಶದ ವಿದ್ಯಮಾನಗಳಿಗೆ ಸ್ಪಂದಿಸಿರುವ ಕ್ರಮ ವಿಶೇಷ ರೀತಿಯದಾಗಿದೆ.

ಸ್ವಾತಂತ್ರ್ಯಾನಂತರದ ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಹರಿದು ಹಂಚಾಗಿದ್ದ ಮುಂಬೈ, ಹೈದ್ರಾಬಾದ್, ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿ ಏಕೈಕ ಕರ್ನಾಟಕವನ್ನು ರಚಿಸಬೇಕೆಂಬ ಒಲವು ನಾಡಿನ ಜನರದಾಗಿತ್ತು. ಆದರೆ ಏಕೀಕೃತ ಕರ್ನಾಟಕದಲ್ಲಿ ತಮ್ಮ ರಾಜಕೀಯ ಶಕ್ತಿ ಕಳೆಗುಂದುವುದೆಂಬ ಶಂಕೆಯಿಂದ ಕೆಲವು ನಾಯಕರು ಇದನ್ನು ವಿರೋಧಿಸಿದರು. ಆಗ ಕುವೆಂಪು ಇಂತಹ ವಿಚ್ಛಿದ್ರಕಾರಿ ನಿಲುವುಗಳನ್ನು ಉಗ್ರವಾಗಿ ಖಂಡಿಸಿ 'ಅಖಂಡ ಕರ್ನಾಟಕ' ಎಂಬ ಕವನದ ಮೂಲಕ ತಮ್ಮ ವಿರೋಧವನ್ನು ಸೂಚಿಸುವುದರ ಜೊತೆಗೆಯೇ ಪರೋಕ್ಷವಾಗಿ ಕರ್ನಾಟಕದ ಬಗೆಗಿನ ತಮ್ಮ ನಿಲುವನ್ನು ವ್ಯಕ್ತಪಡಿಸಿದರು.

ಅಖಂಡ ಕರ್ನಾಟಕ

ಅಲ್ತೋ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!

ನೃಪತುಂಗನೇ ಚಕ್ರವರ್ತಿ, ಪಂಪನಿಲ್ಲಿ ಮುಖ್ಯಮಂತ್ರಿ,

ರನ್ನ, ಜನ್ನ, ನಾಗವರ್ಮ, ರಾಘವಾಂಕ, ಹರಿಹರ,

ಬಸವೇಶ್ವರ, ನಾರಣಪ್ಪ, ಸರ್ವಜ್ಞ ಷಡಕ್ಷರ

ಸರಸ್ವತಿಯೇ ರಚಿಸಿದೊಂದು ನಿತ್ಯಸಚಿವ ಮಂಡಲ

ತನಗೆ ರುಚಿರ ಕುಂಡಲ'

ಇಲ್ಲಿ ಕುವೆಂಪು ಕರ್ನಾಟಕ ಕುರಿತ ತಮ್ಮದೇ ಆದ ಸಂಸ್ಕೃತಿ ಕರ್ನಾಟಕದ ಪರಿಕಲ್ಪನೆ

ಹೊಂದಿರುವುದರ ಜೊತೆಗೆ ಕರ್ನಾಟಕದ ಪರಿಕಲ್ಪನೆ ಪರಂಪರಾಗತವಾದುದು. ಅಖಂಡ ಕರ್ನಾಟಕದ ಅನಿವಾರ್ಯತೆ, ರಾಜಕೀಯ ನಾಯಕರ ಕಪಟ ನಾಟಕಗಳ ವಿರುದ್ಧ ಎತ್ತಿರುವ ಕುವೆಂಪುರವರ ಈ ದನಿ "ಏಕೀಕೃತ ಕರ್ನಾಟಕ'ವನ್ನು ಬಯಸುವರೆಲ್ಲರ ಪ್ರತಿನಿಧಿಯಾಗಿದ್ದಿತು.

ಜನತೆಯ ಆಕಾಂಕ್ಷೆ, ಹಾರೈಕೆ, ನಿರೀಕ್ಷೆಗಳ ಫಲವಾಗಿ ನವೆಂಬರ್ ಒಂದರ 1956 ರಂದು ಏಕೈಕ ಕರ್ನಾಟಕ ಉದಯವಾಯಿತು. ಈ ಸಂದರ್ಭದಲ್ಲಿ ರಚಿಸಿದ ಕರ್ನಾಟಕ ರಾಜ್ಯೋದಯ ಶ್ರೀಗೀತೆಯಲ್ಲಿ

ಬಾರಮ್ಮ, ದೇವಿ
ಓ ತಾಯಿ ಭಾರತಿಯೆ, ನಿನ್ನ ಮಗಳನು ಹರಸು
ವರುಷ ಒಂಬತ್ತರಜ್ಞೆಯಲಿ ಬಂಧನ ಮುಕ್ತಳಾದಂದು
ನೀ ಕಂಡ ಕನಸು
ಎರಡು ಕೋಟಿಯ ಹೃದಯದಲಿ ಶತಮಾನದಿಂ ಕಂದಿದ ಒಮ್ಮನಸು
ದುರ್ಮಿಖಿಯೆ ಸುಕ್ಷಿಮುಖಿ ತಾನಾದ ದೀವಳಿಯ ದಿನದಂದು
ತಾನಾಗಿಹುದು ನನಸು.

ಭಾರತದ ಸ್ವಾತಂತ್ರ್ಯ ಅನಂತರದ ಒಂಭತ್ತು ವರ್ಷಗಳು ಎರಡು ಕೋಟಿ ಕನ್ನಡ ಮನಸ್ಸುಗಳ ಕನ್ನಡ ನನಸಾಗಿದೆ ಎನ್ನುವಲ್ಲಿ ಅವರ ಪ್ರಜಾಸತ್ತಾತ್ಮಕ ನಿಲುವನ್ನು ಲಕ್ಷಿಸತಕ್ಕದ್ದಾಗಿದೆ. ಇಲ್ಲಿ ಕರ್ನಾಟಕವನ್ನು ಭಾರತದ ಮಗಳು ಎಂದು ಸಂಬೋಧಿಸಿರುವುದು, ಭಾರತ ರಾಷ್ಟ್ರದ ಕಲ್ಪನೆಯೊಳಗೆ ಕರ್ನಾಟಕದ ಅವಿಭಾಜ್ಯತೆಯನ್ನು ಹೇಳುತ್ತಲೇ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತಾರೆ. ಭಾರತದ ರಾಷ್ಟ್ರೀಯತೆ ಒಳಗೆಯೇ ಬಹುರಾಷ್ಟ್ರೀಯತೆಯನ್ನು ಕುವೆಂಪು ಅವರು ಒಪ್ಪುತ್ತಿದ್ದರು. ಭಾರತಿಯೊಳಗಡೆಯೇ ವಿವಿಧ ಭಾರತಿಯನ್ನು ಕಾಣುವ ಬಹುತ್ವದ ಕಾಣಿಕೆ ಅವರದ್ದಾಗಿದ್ದಿತು. ಆದುದರಿಂದಲೇ ಅವರಿಗೆ ಭಾರತ 'ಕರ್ನಾಟಕ ಭಾರತ'ವಾಗಿದ್ದಿತು. ಕುವೆಂಪು ಹೇಳುವ ಹಾಗೆ 'ನಾನು ರಾಜದೃಷ್ಟಿಯಿಂದ ಕರ್ನಾಟಕದವನು: ಭಾಷಾದೃಷ್ಟಿಯಿಂದ ಕನ್ನಡಿಗನು: ಆದರೆ ಸಂಸ್ಕೃತಿಯ ದೃಷ್ಟಿಯಿಂದ ಭಾರತೀಯನು' (ಸಮಗ್ರಗದ್ಯ ಪು–709) ಎನ್ನುವ ಮಾತುಗಳು ಕುವೆಂಪು ಅವರಿಗೆ ಭಾರತದ ಬಗೆಗಿನ ನಿಲುವುಗಳನ್ನು ಅಭಿವ್ಯಕಿಸುತ್ತವೆ.

ಭಾರತವನ್ನು ಕುರಿತ ತಮ್ಮ ಕವನಗಳಲ್ಲಿ ಪುರುಷತ್ವದ ಜೊತೆಗೆ ಸಮೀಕರಿಸಿಕೊಂಡಿರುವ ಬ್ರಿಟಿಷ್ ಅಧಿಕಾರಶಾಹಿಗೆ ಎದುರಾಗಿ ಮತ್ತು ವಿರುದ್ಧವಾಗಿ ಅವರು ಸ್ತ್ರೀ ಮತ್ತು ಸ್ತ್ರೀತ್ವದ ರೂಪಕಗಳನ್ನು ಬಳಸುತ್ತಾರೆ. ಭಾರತ ರಾಷ್ಟ್ರವನ್ನು 'ಭಾರತಾಂಬೆ', ಭಾರತಜನನಿ ಎಂದು ಸಂಬೋಧಿಸುವ ಮುಖೇನ ಪವಿತ್ರತಾ ಭಾವನೆಯನ್ನು ಸೃಜಿಸುವ ಪ್ರಯತ್ನ ಮಾಡುತ್ತಾರೆ. ಬ್ರಿಟಿಷ್ ಅಧಿಕಾರಶಾಹಿ ಪುರುಷತ್ವದ ಪ್ರತೀಕವನ್ನು ಜನನಿಯ ರೂಪಕದ ಮುಖೇನ ಒಡೆಯುವ ಮೂಲಕ ಭಾರತೀಯ ಸಂಸ್ಕೃತಿಯ ಯಾಜಮಾನ್ಯವನ್ನು ಸ್ಥಾಪಿಸುವುದು, ಮುಖ್ಯವಾಗಿ ತಾಯಿಯೆಂಬ ಈ ರೂಪಕ ಅಂದಿನ ರಾಷ್ಟ್ರೀಯ ರೂಪಕವೇ ಆಗಿದ್ದಿತು. ಆದ್ದರಿಂದಲೇ ಅವರು

ಭಾರತಾಂಬೆಯೆ ಜನನಿ, ನಿನ್ನೊಳು ಧನ್ಯನಾದೆನು, ದೇವಿಯೆ,
ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೇ (ಸ.ಕಾ–1 ಪು 105)

ಎಂದು ಸ್ಮರಿಸಿಕೊಳ್ಳುತ್ತಾರೆ. ಇದೇ ಮಾದರಿ ಮತ್ತು ಹಿನ್ನಲೆಯ ಇನ್ನೊಂದು ಕವನ

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವೆನೆ ದೇವಿಗೆರೆವೆ (ಸ.ಕಾ–1 ಪು 378)

ಹೀಗೆ ವೈಯಕ್ತಿಕವೆನಿಸುವ ಮೂಲಕ ಸಾರ್ವತ್ರಿಕವಾಗಬಲ್ಲ ತಮ್ಮ ಅನೇಕ ಕವನಗಳ ಮೂಲಕ ಜನತೆಯಲ್ಲಿ ರಾಷ್ಟ್ರೀಯತೆ/ ದೇಶಭಕ್ತಿಯನ್ನು ಮೂಡಿಸುವ ಕೆಲಸ ಮಾಡಿದ್ದಾರೆ.

ಕುವೆಂಪು ಆಶಾವಾದಿಗಳಾಗಿದ್ದರು. ಭಾರತದಲ್ಲಿ ಸು 300 ವರ್ಷಗಳಷ್ಟು ಸುದೀರ್ಘವಾದ ಬ್ರಿಟಿಷ್ ಆಳ್ವಿಕೆಯ ಇತಿಹಾಸ ಕಣ್ಣೆದುರಿಗಿದ್ದು, ಪರಾಧಿನತೆಯ ಭಾರದಿಂದ ನರಳುತ್ತಿದ್ದರೂ ಕೂಡ, ಭಾರತದ ಸಾಂಸ್ಕೃತಿಕ ಹಿರಿಮೆ, ವರ್ಚಸ್ಸಿನ ಬಗೆಗೆ ಸದಾ ಮೇಲರಿಮೆಯನ್ನು ಹೊಂದಿದ್ದರು. ಭಾರತ ನೆಲದಲ್ಲಿದ್ದ ಬ್ರಿಟಿಷ್ ಆಳ್ವಿಕೆ ಕೊನೆಗೊಳ್ಳಬೇಕು ಮತ್ತು ಕೊನೆಯಾಗುತ್ತದೆ ಎಂಬ ವಿಶ್ವಾಸ ಕುವೆಂಪುಗಿತ್ತು. ಭಾರತದ ಸ್ವಾತಂತ್ರ್ಯ ಪರವಾದ ಧ್ವನಿ ಇವರ ಅನೇಕ ಕವಿತೆಗಳಲ್ಲಿ ಅಭಿವ್ಯಕ್ತವಾಗಿದೆ.

ಭಾರತಾಂಬೆಯ ಜಗದ ಬೆಳಕಾಗುವಳು: ಮತ್ತೊಮ್ಮೆ ಹೆಮ್ಮೆ
ಗೌರವಗಳಿಂದ ಜನಗಣದ ಕಟು ನಿರ್ಧಯದ
ಲೋಭ ಬುದ್ಧಿಯ ಹೀನ ಕುಟಿಲತೆಯ ನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ ! (ಭಾರತ ತಪಸ್ವಿನಿ, ಸ.ಕಾ – 1 ಪು 512)

ದಾಸ್ಯದಲ್ಲಿದ್ದ ಭಾರತ ಅದರಿಂದ ಬಿಡುಗಡೆಗೊಂಡು ತನ್ನ ತಪಸ್ವಿನಿ ಶಕ್ತಿಯಿಂದ ಜಗದ ಬೆಳಕಾಗುವಳೆಂದು ಕುವೆಂಪು ಭಾವಿಸುತ್ತಾರೆ. 'ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ' ಎನ್ನುವ ಮೂಲಕ ಮುಂದೆ ತನ್ನ ದಾಸ್ಯತ್ವವನ್ನು ನೀಗಿ ಚಕ್ರವರ್ತಿನಿತ್ವವನ್ನು ಮತ್ತೊಮ್ಮೆ ಪಡೆದುಕೊಳ್ಳುತ್ತದೆ ಎಂಬ ಕವಿಯ ಆಶಾವಾದ ಮುಖ್ಯವೆನಿಸಿದೆ.

ಕುವೆಂಪು ಅವರು ಸ್ವಾತಂತ್ರ್ಯ ಪೂರ್ವದಲ್ಲೆ ಸಾಹಿತ್ಯ ರಚನೆಗಿಳಿದವರು. ಆಗ ಭಗತ್‌ಸಿಂಗ್, ಚಂದ್ರಶೇಖರ ಅಜಾದ್‌ರಂತಹ ಕ್ರಾಂತಿಕಾರಿಗಳೊಂದಿಗೆ ಜತೀನ್‌ದಾಸ್ ಎಂಬ ಕ್ರಾಂತಿಕಾರಿ ಇದ್ದರು. ಅವರು ಸೆರೆಮನೆಯಲ್ಲಿ 57 ದಿನಗಳ ಕಾಲ ಉಪವಾಸ ಮಾಡಿ ಮೃತರಾಗುತ್ತಾರೆ. ಆಗ ಕುವೆಂಪು ಅವರು ಈ ಕವಿತೆಯನ್ನು ಬರೆದರು:

ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ
ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ
ಬೆಚ್ಚ ಬಿಡು ನೆಚ್ಚ ನೆಡು ಕೆಚ್ಚೆದೆಯ ಗುಡಿಯಲ್ಲಿ
ಸೆರೆಯ ಹರಿ ಅರಿಯನಿರಿ ಹುಟ್ಟಳಿಸು ಹುಡಿಯಲ್ಲಿ
ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ
ಮೂಡುವುದು ಮೂಡುವುದು ಭಾರತದ ಲೀಲೆ ನವ ಭಾರತದ ಲೀಲೆ–

ಹೀಗೆ ಹೇಳುತ್ತಾ ಹೇಳುತ್ತಾ ಮುಂದುವರಿದು ಮಸಣವಾಗಲಿ ಎದೆಯು ರಣರಂಗದಲ್ಲಿ ಎಂದು ಕ್ರಾಂತಿ ಕವಿಯೇ ಆಗಿ ಬಿಡುತ್ತಾರೆ.

"ಶಿಲೆಯಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು ಚಳಿಯು ಮಳೆಯಲಿ ನವೆವ ತಾಯ್ಗೆ ಹಾಕು" ಎನ್ನುತ್ತಾರೆ. ಇಲ್ಲಿ ಕುವೆಂಪು ಅವರು ಭಾರತಾಂಬೆಯ ಬಗ್ಗೆ ಬಳಸಿದ 'ಜೀವದಾತೆ'ಯ ಪದಕ್ಕೆ ವ್ಯಾಪಕಾರ್ಥವಿದೆ. ಕುವೆಂಪು ಅವರಿಗೆ ಕರ್ನಾಟಕ "ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ." ಇಲ್ಲಿ ತಾಯಿ–ಮಗಳ ಸಂಬಂಧ ಅದ್ಭುತ ಚೇತೋಹಾರಿಯಾಗಿದೆ. ತಾಯಿಯನ್ನು

ಗೌರವಿಸಬೇಕಾದದ್ದು ಮಗಳ ಕರ್ತವ್ಯ. ಆದರೆ ಯಾವುದೇ ತಾಯಿ ಇರಲಿ; ಮಗಳಿಗಾಗಿ ತ್ಯಾಗ ಮಾಡುತ್ತಾಳೆಯೆ ಹೊರತು ಮಗಳಿಂದ ತ್ಯಾಗವನ್ನು ಕೇಳುವುದಿಲ್ಲ. ತಾಯಿ ಹಾಗಿದ್ದಾಗಲೇ ತಾಯಿಗೆ ಗೌರವ ಸಲ್ಲುತ್ತದೆ. ಕನ್ನಡದ ವಿಚಾರ ಬಂದಾಗ ಅವರು ಎಷ್ಟು ತೀಕ್ಷ್ಣವಾಗಿ ಬರೆಯುತ್ತಾರೆಂದರೆ, "ಕನ್ನಡವು ಮಂತ್ರ ಕಣಾ! ಶಕ್ತಿ ಕಣಾ! ಚಂಡಿ ಕಣಾ! ಚಾಮುಂಡಿ ಕಣಾ" ಎಂದು ಬರೆಯುತ್ತಾರೆ.

ರಾಷ್ಟ್ರೀಯತೆಯ ಕುರಿತಾದ ಕುವೆಂಪು ಭಾವನೆಗಳು ಅವರ ಕವನಗಳಲ್ಲಿ ಬಹಳ ತೀವ್ರವಾಗಿ ವ್ಯಕ್ತವಾಗಿವೆ. ಅವು ಅಂದಿನ ಪರಕೀಯ ದೊರೆಗಳ ಜತೆಗೆ ರಣ ಕಾಳಗಕ್ಕಿಳಿದ ಹೋರಾಟಗಾರನ ಧ್ಯೇಯ ಗೀತೆಗಳಂತಿವೆ.

ಸ್ವಾತಂತ್ರ್ಯವನು ಕೊಲ್ಲುವರೆ ಒಬ್ಬನನು ಕೊಂದು?
ನನ್ನ ಮೃತ್ಯುವೆ ನನ್ನ ವೈರಿಗೆ ಪತನವಾಯ್ತು
ಶತಮಾನಗಳು ಬದುಕಿ ಬಾಳಿರುವ ಭಾರತಿಗೆ,
ಲೋಕಕ್ಕೆ ನೂರಾರು ಜೀವಮಣಿಗಳ ಹೆತ್ತು
ದಾನ ಮಾಡಿಹ ಮಾತೃದೇವತೆಯ ಸದ್ಗತಿಗೆ
ನನ್ನ ನಿಧನದಲಿ ಕುಂದಹುದೆ?

ಎಂದು ಕೇಳುತ್ತಾರೆ. ಹೀಗೆ ಕೇಳುವ ಕುವೆಂಪು ಭೌಗೋಳಿಕ ಗಡಿರೇಖೆಗಳನ್ನು ದಾಟಿ ಆಚೆ ನಿಲ್ಲುವ ವಿಶ್ವಪ್ರಜ್ಞೆಯನ್ನೂ ಹೊಂದಿದವರು. ಆದರೆ ಅವರ ರಾಷ್ಟ್ರೀಯಪ್ರಜ್ಞೆ, ನೆಲದಲ್ಲಿ ಆಳವಾಗಿ ಬೇರು ಬಿಟ್ಟು ವಿಶ್ವವಿಶಾಲ ಆಕಾಶದ ಕಡೆಗೆ ರೆಂಬೆಕೊಂಬೆಗಳನ್ನು ಚಾಚುವ ಮಾದರಿಯದ್ದು. ವಿಶ್ವಭ್ರಾತೃತ್ವದ ನೆಪದಲ್ಲಿ ಬೇರು ಬಿಡಬೇಕಾದ ನೆಲವನ್ನು ಬಿಟ್ಟು ಅತೀ ಆದರ್ಶದಲ್ಲಿ ಒಣಗಿ ಹೋಗಲಿಲ್ಲ. ಇದೇ ನಿಜವಾದ ಕುವೆಂಪು ದರ್ಶನ. ಪರಸ್ಪರ ಅವಿರೋಧದ ಈ ಧಾರೆಯೇ ಭಾರತೀಯ ವೈಶಿಷ್ಟ್ಯ. 'ಜೈ ಭಾರತ ಜನನಿಯ ತನುಜಾತೆ' ಎನ್ನುವ ಕವಿಯೇ 'ಎಲ್ಲದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು' ಎಂದೂ ಹೇಳುತ್ತಾರೆ. 'ಓ ನನ್ನ ಚೇತನ ಆಗು ನೀ ಅನಿಕೇತನ' ಎಂದೂ ಹೇಳಬಲ್ಲರು. ಇವುಗಳೊಳಗಿನ ಧಾರೆಯೇ ಭಾರತೀಯತೆ. ಆಧುನಿಕ ಕನ್ನಡ ಸಾಹಿತ್ಯದ ಜಾಗೃತ ಪ್ರಜ್ಞೆಯ ರೂಪಕ ಕುವೆಂಪು. ಪ್ರತಿಭೆಯಲ್ಲಿ ಸಾಹಿತ್ಯ ನಿರ್ಮಿತಿಯಲ್ಲಿ ಅವರಿಗೆ ಹೋಲಿಕೆಯೇ ಇಲ್ಲ. ಮಲೆನಾಡಿನ ಅಪ್ರತಿಷ್ಠ ಸಾಮಾಜಿಕ ನೆಲೆಯಿಂದ ಹುಟ್ಟಿಬಂದ ಆ ಮಲೆನಾಡಿನ ಪರ್ವತಾರಣ್ಯ ಚೈತನ್ಯದ ಮೊದಲ ಪ್ರತಿನಿಧಿ ಎಂಬಂತೆ ತೋರುವ ಕವಿ. ಹೊಸಗನ್ನಡ ಸಾಹಿತ್ಯದ ಹರಿಕಾರ. ಕನ್ನಡ ನವೋದಯ ಶಿಖರ ಕವಿ. ಕನ್ನಡ ಸಾಹಿತ್ಯವನ್ನು ವಿಶ್ವವೇ ತಿರುಗಿ ನೋಡುವಂತೆ ಮಾಡಿದ ಶಬ್ದಬ್ರಹ್ಮ.

****

ಆಕರ ಗ್ರಂಥಗಳು

1. ಕುವೆಂಪು ಸಮಗ್ರ ಕಾವ್ಯ ಸಂ 1 ಕುವೆಂಪು ಸಮಗ್ರ ಸಾಹಿತ್ಯ ಮಾಲೆ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ
2. ಕುವೆಂಪು ಸಮಗ್ರ ಕಾವ್ಯ ಸಂ 2 ಕುವೆಂಪು ಸಮಗ್ರ ಸಾಹಿತ್ಯ ಮಾಲೆ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ

ಪರಾಮರ್ಶನ

1. ಅರವಿಂದ ಮಾಲಗತ್ತಿ (ಪ್ರೊ.) ಪ್ರಧಾನ ಸಂಪಾದಕರು, ಕುವೆಂಪು ಕೃತಿ ವಿಮರ್ಶೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪ್ರಕಟಣಾ ಮಾಲೆ 544, 2006.
2. ಕುವೆಂಪು, ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, 1993.
3. ಜವರೇಗೌಡ. ದೇ ಕುವೆಂಪು ದರ್ಶನ ಮತ್ತು ಸಂದೇಶ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್, ಮೈಸೂರು, 1989.
4. ಸಿ.ಪಿ.ಕೆ ಕುವೆಂಪು ಸಾಹಿತ್ಯ ಲೋಕ, ಚೇತನ ಬುಕ್ ಹೌಸ್, ಮೈಸೂರು 2004
5. ವಿವಿಧ ಲೇಖಕರು, ಕುವೆಂಪು ಪುನರ್ಮನನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ 2004
6. ಶೇಷಗಿರಿರಾವ್, ಎಲ್.ಎಸ್. (ಪ್ರೊ), ಕುವೆಂಪು ಸಾಹಿತ್ಯ ಜಗತ್ತಿನಲ್ಲಿ, ಸಪ್ನ ಬುಕ್ ಹೌಸ್, 2008
7. ಗುರುಪಾದ ಮರಿಗುದ್ದಿ (ಡಾ), ಕುವೆಂಪು ಕಾದಂಬರಿಗಳು (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂ 2004

❖❖❖

ಬನದ ಜಾತ್ರೆಯ ದಿನ
ನಿಗದಿಯಾಗಿದೆಯಿಲ್ಲಿ
ವಸಂತನಾಗಮನದಲ್ಲಿ
ತಳಿರತೇರು, ಹೂದೇರು
ಹೊರಟು ನಿಂತಿವೆಯಿಲ್ಲಿ
ಖಗ ದುಂಬಿ ನಿನಾದದಲ್ಲಿ

ಮಾಧವಿಯ ಮೌನ

ಡಾ. ಸಂಗೀತ ಪಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೂಲಿಬೆಲೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಅನುಪಮಾ ನಿರಂಜನ ಅವರು ವೃತ್ತಿಯಿಂದ ವೈದ್ಯರಾಗಿ ಭೌತಿಕ ಚಿಕಿತ್ಸೆಯನ್ನು ನೀಡುತ್ತಾ ದೈಹಿಕ ಸ್ವಾಸ್ಥ್ಯವನ್ನು ಕಾಪಾಡಲು ಪ್ರಯತ್ನಿಸಿದರೆ ಓರ್ವ ಬರಹಗಾರ್ತಿಯಾಗಿ ಪ್ರಸ್ತುತ ಮನುಕುಲಕ್ಕೆ ಅತ್ಯಗತ್ಯವಾಗಿರುವ ಮಾನಸಿಕ ಚಿಕಿತ್ಸೆಯನ್ನು ನೀಡಲು ಪ್ರಯತ್ನಿಸಿದವರು. ಅದರ ಫಲವಾಗಿ ಸಮಾಜದ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವಂತಹ ವಸ್ತುಗಳನ್ನಾಧರಿಸಿದ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸಿದವರು. ಅಂತಹ ಕೃತಿಗಳ ಸಾಲಿಗೆ ಸೇರುವ ಶ್ರೇಷ್ಠ ಕಾದಂಬರಿ 'ಮಾಧವಿ'. ಪುರಾಣ ಕಾಲದ ಕಥಾ ಹಂದರವನ್ನು ಕೇಂದ್ರವಾಗಿಸಿಕೊಂಡು ರಚನೆಯಾಗಿರುವ ಕೃತಿಯಿದು. ಸಂಪ್ರದಾಯ, ಸಂಸ್ಕೃತಿಗಳ ಚೌಕಟ್ಟಿನಲ್ಲಿ ಬೆಳೆದ ಹೆಣ್ಣೊಬ್ಬಳು ಅನುಭವಿಸುವ ಸಂಕಟಗಳ ಸರಮಾಲೆಯನ್ನು ಧ್ವನಿಸುವ ಅರ್ಥಪೂರ್ಣ ಅಭಿವ್ಯಕ್ತಿಯಿದು. 'ಮಾಧವಿ' ಕಾದಂಬರಿಯೂ ಕೂಡ ಹೆಣ್ಣಿನ ಬಗೆಗೆ ಧ್ವನಿಯೆತ್ತಿದ ಕಥನ ಎಂದರೆ ತಪ್ಪಾಗಲಾರದು.

'ಮಾಧವಿ' ರಾಜವಂಶದಲ್ಲಿ ಹುಟ್ಟಿದ ಕುವರಿ. ಶೋಷಿತ ಹೆಣ್ಣಿನ ಸಂಕೇತ. ಅರಮನೆಯಲ್ಲಿ ಸುಖಭೋಗಗಳಿಗೆ ಕೊನೆಯೇ ಇಲ್ಲದಂತಹ ಸಖಿಯರೊಂದಿಗಿನ ಒಡನಾಟ. ಅದ್ಭುತ ಸೌಂದರ್ಯಕ್ಕೆ ಹಿಡಿದ ಕನ್ನಡಿಯೆಂಬಂತೆ ಮೂಡಿರುವ ರೂಪಲಾವಣ್ಯತೆಗಳು ಒಂದೆಡೆಯಾದರೆ ಮತ್ತೊಂದೆಡೆ ಮಾಧವಿಯ ನಿರೀಕ್ಷೆಗೂ ಮೀರಿ ಧುತ್ತೆಂದು ಆವರಿಸುವ ಸಮಸ್ಯೆಗಳು ಕಾದಂಬರಿಯಲ್ಲಿ ಹಂತಹಂತವಾಗಿ ಅಭಿವ್ಯಕ್ತಗೊಂಡು ಓದುಗರ ಪ್ರಜ್ಞೆಯನ್ನು ಜಾಗೃತಗೊಳಿಸುತ್ತವೆ. ರಾಜನಾದ ಯಯಾತಿ ತನ್ನ ಮಗಳನ್ನು ಗಾಲವ ಋಷಿಗೆ ವಿಕ್ರಯಮಾಡುತ್ತಾನೆ. ಮಾಧವಿ ಪಾತ್ರವನ್ನೇ ಕೇಂದ್ರೀಕರಿಸಿಕೊಂಡು ಕಾದಂಬರಿಯ ರಚನೆಯಾಗಿದೆ.

ಇಂದಿನ ಬಹುಮುಖಿ ಸಮಸ್ಯೆಗಳಲ್ಲಿ ಪಾಲು ಪಡೆದಿರುವ ಹೆಣ್ಣುಗಳಂತೆಯೇ 'ಮಾಧವಿ'ಯೂ ಕೂಡ ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಶೋಷಿತ ಸ್ತ್ರೀ ಸಮುದಾಯದ ಪ್ರತಿನಿಧಿಯಾಗಿದ್ದಾಳೆ. ಕಾದಂಬರಿಯ ಆರಂಭದಿಂದ ಅಂತ್ಯದವರೆಗೂ ಆಕೆಯ ವ್ಯಕ್ತಿತ್ವವನ್ನು ಗಮನಿಸುತ್ತಾ ಹೋದರೆ ಯಾರೂ ಊಹಿಸಲಾಗದ ಭಯ ಗಾಬರಿಗಳಾಗುತ್ತವೆ ಈ ಮಾತುಗಳಿಗೆ ಇಂಬು ಕೊಡುವಂತೆ ಕೃತಿಯ ಪ್ರಧಾನ ಪಾತ್ರಗಳಾದ ಯಯಾತಿ ಮತ್ತು ಗಾಲವರಂತಹ ವ್ಯಕ್ತಿಗಳು ಕೂಡ ಮುಗ್ಧ ಮಾಧವಿಯ ಯಾವುದೇ ಭಾವನೆಗಳಿಗೆ ಬೆಲೆಕೊಡದೆ ತಮ್ಮ ತೀರ್ಮಾನವೇ ಅಂತಿಮವೆಂಬಂತೆ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಯಯಾತಿ ಮಾಧವಿಯನ್ನು ತಾಯಿಯಿಲ್ಲದ ತಬ್ಬಲಿ ಮಗುವೆಂದೂ ಭಾವಿಸದೆ ನಿರ್ದಾಕ್ಷಿಣ್ಯವಾಗಿ ಗಾಲವನಿಗೆ ಒಪ್ಪಿಸುತ್ತಾನೆ. ಆಶ್ರಮವಾಸಿಯಾಗಿದ್ದ ಸಾತ್ವಿಕ ಮನೋಭಾವದ ಗಾಲವನಾದರೂ ಯೋಚಿಸಬಹುದಾಗಿತ್ತು. ಆದರೆ ಹಿಂದುಮುಂದು ನೋಡದೆ ರಾಜ ಇನ್ನೆಲ್ಲಿ ತನ್ನ ಮಾತಿಗೆ ತಪ್ಪುತ್ತಾನೋ ಎಂದು ಯೋಚಿಸಿ ವಿದ್ಯಾದಾನ

ಮಾಡಿದ ಗುರು ವಿಶ್ವಾಮಿತ್ರನಿಗೆ ದಕ್ಷಿಣೆಯನ್ನು ಸಲ್ಲಿಸುವ ಸಲುವಾಗಿ ಮಾಧವಿಯನ್ನು ತನ್ನ ವಶಕ್ಕೆ ಪಡೆದುಕೊಳ್ಳುತ್ತಾನೆ.

ಇದು ಮಾಧವಿಯ ಮೌನದ ಆರಂಭಿಕ ಘಟ್ಟ. ಬಾಲ್ಯದಿಂದಲೂ 'ಅಪಶಕುನದ ಮುದ್ದೆ', 'ತಾಯಿಯ ಅಪಮೃತ್ಯುವಿಗೆ ಮೂಲವಾದವಳು' ಎಂಬಂಥ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಬೆಳೆದ ಈಕೆ ಅನೇಕ ದ್ವಂದ್ವಗಳ ನಡುವೆ ಅವ್ವೆ, ಚಾರುಲತೆಯರ ಅಕ್ಕರೆಯ ಅಪ್ಪುಗೆಯಲ್ಲಿ ಕಾಲನೂಕುತ್ತಿರುತ್ತಾಳೆ. ಹೀಗಿರುವಾಗ ಒಂದು ದಿನ ಮಾಧವಿಗೆ ತನ್ನನ್ನು ಸದಾ ಅವಮಾನಿಸುತ್ತಿದ್ದ, ಹೀಯಾಳಿಸುತ್ತಿದ್ದ ತಂದೆಯಿಂದ ಕರೆ ಬರುತ್ತದೆ.ಕರೆ ಬಂದೊಡನೆ ಹಲವು ಬಗೆಯಲ್ಲಿ ಚಿಂತಿಸಿ 'ಎಂದೂ ಬಾರದ ಕರೆ ಇಂದು ಏಕೆ ಬಂದಿದೆ' ಎಂದು ಹಪಹಪಿಸುತ್ತಾಳೆ. ಭಾರವಾದ ಹೆಜ್ಜೆಗಳನ್ನಿಡುತ್ತಾ ಕ್ರಮಿಸಿ ತಂದೆಯಿಂದ ತನ್ನ ಮುಂದಿನ ಜೀವನದ ಪಯಣದ ಹಾದಿಯನ್ನು ಅರಿತಾಗ ತುಂಬಾ ಬೇಸರವಾಗುತ್ತದೆ. ಸುಂದರವಾಗಿರುವ ವರನನ್ನು ಪಡೆಯಲು ಸ್ವಯಂವರಕ್ಕೆ ಸಿದ್ಧಳಾಗುತ್ತಿದ್ದಂತಹವಳಿಗೆ, ಗಾಲವನೊಂದಿಗೆ ಕಾಡಿನೆಡೆಗೆ ಪ್ರಯಾಣ ಬೆಳೆಸುವುದು ಯಾಕೋ ಸರಿಕಾಣಲಿಲ್ಲ. ಈ ಹಿಂದೆ ತಾನು ಶ್ರೀಮಂತಿಕೆಯ ತುತ್ತ ತುದಿಯಲ್ಲಿದ್ದ ಸಂದರ್ಭ, ಚಿನ್ನದ ತಟ್ಟೆಯಲ್ಲಿ ಊಟ ಮಾಡುತ್ತಿದ್ದ ಘಟನೆಗಳೆಲ್ಲವನ್ನು ನೆನೆಸಿಕೊಂಡಳು. ಅತಿಯಾಗಿ ಬೇಸರಪಟ್ಟುಕೊಂಡಳು. ತಂದೆಯ ತೀರ್ಮಾನಕ್ಕೆ ಮರು ಮಾತಾಡಲಿಲ್ಲವೆಂಬ ಜನರ ಅಭಿಪ್ರಾಯಗಳು ಹಾಗೂ ತನ್ನ ತ್ಯಾಗ ಮನೋಭಾವದ ಹಿರಿಮೆ, ಹೆಗ್ಗಳಿಕೆಯ ಮಾತುಗಳೂ ಸಹ ಈಕೆಯನ್ನು ಸುತ್ತುವರಿದವು. ಅದರಂತೆ ಆಕೆ ಮರುಮಾತಾಡದೆ ನಿಶ್ಚಲವಾದಳು. ಈ ಬಗೆಯ ವಿನಯ ಮತ್ತು ಧನ್ಯತಾ ಭಾವಗಳ ಹೆಸರಿನಲ್ಲಿ ಹೆಣ್ಣಿನ ವೈಭವೀಕರಣವನ್ನು ಮಾಡುತ್ತಲೇ ಸತ್ಯವನ್ನು ಮರೆಮಾಚುವ ಪ್ರಯತ್ನಗಳು ಹಿಂದಿನಿಂದಲೂ ನಿರಾತಂಕವಾಗಿ ಸಾಗುತ್ತಿವೆ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ 'ಬಡವರ ಮನೆಯಲ್ಲಾದರೂ ಹುಟ್ಟಬೇಕಾಗಿತ್ತು' ಎಂದು ಮಾಧವಿ ನೊಂದುಕೊಳ್ಳುತ್ತಾಳೆ.

ಮಾಧವಿಯ ಮೇಲಿನ ರಾಜನ ಅಸಡ್ಡೆಯನ್ನು ಕಂಡು ಬೆರಗಾದ ದಾಸಿಯರು 'ಇಂಥ ಭುವನ ಮೋಹಿನಿಗೆ ಎಂಥ ಚಿಂತೆ' ಎಂದು ಬೇಸರ ಪಡುತ್ತಾರೆ. ಸಹಾಯ ಮಾಡಲು ನಾವೂ ನಿನ್ನೊಟ್ಟಿಗೇ ಬರುತ್ತೇವೆ ಎಂದು ಪರಿಪರಿಯಾಗಿ ವಿನಂತಿಸಿಕೊಳ್ಳುತ್ತಾರೆ. ಆದರೆ ಮಾಧವಿ 'ಎನ್ನ ಪಾಡೆನಗಿರಲಿ' ಎಂಬಂತೆ ಅವರ ಮಾತುಗಳಿಗೆ ಯಾವುದೇ ಪ್ರತ್ಯುತ್ತರವನ್ನು ಕೊಡುವುದಿಲ್ಲ. ದಾಸಿಯರಾದರೋ ತಾಯಿಯ ಪ್ರೀತಿಗಿಂತ ಮಿಗಿಲಾಗಿ ಉಪಚರಿಸಿ ಅವಳ ದುಃಖ ನೋವುಗಳಿಗೆ ಸ್ಪಂದಿಸಿದವರು. ಆದರೆ ತಾಯಿಯ ಸ್ಥಾನದಲ್ಲಿರುವ ಮಲತಾಯಿ ದೇವಯಾನಿ ಸುಮ್ಮನಿದ್ದು ಯಯಾತಿ ರಾಜನ ಪರನಿಂತಳು.

ಗಾಲವ ಋಷಿ ಹೃದಯವಂತನಾಗಿ ವರ್ತಿಸದೆ ಮಾಧವಿಯನ್ನು ರಾಣಿ ವಾಸದಿಂದ ವಿಮುಕ್ತಗೊಳಿಸಿ, ರಾಜೋಪಚಾರಗಳಿಂದ ದೂರಮಾಡಿ ನಾರುಮಡಿಯನ್ನು ತೊಡಿಸಿ ನಿರಾಭರಣ ಸುಂದರಿಯನ್ನಾಗಿ ಮಾಡಿ ಕಾಡಿನತ್ತ ಕರೆದುಕೊಂಡು ಹೋಗಲು ಸಿದ್ಧಗೊಳ್ಳುತ್ತಾನೆ. ಇಂಥ ಸಿದ್ಧತೆಗಳು ಅರಮನೆಯ ಆವರಣದಲ್ಲಿ ನಡೆಯುತ್ತಿರುವ ಸುದ್ಧಿ ಮಾಧವಿಗೆ ತಿಳಿದ ಕೂಡಲೇ ಮಾಧವಿಯ ಮನಸ್ಸು ಹಲವು ಬಗೆಯಲ್ಲಿ ನೊಂದುಕೊಳ್ಳುತ್ತದೆ. 'ತನಗೆ ಹೃದಯ ಅಥವಾ ವ್ಯಕ್ತಿತ್ವ ಇದೆ ಎನ್ನುವುದನ್ನೇ ಮರೆಯುತ್ತೇನೆ. ಕನಸುಗಳಿಗೆ ಗೋರಿ ಕಟ್ಟುತ್ತೇನೆ' ಎಂದು ಮನಸ್ಸನ್ನು ಗಟ್ಟಿಮಾಡಿಕೊಳ್ಳುತ್ತಾಳೆ. ಋಷಿಮುನಿಯೊಂದಿಗೆ

ಪ್ರಯಾಣ ಬೆಳೆಸಲು ಸಿದ್ಧಗೊಳ್ಳುತ್ತಾಳೆ.

ರಾಮನ ಆಜ್ಞೆಯಂತೆ ಲಕ್ಷ್ಮಣ ಸೀತೆಯನ್ನು ಕಾಡಿಗೆ ಬಿಡಲು ಹೊರಟಾಗ ಲಕ್ಷ್ಮಣನ ಮನಸ್ಸಿನಲ್ಲಿ ಉಂಟಾಗುವ ಗೊಂದಲಗಳಂತೆಯೇ ಗಾಲವನ ಮನಸ್ಸಿನಲ್ಲೂ ಹಲವಾರು ಚಿಂತೆಗಳು ಮೂಡಿದವು. ಆದರೂ ಗುರುದಕ್ಷಿಣೆಯನ್ನು ತೀರಿಸುವ ನೆಪದಲ್ಲಿ ಗಾಲವನ ಅಸಹಾಯಕತೆ ಪ್ರತಿ ಸಂದರ್ಭದಲ್ಲಿ ಎದ್ದು ಕಾಣುತ್ತಿತ್ತು. ಪ್ರಕೃತಿ ಅಥವಾ ಪರಿಸರ ಗಾಲವ ಮತ್ತು ಮಾಧವಿಯರ ನಡಿಗೆಗೆ ಮೂಕ ಸಾಕ್ಷಿಯಾಗಿದೆ. ಮೌನವು ಭೀಕರ ಛಾಯೆಯಂತೆ ಕಾಣಿಸುತ್ತಿದೆ. ಋಷಿಮುನಿ ಕಾಡಿನಲ್ಲಿ ಕಾಣಿಸುವ ಪ್ರತಿ ಮರವನ್ನು 'ಇದು ಮುತ್ತುಗ, ತಿಲಕ, ಪಗಡೆ, ಅಮಾತ್ರಕ ವೃಕ್ಷ, ನೀಲಾಶೋಕ ಎಂದು ಪರಿಚಯಿಸಿದ. ಆದರೆ ಅವಳಿಗೆ ಅವುಗಳ ಮೇಲೆ ನಿರಾಸಕ್ತಿ. ಕಾಡಿನಲ್ಲಿ ನಡೆದು ಬಂದಿರುವುದರಿಂದ ಹಸಿವು, ನೀರಡಿಕೆಗಳು ದೈಹಿಕ ಶ್ರಮವನ್ನು ಹೆಚ್ಚಿಸಿವೆ. ಭಯ ಆತಂಕಗಳು ಒಂದೆಡೆ ಭಾದಿಸುತ್ತಿವೆ. ಕಾಡಿನಲ್ಲಿದ್ದ ಆನೆ, ಹುಲಿ, ಸಿಂಹಗಳನ್ನು ಕಂಡು ಗಾಬರಿಗೊಂಡಿದ್ದಾಳೆ. ತನ್ನ ಮನಸ್ಸಿನಲ್ಲಿ 'ಈ ನರಕ ಯಾತನೆ ಪಡುವುದಕ್ಕಿಂತ ಸತ್ತರೆ ಒಳ್ಳೆಯದಲ್ಲವೇ? ಎಂದು ಸಾವನ್ನು ಎದುರು ನೋಡುತ್ತಾಳೆ. ಆದರೆ ಇದು ಇಷ್ಟಕ್ಕೇ ಅಂತ್ಯ ಕಾಣದ ಪ್ರಯಾಣವೆಂದು ಭಾವಿಸುತ್ತಾಳೆ. ಈ ಪರಿಯ ಬೇಸರದ ಪಯಣದಲ್ಲಿ ಆಕೆಯ ಕಾಲಿಗೆ ಮುಳ್ಳು ಚುಚ್ಚುತ್ತದೆ. ಗುರು ವಿಶ್ವಾಮಿತ್ರನ ಕೋರಿಕೆಯನ್ನು ನೆರವೇರಿಸುವ ಸಲುವಾಗಿ ಋಷಿವರ್ಯ ಕಾಡಿನಲ್ಲಿರುವ ಗಿಡಮೂಲಿಕೆಗಳಿಂದ ಔಷಧಿಯನ್ನು ಖುದ್ದಾಗಿ ತಾನೇ ತಯಾರಿಸಿ ಗಾಯಕ್ಕೆ ಹಚ್ಚಲು ತೊಡಗುತ್ತಾನೆ. ಮಾಧವಿ ತುಂಬಾ ಆಯಾಸಗೊಂಡರೆ ತನ್ನ ಪ್ರಯಾಣ ಸ್ಥಗಿತಗೊಳ್ಳುತ್ತದೆ ಎಂದು ನೆನೆದು ಅಲ್ಲೇ ಹತ್ತಿರದಲ್ಲಿದ್ದ ಪರ್ಣಕುಟಿಗೆ ಕರೆದುಕೊಂಡು ಹೋಗಿ ವಿಶ್ರಮಿಸಲು ಸೂಚಿಸುತ್ತಾನೆ.

ಏಕಾಂತವಾದ ಪ್ರಶಾಂತ ವಾತಾವರಣದಲ್ಲಿ ಗಾಲವನ ಮನಸ್ಸಿನ ಆಲೋಚನೆಗಳು ಗರಿಗೆದರಿ ಮುನಿಯ ಇಂದ್ರಿಯಗಳೊಂದೊಂದೇ ಸಡಿಲವಾಗಲು ಪ್ರಾರಂಭಿಸುತ್ತವೆ. ಆದರೆ ಆತ ಸಲ್ಲಿಸಲೇಬೇಕಾಗಿರುವ ಗುರುಕಾಣಿಕೆ ನೆನಪಾದ ಕೂಡಲೇ ಮರಳಿ ಎಚ್ಚೆತ್ತುಕೊಂಡು ಒಮ್ಮೆಗೆ 'ಛೆ'! ಇದು ಸರಿಯಲ್ಲ, ಮಾಧವಿಯನ್ನು ಯಯಾತಿ ದಾನ ಕೊಟ್ಟಿದು ತನ್ನ ಸ್ವಂತ ಉಪಯೋಗಕ್ಕಾಗಿ ಅಲ್ಲ, ಯಾರಾದರೂ ರಾಜನಿಗೆ ಕೊಟ್ಟು ಕನ್ಯಾಶುಲ್ಕ ಪಡೆಯುವುದಕ್ಕಾಗಿ' ಎಂದು ತಿಳಿದು ಸುಮ್ಮನಾಗುತ್ತಾನೆ. ಕಾಡಿನ ನಡುವೆ ಮನಸ್ಸಿನ ವ್ಯಾಪಾರಗಳು ಇಮ್ಮಡಿಗೊಂಡು ಬಲಗೊಳ್ಳುತ್ತಾ ಹೋಗುತ್ತವೆ.

ಕಾಡಿನಲ್ಲಿ ಪ್ರಯಾಣ ಮಾಡುವಾಗ ಮಾರ್ಗಮಧ್ಯೆ ಋಷಿಗಳ ಪತ್ನಿಯರನ್ನು ಸಂಧಿಸಿ ಭೇಟಿ ಮಾಡಿ ತನ್ನ ಮನಸ್ಸಿನಾಳದ ನೋವನ್ನು ವ್ಯಕ್ತಪಡಿಸಿ ನಿಟ್ಟುಸಿರುಬಿಟ್ಟಳು. 'ಸರ್ವ ಭೂತಾನುಕಂಪವಿದ್ದಿದ್ದರೆ ಗಾಲವರು ನನ್ನನ್ನು ಬಲಿಪಶುವಾಗಿ ತರುತ್ತಿದ್ದರೆ ಅಕ್ಕಾ' ಎಂಬ ಪ್ರಶ್ನೆಗೆ ಋಷಿಪತ್ನಿ 'ಅನುಕಂಪದಿಂದ ನಿನ್ನನ್ನು ಇಲ್ಲಿಗೆ ಕರೆತಂದಿದ್ದಾರೆ' ಎನ್ನುತ್ತಾಳೆ. 'ಋಷಿಗಳೆಲ್ಲ ಹೀಗೆ ನಡೆಯಬೇಕು ಎಂಬ ನಿಬಂಧನೆಯೇನೂ ಇಲ್ಲವಲ್ಲ! ಎಂದು ಉತ್ತರಿಸುತ್ತಾರೆ. ಈ ಸಂದರ್ಭಕ್ಕೆ ಸೂಕ್ತವೆನಿಸುವ ಹಾಗೆ ವಿಶ್ವಾಮಿತ್ರ ಮುನಿಯು ಮೇನಕೆ, ಘೃತಾಚಿಯರೊಂದಿಗೆ ಬಾಳ್ವೆ ನಡೆಸಿದ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾರೆ. ಇಂತಹ ಮಾತುಗಳು ಅನಾದಿ ಕಾಲದಿಂದ ಪುರುಷಾಧಿಕಾರಗಳು ಹೇಗೆ ಪ್ರಚಲಿತವಾಗಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಗಾಲವ ಮುನಿ ತನ್ನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಮಾಧವಿಯನ್ನು

ರಾಜವಂಶದವರಿಗೆ ನೀಡುತ್ತಾನೆ. ಒಂದು ವರ್ಷದೊಳಗೆ ಪುತ್ರ ಸಂತಾನವನ್ನು ಪಡೆದು ರಾಜನ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾದರೆ ಬಳಿಕ ಬಂದು ಕರೆದುಕೊಂಡು ಹೋಗುವೆನೆಂಬ ಷರತ್ತಿನ ಆಧಾರದಲ್ಲಿ ಅಯೋಧ್ಯೆಯ ರಾಜ ಹರ್ಯಶ್ವನ ಬಳಿ ಹೋಗಿ ತನ್ನ ಬೇಡಿಕೆಯನ್ನಿಡುತ್ತಾನೆ. ಮಹಾರಾಜ ಹರ್ಯಶ್ವನನ್ನು ಕಂಡೊಡನೆಯೇ 'ನನಗೆ ಧನಕನಕ ಯಾವುದೂ ಬೇಡ, ಮೈಯೆಲ್ಲಾ ಬೆಳ್ಳಗೂ ಬಂದು ಕಿವಿ ಮಾತ್ರ ಕಪ್ಪಾಗಿಯೂ ಇರುವ ಎಂಟುನೂರು ಕುದುರೆ ಕೊಟ್ಟುಬಿಡು ಸಾಕು, ಆಗ ಅವಳು ನಿನ್ನವಳಾಗುತ್ತಾಳೆ' ಎಂದು ಹೇಳುತ್ತಾನೆ. ಮಾಧವಿಯ ದೇಹ ಸೌಂದರ್ಯವನ್ನು ಕಂಡು ಬೆರಗಾದ ಮಹಾರಾಜನು ಇಷ್ಟೇ ತಾನೆ ಎಂಬಂತೆ ಅಶ್ವಶಾಲೆಯಲ್ಲಿರುವ ಕುದುರೆಗಳ ಸಂಖ್ಯೆ ಹಾಗೂ ಅವುಗಳ ರೂಪ ಆಕಾರಗಳ ಬಗ್ಗೆ ವಿಚಾರಣೆ ನಡೆಸುತ್ತಾನೆ. ಮಾಧವಿಯನ್ನು ಅರಮನೆಯಲ್ಲಿಡಲು ಋಷಿಯೇಕೆ ಎಂಟುನೂರು ಕುದುರೆಗಳ ಬೇಡಿಕೆಯಿಟ್ಟಿದ್ದಾನೆಂದು ಒಮ್ಮೆಯೂ ಆಲೋಚನೆ ಮಾಡದೆ ಹರ್ಯಶ್ವರಾಜ ಕೇವಲ ಮಾಧವಿಯ ಸೌಂದರ್ಯರಾಶಿಯೆಡೆಗೆ ತನ್ನ ದೃಷ್ಟಿಯನ್ನಿಡುತ್ತಾನೆ.

ಬಾಲ್ಯದಿಂದ ಇಲ್ಲಿಯವರೆಗೂ ನಡೆದ ಘಟನಾವಳಿಗಳನ್ನೆಲ್ಲ ಮೆಲುಕು ಹಾಕಿ ಕಾದ ಕುಲುಮೆಯಂತಾಗಿ ಮಾಧವಿ ಮೌನವಾಗಿ ಕುಳಿತಿದ್ದಾಳೆ. ತಾನು ಈ ಹಿಂದೆ ತನ್ನ ಪ್ರಿಯಕರನನ್ನು ಆಯ್ಕೆಮಾಡಿಕೊಳ್ಳಲು ಅವಕಾಶವಿದ್ದಂತಹ ಸ್ವಯಂವರದ ಸಂದರ್ಭವನ್ನು ನೆನಪು ಮಾಡಿಕೊಳ್ಳುತ್ತಾಳೆ. ಆದರೆ ಅಸಹಾಯಕಳಾಗಿ ಇಷ್ಟು ಹಂತಗಳು ಕ್ರಮಿಸಿದ ಮೇಲೆ ನನ್ನ ಕನಸು ನನಸಾಗಲು ಸಾಧ್ಯವೇ ಇಲ್ಲವೆಂದು ತಿಳಿದು ದಿಕ್ಕೆಟ್ಟ ಮೂಕ ಪ್ರಾಣಿಯಂತೆ ತನ್ನನ್ನು ರಾಜನಿಗೆ ಸಮರ್ಪಿಸಿಕೊಳ್ಳುತ್ತಾಳೆ.

ಗಂಡು ಸಂತಾನವನ್ನು ಪಡೆಯಲು ಜಾತಕ ಪಕ್ಷಿಯಂತೆ ಕಾಯುತ್ತಿದ್ದ ರಾಜನಿಗೆ ಮಾಧವಿಯ ದೇಹ ಸೌಂದರ್ಯವು ಅಮೃತ ಸಮಾನವಾಗಿ ಕಾಣುತ್ತದೆ. ಆ ಸಮಯಕ್ಕೆ ಸರಿಯಾಗಿಯೇ ರಾಜನ ನಿರೀಕ್ಷೆ ನಿಜವಾಗುತ್ತದೆ. ಮಾಧವಿಯು ಗರ್ಭಿಣಿಯಾಗಿರುವ ಸುದ್ದಿ ರಾಜನಿಗೆ ಮುಟ್ಟುತ್ತದೆ. ತನ್ನ ವಂಶದ ಕುಡಿಯನ್ನು ಹೊತ್ತವಳು ಎಂಬ ಅಕ್ಕರೆಯಿಂದ ಈಕೆಯ ಆಸೆಗಳನ್ನೆಲ್ಲಾ ತೀರಿಸಲು ಉತ್ಸುಕನಾಗುತ್ತಾನೆ. ಆದರೆ ಆಕೆ ರಾಜನ ಯಾವ ಮಾತುಗಳಿಗೂ ಇಂಬು ಕೊಡುವುದಿಲ್ಲ. ಮನಸ್ಸು ಕಸಿವಿಸಿಗೊಂಡು 'ನನಗೆ ಬೇಡವಾದ ಮಗು, ನಾನು ಬಯಸದ ಮಗು, ಮುಂದೆ ಭವಿಷ್ಯದಲ್ಲಿ ಚಕ್ರವರ್ತಿಯಾಗುವ ಎಲ್ಲ ಲಕ್ಷಣಗಳುಳ್ಳ ಮಗು, ಇಷ್ಟು ಬೇಗ...' ಎಂದು ನೆನಪಿಸಿಕೊಳ್ಳುತ್ತಿದ್ದಂತೆಯೇ ದುಃಖ ಆವೃತವಾಗಿ ಅವಳ ಕಣ್ಣುಗಳಲ್ಲಿ ನೀರು ತುಂಬುತ್ತದೆ. ಆದರೆ ಆ ಕೂಡಲೆ ತನ್ನನ್ನು ದಾನಕೊಟ್ಟು ಗಾಲವ ಋಷಿ ಹರ್ಯಶ್ವ ರಾಜನಿಂದ ಕನ್ಯಾಶುಲ್ಕ ಪಡೆದಿರುವ ಸುದ್ದಿ ಕಿವಿಗೆ ಬಿದ್ದು ತನ್ನಷ್ಟು ನತದೃಷ್ಟೆ ಈ ಪ್ರಪಂಚದಲ್ಲಿ ಬೇರೊಬ್ಬರಿಲ್ಲ ಎಂದುಕೊಳ್ಳುತ್ತಾ ಅವಳು ಅಳತೊಡಗಿದಳು. ಆ ಅಳು ಅರಣ್ಯರೋದನದಂತೆ ಕಾಣುತ್ತದೆ.

ಇಷ್ಟಾದರೂ ಮಾಧವಿಯ ಮೌನದಲ್ಲಿ ಯಾವ ಪರಿವರ್ತನೆಯೂ ಆಗಿಲ್ಲ. ಪಂಚಭೂತಗಳಂತೆ ದುಃಖ ಮತ್ತಷ್ಟು ರೂಪ, ಆಕಾರಗಳನ್ನು ಪಡೆದುಕೊಂಡು ದಿಕ್ಕುದಿಕ್ಕುಗಳಿಗೆ ಹರಡುತ್ತಿದೆ. ಏಕೆಂದರೆ ಗಾಲವ ಮುನಿ ಉಳಿದ ಆರುನೂರು ಕುದುರೆಗಳನ್ನು ಪಡೆಯಲು ಕಾಶೀರಾಜ ದಿವೋದಾಸನ ಬಳಿ ಹೋಗಲು ಹವಣಿಸುತ್ತಿದ್ದಾನೆ ಎಂಬ ವಿಷಯ ಇವಳ ಕಿವಿಗಳಿಗೆ ಬೀಳುತ್ತದೆ. 'ಚಕ್ರವರ್ತಿಯಾಗುವ ಮಗನನ್ನು ಪಡೆಯುವಂಥಾ ಶುಭ ಲಕ್ಷಣಗಳುಳ್ಳ ಹೆಣ್ಣು' ಎಂಬ ಮಾತನ್ನು ರಾಜನ

ಬಳಿ ಹೇಳಿ ಅವನಿಂದ ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವ ತಂತ್ರ ಇವನದು. ರಾಜನ ಹತ್ತಿರ ಗಾಲವನು ಕೇಳಿದಂತಹ ಕುದುರೆಗಳು ಇಲ್ಲದ ಕಾರಣ ಮಾಧವಿಯನ್ನು ಆತನ ಅರಮನೆಯಲ್ಲಿಯೇ ಬಿಟ್ಟು ಹೋಗಲು ನಿರ್ಧರಿಸುತ್ತಾನೆ. ಈ ಸನ್ನಿವೇಶ ಇವಳನ್ನು ಮತ್ತಷ್ಟು ನಲುಗಿಸುತ್ತದೆ. 'ತನ್ನನ್ನು ಕುದುರೆ ಹಸುಗಳ ಹಾಗೆ ವ್ಯಾಪಾರ ಮಾಡುತ್ತಿದ್ದಾರಲ್ಲಾ ಎಂದು ನಿಡುಸುಯ್ದಳು. ತಾನು ಒಬ್ಬ ವ್ಯಕ್ತಿ ಎಂದು ಇವರ್‍ಯಾರಿಗೂ ಅನ್ನಿಸುವುದೇ ಇಲ್ಲವೇ? 'ತಾನು ಹುಟ್ಟದೇ ಇದ್ದರೆ ಚೆನ್ನಾಗಿತ್ತು, ಇಂಥ ಬಾಳು ಯಾವ ಹೆಣ್ಣಿಗೂ ಬೇಡ ಎಂದುಕೊಂಡಳು' ದಿವೋದಾಸ ಪರನಾರಿ ಸಹೋದರನೆಂದು ಹೇಳಿಕೊಂಡಿದ್ದರಿಂದ ಈಕೆಯನ್ನು ಸ್ವೀಕರಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಶಾಸ್ತ್ರೋಕ್ತವಾಗಿ ಮದುವೆಯಾಗಬೇಕೆನ್ನುತ್ತಾನೆ. ಮೇಲ್ನೋಟಕ್ಕೆ ಈ ಮಾತುಗಳು ಸತ್ಯ, ಧರ್ಮ, ನಿಷ್ಠೆ, ನೀತಿ, ಪತಿವ್ರತೆಯ ಅರ್ಥವನ್ನು ಸೂಚಿಸಿದರೂ ರಾಜರಿಗೆ ಲೆಕ್ಕವಿಲ್ಲದ ಸಂಬಂಧಗಳೆಷ್ಟಿವೆಯೋ ಎಂದುಕೊಳ್ಳುತ್ತಾ ತಾನು ಹರ್ಯಶ್ವನೊಂದಿಗೆ ಕಳೆದ ದಿನಗಳನ್ನು ಸ್ಮರಿಸುತ್ತಾಳೆ.

ದಿವೋದಾಸ ಮಾಧವಿಯನ್ನು ವರಿಸಲು ಕಾತುರನಾಗಿರುತ್ತಾನೆ. ಎಷ್ಟೇ ಎಡರುತೊಡರುಗಳು ಎದುರಾದರೂ ಅವನ ಆಲೋಚನೆಗಳೇನಿದ್ದರೂ ಅವಳನ್ನು ತನ್ನವಳನ್ನಾಗಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಹೆಣ್ಣಿನ ಮೇಲಿನ ಪ್ರೀತಿ, ಅನುಕಂಪಗಳಿಂದಲ್ಲ ಬದಲಾಗಿ ಗಂಡು ಮಗುವನ್ನು ಪಡೆದು ವಂಶಾಭಿವೃದ್ಧಿಯನ್ನು ಮಾಡುವುದಕ್ಕಾಗಿ. ಮಾಧವಿಗೇನೋ ಈತನೊಂದಿಗೆ ಕಾಲಕಳೆಯಬೇಕೆಂದರೆ ಒಂದು ಬಗೆಯ ಬೇಸರ ಆವರಿಸುತ್ತಿತ್ತು. ಈತ ತಾನು ಬಯಸಿ ಪಡೆದ ಸಂಬಂಧವೂ ಅಲ್ಲ ಸ್ನೇಹವೂ ಅಲ್ಲವೆಂದುಕೊಳ್ಳುತ್ತಾಳೆ. ಪ್ರತಿ ಸನ್ನಿವೇಶ ಸಂದರ್ಭದಲ್ಲಿಯೂ ಮಾಧವಿ ದಿಕ್ಕೆಟ್ಟು 'ವಿಧಿ ತನ್ನನ್ನು ಎಲ್ಲಿಗೆ ಎಳೆಯುವುದೋ ಅಲ್ಲಿಗೆ ಹೋಗುವ ಮೂಕ ಪ್ರಾಣಿ ತಾನು, ಪ್ರತಿಭಟಿಸುವ ಹಕ್ಕೂ ಕೂಡ ಇಲ್ಲದ ಕ್ಷುದ್ರ ಜಂತು', ಎಂದುಕೊಳ್ಳುತ್ತಿರುವಾಗಲೇ ಮಾಧವಿಯ ಕಣ್ಣುಗಳಲ್ಲಿ ದುಃಖ ಉಮ್ಮಳಿಸಿ ಬರುತ್ತದೆ. 'ರಾಜಕುಮಾರಿಯಾಗಿ ಹುಟ್ಟಿದ ತನಗೆ ಎಂಥ ಗತಿ! ಇದಕ್ಕೆ ಬದಲು ಯಾರಾದರೂ ಬಡವರ ಮನೆಯಲ್ಲಿ ಜನಿಸಿದ್ದರೆ ತಾನು ಸುಖಿಯಾಗಿರುತ್ತಿದ್ದೇನೇನೋ?' ಎಂದುಕೊಂಡು ಮತ್ತಷ್ಟು ಖಿನ್ನತೆಗೊಳಗಾಗುತ್ತಾಳೆ.

ಪುತ್ರಕಾಮೇಷ್ಠಿಯಾಗದ ಪರಿಣಾಮವೋ ಎಂಬಂತೆ ಮಾಧವಿ ಪ್ರತರ್ದನ ಎಂಬ ಹೆಸರಿನ ಚೆಲುವಾದ ಗಂಡುಮಗುವಿಗೆ ಜನ್ಮ ಕೊಡುತ್ತಾಳೆ. ಅರಮನೆಯಲ್ಲಿ ಸಂತೋಷಕ್ಕೆ ಕೊನೆಯೇ ಇಲ್ಲ. ಆದರೆ ಈಕೆ 'ಕಬ್ಬಿನ ರಸ ಹೀರ್‍ಕೊಂಡ ಮೇಲೆ ಸಿಪ್ಪೆ ಯಾರಿಗೆ ಬೇಕು ಹೇಳು? ಎಂದುಕೊಳ್ಳುತ್ತಾ ಮಗುವಿನೊಂದಿಗೆ ತಾಯಿಯಾಗಿರದೆ ಅಪರಿಚಿತಳಂತೆಯೇ ವರ್ತಿಸುವುದಕ್ಕೆ ಶುರುಮಾಡುತ್ತಾಳೆ. ತನ್ನ ಮುಂದಿನ ಪಯಣದ ಹಾದಿಯನ್ನು ನೆನಪು ಮಾಡಿಕೊಳ್ಳುತ್ತಾಳೆ. ಮಕ್ಕಳನ್ನು ಹೆರುವ ಯಂತ್ರಕ್ಕೆ ತನ್ನನ್ನು ಹೋಲಿಕೆ ಮಾಡಿಕೊಳ್ಳುತ್ತಾಳೆ. ಹೀಗೆ ಸಂಕಷ್ಟದಲ್ಲಿ ಕಾಲಯಾಪನೆ ಮಾಡುತ್ತಿದ್ದ ವೇಳೆಗೆ ಸರಿಯಾಗಿ ಗಾಲವ ಪ್ರತ್ಯಕ್ಷನಾಗುತ್ತಾನೆ. ಅವನನ್ನು ಕಂಡ ಮಾಧವಿ ಕೋಪಗೊಳ್ಳುತ್ತಾಳೆ. ಆದರೂ ವಿಧಿಯಿಲ್ಲದೆ ಅವನೊಂದಿಗೆ ಹೆಜ್ಜೆ ಹಾಕುತ್ತಾಳೆ.

ಗಾಲವನ ಮುಂದಿನ ಪ್ರಯಾಣ ಭೋಜದೇಶಾಧಿಪತಿ ಉಶೀನರನ ಅರಮನೆಯತ್ತ. ರಾಜನೊಂದಿಗೆ ಮಾತುಕತೆ ನಡೆಸಿ ತನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳುವ ನಿಟ್ಟಿನಲ್ಲಿ

ಬೇಡಿಕೆಯನ್ನಿಡುತ್ತಾನೆ. ಆದರೆ ರಾಜನಿಗೆ ಇವನ ಬೇಡಿಕೆ ಯಾಕೋ ವಿಭಿನ್ನವಾಗಿದೆಯಲ್ಲ ಎನ್ನಿಸುತ್ತದೆ. ಆದರೂ ಈಕೆಯ ಸೌಂದರ್ಯಕ್ಕೆ ಮಾರುಹೋಗಿ ಸುಮ್ಮನಾಗುತ್ತಾನೆ. ರಾಜ ಉಶೀನರ ಮಾಧವಿಯ ರೂಪಕ್ಕೆ ಬೆರಗಾಗುತ್ತಾನೆ. ಮಾಧವಿಯು ಹುಲ್ಲೆಯ ಮರಿಯಂತೆ ದಿಕ್ಕು ಕಾಣದೆ ರಾಜನ ತೋಳ ಬಂಧನದಲ್ಲಿದ್ದಾಳೆ.ಪ್ರತಿಭಟಿಸುವ ಮನಸ್ಸಿದ್ದರೂ ಪ್ರತಿಭಟಿಸಲು ಸಾಧ್ಯವಿಲ್ಲದ ಮನಸ್ಥಿತಿ. ಈ ಎಲ್ಲ ಆಗುಹೋಗುಗಳಿಂದ ಬಿಡುಗಡೆಯ ಭಾಗ್ಯವನ್ನು ಬಯಸುತ್ತಾಳೆ ಆದರೆ ಇದು ಬಂಧನದ ಭಾಗ್ಯ. ಉಶೀನರ ರಾಜನಿಗೆ ಮಕ್ಕಳಿದ್ದರೂ ಮತ್ತೆ ಮಕ್ಕಳನ್ನು ಪಡೆಯಲು ಬಯಸುತ್ತಿರುವನಲ್ಲ ಎಂದು ಯೋಚಿಸುತ್ತಾಳೆ.

ಗಾಲವ ಮಹಾಮುನಿಯು ಹರ್ಯಶ್ವ, ದಿವೋದಾಸ, ಉಶೀನರ ರಾಜರಿಂದ ಆರುನೂರು ಕುದುರೆಗಳನ್ನು ದಾನವಾಗಿ ಪಡೆದು ಇನ್ನೂ ಇನ್ನೂರು ಕುದುರೆಗಳನ್ನು ಪಡೆಯಲು ಸಾಕಷ್ಟು ಪ್ರಯತ್ನಿಸುತ್ತಾನೆ. ಕೊನೆಗೆ ವಿಶ್ವಾಮಿತ್ರ ಗುರುವಿನ ಬಳಿ ತೆರಳಿ ತಾನು ಪಟ್ಟಪಾಡೆಲ್ಲವನ್ನು ತಿಳಿಸಿದಾಗ "ಎಂಟುನೂರು ಅಶ್ವಗಳಿಗೆ ಬದಲಾಗಿ ಈ ಮಾಧವಿಯನ್ನೇ ಸ್ವೀಕರಿಸಿ ಅಂತ ಹೇಳಿ ಇವಳನ್ನು ನನ್ನಲ್ಲಿ ತಂದು ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು! ನಾನೇ ಇವಳನ್ನು ಜೀವಮಾನ ಪರ್ಯಂತ ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ವರು ಪುತ್ರರನ್ನು ಪಡೀತಿದ್ದೆ. ಇರಲಿ ಆದದ್ದಾಗಿ ಹೋಯ್ತು. ಇವಳಲ್ಲಿ ಒಬ್ಬನೇ ಮಗನನ್ನು ಪಡೆದು ಆನಂತರ ಮಾಧವಿಯನ್ನು ನಿನಗೆ ಒಪ್ಪಿಸಿಬಿಡ್ತೀನಿ" ಎಂದನು. ಅದರಂತೆ ವಿಶ್ವಾಮಿತ್ರ ಮುನಿ ಮಾಧವಿಯನ್ನು ಸ್ವೀಕರಿಸಿದ. ಅವಳನ್ನು ಅಲ್ಲಿಯೇ ಆಶ್ರಮದಲ್ಲಿ ಉಳಿಸಿಕೊಂಡು ಅಷ್ಟಕನೆಂಬ ಗಂಡು ಮಗುವನ್ನು ಪಡೆದ.

ಗುರುದಕ್ಷಿಣೆಯನ್ನು ಕೊಡುವುದನ್ನೇ ಧ್ಯೇಯವಾಗಿಸಿಕೊಂಡ ಗಾಲವ ಏನೂ ಅರಿಯದ ಪ್ರಾಯದ ಹುಡುಗಿಯನ್ನು ರಾಜರಿಗೆ ಮಾರಿ ಅವರಿಂದ ಇವನಿಗೆ ಬೇಕಾದ ಕುದುರೆಗಳನ್ನು ಪಡೆದು ಕೊನೆಗೆ ದಕ್ಷಿಣೆಯನ್ನು ಪೂರೈಸಲು ಸಾಧ್ಯವಿಲ್ಲದಂತಹ ಸಂದರ್ಭದಲ್ಲಿ ಮಾಧವಿಯನ್ನೇ ವಿಶ್ವಾಮಿತ್ರ ಮುನಿಗೆ ಸಲ್ಲಿಸಿ ನಿಶ್ಚಿಂತನಾಗುತ್ತಾನೆ. ಎಲ್ಲಾ ಕೆಲಸಗಳು ಪೂರ್ಣಗೊಂಡ ನಂತರ ಕೊನೆಯಲ್ಲಿ ಯಯಾತಿ ರಾಜನ ಬಳಿ ಕರೆದುಕೊಂಡು ಬರಲು ಯೋಜಿಸುತ್ತಾನೆ. ಕಳೆದ ಐದು ವರ್ಷಗಳಲ್ಲಿ ನಡೆದ ಘಟನೆಗಳೆಲ್ಲವನ್ನೂ ಬಿಡಿಸಿ ಹೇಳುತ್ತಾನೆ. ಏನೂ ಮಾಡದ ಸ್ಥಿತಿಯಲ್ಲಿರುವ ಯಯಾತಿ ನಾನು ಅಪವಾದಗಳಿಂದ ಮುಕ್ತನಾಗಬೇಕಾದರೆ ಅವಳಿಗೆ ಸ್ವಯಂವರವನ್ನು ಏರ್ಪಡಿಸಲೇಬೇಕೆನ್ನುತ್ತಾನೆ.

ಗಾಲವ ಏನೂ ತಪ್ಪು ಮಾಡದವನಂತೆ ಯಯಾತಿ ರಾಜನಿಂದ ದಾನದಕ್ಷಿಣೆಗಳನ್ನು ಸ್ವೀಕರಿಸಿ ದೂರ ಸರಿಯುತ್ತಾನೆ. ಯಯಾತಿ ತಾನು ಮಾಡಿದ ತಪ್ಪಿನಿಂದ ಮುಕ್ತಿ ಹೊಂದಲು ಬಯಸಿ ಮಾಧವಿಯನ್ನು ಸ್ವಯಂವರಕ್ಕೆ ಸಿದ್ಧಗೊಳಿಸಲು ಪ್ರಯತ್ನಿಸುತ್ತಾನೆ. ಆದರೆ ಮಾಧವಿಯು ತನಗೆ ಮದುವೆ, ಮಕ್ಕಳ ಮೇಲೆ ಇರುವ ಬೇಸರ, ಜಿಗುಪ್ಸೆಗಳನ್ನು ಹಂಚಿಕೊಳ್ಳುತ್ತಾಳೆ. 'ಈ ಬದುಕಿನಲ್ಲಿ ಏನೂ ಬೇಡ ಒಂಟಿಯಾಗಿ ಯಾರಿಗೂ ಕಾಣದ ಹಾಗೆ ಇದ್ದು ಬಿಡಬೇಕು' ಎಂಬ ಬಯಕೆಗಳನ್ನು ಮುಂದಿಡುತ್ತಾಳೆ. ಗಂಡಸು ಜಾತಿಯ ಬಗ್ಗೆ ಬೇಸರದ ಧ್ವನಿಯನ್ನೆತ್ತುತ್ತಾಳೆ.

ಮಾಧವಿಯ ಸುತ್ತ ಸಮಸ್ಯೆಗಳ ಹುತ್ತ ಎಂಬಂತೆ ಇಲ್ಲಿಯವರೆಗೂ ನಡೆದ ಎಷ್ಟೋ ಘಟನೆಗಳು ನೆನಪಿಗೆ ಬರುತ್ತವೆ. ದುಃಖ ಬತ್ತಿ ಹೋಗಿದೆ. ಅಪ್ಪನಾದ

ಯಯಾತಿಯನ್ನು ಕುರಿತು 'ಅಪ್ಪಾ ಹಿಂದೆ ಒಂದು ಸಾರಿಯೂ ನನ್ನ ಭವಿಷ್ಯ ನಿರ್ಧರಿಸಿಕೊಳ್ಳೋಕೆ ನನಗೆ ಅವಕಾಶವಿರಲಿಲ್ಲ. ಈಗ ಆ ಹಕ್ಕನ್ನು ಕೊಟ್ಟಿದ್ದೀರಿ. ನಂಗಿಷ್ಟ ಬಂದ ಹಾಗೆ ನಾನು ಮಾಡಬಹುದಲ್ಲವೇ? ಎಂದು ನನಗೆ ಸ್ವಯಂವರವೇ ಬೇಡವೆಂದು ಧಿಕ್ಕರಿಸುತ್ತಾಳೆ. ಮಾಧವಿಯ ಈ ತೀರ್ಮಾನಕ್ಕೆ ಇಡೀ ವ್ಯವಸ್ಥೆ ಮೌನವಾಗುತ್ತದೆ. ಇಂಥ ಧೈರ್ಯ ಸಾಹಸಗಳು ಪ್ರತಿ ಹೆಣ್ಣಿನಲ್ಲಿ ಬಂದಿದ್ದಾದರೆ ತಕ್ಕಮಟ್ಟಿಗಾದರೂ ವ್ಯವಸ್ಥೆಯನ್ನು ಬದಲಿಸಬಹುದು. ನೋವುಂಡ ಜೀವಗಳ ಸಮಸ್ಯೆಗಳನ್ನೇ ಮುಖ್ಯ ಮಾಡಿಕೊಂಡು ಸಮುದಾಯ ಜೀವನದ ವಾಸ್ತವಾಂಶಗಳನ್ನು ಈ ಕಾದಂಬರಿಯಲ್ಲಿ ಮೂರ್ತಗೊಳಿಸಲಾಗಿದೆ.

ಆಕರ ಕೃತಿ

1. ಅನುಪಮಾ ನಿರಂಜನ – ಮಾಧವಿ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 2022.

❖❖❖

ರೆಕ್ಕೆ ಬಲಿಯದ ಮುನ್ನ
ಪುಕ್ಕವೇಳದ ಮುನ್ನ
ಸೊಕ್ಕಿನಲಿ ಮೇಲೇರಿ ಮೆರೆಯಬಹುದೇ?
ಪಕ್ಕೆಯಲಿ ಬಲ ಬಂದು
ದಿಕ್ಕಿನೆಡೆ ಮೊಗ ಮಾಡಿ
ಹಕ್ಕಿಯಾಗಲು ಕಾಯ ಬೇಕಲ್ಲವೇ?

ಮೈಸೂರು ಸಂಸ್ಥಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು
(ಶಾಸನಗಳ ಹಿನ್ನೆಲೆಯಲ್ಲಿ)

ಡಾ. ಮೋಹನ್ ಕೆ.ಎನ್.
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು

18ನೇ ಶತಮಾನದ ಕೊನೆ ಮತ್ತು 19ನೇ ಶತಮಾನದ ಮೊದಲ ಭಾಗದಲ್ಲಿ ಮೈಸೂರು ಸಂಸ್ಥಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಬಾಲಕನಾಗಿ ಸಿಂಹಾಸನವೇರಿ ಅಧಿಕಾರಿಗಳ ಭ್ರಷ್ಟಾಚಾರ, ಬ್ರಿಟಿಷರ ವಚನಭ್ರಷ್ಟತೆ ಇವೆಲ್ಲವನ್ನು ಸಹಿಸಿ ಅವರ ವಿರುದ್ಧ ಹೋರಾಡಿದರು. ವಿಶ್ವದ ಅತಿ ಬಲಿಷ್ಠ ಸಾಮ್ರಾಜ್ಯವಾದ ಬ್ರಿಟಿಷ್ ಚಕ್ರಾಧಿಪತ್ಯದ ಗಮನಕ್ಕೆ ತಮ್ಮ ರಾಜತ್ವದ ಮನವಿಯನ್ನು ಮುಟ್ಟಿಸುವಲ್ಲಿ ಅವರು ತೋರಿದ ಮುತ್ಸದ್ದಿತನ, ಹಾಗೆಯೇ ಇವರ ಅವಧಿಯಲ್ಲಿ ಅಧಿಕಾರ ನಡೆಸಿದ ದಿವಾನರುಗಳ ಬಗ್ಗೆ ತೋರಿಸಿದ ಔದಾರ್ಯ ಮತ್ತು ಕ್ಷಮಾಶೀಲತೆ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡಬೇಕು. ಮುಮ್ಮಡಿಯವರ ಆಡಳಿತ ಅವಧಿಯಲ್ಲಿ ತಮ್ಮ ರಾಜ್ಯದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಗತಿಗೆ ವಿಶೇಷ ಒತ್ತನ್ನು ಮಹಾರಾಜರು, ಅಧಿಕಾರಿಗಳು ಮತ್ತು ಅವರ ರಾಣಿಯರು ನೀಡಿರುವ ಕೊಡುಗೆಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.

ಮುಮ್ಮಡಿಯವರು ಮೈಸೂರು ನಗರವಷ್ಟೆ ಅಲ್ಲದೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲೂ ಧರ್ಮ ಮತ್ತು ಸಂಸ್ಕೃತಿಗೆ ಅಗಾಧವಾದ ಕೊಡುಗೆಗಳನ್ನು ನೀಡಿದ್ದಾರೆ. ಮೈಸೂರು ಅರಮನೆಯ ಕೋಟೆ ಒಳಭಾಗದಲ್ಲಿ ಇರುವ ಶ್ವೇತವರಾಹ ಸ್ವಾಮಿ ದೇವಾಲಯದ ಉತ್ಸವ ಮೂರ್ತಿಯ ಬೆಳ್ಳಿಪೀಠ ಮತ್ತು ಪ್ರಭಾವಳಿಯ ಮೇಲೆ ಬರೆದಿರುವ ಕ್ರಿ.ಶ.1810 ಆಗಸ್ಟ 14ರ ಶಿಲಾಶಾಸನದಲ್ಲಿ, ಉತ್ಸವ ಮೂರ್ತಿಯ ಸೇವೆಯ (ಕೋಡುಗೆ) ಬಗ್ಗೆ ಉಲ್ಲೇಖಿಸಿದೆ. (ಎಪಿಗ್ರಾಫಿಯಾ ಕರ್ನಾಟಿಕ, ಮೈಸೂರು–6)

ಮೈಸೂರಿನ ಕೃಷ್ಣ ವಿಲಾಸ ಅಗ್ರಹಾರದ ಪರಕಾಲ ಸ್ವಾಮಿಗಳ ಮಠದಲ್ಲಿರುವ ವಜ್ರದ ತೊಟ್ಟಿಲಿನ ಮೇಲೆ ಮುಮ್ಮಡಿಯವರು ಬ್ರಹ್ಮ ಪರಕಾಲ ಸ್ವಾಮಿ ಮಠದ ಹಯಗ್ರೀವ ಮತ್ತು ಲಕ್ಷ್ಮೀನಾರಾಯಣ ಸ್ವಾಮಿಗೆ ಡೋಲೋತ್ಸವ ಸೇವೆಯ ಅಂಗವಾಗಿ ತೊಟ್ಟಿಲು ಸೇವೆ ನೆರವೇರಿಸಿದ ಉಲ್ಲೇಖವನ್ನು 1814ರ ಡಿಸೆಂಬರ್ 4ರಂದು ಶಾಸನೋಕ್ತ ಮಾಡಲಾಗಿದೆ. ಇದೇ ವರ್ಷ ಮಠದ ಸೇವೆಗೆ ಪುನಃ ರತ್ನಮಯವಾದ ಶಟಗೋಪದ ಧಾನ ಕೂಡ ಇದರಲ್ಲಿಯೇ ಅರಸರಿಂದ ಶಾಸನೋಕ್ತವಾಗಿದೆ.

ಕ್ರಿ.ಶ.1819ರ ಮಾರ್ಚ 25ರಂದು ಮುಮ್ಮಡಿ ಕೃಷ್ಣರಾಜ ಒಡೆಯರು ಅರಮನೆಯಿಂದ ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯ ಶ್ರೀಕಂಠಮುಡಿಯ ಕೆಳಗಣ ಬಂಗಾರದ ಪಟ್ಟಿಯ ಸುತ್ತಲೂ ಶ್ರೀಕಂಠಮುಡಿಯ ಸೇವಾರ್ಥದ ಕೊಡುಗೆಯನ್ನು ಕುರಿತು ಉಲ್ಲೇಖಿಸುತ್ತಾ ಮುಮ್ಮಡಿಯವರ ಪತ್ನಿ ಕೆಂಪಾನಂಜಾಂಬರ ಕೊಡುಗೆ

ಎಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಕ್ರಿ.ಶ.1821ರ ಸೆಪ್ಟಂಬರ್ 27ರಂದು ಮುಮ್ಮಡಿಯವರ ಧರ್ಮಪತ್ನಿ ದೇವಾಜಮ್ಮಣ್ಣಿಯವರು ಅರಮನೆಯ ಬಲಭಾಗದಲ್ಲಿ 21 ಮನೆಗಳ ಅಗ್ರಹಾರವೊಂದನ್ನ ನಿರ್ಮಿಸಿ ದೇವಾಂಬ ಅಗ್ರಹಾರವೆಂದು ಕರೆದರು. ಇದೇ ಅಗ್ರಹಾರದ ಈಶಾನ್ಯಭಾಗದಲ್ಲಿ ಪ್ರಸನ್ನ ನಂಜುಂಡೇಶ್ವರ ದೇವಾಲಯವನ್ನು ನಿರ್ಮಿಸಿ ಅಲ್ಲಿಯೇ ಶಾಸನವೊಂದನ್ನು ಹಾಕಿಸಿ ಅಗ್ರಹಾರದಲ್ಲಿನ ನಿರ್ವಹಣೆಗಾಗಿ ತಾಲ್ಲೂಕಿನ 5 ಹಳ್ಳಿಗಳನ್ನು ಧಾನ ನೀಡಲಾಗಿರುತ್ತದೆ. ಆ ಗ್ರಾಮಗಳು ಯಾವುವೆಂದರೆ ಕುಂದೂರು, ಮಠಕೆರೆ, ಕಲ್ಲಹಳ್ಳಿ, ಹೊಸೂರು ಮತ್ತು ವಡ್ಡರಹಳ್ಳಿಗಳ ಜೊತೆಗೆ ಇವುಗಳ ಉಪಗ್ರಾಮಗಳ ಆದಾಯವನ್ನು ಸಹ ಅಗ್ರಹಾರಕ್ಕೆ ನೀಡಲಾಯಿತು. ಮೇಲ್ಕಂಡ ಹಳ್ಳಿಗಳಿಂದ ಬರುವ ಆದಾಯವನ್ನು 22 ಷೇರುಗಳಾಗಿ ವಿಂಗಡಿಸಿ ಇದರಲ್ಲಿ 21 ಷೇರು ಅಗ್ರಹಾರದ ಭ್ರಾಹ್ಮಣ ಮನೆಗಳಿಗೆ ಮತ್ತು ಒಂದು ಭಾಗ ಪ್ರಸನ್ನ ನಂಜುಂಡೇಶ್ವರ ದೇವಾಲಯದ ದೀಪ ಮತ್ತು ರಥೋತ್ಸವ ಸೇವೆಗೆಂದು ನಿಗದಿಪಡಿಸಲಾಗಿರುವುದು ಶಾಸನೋಕ್ತವಾಗಿದೆ. ಈ ಶಾಸನದಲ್ಲಿ ಉಪಗ್ರಾಮಗಳು ಎಂದರೆ ಹೊಸದಾಗಿ ಸೃಷ್ಠಿಯಾಗುವ ಮನೆಗಳ ಆಧಾಯವನ್ನು ಸೇರಿದಂತೆ ಎಂಬ ಸ್ಪಷ್ಟ ಒಕ್ಕಣೆಯನ್ನು ಈ ಶಾಸನದಲ್ಲಿ ಕಾಣಬಹುದು. (ಎಕಮೈ1)

ಇದೇ ದೇವಾಲಯದ ಉಲ್ಲೇಖಿತ ಶಾಸನದಲ್ಲಿ ಮುಮ್ಮಡಿಯವರ ಪತ್ನಿ ಲಿಂಗಾಜಮ್ಮಣ್ಣಿಯವರ ಹೆಸರಿನಲ್ಲಿ ಲಿಂಗಾಬಾ ಅಗ್ರಹಾರ ನಿರ್ಮಿಸಿ ಅಲ್ಲಿ 22 ಭ್ರಾಹ್ಮಣರಿಗೆ ಆಶ್ರಯ ಕಲ್ಪಿಸಿ, ಒಂದು ಒಕ್ಕಲಿಗೆ(ಮನೆ) 36 ವರಹದಂತೆ 22 ಕುಟುಂಬ ಮತ್ತು ಸಹಗಣಗಳಿಗೆ ಸೇರಿ (22X36) 36 ವರಹಾಗಳಂತೆ ಅತ್ತಿಕುಪ್ಪೆ ತಾಲೂಕಿನ ನಾಲ್ಕು ಗ್ರಾಮಗಳು ಮತ್ತು ಉಪ ಗ್ರಾಮಗಳಾದ ಮೂಡೂರು, ಕಾಮನಾಯಕನಹಳ್ಳಿ, ಶೆಟ್ಟಿಹಳ್ಳಿ ಮತ್ತು ಚಟ್ಟಹಳ್ಳಿಗಳನ್ನು ದಾನವಾಗಿ ನೀಡಿ ಅವುಗಳ ಹೆಚ್ಚುವರಿ ಹುಟ್ಟುವಳಿ ಸೇರಿದಂತೆ ಅದರ ಆದಾಯವನ್ನು ಅಮಿಲ್ದಾರರ ಮುಖಾಂತರ ಅಗ್ರಹಾರದ ಬ್ರಾಹ್ಮಣರಿಗೆ ಸಲ್ಲಿಸುವಂತೆ ಸನ್ನದು ಮಾಡಲಾಯಿತು. ಕ್ಷಾಮ ಮತ್ತು ಸಾಂಕ್ರಾಮಿಕ ರೋಗಗಳ ಸಂಕಷ್ಟದಲ್ಲಿಯು ಧರ್ಮ ಮತ್ತು ಸಮಾಜದ ಪಾಲನೆಗೆ ಹಣವನ್ನು ವ್ಯಯಿಸಲು ಮಹಾರಾಜರು ಹಿಂಜರಿಯಲಿಲ್ಲ. (ಎಕಮೈ3)

ಕ್ರಿ.ಶ. 1827ರ ಸೆಪ್ಟಂಬರ್‌ನಲ್ಲಿ ಚಾಮುಂಡಿ ಬೆಟ್ಟದ ಮಹಾದ್ವಾರದ ದಕ್ಷಿಣದ ಗೋಡೆಯ ಶಾಸನವೊಂದರಲ್ಲಿ ಚಾಮುಂಡಿ ಬೆಟ್ಟದ ಗೋಪುರವನ್ನು ನಿರ್ಮಿಸಿ ಸ್ವತಃ ಮಹಾರಾಜರು ಮತ್ತು ಅವರ ಪಟ್ಟ ಮಹಿಷಿಯರಾದ ಲಕ್ಷೀವಿಲಾಸ, ಕೃಷ್ಣವಿಲಾಸ ಮತ್ತು ರಮಾವಿಲಾಸರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಉಲ್ಲೇಖ ಸ್ಪಷ್ಟವಾಗಿ ಈ ಶಾಸನದಲ್ಲಿ ಶಾಸನೋಕ್ತವಾಗಿದೆ. (ಎಕಮೈ148)

ಬೆಟ್ಟದ ದೇವಾಲಯದ ದೇವಿಗೆ ಕ್ರಿ.ಶ.1828ರ ಡಿಸೆಂಬರ್ 12ರಂದು ರಜತ ಖಚಿತವಾದ ಸಿಂಹವಾಹನವನ್ನು ಮಾಡಿಸಿಕೊಟ್ಟ ಉಲ್ಲೇಖ ವಿಗ್ರಹದ ಪೀಠ ಭಾಗದ ತಗಡಿನ ಮೇಲೆ ಹಾಕಿರುವ ಶಾಸನದಲ್ಲಿ ಉಲ್ಲೇಖಿಸುವುದರ ಜೊತೆಗೆ ಸಿಂಹವಾಹನಕ್ಕೆ ಕೊಟ್ಟ ಬಿಡಿ ಆಭರಣಗಳನ್ನು ಸಹ ಇದೇ ಶಾಸನದಲ್ಲಿ ಉಲ್ಲೇಖಿಸಲಾಗಿದೆ. (ಎಕಮೈ 150)

ಕ್ರಿ.ಶ.1826ರ ವರುಣಾದ ಮಹದೇಶ್ವರ ದೇವಾಲಯದ ಶಾಸನದಲ್ಲಿ ಮುಮ್ಮಡಿಯವರ ಧರ್ಮಪತ್ನಿ ದೇವಾಜಮ್ಮಣ್ಣಿಯವರು ದೇವಾಲಯದ ಪ್ರಾಕಾರ

ಮತ್ತು ಸ್ವರ್ಣಕಳಶಯುಕ್ತ ಗೋಪುರ ಸಮೇತ ಈಶ್ವರ ದೇವಾಲಯವನ್ನು ನಿರ್ಮಿಸಿ ದೇವಾಲಯದ ಉತ್ತರ ಭಾಗಕ್ಕೆ ದೇವಾಂಬ ತಟಾಕವೆಂಬ ನೂತನ ಕೆರೆಯನ್ನು ನಿರ್ಮಿಸಿ ದೇವಾಲಯದ ನಿತ್ಯದೀಪೋತ್ಸವ, ರಥೋತ್ಸವಗಳಿಗೆ ಕರೆಯ ಕೆಳಗಣ ಭಾಗದ ಸರ್ಕಾರದ ಹಿಸ್ಸೆ (ಬಾಗ) ಭೂಮಿಯ 250 ಕಂಠಿರಾಯ ವರಹ ಆದಾಯ ಬರುವ ಭೂಮಿಯನ್ನು ನೀಡಿದರು ಎಂದು ಈ ಶಾಸನದಲ್ಲಿ ವಿವರಿಸಲಾಗಿದೆ. ಈ ಶಾಸನದಿಂದ ಅರಸರು ಕೃಷಿ ಚಟುವಟಿಕೆಯತ್ತಲೂ ವಿಷೇಶ ಗಮನಹರಿಸಿರುವುದು ತಿಳಿದುಬರುತ್ತದೆ. (ಎಕಮೈ166)

ರಮನೆಯ ಕೋಟೆ ಒಳಭಾಗದಲ್ಲಿರುವ ಶಾಸನವೊಂದರಲ್ಲಿ ಉಲೇಖಿತವಾಗಿರುವಂತೆ ಕ್ರಿ.ಶ. 1829ರ ಮಾರ್ಚ್ 15ರಂದು ಕುಲದೇವರಾದ ಬೆಟ್ಟದ ಚಾಮುಂಡೇಶ್ವರಿಯ ಪ್ರೀತ್ಯಾರ್ಥವಾಗಿ "ನವರತ್ನ ಸೇವೆಗಳ" ಹೆಸರಿನ ಒಂಬತ್ತು ಬಗೆಯಾದ ಸೇವೆಯನ್ನು ಮಹಾರಾಜರು ಮೈಸೂರು ರಾಜ್ಯದಲ್ಲಿ ಪ್ರಾರಂಬಿಸಿದ್ದರ ಕುರಿತಾಗಿ ಶ್ರೀಮನ್ ಮಹಾರಾಜರು ಪಡೆದ ಬಿರುದುಗಳನ್ನು ಮತ್ತು ಸೇವೆಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ 9 ಸೇವೆಗಳು ಅವರು ತಮ್ಮ ರಾಜ್ಯದಲ್ಲಿ ಪ್ರಜೆಗಳ ಯೋಗಕ್ಷೇಮವನ್ನು ಗಮನದಲ್ಲಿರಿಸಿಕೊಂಡು ವಿವಿಧ ಅಬಿವೃದ್ದಿ ಕಾರ್ಯಗಳನ್ನು ಕೈಗೊಂಡಂತೆ ಕಾಣುತ್ತದೆ. (ಎಕಮೈ 37)

ಮೇಲುಕೋಟೆ, ನಂಜನಗೂಡು, ಚಾಮರಾಜನಗರ ಮತ್ತು ಮೈಸೂರು ದೇವಾಲಯಗಳಿಗೆ ರತ್ನ ಖಚಿತ ಕೃಷ್ಣರಾಜಮುಡಿಗಳೆಂಬ ದೇವರ ಸೇವೆಗಳಿಗೆ ಕೊಟ್ಟ ಕೊಡುಗೆಗೆ ಪ್ರತಿಯಾಗಿ ಮುಮ್ಮಡಿಯವರು "ಭೋಷಾರತ್ನ" ಎಂಬ ಬಿರುದನ್ನಲಂಕರಿಸಿದರು. ಚಾಮರಾಜನಗರ ಭಾಗದಲ್ಲಿ ನಗರಗಳನ್ನು ನಿರ್ಮಿಸಿ "ದೇಶಾರತ್ನ" ಎಂಬ ಬಿರುದನ್ನಲಂಕರಿಸಿ, ಚಾಮರಾಜನಗರ, ಮೇಲುಕೋಟೆ, ನಂಜನಗೂಡು ಮತ್ತು ಮೈಸೂರು ಕೃಷ್ಣಸ್ವಾಮಿ ದೇವಾಲಯಗಳಿಗೆ "ಸೇವಾರತ್ನ" ಎಂಬ ಹೆಸರಿನಿಂದ ದೇವಾಲಯದ ನಿತ್ಯ ಸೇವೆಗೆ ಬೇಕಾದ ವ್ಯವಸ್ಥೆಯನ್ನ ಕಲ್ಪಿಸಲಾಯಿತು.

ಮಹಾರಾಜರ ಹೆಸರಿನಲ್ಲಿ ಕೃಷ್ಣರಾಜೇಂದ್ರ ಅಗ್ರಹಾರ ನಿರ್ಮಿಸಿ ಅದಕ್ಕೆ ಭೂದಾನವನ್ನು ನೀಡಿ "ದಾನರತ್ನ" ಎಂದು ಬಿರುದಾಂಕಿತರಾದರು. ಇಷ್ಟ ದೇವರಾದ ಚಾಮುಂಡಿ ಮತ್ತು ನಂಜನಗೂಡಿನ ನಂಜುಂಡೇಶ್ವರ, ಚಾಮರಾಜನಗರದ ಚಾಮರಾಜೇಶ್ವರ, ಮೈಸೂರಿನ ಲಕ್ಷ್ಮೀರಮಣ ಸ್ವಾಮಿ ದೇವಾಲಯಗಳಿಗೆ ಗೋಪುರಗಳನ್ನು ನಿರ್ಮಿಸಿ "ಪ್ರತಿಷ್ಠಾ ರತ್ನ" ಎಂದು ಕರೆಸಿಕೊಂಡರು. ಆರನೆಯ ಕೆಲಸ ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜ ಕಟ್ಟೆ ನಿರ್ಮಿಸಿ, ಪಶ್ಚಿಮವಾಹಿನಿ ನದಿಗೆ ತೀರ್ಥರಾಜ ಸೋಪಾನಗಳನ್ನ ನಿರ್ಮಿಸಿ "ಉಪಕಾರತ್ನವೆಂದು" ಪ್ರಸಿದ್ದರಾದರು. ಕಂಚಿ, ಶ್ರೀರಂಗ, ಕಾಶಿಯ ವಿಶ್ವನಾಥ, ತಿರುಪತಿಯ ವೆಂಕಟರಮಣಸ್ವಾಮಿ ಮತ್ತು ಮೇಲುಕೋಟೆಗಳಲ್ಲಿ ಅನ್ನ ಛತ್ರಗಳನ್ನ ನಿರ್ಮಿಸಿ ಅಂದಿನಕಾಲಘಟ್ಟದಲ್ಲಿ ತೀರ್ಥಯಾತ್ರಿಗಳಿಗೆ ಧಾರ್ಮಿಕ ಉದ್ದೇಶ ಇಡೇರಿಸಿಕೊಳ್ಳಲು ಸಹಕಾರಿಗಳಾಗಿ "ಧರ್ಮರತ್ನ" ಎಂಬ ಬಿರುದನ್ನ ಪಡೆದರು.

ಕೃಷ್ಣರಾಜ ವರಹ ಮತ್ತು ಕೃಷ್ಣರಾಜ ಹಣ ಎಂಬ ರಜತ ಮತ್ತು ಸುವರ್ಣ ನಾಣ್ಯಗಳನ್ನು ಹೊರಡಿಸಿ "ಕೀರ್ತಿ ರತ್ನ" ಎಂಬ ಬಿರುದನ್ನ ಪಡೆದರು 9ನೇಯದಾಗಿ ಭಾಗವತ, ರಾಮಾಯಣ ಇತರೆ ಆಧ್ಯಾತ್ಮಿಕ ಪುರಾಣಾದಿಗಳಾಗಿ ಕನ್ನಡ ಸಾಹಿತ್ಯದಲ್ಲಿ

ಸೌಗಂಧಿಕಾ ಪರಿಣಯಗಳ ರಚನೆಗೆ ಪ್ರೋತ್ಸಾಹ ನೀಡಿ "ಸಾರಸ್ವತರತ್ನ" ಎಂಬ ಬಿರುದನ್ನು ಪಡೆದರು.

ಮಹಾರಾಜರು ರಾಜ್ಯದಲ್ಲಿ ಸಂದಿಗ್ಧದ ಸಂದರ್ಭದಲ್ಲಿಯು ಸಹ ರಾಜ್ಯದ ಪ್ರಜೆಗಳ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಧಾರ್ಮಿಕ, ಸಾಂಸ್ಕೃತಿಕ ಮತ್ತು ಲೋಕೋಪಯೋಗಿ ಕೆಲಸಗಳಿಗೆ ಆದ್ಯತೆ ನಿಡಿ ಜನಸ್ನೇಹಿಯಾಗಿದ್ದರೆಂಬುದು ಅವರು ನೆರವೇರಿಸಿದ ನವರತ್ನ ಸೇವೆಗಳಿಂದ ಸಾಬಿತುಗೊಂಡಿದೆ.

ಮುಂದುವರೆದು ಮಹಾರಾಜರು ಭಗವಂತನ ವಿಗ್ರಹಗಳಿಗೆ ಮತ್ತು ಪೂರ್ವಾಚಾರ್ಯರಾದ ರಾಮಾನುಜಾಚಾರ್ಯರ ವಿಗ್ರಹಗಳಿಗೆ ಉತ್ಸವ ಮೂರ್ತಿಗಳನ್ನ ಪ್ರತಿಷ್ಠೈದು ಕಂಚಿಯ ಪೂರ್ವಕ್ಕೆ ತೆರಕಾಣಾಂಬಿಗೆ ದಯಮಾಡಿಸಿ ಪೆರೆಂದೇವಿ ಅಮ್ಮನವರ ದೇವಾಲಯಕ್ಕೆ ವಿಗ್ರಹ ಮಾಡಿಸಿ ಆ ದೇವರುಗಳ ದೀಪಾರಾಧನೆ, ನಿತ್ಯೋತ್ಸವ, ಪಕ್ಷೋತ್ಸವ, ಮಹೋತ್ಸವ, ಸಂವತ್ಸರೋತ್ಸವ, ರಥೋತ್ಸವ, ಧರ್ಮಾಧ್ಯಯನಕ್ಕೆ ಅನುಕೂಲವಾಗುವಂತೆ ಪ್ರತಿ ವರ್ಷ 5000 ಕಂಠೀರಾಯ ವರಾಹಗಳನ್ನ ನೀಡಲು ನಿರ್ಧರಿಸಿ ಅಠಾವಣೆ ಸುಬೇದಾರರ ಹೆಸರಿಗೆ ನಿರೂಪ ಮಾಡಿಸಿ ನಿತ್ಯ ಸೇವೆಗಳು ನಡೆಯುವಂತೆ ಮಾಡಲಾಯಿತು ಎಂದು ಶಾಸನೋಕ್ತವಾಗಿದೆ. (ಎಕಮೈ37)

ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯಕ್ಕೆ ಅರಸರು ಮಾಡಿಸಿ ಕೊಟ್ಟಿರುವ ರಥದ ಹಿತ್ತಾಳೆ ತಗಡಿನ ಮೇಲೆ ಹಾಕಿಸಿರುವ ಶಾಸನದಲ್ಲಿ ಆ ದೇವಾಲಯದ ನೂತನ ರಥದ ಬಗ್ಗೆ ಶ್ರೀಯವರ ಕೊಡುಗೆಯನ್ನು ಉಲ್ಲೇಖಿಸಲಾಗಿದೆ. (ಎಕಮೈ64) ಕ್ರಿ.ಶ. 1859ರ ಅಕ್ಟೋಬರ್ 6ರಂದು ಕಾಸ ಮುದ್ದುಕೃಷ್ಣಾಜಮ್ಮಣ್ಣಿಯವರು ನಿರ್ಮಿಸಿದ ಮನೋರಂಜನ ಮಹಲು ಬಳಿಯ ಧರ್ಮ ಛತ್ರದ ಉಲ್ಲೇಖ (ಇಂದಿನ ಮೈಸೂರು ನಗರದ ಯರಗನಹಳ್ಳಿ) ಶಾಸನೋಕ್ತವಾಗಿದ್ದು ಅಂದಿನ ಕಾಲಘಟ್ಟದಲ್ಲಿ ಆಡಳಿತವರ್ಗ ದಿನರು, ದಲಿತರು, ದಾರಿಹೋಕರು, ಅನಾಥರು ಮತ್ತು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಕ್ರಮವಹಿಸಿರುವುದು ಇದರಿಂದ ವೇದ್ಯವಾಗುತ್ತದೆ. (ಎಕಮೈ134)

ಕ್ರಿ.ಶ.1836ರ ಶಾಸನ ಒಂದರಲ್ಲಿ ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಾಲಯದ ಶಾಸನದಲ್ಲಿ ಸುಬ್ಬರಾಯದಾಸ ಅಲಿಯಾಸ್ ಗೋಪಾಲದಾಸ ಮತ್ತು ಅವರ ಸಹೋದರ ಸೀನಪ್ಪ ದಾಸರ ಒಪ್ಪಿಗೆಯೊಂದಿಗೆ ಕೊಟ್ಟ ಭಕ್ತಿ ಎಂದು ನಮೂದಾಗಿದೆ. ಮೈಸೂರು ಅರಸರು ಅವರ ಅವಲಂಬಿತರಿಗೆ ಅಗ್ರಹಾರದ ವೆಂಕಟರಮಣಸ್ವಾಮಿ ದೇವಾಲಯದ ಎದುರಿನ ಮನೆ ಮತ್ತು ವೃತ್ತಿಯನ್ನು (ಕೆಲಸ) ದತ್ತಿ ನೀಡಿದ ಮಾಹಿತಿ ಈ ಶಾಸನದಲ್ಲಿದ್ದು, ಇದರಿಂದ ರಾಜ್ಯದಲ್ಲಿ ಧಾರ್ಮಿಕ ಕೆಲಸಗಳನ್ನು ನಿರ್ವಹಿಸುವವರಿಗೆ ವೃತ್ತಿಯ ಜೊತೆಗೆ ಮನೆಗಳನ್ನು ಸಮೀಪದಲ್ಲೇ ನೀಡುತ್ತಿದ್ದುದರ ಬಗ್ಗೆ ಮಾಹಿತಿಗಳು ಸಿಗುತ್ತವೆ.

ಕ್ರಿ.ಶ. 1838ರ ಜನವರಿ 12ರಂದು ಮುಮ್ಮಡಿ ಕೃಷ್ಣರಾಜ ಒಡೆಯರ ಪತ್ನಿ ಚಿಕ್ಕಪುಟ್ಟಮ್ಮಣ್ಣಿಯವರಿಗೆ ಮೈಸೂರು ಕೋಟೆಯ ಕೃಷ್ಣಸ್ವಾಮಿ ದೇವಾಲಯದಲ್ಲಿ ಎರಡನೇ ಬಾರಿಗೆ ತುಲಾಭಾರ ನಡೆಸಿದ ಉಲ್ಲೇಖವು ಶಾಸನೋಕ್ತವಾಗಿದ್ದು, ದೇವಾಲಯದ ಅವರಣದಲ್ಲಿ ಇರುವ ಮತ್ತೊಂದು ಶಾಸನದಲ್ಲಿ 1839ರಂದು

ಗುರಿಕಾರ ಕಬೂತರ್ ಖಾಲಿ ಪುಟ್ಟಯ್ಯನ ಮಂಟಪ ಸೇವೆಯನ್ನು ಉಲ್ಲೇಖಿಸಲಾಗಿದೆ. (ಎಕಮೈ74)

ಕೃಷ್ಣವಿಲಾಸ ಅಗ್ರಹಾರದ ವೆಂಕಟರಮಣ ಸ್ವಾಮಿದೇವಾಲಯದ ಗರ್ಭಗುಡಿಯ ಬದಿಯ ಕಲ್ಲಿನಲ್ಲಿ ಹಾಕಿರುವ ದತ್ತಿ ಶಾಸನದಲ್ಲಿ ದೇವಾಲಯಕ್ಕೆ ಲಭಿಸಿದ ದತ್ತಿಯ ಜೊತೆಗೆ ಇದೇ ಶಾಸನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು 3680 ಕಠೀರಾಯ ಹಣವನ್ನು ಬಿಳಿಕೆರೆಯ ಸುಬ್ಬರಾಯ ದಾಸರ ಅನ್ನಛತ್ರಕ್ಕೆ ನೀಡಿದರು ಎಂದು ಶಾಸನೋಕ್ತವಾಗಿದ್ದು. ಇದರ ಜೊತೆಗೆ ಲಿಂಗರಾಜಯ್ಯನವರ ಮನೆತನದವರಿಂದ 1,290 ವರಹ ಕೊಡಿಸುತ್ತೇವೆ ಎಂದು ದಸಭತ್ತಿನಿಂದ ಅಪ್ಪಣೆಯಾದ ಬಗ್ಗೆ ಈ ಶಾಸನದಲ್ಲಿ ವಿವರಣೆ ಇದೆ. ಲಕ್ಷ್ಮೀರಮಣಸ್ವಾಮಿ ದೇವಾಲಯಕ್ಕೆ ಹುರಾದ ಬೀಗಮಲ್ಲ ರಾಜಯ್ಯನ ಮಗ ಚಿಕ್ಕಮಲ್ಲರಾಜಯ್ಯನು ದೇವಾಲಯದ ರಥಸಪ್ತಮಿ ಉತ್ಸವಕ್ಕೆ ನೀಡಿದ ಕೊಡುಗೆಯನ್ನು ಕುರಿತು ಈ ಶಾಸನದಲ್ಲಿ ವಿವರಣೆ ಇದೆ. (ಎಕಮೈ75)

ಕ್ರಿ.ಶ. 1846ರ ಶಾಸನದಲ್ಲಿ ಮುಮ್ಮಡಿಕೃಷ್ಣರಾಜ ಒಡೆಯರು ಬೆಟ್ಟದ ಬುಡದಲ್ಲಿರುವ ಗವಿಮಠದ ಮಠ ನಿರ್ಮಾಣಕ್ಕೆ ಎಂದು ಧಾನ ನೀಡಿದ ಮಾಹಿತಿಗಳು ಲಭಿಸುತ್ತವೆ. ಕ್ರಿ.ಶ. 1855ರ ಶಾಸನವೊಂದರಲ್ಲಿ ಮುಮ್ಮಡಿಯವರ ಪತ್ನಿ ಲಿಂಗಾಜಮ್ಮಣ್ಣಿಯವರ ಮರಣ ನಿಮಿತ್ತ ನಿರ್ಮಿತವಾದ ಬೃಂದಾವನದ ಕುರಿತು ಈ ಶಾಸನದಲ್ಲಿ ವಿವರಣೆ ಇದೇ. (ಎಕಮೈ98) (ಎಕಮೈ163)

ಅಶೋಕ ರಸ್ತೆಯ ಜಗ್ಗುಲಾಲ್ ಛತ್ರದಲ್ಲಿನ ಶಾಸನವೊಂದರಲ್ಲಿ ಇವರ ಸೇವಕನಾಗಿದ್ದ ಜಗ್ಗುಲಾಲ್ ಹೆಸರಿನಲ್ಲಿ ಧರ್ಮಶಾಲೆಯೊಂದನ್ನು 1855ರಲ್ಲಿ ತೆರೆಯಲು ಅನುಮತಿಸಿದ್ದರ ಬಗ್ಗೆ ಮಾಹಿತಿ ದೊರೆಯುತ್ತದೆ. ಕ್ರಿ.ಶ.1855ರಲ್ಲಿ ಹಾಕಿಸಿದ ಮತ್ತೊಂದು ಶಾಸನದಲ್ಲಿ ಬೆಟ್ಟದ ಹಾದಿಯ ಈಶ್ವರ ದೇವಾಲಯದ ಸಮೀಪ ಯಾಗ ಮಂಟಪ ಒಂದನ್ನ ತಮ್ಮ ಆಸ್ಥಾನದ ವೇದಾಂತ ಸುಬ್ಬಾಶಾಸ್ತ್ರಿಗಳ ಹೆಸರಿನಲ್ಲಿ ಕಟ್ಟಿಸಿ ಕೊಡಲಾಯಿತು ಎಂದು ಶಾಸನದಲ್ಲಿ ವಿವರಣೆ ಸಿಗುತ್ತದೆ.

ಕ್ರಿ.ಶ. 1857ರಲ್ಲಿ ಚಾಮುಂಡಿ ಬೆಟ್ಟದಲ್ಲಿ 30 ಸಾಲುಗಳನ್ನು ಒಳಗೊಂಡಿರುವಂತಹ ಶಾಸನ ಒಂದು ನಕ್ಷತ್ರ ಮಾಲಿಕೆಯ ಆಕಾರದಲ್ಲಿ ಉಲ್ಲೇಖಿತವಾಗಿದ್ದು ಚಿನ್ನದ ಆಭರಣವನ್ನು ಚಾಮುಂಡಿ ದೇವಾಲಯಕ್ಕೆ ಅರಸರು ಕೊಡುಗೆಯಾಗಿ ನಿಡಿರುವ ವಿಷಯ ಉಲ್ಲೇಖಿತವಾಗಿದೆ. (ಎಕಮೈ157)

ಕ್ರಿ.ಶ.1859ರ ಶಾಸನವೊಂದರಲ್ಲಿ ಮುಮ್ಮಡಿಕೃಷ್ಣರಾಜ ಒಡೆಯರ ಭಕ್ಷೀ ನರಸಪ್ಪನವರು ಕೋಶಾಧಿಕಾರಿಯಾಗಿದ್ದ ಇವರು ಸುಬ್ರಹ್ಮಣ್ಯೇಶ್ವರ ಗುಡಿಗೆ ಕೊಟ್ಟ ವಿಗ್ರಹಗಳ ಕೊಡುಗೆಯನ್ನು ವಿವರಿಸಿ ಆದಿತ್ಯ, ಅಂಬಿಕಾ, ವಿಷ್ಣು, ಗಣನಾತ, ಮಹಾವೀರ, ದಕ್ಷೀಣಾಮೂರ್ತಿ, ಚಂಡಿಕೇಶ್ವರ, ಉತ್ಸವಮೂರ್ತಿ ಚಂದ್ರಶೇಖರ ಮತ್ತು ತಾಂಡವೇಶ್ವರ ಇಷ್ಟು ವಿಗ್ರಹಗಳನ್ನು ಮಾಡಿಸಿ ಕೊಟ್ಟ ಬಗ್ಗೆ ಉಲೇಖಗಳು ಶಾಸನೋಕ್ತವಾಗಿವೆ.

ಉಳಿದಂತೆ ಕೆ.ಆರ್.ನಗರ ತಾಲ್ಲೂಕಿನ ಸಾಲಿಗ್ರಾಮದ 54ನೇ ಶಾಸನದಲ್ಲಿ ಸತ್ಯಭಾಮ ವಿಗ್ರಹವನ್ನು ಅಲ್ಲಿನ ಕೃಷ್ಣ ದೇವಾಲಯಕ್ಕೆ ನೀಡಿದ ಉಲ್ಲೇಖ ಇದೆ. ಆದರೆ ಪ್ರಸ್ತುತ ಸಾಲಿಗ್ರಾಮದ ಆ ದೇವಾಲಯವು ಯೋಗಾನರಸಿಂಹ ಸ್ವಾಮಿ ದೇವಾಲಯವಾಗಿದೆ, ಈ ಬಗ್ಗೆ ಹೆಚ್ಚಿನ ಧಾಖಲೆಗಳು ಲಭಿಸುವುದಿಲ್ಲ. ಆದರೆ ಇಂತಹ

ನಿದರ್ಶನಗಳನ್ನು ಗಮನಿಸಿದರೆ 19ನೇ ಶತಮಾನದಲ್ಲಿಯು ಸಹ ದೇವಾಲಯಗಳ ಮೂಲ ವ್ಯವಸ್ಥೆಯನ್ನು ಬದಲಿಸಿರುವ ನಿದರ್ಶನಗಳು ಕಂಡುಬರುತ್ತವೆ.

ಟಿ. ನರಸೀಪುರ ತಾಲ್ಲೂಕಿನ 4 ಮತ್ತು 140ನೇಯ ಶಾಸನದಲ್ಲಿ ಕ್ರಮವಾಗಿ ಮುಮ್ಮಡಿಯವರ ಸೇವಕನೊರ್ವ ಗುಂಜಾನರಸಿಂಹ ಸ್ವಾಮಿ ದೇವಾಲಯಕ್ಕೆ ಪ್ರಹ್ಲಾದ ಮಂಟಪವೊಂದನ್ನ ನಿರ್ಮಾಣ ಮಾಡಿದ್ದರ ಬಗ್ಗೆ ಕ್ರಿ.ಶ.1855ರ ಕಾಲಘಟ್ಟದ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದೆ ಶಾಸನದಲ್ಲಿ ವಿಜಯಪುರ ಮೂಲತಾನೇಶ್ವರ ದೇವಾಲಯಕ್ಕೆ ರಾಜರು ಕೊಟ್ಟ ಕೊಡುಗೆಯನ್ನು ಉಲ್ಲೇಖಿಸುತ್ತದೆ.

ಮಹಾರಾಜರು ಕ್ರಿ.ಶ.1831 ರಿಂದ 1868ರ ಸಂದರ್ಭದಲ್ಲಿಯು ಸಹ (ಕಾರಣ ಈ ಸಂದರ್ಭದಲ್ಲಿ ಮಹಾರಾಜರು ಬ್ರೀಟಿಷರಿಂದ ಅಧಿಕಾರ ವಂಚಿತರಾಗಿದ್ದರು) ಸಮಕಾಲಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ವಿವಿಧ ಮತಗಳ ಮತಮಾನ್ಯಗಳಿಗೆ ಧಾನ ನೀಡಿರುವುದು ತಿಳಿದುಬರುತ್ತದ. ಮುಮ್ಮಡಿಯವರ ಅವದಿಯಲ್ಲಿಯು ಪರಕಾಲ ಮಠದ ಸ್ವಾಮಿಗಳನ್ನು ರಾಜಗುರುಗಳಾಗಿ ಮುಂದುವರಿಸಲಾಯಿತು. ಅಲ್ಲದೆ ಸಂಸ್ಥಾನದಲ್ಲಿ ಅನೇಕ ಮಠಗಳಿಗೆ ವಿಶೇಷವಾಗಿ ದತ್ತಿ ನೀಡಿದ ಉಲ್ಲೇಖವು ಇದೆ. ತಿರ್ಥಹಳ್ಳಿ ಬಳಿಯ ಭಾಗವತ ಸಂಪ್ರಾದಾಯದ ಮಠಕ್ಕೆ ದತ್ತಿ ನೀಡಿರುವುದು. ಬಾಬಾಬುಡನ್ನ ಗಿರಿಯ ದತ್ತಾತ್ರೇಯ ಪೀಠಕ್ಕೆ ನಿಡಿದ ಧಾನ, ಮೈಸೂರಿನ ದೇವಾಲಾಪುರದಲ್ಲಿನ ವೀರಶೈವ ಮಠ ಮತ್ತು ಬೆಟ್ಟದ ವೈಷ್ಣವ ಅಹೋಬಲ ಮಠ, ಬಾಳೆಹೊನ್ನೂರಿನಲ್ಲಿರುವ ವೀರಶೈವ ಮಠ, ಮೈಸೂರಿನ ಸೂಸಲೆಯ ವ್ಯಾಸರಾಯಮಠ, ಸುತೂರಿನ ಶ್ರೀ ಶಿವರಾತ್ರೀಶ್ವರ ಮಠ, ಶೃಂಗೇರಿ ಶಾರದ ಪೀಠ ಹಾಗೂ ಶ್ರವಣಬೆಳಗೂಳದ ಚಾರುಕೀರ್ತಿ ಭಟ್ಟಾರಕ ಜೈನಮಠಗಳಿಗೆ ದಾನ ದತ್ತಿ ನಿಡಿದ ಧಾಖಲೆಗಳು ಶಾಸನೋಕ್ತವಾಗಿವೆ. ಕ್ರಿ.ಶ. 1812ರ ನಿರೂಪವೊಂದರಲ್ಲಿ ಸುತ್ತೂರು ವೀರಶೈವ ಮಠದ ಸ್ವಾಮಿಗಳು ಪ್ರವಾಸ ಕೈಗೊಳ್ಳುತ್ತಿರುವ ಪಿರಿಯಾಪಟ್ಟಣ, ಹೆಗ್ಗಡದೇವನಕೊಟೆ, ಕಟ್ಟೆಮಳಲವಾಡಿ, ಬೆಟ್ಟದಪುರ, ತೆರಕಣಾಂಬಿ, ಹರದನಹಳ್ಳಿ ಮುಂತಾದ ಪ್ರದೇಶಗಳ (ಅಷ್ಠಗ್ರಾಮ ಮತ್ತು ಮಳವಳ್ಳಿ ತಾಲ್ಲೊಕು) ಅಮಲ್ದಾರರು ಮತ್ತು ಖಿಲ್ಲೇದಾರರಿಗೆ ಈ ಮುಂದಿನ ಸ್ಥಳಗಳಲ್ಲಿ ಕಾಣಿಕೆ ವಸೂಲಿ ಕಾರ್ಯಕ್ರಮಕ್ಕೆ ಬರುವ ಮಠದ ಸ್ವಾಮಿಗಳಿಗೆ ಸಹಕರಿಸುವಂತೆ ಆಜ್ಞಾಪಿಸಿದರು. ಹೀಗೆ ಧರ್ಮ ಮತ್ತು ಸಂಸ್ಕೃತಿಯ ಉಳಿವಿಗೆ ಮುಮ್ಮಡಿಯವರು ಕೊಡುಗೈದಾನಿಗಳಾಗಿದ್ದರು ಎಂಬುದು ಮೆಲಿನ ದಾಖಲೆಗಳಿಂದ ಸಾಬೀತಾಗುತ್ತದೆ.

ಇವರ ಆಡಳಿತ ಅವಧಿಯಲ್ಲಿ ಹಾಕಿಸಿದ ಒಟ್ಟು 65ಕ್ಕೂ ಹೆಚ್ಚು ಶಾಸನಗಳಲ್ಲಿ ಬಹುತೇಕ ಶಾಸನಗಳಲ್ಲಿ ಮುಮ್ಮಡಿಯವರು ಮೈಸೂರು ಮತ್ತು ಸುತ್ತಮುತ್ತಲಿನ ದೇವಾಲಯಗಳಿಗೆ ನೀಡಿದ ದತ್ತಿಗಳನ್ನು ಕುರಿತಾಗಿವೆ. ಬಹುತೇಕ ಶಾಸನಗಳಲ್ಲಿ ಪಟ್ಟದರಸಿಯರು ಮತ್ತು ಅವರ ಅಧಿಕಾರಿಗಳು ರಾಜರ ಜೊತೆಗೆ ಕೊಡುಗೆಗಳನ್ನು ನೀಡಿದಂತಹ ಉಲ್ಲೇಖಗಳು ಸಿಗುತ್ತವೆ. ಈ ಪರಿಪಾಠವು ಹಿಂದಿನ ಹೊಯ್ಸಳರು ಮತ್ತು ವಿಜಯನಗರ ಅರಸರ ಕಾಲದಿಂದ ಸಮಕಾಲಿನ ಕಾಲಘಟ್ಟದವರೆಗೂ ಸಹ ಮುಂದುವರಿಯುತ್ತದೆ. ಕ್ರಿ.ಶ. 1831 ರಿಂದ ಕ್ರಿ.ಶ. 1881 ರವರೆಗೆ ಮೈಸೂರು ಅರಸರಿಗೆ ಅಧಿಕಾರ ಇಲ್ಲದಿದ್ದರೂ ಸಹ ಮುಮ್ಮಡಿಯವರು ಮತ್ತು ಅವರ ಪಟ್ಟದರಸಿಯರು, ಅಧಿಕಾರಿಗಳು ಮೈಸೂರು ಸಂಸ್ಥಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಕಿಂಚಿತ್ತು ಕೊರತೆಯಾಗದಂತೆ ಕೊಡುಗೆಗಳನ್ನ ನೀಡಿರುವುದು ಶ್ರೀಮನ್ಮಾಹಾರಾಜರಿಗೆ

ಇದ್ದ ಲೋಕೋಪಯೋಗಿ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾಳಜಿಯನ್ನು ಸೂಚಿಸುತ್ತದೆ.

ಆಕರಗಳು

1. ಡಾ. ಪಿ.ವಿ. ನಂಜರಾಜ ಅರಸು ಮತ್ತು ಪ್ರೊ. ಎಸ್.ಆರ್. ಚಂದ್ರರಾಜ ಅರಸು (ಸಂ.) (1996)–ನಾಲ್ವಡಿ ಕೃಷ್ಣರಾಜ ಒಡೆಯರೊಂದು ದರ್ಶನ, ಅಖಿಲ ಕರ್ನಾಟಕ ಅರಸು ಪರಿಷತ್ತು (ರಿ) ಮೈಸೂರು.
2. ಎಂ.ವಿ. ಕೃಷ್ಣರಾವ್ & ಎಂ. ಕೇಶವ ಭಟ್ಟ (1970)– 'ಕರ್ನಾಟಕ ಇತಿಹಾಸ ದರ್ಶನ' ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.
3. ಹಯವದನರಾವ್.ಸಿ. (1930) 'ಹಿಸ್ಟರಿ ಆಫ್ ಮೈಸೂರು' ಸಂಪುಟಗಳು ಗೌರ್ನಮೆಂಟ್ ಪ್ರಸ್, ಬೆಂಗಳೂರು.
4. ಕರ್ನಾಟಕ ಚರಿತ್ರೆ ಮಾಲೆ–ಸಂಪುಟ–7 (2005) ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಲಿಂಗಯ್ಯ ಒ.ಎನ್ (1998) ಮೈಸೂರು ಒಡೆಯರ ಕಥೆಗಳು, ಬೆಂಗಳೂರು.
6. ಡಿ.ವಿ.ಜಿ. (1999)– ಮೈಸೂರಿನ ದಿವಾನರುಗಳು–ದಾರವಾಡ,
7. ವಿಲೇಜ್ ಅಪ್‌ಲಿಫ್ಟ ಇನ್ನ ಮೈಸೂರು (1932) ಗೌರ್ನಮೆಂಟ್ ಪ್ರೆಸ್, ಬೆಂಗಳೂರು.
8. ಮೈಸೂರು ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ಸ್ (1900–1940)
9. ಕನ್ನಡ ವಿಷಯ ವಿಶ್ವಕೋಶ ಸಂಪುಟಗಳು–ಮೈಸೂರು ವಿಶ್ವವಿದ್ಯಾಲಯ, ಮೈಸೂರು.
10. ಪ್ರಾನ್ಸಿಸ್ ಹ್ಯಾಮಿಲ್ಟನ್ ಬುಕನಾನ್–ಎ ಜರ್ನಿ ಪ್ರಂ ಮದರಾಸ್ ಥ್ರೂ ಮೈಸೂರು, ಕೆನರಾ ಮಲಬಾರ್. ಸಂಪುಟಗಳು–3
11. ಎಪಿಗ್ರಾಫಿಯಾ ಕರ್ನಾಟಕ ಶಾಸನ ಸಂಪುಟಗಳು–6 ಮೈಸೂರು (ಬಿ.ಎಲ್.ರೈಸ್) ಶಾಸನ ಸಂಖ್ಯೆ–(ಎಕಮೈ) 1,3,6,26,37,56,63,64,69,74,75,98,134,148,150,157,163,166.
12. ಸಂಪುಟ 6–ಕೆ.ಆರ್. ನಗರ–ಶಾಸನ ಸಂ.54, ಸಂಪುಟ 6–ಟಿ.ನರಸೀಪುರ–ಶಾಸನ ಸಂ.4,140.
13. ಎಂ.ಎ.ಅರ್ : (ಮೈಸೂರು ಅರ್ಕೀಯಾಲಜಿಕಲ್ ರಿಪೋರ್ಟ್ಸ್) ಸಂಪುಟಗಳು–1916,1934, 1936, 1937, 1938, 1945.

❖❖❖

ಕೆಸರಿನಲ್ಲಿ ಹುಟ್ಟಿದರೂ
ಬಿಸಿಲಿನಲ್ಲಿ ಅರಳಿದರೂ
ಹೆಸರಿನಲ್ಲಿ ಮಾತ್ರವೇ ಕಮಲ ಕೋಮಲೆ

ಉರಿಯ ಚಿಗುರ ಉತ್ಕಲೆ : ವಿಶ್ಲೇಷಣೆ

ಡಾ. ಸೀತಾ ಹೆಚ್.ಎನ್.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು–571301

ಪ್ರವಾಸ ಕಥನವೆಂದರೆ ಕೇವಲ ಭೇಟಿ ನೀಡಿದ ಪ್ರದೇಶದ ವರ್ಣನೆಯಲ್ಲ. ಅದರ ಸಂಸ್ಕೃತಿಯ ಎಲ್ಲಾ ಮಗ್ಗುಲುಗಳನ್ನೂ ವಿಶೇಷವಾಗಿ ದರ್ಶನ ಮಾಡಿ ಆ ಪ್ರದೇಶದ ಹೊರನೋಟದ ಜತೆಗೆ ಅಂತರಾಳದ ವೈವಿಧ್ಯವನ್ನೂ ಅವಲೋಕಿಸುವುದು ಎಂಬ ವಿಚಾರ ಡಾ. ವಿಜಯಾ ದಬ್ಬೆಯವರ 'ಉರಿಯ ಚಿಗುರ ಉತ್ಕಲೆ' ಪ್ರವಾಸಕಥನದಲ್ಲಿ ಮಡುಗಟ್ಟಿದೆ.

ಡಾ. ವಿಜಯಾ ದಬ್ಬೆಯವರು ಕರ್ನಾಟಕ ಸಾಹಿತ್ಯ ಆಕಾಡೆಮಿಯ ವಿಶಿಷ್ಟ ಯೋಜನೆಗಳಲ್ಲಿ ಒಂದಾದ ಪ್ರವಾಸ ಅನುದಾನ ಯೋಜನೆಯ' ಅಡಿಯಲ್ಲಿ ಒರಿಸ್ಸಾ ರಾಜ್ಯವನ್ನು ಸುತ್ತಾಡಿ ಅಲ್ಲಿನ ಅಪರಿಚಿತವಾದ ಜನ,ಭಾಷೆ, ಸಂಸ್ಕೃತಿ, ಸಾಹಿತ್ಯ, ಕಲೆ, ಸಂಸ್ಥೆಗಳು, ಊರು–ಕೇರಿಗಳ ಪರಿಚಯ ಮಾಡಿಕೊಂಡು ತಮ್ಮ ವಿಶಿಷ್ಟ ಅನುಭವಗಳನ್ನು ಸರಸಮಯ ಹೃದ್ಯಶೈಲಿಯಲ್ಲಿ ನಿರೂಪಿಸಿದ್ದಾರೆ. ತಮ್ಮ ಸಂಶೋಧನೆ ವಿಮರ್ಶೆಗಳಲ್ಲಿ ಗಂಭೀರ ಚಿಂತನಾತ್ಮಕ ಆಲೋಚನಾ ಲಹರಿಗಳನ್ನು ಬಳಸಿಕೊಳ್ಳುವ ಲೇಖಕಿ ಈ ಕೃತಿಯ ತುಂಬೆಲ್ಲಾ ನವಿರು ಹಾಸ್ಯದ ಕಚಗುಳಿಗಳನ್ನು ಓದುಗರಿಗೆ ನೀಡುತ್ತಾರೆ.

ಲೇಖಕಿ ತಮ್ಮ ಪ್ರವಾಸಕ್ಕೆ ಒರಿಸ್ಸಾ ರಾಜ್ಯವನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಹಲವು ಕಾರಣಗಳನ್ನು ನೀಡಿದ್ದಾರೆ. ಅವರು ಒಮ್ಮೆ ರೂರ್ಕೆಲಾಕ್ಕೆ ಕವಿಸಮ್ಮೇಳನಕ್ಕೆಂದು ಹೋಗಿದ್ದಾಗ ಒರಿಸ್ಸಾದ ವೈವಿಧ್ಯ–ವೈರುಧ್ಯಗಳು ಅವರ ಮೇಲೆ ಅಪಾರ ಪ್ರಭಾವ ಬೀರಿದವು ಎನ್ನುತ್ತಾರೆ. "ಬಡತನದ ಬೇಗೆಯಲ್ಲಿ ನರಳುತ್ತಾ, ಆಗಾಗ ಕಾಣಿಸಿಕೊಳ್ಳುವ ಪ್ರಾಕೃತಿಕ ವಿಕೋಪಗಳಲ್ಲಿ ನಲುಗುತ್ತಿರುವ ನಾಡಾದರೂ ಒರಿಸ್ಸಾದಲ್ಲಿ ಕಾಡು, ಕಡಲು, ಬಯಲುಗಳ ಪ್ರಾಕೃತಿಕ ಸೊಬಗು ಸಂಪತ್ತುಗಳು ಅಪಾರವಾಗಿದೆ. ಸಾಂಸ್ಕೃತಿಕ ಪರಂಪರೆಗಳ ಇತಿಹಾಸದಲ್ಲಿ ಆಸಕ್ತಿಯುಳ್ಳವರಿಗಂತೂ ಇದರಂಥ ರಾಜ್ಯ ಮತ್ತೊಂದಿಲ್ಲ ಎನ್ನುವಂತಿದೆ. ಗಿರಿವಾಸಿ ಸಂಸ್ಕೃತಿಗಳ ವೈವಿಧ್ಯವಂತೂ ಇನ್ನಷ್ಟು ಆಕರ್ಷಕವಾಗಿದೆ. ಆದರ ಸೌಮ್ಯ, ಪ್ರೇಮಲ ಸ್ವಭಾವ ಒಡನಾಡಿದವರನ್ನು ಹಿಡಿದಿಡುತ್ತದೆ. ದಕ್ಷಿಣ ಭಾರತದೊಂದಿಗಿನ ಒರಿಸ್ಸಾದ ಸಾಂಸ್ಕೃತಿಕ, ಚಾರಿತ್ರಿಕ ಸಂಬಂಧವಂತೂ ಇನ್ನಷ್ಟು ಕುತೂಹಲಕರ"[1] ಎನ್ನುವ ಲೇಖಕಿ ಸುಮಾರು ಒಂದು ತಿಂಗಳ ಕಾಲ ಈ ನಾಡಿನಲ್ಲಿ ಸುತ್ತಾಡಿ ಅಲ್ಲಿ ಕಂಡ ಪ್ರಾಕೃತಿಕ, ಸಾಂಸ್ಕೃತಿಕ, ಧಾರ್ಮಿಕ ಸೊಬಗಿನ ಚಿತ್ರಣವನ್ನು ಓದುಗರ ಮನಮುಟ್ಟುವಂತೆ ವರ್ಣಿಸಿದ್ದಾರೆ.

ವಿಜಯಾ ದಬ್ಬೆಯವರು ಒರಿಸ್ಸಾ ರಾಜ್ಯಕ್ಕೆ ಬೇಸಿಗೆಯ ದಿನಗಳಲ್ಲಿ ಪ್ರವಾಸ ಆಯ್ಕೆ ಮಾಡಿಕೊಂಡಿದ್ದಕ್ಕೆ ಸೂರ್ಯನ ತಾಪವನ್ನು ಸಹಜವಾಗಿಯೇ ಅನುಭವಿಸಬೇಕಾಯಿತು ಎಂದು ಹೇಳಿದರೂ, ಒರಿಸ್ಸಾದ ಜನತೆ ಪ್ರತಿವರ್ಷ ಬೇಸಿಗೆಯ ತಾಪವನ್ನು ಅನುಭವಿಸುವಾಗ ನಾನು ಈ ಒಂದು ಬೇಸಿಗೆಯನ್ನು

ಅನುಭವಿಸುವುದು ಕಷ್ಟವೇನಲ್ಲ ಎಂಬ ಅಭಿಪ್ರಾಯವನ್ನು ತಳೆಯುತ್ತಾರೆ. ಹದಿನೆಂಟು ಅಧ್ಯಾಯಗಳಲ್ಲಿ ಒರಿಸ್ಸಾ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳುವ ಲೇಖಕಿ ಒರಿಸ್ಸಾದ ಸೂರ್ಯನ ತಿಕ್ಕಲುತನವನ್ನು ರಂಜನೀಯವಾಗಿ "ಇಲ್ಲಿ ದಿನಕ್ಕೆರಡು ಬಾರಿ ಸೂರ್ಯೋದಯವಾಗುತ್ತದೆ" ಎನ್ನುತ್ತಾರೆ. ಮೊದಮೊದಲು ಒರಿಸ್ಸಾದ ಜನರ ಜೀವನಶೈಲಿಯನ್ನು ಅರ್ಥಮಾಡಿಕೊಳ್ಳಲಾಗದ ಲೇಖಕಿ ಬೀದಿಯಲ್ಲಿ ಅಡ್ಡಾಡದೆ ಇರುವ ಜನರನ್ನು ಕಂಡು "ಇದೇನಿದು ಬೆಳಿಗ್ಗೆ ಎಲ್ಲಾ ಈ ಜನ ಮನೆಯೊಳಗೆ ಸೇರಿಕೊಳ್ಳುತ್ತಾರಲ್ಲ, ಇಷ್ಟು ನಿದ್ದೆ ಹೊಡೆಯುತ್ತರಲ್ಲಾ ಇದೆಂಥ ಕುಂಭಕರ್ಣರ ನಾಡು"[2] ಎಂದು ಸಹಜವಾಗಿಯೇ ಭಾವಿಸಿದ್ದಾರೆ. ನಂತರದ ದಿನಗಳಲ್ಲಿ ಸೂರ್ಯನ ತಾಪದ ಅನುಭವವಾಗುತ್ತಿದ್ದಂತೆ ವಿದ್ಯುತ್ ಬರುವ ಮುಂಚೆ, ಈಗಲೂ ವಿದ್ಯುತ್ ಇಲ್ಲದ ಕಡೆ ಜನರು ಬದುಕುವ ಸ್ಥಿತಿಯನ್ನು ಊಹಿಸಿಕೊಂಡು ದಿಗಿಲು ಪಡುತ್ತಾರೆ.

ಇನ್ನು ಒರಿಸ್ಸಾದ 'ರಮಿಸುವ ರಾಜಧಾನಿ ಭುವನೇಶ್ವರ' ಲೇಖಕಿಯಿಂದ ಅಪಾರ ಮೆಚ್ಚುಗೆ ಪಡೆದಿದೆ. ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಮಹತ್ವ ಪಡೆದಿರುವ ಈ ನಗರದ ಯಾವ ಬೀದಿಯನ್ನೇ ನೋಡಿದರೂ ಒಂದಿಲ್ಲೊಂದು ಹಳೆಯ ಗೋಪುರಗಳು ರಾರಾಜಿಸುತ್ತವೆ ಎನ್ನುತ್ತಾರೆ. ಹಳತು ಹೊಸತುಗಳ ಸಂಗಮವಾಗಿ, ಆಧುನಿಕ ಯೋಜಿತ ನಗರವಾಗಿ ಬೆಳೆಯುತ್ತಿರುವ ಭುವನೇಶ್ವರ'ದಿಂದ ರಾಜ್ಯದ ಎಲ್ಲ ಕಡೆಗೂ ಸಾರಿಗೆ ಸಂಪರ್ಕದ ವ್ಯವಸ್ಥೆಯೂ ಇತ್ತು ಈ ಕಾರಣದಿಂದಾಗಿಯೇ ಭುವನೇಶ್ವರವನ್ನು ನನ್ನ ಸುತ್ತಾಟದ ಕೇಂದ್ರವನ್ನಾಗಿ ಮಾಡಿಕೊಂಡೆ ಎಂಬುದಾಗಿ ಹೇಳಿಕೊಂಡಿದ್ದಾರೆ.

ಲೇಖಕಿಯ ಮನಸೂರೆಗೊಂಡಿರುವ ಮತ್ತೊಂದು ಅಂಶ ಭುವನೇಶ್ವರದ ವಸ್ತು ಸಂಗ್ರಹಾಲಯ. ಒರಿಸ್ಸಾದ ಚರಿತ್ರೆ, ಸಂಸ್ಕೃತಿಗಳೆಲ್ಲವನ್ನೂ ಸಾರುವ ಶಿಲ್ಪಗಳು, ಶಾಸನಗಳು, ತಾಮ್ರಪತ್ರಗಳು, ವರ್ಣಚಿತ್ರಗಳು, ಕರಕುಶಲ ವಸ್ತುಗಳು, ಎಲ್ಲವನ್ನೂ ಸಂಶೋಧನಾತ್ಮಕವಾಗಿ ಹಾಗೂ ಕುತೂಹಲದಿಂದ ನೋಡಿ ತಣಿದಿದ್ದಾರೆ. ಏಷ್ಯಾದಲ್ಲಿಯೇ ದೊಡ್ಡದ್ದೆನ್ನಬಹುದಾದ ಹಸ್ತಪ್ರತಿ ಭಂಡಾರದಲ್ಲಿ ಒರಿಯಾದೊಂದಿಗೆ, ತೆಲುಗು, ಬಂಗಾಳಿ, ಪರ್ಷಿಯನ್, ನೇಪಾಲಿ, ಸಂಸ್ಕೃತ ಭಾಷೆಯ 50.000ಕ್ಕೂ ಹೆಚ್ಚಿನ ಪ್ರತಿಗಳನ್ನೂ: ಸಾಹಿತ್ಯ, ತತ್ವಶಾಸ್ತ್ರ, ವೈದ್ಯಶಾಸ್ತ್ರ, ಜ್ಯೋತಿಷ್ಯ, ಯುದ್ಧ- ಮೊದಲಾದ ವಿಷಯ ವೈವಿಧ್ಯಗಳನ್ನೂ ಅಲ್ಲಿನ ಕ್ಯೂರೇಟರ್ ಸಹಕಾರದಿಂದ ಕಣ್ಣಾಡಿಸುವಲ್ಲಿ ಯಶಸ್ವಿಯಾದ ಲೇಖಕಿ "ಸರಿಯಾದ ಕುರ್ಚಿಯಲ್ಲಿ ಸರಿಯಾದ ವ್ಯಕ್ತಿ ಅಪರೂಪಕ್ಕೆ ಇರುವುದನ್ನು ನೋಡಿ ನನಗೆ ಸಂತೋಷವಾಯಿತು" ಎಂದು ಕ್ಯೂರೇಟರ್‌ಗಳ ಅಸಕ್ತಿ ಹಾಗೂ ಸಾಮರ್ಥ್ಯಗಳ ಬಗ್ಗೆಯೂ ವರ್ಣಿಸಿದ್ದಾರೆ.

ದೇವಾಲಯಗಳ ನಾಡಾದ ಒರಿಸ್ಸಾದ ಶಿಲ್ಪದ ಪ್ರಬುದ್ಧತೆಯನ್ನು ಲೇಖಕಿ ರಾಜ್ಯದ ಉದ್ದಗಲಕ್ಕೂ ಅಡ್ಡಾಡಿ ದೇವಾಲಯ ಸಂಸ್ಕೃತಿಯ ಬಗೆಗೆ ನುಡಿರೂಪ ಕೊಡುತ್ತಾರೆ. ಇಲ್ಲಿನ ಪುರಿ ಜಗನ್ನಾಥ ದೇವಾಲಯ, 7ನೇ ಶತಮಾನದ ಪರಶುರಾಮೇಶ್ವರ ದೇವಾಲಯ, ರಾಜರಾಣಿ ದೇವಾಲಯ, ಶ್ರೀಚಕ್ರದ ತಲವಿನ್ಯಾಸದಲ್ಲಿ ರೂಪುಗೊಂಡಿರುವ ಮಂಜುಶ್ರೀ ದೇವಾಲಯ, ಕಳಿಂಗ ಶಿಲ್ಪದ ಶಿಖರವೆನಿಸಿಕೊಂಡ ಲಿಂಗರಾಜ ದೇವಾಲಯ, ಬ್ರಹ್ಮೇಶ್ವರ ದೇವಾಲಯ, ಚೌಸೆಟ್ಟಿ ದೇವಾಲಯ, ಶಿವ ದೇವಾಲಯ, ಗೋಪಿನಾಥ ದೇವಾಲಯ, ಸಕ್ಕಿ ಗೋಪಾಲನಾಥ ದೇವಾಲಯ, ಹರಿಹರಪುರದ ಇಟ್ಟಿಗೆ ದೇವಾಲಯ, ರಾಧಾಮಾಧವ ದೇವಾಲಯ, ರಸಿಕರಾಯ

ದೇವಾಲಯಗಳನ್ನು ನೋಡಿದ ಮೇಲೆ ಈ ದೇವಾಲಯಗಳನ್ನು ಕುರಿತಂತೆ ಅಲ್ಲಲ್ಲಿ ಬಳಕೆಯಲ್ಲಿರುವ ನಂಬಿಕೆಗಳು, ಕಥೆಗಳು, ಐತಿಹ್ಯಗಳನ್ನು ಪ್ರವಾಸ ಕಥನದಲ್ಲಿ ಮನಮುಟ್ಟುವಂತೆ ಬಣ್ಣಿಸಿದ್ದಾರೆ.

ಇನ್ನು ಒರಿಸ್ಸಾ "ದೇವಿಯರ ರಾಜ್ಯ"ವೂ ಹೌದೆಂದು ಗುರುತಿಸುವ ಲೇಖಕಿ ಭುವನೇಶ್ವರಿ, ಘಂಟೇಶ್ವರಿ" ಹೆಜ್ಜೆ ಹೆಜ್ಜೆಗೂ ದೇವಿಯರು ದೇವಿಗೊಬ್ಬಳು ಬಾವುತಿ, ಬಾವುತಿಗೊಂದು ಛತ್ರಿ... ಎಂದು ಗುನುಗನಿಸಿದ್ದಾರೆ. ಸಂಬಲೇಶ್ವರಿ, ಘಂಟೇಶ್ವರಿ ಸೋನೇಶ್ವರಿ, ಕಿಚ್ಚಿಕೇಶ್ವರಿ, ಸೊರೇಶ್ವರಿ ...ಹೀಗೆ ಇಲ್ಲಿ ದೇವಿಯರಿಗೆ ಕೊನೆ ಮೊದಲಿಲ್ಲ ಎನ್ನುತ್ತಾರೆ. ಪ್ರವಾಸದ ಸಂದರ್ಭದಲ್ಲಿ ಬಹಳ ಕಷ್ಟಪಟ್ಟು ಜೋಗಿನಿಯರ ನೆಲೆ ತಲುಪಿದ ದಬ್ಬೆಯವರಿಗೆ 'ಈ ಜೋಗಿನಿಯರನ್ನು ಕಾಣಲೆಂದೇ ಒರಿಸ್ಸಾಕ್ಕೆ ಬಂದರೂ ಅಡ್ಡಿಯಿಲ್ಲ" ಅನ್ನಿಸಿತಂತೆ. "ಒಬ್ಬೊಬ್ಬ ಜೋಗಿನಿಯೂ ಮತ್ತೊಬ್ಬಳಿಗಿಂತ ಭಿನ್ನ ಅವರ ಮೈಮಾಟ, ಮಂದಹಾಸ, ಅಲಂಕಾರ, ಕೇಶಲಂಕಾರದ ವಿವರ, ಹಾವ–ಭಾವಗಳನ್ನು ಅತಿ ಸೂಕ್ಷ್ಮವಾಗಿ ಕಡೆಯಲಾಗಿದೆ... ನಾವು ಜೋಗಿನಿಯರ ಮಂದಹಾಸಕ್ಕೆ ಮರುಳಾಗಿ, ಪ್ರತಿಯಾಗಿ ಮುಗುಳ್ನಗುವಷ್ಟು ಆ ನಗೆಯ ಮಿನುಗು ಜೀವಂತವಾಗಿದೆ... (ಪುಟ. 125) ಎಂದು ಹೇಳುವ ಲೇಖಕಿ ಎರಡಡಿ ಎತ್ತರದ ಅರವತ್ನಾಲ್ಕು ವಿಗ್ರಹಗಳನ್ನು ಕುರಿತು ವರ್ಣಿಸಿದ್ದಾರೆ.

ಲೇಖಕಿ ಒರಿಸ್ಸನ್ನರು ದೇವರನ್ನು ತಮ್ಮಂತೆ ಎಂದು ತಿಳಿದ ಬಗ್ಗೆ, ದೇವರನ್ನು ಅವರು ಉಪಚರಿಸುವ ರೀತಿಗಳಿಗೆ ಅಚ್ಚರಿಪಡುತ್ತಾ, "ಇಲ್ಲಿನ ದೇವತೆಗಳ ವಾರ್ಡರೋಬ್ ಸಾಕಷ್ಟು ಸಾಕಷ್ಟು ವೈವಿಧ್ಯಮಯ" ಎಂದಿದ್ದಾರೆ. ಹಾಗೆಯೇ ದೇವಾನುದೇವತೆಗಳ ಶಯನಗೃಹದ ವೈಭವವನ್ನೂ ಬಣ್ಣಿಸಿದ್ದಾರೆ. ಅದಕ್ಕೆ ಒಂದು ಉದಾಹರಣೆಗಾಗಿ ತುಳಸೀದೇವಿಯ ಆರಾಧನೆಯ ವಿವರವನ್ನಿಲ್ಲಿ ನೋಡಬಹುದು. "ಕೆಲವು ಅಂಗಡಿ, ಹೋಟೆಲುಗಳ ಮುಂದೂ ಒಂದೊಂದು ತುಳಸಿ ಕಟ್ಟೆ ಇದೆ. ತುಳಸಿ ಕಟ್ಟೆಯೆಂದರೆ ಸುಮ್ಮನೆ ಒಂದು ಬೋಳುಕಟ್ಟೆ, ಅದರೊಳ್ಳೊಂದು ಗಿಡವಲ್ಲ. ತುಳಸಿದೇವತೆಯನ್ನೇ ಥರಥರದ ಭಂಗಿಗಳಲ್ಲಿ ಕಡೆದು, ಮಾಡಿ ಆ ವಿಗ್ರಹದ ಮೇಲೆ ತುಳಸಿ ನೆಡುತ್ತಾರೆ. ತುಳಸಿಯಾದರೇನು.. ಸೂರ್ಯ ರಿಯಾಯ್ತಿ ತೋರಿಸುತ್ತಾನೆಯೇ? ಅವಳಿಗೂ ಬಿಸಿಲಿನ ಬೇಗೆ... ಇಲ್ಲಿ ಒರಿಸ್ಸಿಗರ ಪ್ರೀತಿ ನಿಕಷಕ್ಕೆ ಉಜ್ಜಿಕೊಂಡು ಗೆದ್ದಿದೆ. ತುಳಸಿಯ ಮೇಲೆ ಒಂದು ಸಣ್ಣ ಶಾಮಿಯಾದ ಅಥವಾ ಹುಲ್ಲಿನ ಛಾವಣಿ, ಆ ಛಾವಣಿಗೆ ತೂಗುಬಿಟ್ಟ ನೆಲುವಿನಲ್ಲೊಂದು ಮಡಕೆ, ಆ ಮಡಿಕೆಗೊಂದು ತೂತು, ಆ ತೂತಕ್ಕೊಂದು ಹುಲ್ಲುಕಡ್ಡಿ, ಮಡಿಕೆಯಲ್ಲಿ ತುಂಬಿದ ನೀರು ಹನಿಹನಿಯಾಗಿ ತುಳಸಿಯ ಮೇಲೆ ಬೀಳುತ್ತದೆ. ಇದು ಹನಿ ನೀರಾವರಿಯ ಪದ್ಧತಿ ವ್ಯವಸ್ಥೆ ಇರಬಹುದು ಎನ್ನುವ ಲೇಖಕಿ ತುಳಸಿ ಆರಾಧನೆಯ ಮಹತ್ವವನ್ನು ವೈಜ್ಞಾನಿಕ ನೆಲೆಯಲ್ಲಿ ಶೋಧಿಸುತ್ತಾರೆ.

ವಿಜಯಾ ದಬ್ಬೆಯವರು ಒರಿಸ್ಸಾದಲ್ಲಿದ್ದ ಅವಧಿಯಲ್ಲಿ ಬಹಳಷ್ಟು ಕವಿಗಳನ್ನು, ಲೇಖಕರುಗಳನ್ನು ಭೇಟಿ ಮಾಡಿ ಒರಿಯಾ ಸಾಹಿತ್ಯದ ವೈರುಧ್ಯ ವೈವಿಧ್ಯಗಳೆಲ್ಲವನ್ನೂ ತಿಳಿಯಲು ಶ್ರಮಿಸಿರುವ ಪರಿಯಂತೂ ಅನನ್ಯ, ಗ್ಯಾನೇಶ್ವರಮಿಶ್ರಾ, ಪ್ರಸನ್ನಮಿಶ್ರಾ, ಬ್ರಜನಾಥರಥ್, ರಮಾಕಾಂತ್, ಸಿತಾಕಾಂತ, ರಾಜೇಂದ್ರಪಂಡಾ, ಖಿರೋಡ್ ಫರೀಡಾ, ಅರ್ಪಯ ಬೆಹ್ರಾ, ದುರ್ಗಾಚರಣ ಸೋಳಂಗಿ.. ಮೊದಲಾದವರೊಡನೆ ನಡೆಸಿದ ಸಮಾಲೋಚನೆ, ಚರ್ಚಿಸಿದ ಆನೇಕ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ. ಕವಿಗಳಿಗೆ

ಒರಿಸ್ಸಾದಲ್ಲಿ ಒಳ್ಳೆಯ ಸ್ಥಾನಮಾನವಿರುವುದನ್ನು ಗುರುತಿಸಿರುವ ಲೇಖಕಿ ವಿಜಯಾದಬ್ಬೆ ಅಲ್ಲಿ ಅನೇಕ ಚಿಕ್ಕ ಹಾಗೂ ದೊಡ್ಡ 'ಕಬಿಮೇಳ'(ಕವಿಮೇಳ)ದಲ್ಲಿ ಬಿಶೇಷ ಕಬಿ'(ವಿಶೇಷ ಕವಿ)ಯಾಗಿ ಸನ್ಮಾನಿತರೂ ಆಗಿದ್ದಾರೆ

ಲೇಖಕಿ ಒರಿಸ್ಸಾದಲ್ಲಿ ಕುಷ್ಠರೋಗಿಗಳು ಜಾಸ್ತಿ ಇರುವ ರಘುನಾಥಪುರದ ಕುಷ್ಠಾಪುರಕ್ಕೆ ಭೇಟಿ ನೀಡುತ್ತಾರೆ. ಅಲ್ಲಿನ ವ್ಯವಸ್ಥೆಗಳನ್ನು ಆದ್ಯಂತವಾಗಿ ಪರಿಶೀಲಿಸಿ ಅಲ್ಲಿನ ಗೋಶಾಲೆ, ಗಾಡಿ ತಯಾರಿಕೆ, ನೇಕಾರಿಕೆ, ಕೋಳಿಸಾಕಣಿಕೆ, ಚಪ್ಪಲೀ ತಯಾರಿಕೆ, ಕರಕುಶಲ ವಸ್ತುಗಳ ತಯಾರಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕುಷ್ಠರೋಗಿಗಳು ತಮ್ಮ ನೋವನ್ನು ಸ್ವಲ್ಪ ಮಟ್ಟಿಗೆ ಮರೆತಿರುವುದನ್ನು ವಿವರಿಸುತ್ತಾರೆ. ಒರಿಸ್ಸಾ ಸರ್ಕಾರ ಈ ಕೇಂದ್ರಕ್ಕೆ ನೀಡುವ ವಾರ್ಷಿಕ ಅನುದಾನವಾದ ಹದಿನೈದು ಸಾವಿರಗಳ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. "ಇವರೆನ್ನೆಲ್ಲ ವಿಶೇಷ ಜನರೆಂಬಂತೆ ಬಂದು ನೋಡುವುದು ಕ್ರೂರವಲ್ಲವೆ" ಎಂದುಕೊಳ್ಳುವ ಲೇಖಕಿ ಹೋಗದೆ, ನೋಡದೆ, ಬರೆಯದೆ ಇದ್ದರೆ ನಮ್ಮ ಸ್ಪಂದನ ಸಂವಹನಗೊಳ್ಳುವುದಾದರೂ ಹೇಗೆ? (ಪು.56) ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತಾರೆ. ಇದಾದ ನಂತರದ ದಿನಗಳಲ್ಲಿ ಬುಡಕಟ್ಟು ಜನಾಂಗದವರನ್ನು ಲೇಖಕಿ ಭೇಟಿ ಮಾಡುತ್ತಾರೆ. ಸಂಸ್ಕೃತಿಯ ಮೂಲ ಬೇರುಗಳು ಬುಡಕಟ್ಟು ಜನಾಂಗದವರಲ್ಲಿ ತುಂಬಾ ಚೆನ್ನಾಗಿ ವ್ಯಕ್ತವಾಗುತ್ತವೆಂಬ ನಂಬಿಕೆಯಿರುವ ಇವರು ಒರಿಸ್ಸಾದ ಪರಿಶಿಷ್ಟ ಗುಂಪು ಹಾಗೂ ಬುಡಕಟ್ಟು ಜನಾಂಗದವರನ್ನು ತುಂಬಾ ಹತ್ತಿರದಿಂದ ನೋಡಿ ಮಾತನಾಡಿಸಿ ಅವರತನವನ್ನು ಅರಿಯುವಲ್ಲಿ ಸಫಲರಾಗಿದ್ದಾರೆ. ಒರಿಸ್ಸಾ ರಾಜ್ಯದ ಸುಮಾರು ಎರಡು ಮಿಲಿಯನ್ ಗಿರಿಜನರು ಐವತ್ತೆಂಟು ಪರಿಶಿಷ್ಟ ಗುಂಪುಗಳ, ವಿಶಿಷ್ಟ ಸಂಸ್ಕೃತಿಗಳ ಸೊಬಗನ್ನು ಒರಿಸ್ಸಾಕ್ಕೆ ಕೊಟ್ಟಿದ್ದಾರೆ... ಎಂಬುದನ್ನು ಒರಿಸ್ಸಾಕ್ಕೆ ಹೋಗುವ ಮೊದಲೇ ಅರಿತುಕೊಂಡಿದ್ದು... ಈ ಗಿರಿವಾಸಿ ಸಂಸ್ಕೃತಿಗಳನ್ನು ತಿಳಿಯುವುದೇ ಇವರ ಮುಖ್ಯ ಉದ್ದೇಶವಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಆದರೆ ಗಿರಿಜನರನ್ನು ತೀರಾ ಹತ್ತಿರದಿಂದ ಕಾಣಲು ಭಾಷೆಯ ತೊಡಕು, ಸೂಕ್ತ ಮಾರ್ಗದರ್ಶನದ ಕೊರತೆ ಇತ್ಯಾದಿಗಳು ಲೇಖಕಿಯನ್ನು ಕಾಡಿದ್ದವು. ಆದರೆ ಬಾರಿಪದದಲ್ಲಿ ಸಂತಾಲಿ ಗುಂಪಿಗೇ ಸೇರಿದ ಟಾಕೂರ್ ಅವರು ಟಾಸ್ಕಿ ಎಂಬ ಸಂತಾಲಿಗಳ ಹಳ್ಳಿಗೆ ಕರೆದೊಯ್ದು ಲೇಖಕಿಯ ಮಹಾದಾಸೆಗೆ ಉತ್ಸಾಹದ ಕೋಡು ಮೂಡಿಸಿದ್ದರು ಎಂಬುದನ್ನು ಸ್ಮರಿಸುತ್ತಾರೆ.

ವಿಜಯಾ ದಬ್ಬೆಯವರು ಬಾರಿಪದ ನಗರದಲ್ಲಿ ಒರಿಸ್ಸಾದ ವನಸಿರಿಯನ್ನು ಮನದಣಿಯೇ ಸವಿದು, ಅಲ್ಲಿನ ಜನರ ಅತಿ ನಿಧಾನ ಪ್ರಕೃತಿಯಿಂದ ಹಲವು ತೊಂದರೆಗಳನ್ನೂ ಅನುಭವಿಸಿರುವುದನ್ನು ಹೇಳಿಕೊಳ್ಳುತ್ತಾರೆ. ಕೃಷ್ಣಚಂದ್ರಪುರದ ಚರ್ಚ್ ವಸತಿಶಾಲೆಗಳನ್ನು ಏಕಾಂಗಿಯಾಗಿಯೇ ಹೋಗಿ ವೀಕ್ಷಿಸುತ್ತಾ, ಲೇಖಕಿ ಭಾಷೆ ಬರದೆ ಪರದಾಡಿದ ಆನೇಕ ಸಂದರ್ಭಗಳನ್ನು ಉಲ್ಲೇಖಿಸಿದ್ದಾರೆ. ಇನ್ನು ಒರಿಸ್ಸಾದ ಆಹಾರ ಪದ್ಧತಿ ಬಗೆಗೂ ವಿಚಾರ ಮಾಡುವ ವಿಜಯಾದಬ್ಬೆಯವರು, ಇಲ್ಲಿ "ಗಂಜಿ ಊಟವೇ ಸಾಮಾನ್ಯ" ಎಂದು ಹೇಳುತ್ತಾರೆ. ರಾತ್ರಿಯೇ ಅನ್ನವನ್ನು ನೀರಿನಲ್ಲಿ ನೆನಸಿ, ಬೆಳಿಗ್ಗೆ ಆ ಅನ್ನಕ್ಕೆ ಮೊಸರು ಅಥವಾ ಮಜ್ಜಿಗೆ, ಚಿಟಕಿ ಉಪ್ಪು ಹಾಕಿ ಮಾಡುವ 'ಫಕಾಲ' ಬೇಸಿಗೆಯಲ್ಲಿ ಬಹುಮಾನ್ಯ ಎನ್ನುತ್ತಾರೆ. ಉಳಿದಂತೆ ಚಪಾತಿ ಪಲ್ಯ ಇರುತ್ತದೆಯಾದರೂ. ಹೋಟೆಲುಗಳಲ್ಲಿ ಸಸ್ಯಾಹಾರ ಪ್ರತ್ಯೇಕವಾಗಿಯೇ ಸಿಕ್ಕುವುದು

ಅಪರೂಪ ಎಂಬಂಶವೂ ಲೇಖಕಿಯ ಅನುಭವಕ್ಕೆ ಬಂದಿದೆ. ಒರಿಯನ್ನರ ಸೌಮ್ಯ, ಪ್ರೇಮಲ ಸ್ವಭಾವವನ್ನು ಚಿತ್ರಿಸುವ ವಿಜಯಾ ದಬ್ಬೆ ಅವರ ಸಾವಧಾನ ಪ್ರವೃತ್ತಿಯನ್ನು ನಗೆಯುಕ್ಕುವಂತೆ ನಿರೂಪಿಸಿದ್ದಾರೆ.

ವಿಜಯಾ ದಬ್ಬೆಯವರು ಒರಿಸ್ಸಾದ ಪುಷ್ಪಿ, ಲೆಂಕಾ, ಗಿರಿಬಾಲು, ಕೈಲಾಸ ಖುಷಿ ರೋಂಜನ್, ಅರುಣ್, ಮನೋರಮಾ ಬ್ರಜನಾಥರಥ್, ರಮಾಕಾಂತ, ಶ್ರೀಕಾಂತಬೆಹ್ರಾ ಶ್ವೇತಾ, ನಿಮಿಯಾ ಪಾಂಡ. ರಿಕ್ಷಾ ಡ್ರೈವರ್ ಮುನ್ನಾ, ಇನ್ನು ಮೊದಲಾದ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿ 'ಅಮಿಅಸ್ಸೂ' (ನಾನು ಬರುವೆ) ಎಂದು ಮಾತುಕೊಟ್ಟು ಕತ್ತಲೇಶ್ವರಿಯ ಮಡಿಲಿನಲ್ಲಿದ್ದ 'ಉರಿಯ ಚಿಗುರ ಉತ್ಕಲೆ'ಯನ್ನು ಬೀಳ್ಕೊಳ್ಳುತ್ತಾರೆ.

ಪ್ರವಾಸ ಕಥನದಲ್ಲಿ ಲೇಖಕಿ ಕೊಡುವ ವಿವರಗಳಲ್ಲಿ ಒರಿಯನ್ನರ ಜೀವನ ಕಲೆ ಶಿಲ್ಪ, ದೇವಾಲಯಗಳು, ಚರಿತ್ರೆ ಎಲ್ಲವೂ ವ್ಯಕ್ತವಾಗಿರುವಂತೆ, ಕರ್ನಾಟಕ ಇಂದು ಎದುರಿಸುತ್ತಿರುವ ಹಲವು ಸಮಸ್ಯೆಗಳು ಒರಿಸ್ಸಾದಲ್ಲಿ ಇರುವುದು ಮನದಟ್ಟಾಗುತ್ತದೆ. ಇಂಗ್ಲಿಷ್ ಪ್ರಚಾರ, ಇಂಗ್ಲಿಷ್ ಮಾಧ್ಯಮದ ಹೆಚ್ಚಳ, ಒರಿಯಾ ಶಾಲೆಗಳ ದುಃಸ್ಥಿತಿ, ಹೊಸ ಸವಾಲುಗಳನ್ನು ಎದುರಿಸಲು ಭಾಷೆಯನ್ನು ಸಿದ್ಧಗೊಳಿಸಿಕೊಳ್ಳುವಲ್ಲಿನ ಹಿಂದುಳಿತ, ಆರ್ಥಿಕ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡು ಹೊರಗಿನ ಅವಕಾಶಗಳಿಗೆ ಕಾಯುತ್ತಿರುವ ಯುವಜನತೆ. ಈ ಎಲ್ಲವೂ ಪರಿಚಿತ ಸಂದರ್ಭಗಳೇ ಎಂದೆನಿಸುತ್ತದೆ. ಒಟ್ಟಾರೆಯಾಗಿ ಪ್ರವಾಸ ಕಥನದಲ್ಲಿರುವ ವಿಷಯ ಶ್ರೀಮಂತಿಕೆ, ವೈವಿಧ್ಯತೆ. ವ್ಯಾಪಕತೆಗಳಿಂದ ವಿಜಯಾ ದಬ್ಬೆಯವರು ಶ್ರೇಷ್ಠ ಸಾಂಸ್ಕೃತಿಕ ಮಾನವಶಾಸ್ತ್ರಜ್ಞೆ ಎಂಬುದು ವೇದ್ಯವಾಗುವುದರ ಜೊತೆಗೆ, ಈ ಕೃತಿಯ ಓದಿನಿಂದ ಒರಿಸ್ಸಾವನ್ನು ಸುತ್ತಾಡಿ ಬಂದ ಅನುಭವವೂ ಆಗುತ್ತದೆಯೆಂದರೆ ಅತಿಶಯೋಕ್ತಿಯಾಗಲಾರದು.

ಪರಾಮರ್ಶನ ಗ್ರಂಥಗಳು

1. ಉರಿಯ ಚಿಗುರ ಉತ್ಕಲೆ ಡಾ. ವಿಜಯಾದಬ್ಬೆ –1999
2. ಕೇರಳದಲ್ಲಿ ಹದಿನೈದು ದಿನಗಳು–ಫಕೀರ ಮಹಮ್ಮದ್ ಕಟ್ಪಾಡಿ
3. ಪಂಪಾಯಾತ್ರೆ–ವಿ.ಸೀತಾರಾಮಯ್ಯ

❖❖❖

ಕತ್ತಲಿನ ಅಂಧತೆಯಲಿ
ಇದ್ದ ಒಂದು ಕವಿತೆಗೆ
ಕೂತು ಕಾಯುತಿದ್ದೆ ನಾನು
ನೋತು ಬೆಳಕಿನೊರತೆಗೆ

ಸ್ವಧರ್ಮ, ಮನಃಸಾಕ್ಷಿ ಮತ್ತು 'ಧರ್ಮಯುದ್ಧ'ವೆಂಬ ಕಾದಂಬರಿ

ಕೃಷ್ಣಪ್ರಕಾಶ ಉಳಿತ್ತಾಯ, ಈಶಾವಾಸ್ಯ
ಪೆರ್ಮಂಕಿ, ಮಂಗಳೂರು – 574145

ಬಿಡಿಮನುಷ್ಯನ ಅಂತಃಸ್ಸಾಕ್ಷಿ ಎಲ್ಲಾ ಶಾಸನಕ್ಕಿಂತಲೂ ದೊಡ್ಡದು – ಡಿವಿಜಿ.

'ಧರ್ಮಯುದ್ಧ' ಶೀರ್ಷಿಕೆ ಪ್ರಸಿದ್ಧವೂ 'ಚಾಲ್ತಿ'ಯಲ್ಲಿರುವುದು ಎಂದು ಯೋಚಿಸಿ ಅದಕ್ಕಿರುವ ಜನಪ್ರಿಯ ಅರ್ಥವಾದ ಎರಡು ಮತಗಳ ನಡುವಿನ ಕಲಹವೆಂದು ಕಾದಂಬರಿಯನ್ನು ಓದಲು ತೊಡಗಿದರೆ ಆಗ ನಮ್ಮ ಪೂರ್ವಗ್ರಹಿಕೆ ಕೊನೆಗೆ ಉಳಿಯದು. ಕಾದಂಬರಿಯಲ್ಲಿ ಹೇಳಿದ 'ಧರ್ಮಯುದ್ಧ' ನಮ್ಮ ಮನೆಗಳಲ್ಲಿ, ಊರುಗಳಲ್ಲಿ ಹೆಚ್ಚೇಕೆ ಮನಸ್ಸಿನಲ್ಲೇ ಆಗುವ ಭಾವಗಳ ತಾಕಲಾಟವಾಗಿ ಓದಿದ ಮೇಲೆ ಉಳಿಯುತ್ತದೆ. 'ಸೀತಾಪುರ'ವೆಂಬ ಊರು ಇಂಥ ತಲ್ಲಣಗಳಿಗೆ ದೇಶ–ಕಾಲದ ಚೌಕಟ್ಟನ್ನು ಒದಗಿಸಿದೆ ಎನ್ನಬಹುದು. 'ಸೀತಾಪುರ' ಎನ್ನುವುದು 'ಸಿಲೋನೂ' ಆಗಬಹುದು, 'ಸಾಯನ್' ಆಗಬಹುದು ಅಥವಾ ಪ್ರಪಂಚದ ಯಾವ ಮೂಲೆಯ ಊರಾಗಿಯೂ ಪರಿವರ್ತಿತವಾಗಬಹುದಾದ ಸಾಧ್ಯತೆಯ ದ್ರವ್ಯವೇ ಕಾದಂಬರಿಯ ಮೂಲಧಾತು. ಶಾಸ್ತ್ರವನ್ನು ಕಲೆಯಾಗಿ ಕಾಣಬೇಕಾದರೆ ಡಿವಿಜಿ ರಾಜ್ಯಶಾಸ್ತ್ರವನ್ನು ವಿವೇಚಿಸುತ್ತಾ ಹೇಳಿದ ಮಾತಾದ 'ಸಕಲ ಹೃದಯ ಸಹಾನುಭೂತಿ' ಬೇಕೇ ಬೇಕು. ಈ ಕಾದಂಬರಿಯಲ್ಲಿ ಕಾದಂಬರಿಕಾರನ ಸಕಲ ಹೃದಯ ಸಹಾನುಭೂತಿ ಕಾಣುತ್ತದೆ.

ಸೂರಪ್ಪನ ಮನೆಯ ಬಾವಿಗೆ ಬಿದ್ದು ಸತ್ತ ಕರಿಬೆಕ್ಕುಗಳೇ ಕಾರಣವಾಗಿ ಆರಂಭವಾಗುವ ಆತನ ಆತಂಕಗಳು ನಂಬಿಕೆ, ಧಾರ್ಮಿಕ ಚೌಕಟ್ಟು, ಜ್ಯೋತಿಷ್ಯ ಎಂಬ ನಮ್ಮೊಡನೆಯೇ ಇರುವ ಅಗೋಚರವಾದ ಜಾಲ ತನ್ನನ್ನು ತಾನು ಮನಃಸ್ಸಮಾಧಾನದ ಉದ್ದೇಶಕ್ಕಾಗಿ ಒಡ್ಡಿಕೊಂಡು, ಕೇಳು ಪಂಡಿತನೆಂಬ ಸೀತಾಪುರದ ಕೇರಳದ ಜ್ಯೋತಿಷಿಯ ಬಳಿ 'ಬಲಿಮೆ'ಗೆ ಅಂದರೆ ಫಲಜ್ಯೋತಿಷ್ಯ ಕೇಳಲು ಬಂದವನಿಗೆ ದೊರಕುವ ಪರಿಹಾರ 'ಪಂಜುರ್ಲಿ' ದೈವಕ್ಕೆ ದೈವಸ್ಥಾನ ನಿರ್ಮಾಣವಾಗಬೇಕು ಎಂಬುದು. ಸ್ವಂತದ್ದಾದ ಕ್ಲೇಷ ಊರಿನದ್ದಾಗಿ ಬೆಳೆಯುತ್ತದೆ. ಆಚರಿಸುವ ಧರ್ಮ ರಾಜಕೀಯ ಮಹತ್ವಾಕಾಂಕ್ಷೆಗೆ ಊರುಗೋಲಾಗಿ ಪರಿವರ್ತಿತವಾಗುತ್ತದೆ. ಜಾನಪದ ನಂಬಿಕೆ ಆಚರಣೆಗಳು ವೈದಿಕ ಆಚರಣೆಗಳ ಜತೆಗೆ ಅನಿವಾರ್ಯವೋ ಅಥವಾ ವ್ಯಾವಹಾರಿಕವೋ ಎಂಬಂತೆ ಬೆರೆಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಹೀಗೆ 'ಧರ್ಮಯುದ್ಧ' ಎಂಬುದು ಧರ್ಮದೊಳಗಿನ ಯುದ್ಧವಾಗಿಯೂ (ಜಾನಪದ್ಧ ವೈದಿಕ–ಶ್ರೀಕಾಂತ ಭಟ್ಟರ ಮಾತುಗಳಲ್ಲಿ, ಕೇಳುಪಂಡಿತರ ಮಾತು ಮತ್ತು ಪೊದುವಾಳ್ ಮಾತು), ಸ್ವಧರ್ಮವಾಗಿ ಯಾವುದನ್ನು ಆಯಬೇಕೆಂಬ ಮನದ ಯುದ್ಧವಾಗಿಯೂ (ನಿರಾಕಾರ ತತ್ತ್ವ ಸಾಕಾರ ತತ್ತ್ವ–ಕೇಳುಪಂಡಿತ ಮತ್ತು ಸ್ವಾಮಿ ಮಾಸ್ಟ್ರು); ರಾಜಕಾರಣ ಹಾಗು ಧರ್ಮಕಾರಣ ಇವೆರಡರೊಳಗಿನ ತಾಕಲಾಟಗಳಿಂದ ಅತ್ಯಂತ ಧ್ವನಿಪೂರ್ಣವಾಗಿ ಕಾದಂಬರಿಯನ್ನು ಚಿತ್ರಿಸಿದ್ದಾರೆ. ಇಲ್ಲಿ ಅದ್ವೈತ, ಬಸವ, ಆಗಮ, ಜಾನಪದ ತತ್ತ್ವಗಳ

ವಿಕೃತಿಗಳು ಪಾತ್ರಗಳ ಮೂಲಕ ಕಲೆಯ ಹದದೊಡನೆ ಚಿತ್ರಿಸಿದ್ದಾರೆ.

ಕಾದಂಬರಿಯ ವಸ್ತು ಅತ್ಯಂತ ಸೂಕ್ಷ್ಮವಾದದ್ದು ಮತ್ತು ಕಾದಂಬರಿಕಾರನ ಸಾಕ್ಷಿಪ್ರಜ್ಞೆಯಿಂದೊಡಗೂಡಿದ ಕಸುಬುಗಾರಿಕೆ ಇಲ್ಲಿ ಎದ್ದುತೋರುತ್ತದೆ. ಜನಪದವೋ, ವೈದಿಕವೋ, ನಾಸ್ತಿಕತೆಯೋ ಅಥವಾ ಆಸ್ತಿಕ್ಯವೋ ಇವೆಲ್ಲದರ ಜತೆಗೆ ನಮ್ಮ ಬದುಕಿರುವಾಗ ಆ ಶ್ರದ್ಧಾ ಪ್ರವಾಹದ ಜತೆಯಲ್ಲಿ ಸಾಗದಿರುವುದು ಅಸಾಧ್ಯವೆಂಬುದನ್ನು ವೆಂಕಪ್ಪ ಮಾಸ್ತ್ರು ಮತ್ತು ಜಯರಾಮ ಹೆಗ್ಡೆಯವರನ್ನೇ ರೂಪಕವಾಗಿ ಕಾದಂಬರಿಕಾರರು ಕಟ್ಟಿಕೊಟ್ಟಿದ್ದಾರೆ– ಇದು ಮೊಗಸಾಲೆಯವರು ಸಾಕ್ಷಿಯಾಗಿ ಪಾತ್ರಗಳನ್ನು ಕಂಡ ಬಗೆಗೆ ನಿದರ್ಶನ. ತಾವೆಷ್ಟು ವೈಚಾರಿಕತೆಯಿಂದ ಕೂಡಿದ್ದರೂ ಸಮಷ್ಟಿಯಲ್ಲಿ 'ಸೀತಾಪುರ'ದ ಮಕ್ಕಳಾಗಿ ಹೆಗ್ಡೆಯವರನ್ನು, ವೆಂಕಪ್ಪ ಮಾಸ್ತ್ರನ್ನು ಚಿತ್ರಿಸಿದ್ದು ಗಮನಿಸಬೇಕಾದದ್ದು.

ಸುಕ್ಕನ(ಸುಕುಮಾರನ್) ಕುಮ್ಮಕ್ಕಿನಿಂದ ಕರಿಬೆಕ್ಕುಗಳನ್ನು ಸೂರಪ್ಪನ ಮನೆಯ ಬಾವಿಗೆ ಹಾಕಿದ ರಾಗುವಿನ ಪಾತ್ರ ದೊಡ್ಡ ಮೌಲ್ಯವನ್ನು ತೋರುತ್ತದೆ. ಕಾದಂಬರಿಯ ಆರಂಭದಲ್ಲಿ ಸುಕ್ಕನನ್ನು ಸಂತೋಷಗೊಳಿಸುವ ಆತನ ಚೇಲನಂತೆ ಕಂಡರೂ ಕಾದಂಬರಿ ಬೆಳೆಯುತ್ತಾ ಹೋದಾಗ ಪಾತ್ರದ ಗಾಂಭೀರ್ಯ ಕಾದಂಬರಿಯ ಕೇಂದ್ರ ಪ್ರಜ್ಞೆಯ ಪ್ರತೀಕದಂತೆ ಪ್ರಕಾಶವಾಗುತ್ತದೆ.

ರಾಗುವಿಗೆ ಕನಸಲ್ಲಿ ಪಂಜುರ್ಲಿ ದೈವ ಬಂದು–

"ನೀನು ಮತ್ತೆ ಮೂರುಬೆಕ್ಕನ್ನು ಸೂರಪ್ಪನ ಬಾವಿಗೆ ಹಾಕಿ, ನಾನು ಎದ್ದು ನಿಂತು ಕಾರಣಿಕ ತೋರಲು ಕಾರಣನಾಗಿರುವೆ. ನಿನಗೆ ಇಂಥಾ ಬುದ್ಧಿಯನ್ನು ಕೊಟ್ಟದ್ದು ನಾನೇ, ಇದಕ್ಕಾಗಿ ನಾನು ನಿನ್ನ ಮತ್ತು ಸುಕ್ಕಣ್ಣನ ಮನಸ್ಸಿನಲ್ಲಿ ಬಂದೆ. ಅವನ ಮೂಲಕ ಹೀಗೆ ಮಾಡು ಎಂದು ಆಜ್ಞಾಪಿಸಿದೆ..." ಎಂದು ಹೇಳಿದರೂ ಮುಂದೆ ತನ್ನ ಅಂತಃಸ್ಸಾಕ್ಷಿಯ ಪ್ರೇರಣೆಯಂತೆ ತಾನು ಮಾಡಿದ್ದು ಅಪರಾಧವಾಯ್ತು ಎಂದೂ 'ಪಂಜುರ್ಲಿ ಗುಡ್ಡೆ'ಯಲ್ಲಿ ಯಾವ ದೈವವೂ ಇಲ್ಲವೆಂದು ಕಾಯೇನ ವಾಚಾ ಮನಸಾ ನಂಬಿ ಊರವರ ದೃಷ್ಟಿಯಲ್ಲಿ ಹುಚ್ಚನಂತೆ ಕಾಣುವ ಈ ಪಾತ್ರದ ಕಟ್ಟಕಡೆಯ ಮೌಲ್ಯಮರ್ಯಾದೆ ಮನಮುಟ್ಟುವಂಥದ್ದು.

"ರಾಗಣ್ಣ ಬಡಕ್ಕನೆ ಎದ್ದು 'ಏನಾಗಿದೆ ನಿನಗೆ? ನನ್ನನ್ನು ನನ್ನ ಸಂಸಾರವನ್ನು ಮುಟ್ಟುವ ಧೈರ್ಯ ಆ ಪಂಜುರ್ಲಿಗೆ ಖಂಡಿತ ಇಲ್ಲ!' ಎಂದು ಚೀರಿದ" ಎಂದು ತನ್ನ ಹೆಂಡತಿ ಕೊರೊಪ್ಪೊಳುವಿಗೆ ಹೇಳುವ ರಾಗುವಿನ ಧೃತಿ ಮುಖ್ಯವಾಗುತ್ತದೆ.

ಕಾದಂಬರಿಕಾರರು ದಕ್ಷಿಣಕನ್ನಡದ ಜಾನಪದ ನಂಬಿಕೆ, ಆಚರಣೆ ಮತ್ತು ನಡವಳಿಕೆಗಳನ್ನು ಕಾದಂಬರಿ ನಿರ್ಮಾಣದ ಸಮಯದಲ್ಲಿ ಬೇಕಾದ ಪಾಕಕ್ಕೆ ಸಮುಚಿತವಾಗಿ ಬಳಸಿಕೊಂಡಿದ್ದಾರೆ. ಕಟ್ಟದ ಕೋಳಿಗಳ ವಿವರ, ಅವುಗಳ ನಡವಳಿಕೆ, ಓಲೆಬೆಲ್ಲದ ತಯಾರಿಕೆ, ಕಳ್ಳ ಭಟ್ಟಿಯ ತಯಾರಿಕೆ ಹೀಗೆ ಅನೇಕ ಆಸಕ್ತಿದಾಯಕ ವಿವರಗಳು ಇಲ್ಲಿವೆ.

ಸಾಮಾಜಿಕವಾಗಿ ವ್ಯಕ್ತಿಯೊಬ್ಬ ಈಗಾಗಲೇ ಗಣ್ಯನಾಗಿದ್ದು ಆತನ ಮತ್ತು ಆತನ ಮನೆಯವರ ನಡವಳಿಕೆ ಹಾಗು ದಿಢೀರನೆ ಗಣ್ಯನಾದವನ ಮನೆಯವರ ನಡವಳಿಕೆಯಲ್ಲಿರುವ ವ್ಯತ್ಯಾಸಗಳನ್ನೂ ಸೂಕ್ಷ್ಮ ದೃಷ್ಟಿಯಲ್ಲಿ ಅವಲೋಕಿಸಿರುವುದು ಕಾದಂಬರಿಯಲ್ಲಿ ಬಂದಿರುವುದು ಗಮನೀಯ. ಸೇಸಪ್ಪ ಸೀತಾಪುರ ಗ್ರಾಮ

ಪಂಚಾಯತ್ ಅಧ್ಯಕ್ಷನಾದದ್ದು ಹೆಗ್ಡೆಯವರ ಬೆಂಬಲದಿಂದ. ಸೂರಪ್ಪ, ಕೇಳು ಪಂಡಿತ ಮತ್ತು ಇತರರ ಜತೆಗೂಡಿ ಸೇಸಪ್ಪನ ಮನೆಗೆ ಪಂಜುರ್ಲಿ ದೈವದ ಗುಡಿಯ ವಿಚಾರವಾಗಿ ಮಾತನಾಡಲು ಬರುವ ಸಮಯದಲ್ಲಿ ಅತಿಥಿ ಉಪಚಾರದ ಸಮಯದಲ್ಲಿ ಸೇಸಪ್ಪನ ಹೆಂಡತಿ "ಮನೆಯವರಿಗೆ ಬೇಕಾದಷ್ಟು ಹಾಲನ್ನು ತೆಗೆದಿಟ್ಟು ಉಳಿದದ್ದನ್ನು ಹೋಟೆಲಿಗೆ ಕೊಟ್ಟಾಗಿದೆ" ಎನ್ನುವುದರಲ್ಲೂ ಮತ್ತು "ಲಿಂಬೆ ಗಿಡದಲ್ಲಿದೆ, ಸೂರಪ್ಪ ತಂದು ಕೊಟ್ಟಾನು" ಎಂದು ಸೇಸಪ್ಪ ಹೇಳುವಲ್ಲೂ; ಹೆಗ್ಡೆಯವರ ಮಡದಿ ಕೊಡುವ ಅತಿಥಿ ಉಪಚಾರ ಕ್ರಮವನ್ನೂ ಸೂಕ್ಷ್ಮವಾಗಿ ಅವಲೋಕನಮಾಡಿದ ಕ್ರಮ ಹೃದ್ಯವಾದದ್ದು. ಇದು ಸಾರ್ವತ್ರಿಕವೆಂದೇನೂ ಅಲ್ಲ. ಆದರೆ ಕಾದಂಬರಿಕಾರ ಒಂದು ಕಲಾಕೃತಿಯನ್ನು ನಿರ್ಮಾಣಮಾಡುವ ಸಂದರ್ಭ ಇದ್ದ ಸೂಕ್ಷ್ಮ ದೃಷ್ಟಿ ಮುಖ್ಯವಾದದ್ದು.

ಕಾದಂಬರಿಯುದ್ದಕ್ಕೂ ದಕ್ಷಿಣಕನ್ನಡದ್ದೇ ವಿಶಿಷ್ಟವಾದ ವಾಗ್ರೂಢಿಗಳು ತುಂಬಿದ್ದು ಓದುವಾಗ ಖುಷಿಕೊಡುತ್ತದೆ– "ತುಂಬಾ ಅಂದ್ರೆ ತುಂಬಾ ಒಳ್ಳೆಯ ಮನುಷ್ಯ, ಮತ್ತೇಽ.." (ಮತ್ತೇನು ಸಮಾಚಾರ ಎಂದು); ತಂಬಿಲ, ತಮ್ಮನ, ವರಾಡುವಂತಿಗೆ ಮುಂತಾದವುಗಳು.

ಬಿ. ಜನಾರ್ದನ ಭಟ್ ಮತ್ತು ಮೊಗಸಾಲೆ ಇವರು ದ.ಕದ ವಾಗ್ರೂಢಿಗಳನ್ನು ಕಲಾತ್ಮಕವಾಗಿ ಬಳಸಿಕೊಂಡು ಸಾಹಿತ್ಯ ಕೃಷಿ ಮಾಡುತ್ತಾರೆಂಬುದು ಆನುಷಂಗಿಕವಾಗಿ ಇಲ್ಲಿ ಗಮನೀಯ.

ಒಂದೇ ಶಬ್ದವನ್ನು (ಕವಡೆ) ಅದರ ಬಳಕೆಯಲ್ಲಿ ಭಿನ್ನ ಅರ್ಥ ಬರುವಂತೆ ಬಳಸಿದುದು–

'ಮೊನ್ನೆಯೇ ನಾನು ಕೇಳುಪಂಡಿತರಲ್ಲಿ ಹೋಗಿ ಕವಡೆ ಪ್ರಶ್ನೆ (ಜ್ಯೋತಿಷ್ಯ) ಕೇಳಿ ಬನ್ನಿ ಎಂದಿದ್ದೆ. ನನ್ನ ಮಾತಿಗೆ ಈ ಮನೆಯಲ್ಲಿ ಬೆಲೆ ಏನುಂಟು? ಕವಡೆ ಕಿಮ್ಮತ್ತೂ ಇಲ್ಲ.'

ಕಾದಂಬರಿಯ ಕೊನೆಗೆ ಪಂಜುರ್ಲಿ ದೈವದ ಬ್ರಹ್ಮಕಲಶೋತ್ಸವದ ಆಮಂತ್ರಣ ಪತ್ರಿಕೆಯನ್ನು ಓದುವಾಗ ಜಾನಪದ– ವೈದಿಕ ಮಿಶ್ರಣದ ಅಸಂಗತ ಚಿತ್ರಣ ಮೂಡಿ ನಗುಬರುತ್ತದೆ. ಜತೆಗೆ ನಮ್ಮ ಭಾರತೀಯ ಸಮಾಜದ ಒಳಗೊಳ್ಳುವಿಕೆ ಎಂಬ ಸಂವೇದನೆಯೂ ವಿಸ್ಮಯಾವಹ. ಆದರೂ ಸಮಾಜ – ಬದುಕು ಇವೆಲ್ಲಾ ಅಸಂಗತ ವಿಚಾರ ಸಂದರ್ಭಗಳನ್ನು ಒಳಗೊಂಡು ಮುಂದುವರಿಯುತ್ತಿದೆಯಲ್ಲಾ ಎಂಬ ಅಚ್ಚರಿಯೂ ಮೂಡುತ್ತದೆ.

ಕಾದಂಬರಿಯ ಅಂತ್ಯ ಸುಕ್ಕ ಮತ್ತು ಶೇಷಪ್ಪರ ರಾಜಕೀಯ ಮಹತ್ವಾಕಾಂಕ್ಷೆಯ ಹಿನ್ನೆಲೆಯ ಜಗಳದೊಂದಿಗೆ ಕೊನೆಯಾಗುತ್ತದೆ. ಮುಖ್ಯ ಕಲಶಾಭಿಷೇಕದ ಕುಂಭವನ್ನು ಯಾರು ಪುರೋಹಿತರಿಗೆ/ ತಂತ್ರಿಗಳಿಗೆ ಕೊಡಬೇಕು ಅನ್ನುವ ವಿಚಾರದಲ್ಲಿ ವೈಮನಸ್ಯ ಉಂಟಾಗಿ ಪಂಜುರ್ಲಿ ದೈವಕ್ಕೆ ಕಲಶಾಭಿಷೇಕ ನಡೆಯದೇ ಹೋಗುತ್ತದೆ. ರಾಗು ಹೆಜ್ಜೇನಿನ ಗೂಡಿಗೆ ಬಿಸುಟ ಕಲ್ಲಿನ ಕಾರಣ ಎಲ್ಲರಿಗೂ ಜೇನುಹುಳ ಕಡಿಯುವಲ್ಲಿ ಪರ್ಯವಸಾನವಾಗುತ್ತದೆ.

ಈ ಪ್ರಸಂಗ ಸೃಷ್ಟಿಸದೆಯೇ ಪಂಜುರ್ಲಿ ದೈವದ ಪ್ರತಿಷ್ಠೆ ಆಗಿರುತ್ತಿದ್ರೂ ಕಾದಂಬರಿ ಓದುಗನಿಗೆ ಬಿಟ್ಟುಕೊಡುವ ಧ್ವನಿ ಹಾಗೇ ಇರುತ್ತಿತ್ತು.

❖❖❖

ಅಲ್ಲಮನ ಅನುಭಾವ

ಡಾ. ಎ.ಸಿ. ವಾಲಿ

ಡೀನ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಧಾರವಾಡ

ಪ್ರವೇಶ: 'ಅನುಭಾವ' ಎಂಬುದಕ್ಕೆ ಶರಣರು ಅಂತರಂಗದಲ್ಲಿ ಸ್ಥಾಪಿತವಾದ ಪರಮಾತ್ಮನ ಅನುಭೂತಿ ತನ್ನ ತಾ ತಿಳಿಯಲು ಪಡೆದ ಆತ್ಮಾನುಭೂತಿ, ಶಿವ ಹಾಗೂ ಲಿಂಗದ ಕುರಿತ ಪರಮಜ್ಞಾನ, ಆತ್ಮವಿದ್ಯೆ ಎಂದಿದ್ದಾರೆ. ಅನುಭಾವ ಪದಕ್ಕೆ Mysticism ಎಂದು ಆಂಗ್ಲಭಾಷೆಯಲ್ಲಿ ಹೇಳಿದ್ದಾರೆ. 'ನಿಕಟವಾಗಿರು' ಎಂಬ ಅರ್ಥಕೊಡುವ ಈ ಪದ ಗ್ರೀಕ್ ಮೂಲದ್ದಾಗಿದೆ. ರಹಸ್ಯಜ್ಞಾನ, ಪವಿತ್ರಜ್ಞಾನವೆಂತಲೂ ಕರೆದಿದ್ದಾರೆ. ಅನುರೂಪವಾದ ಭಾವನೆಯನ್ನು ಹೊಂದುವುದು ಇಲ್ಲವೆ ತಾನು ಮತ್ತೊಂದರಂತೆ ಆಗುವುದು. ಇದಕ್ಕೆ ತದಾತ್ಮ್ಯವೆಂದೆನ್ನುತ್ತಾರೆ. 'ಒಳಬೆಳಗು' ಎಂದೂ ಅರ್ಥೈಸಿದ್ದುಂಟು.

ಯಾತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ॥

ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥ (ಗೀತಾ : 6–20)

ಯಾವಾಗ ಮನಸ್ಸು ಒಗ್ಗೂಡಿಸುವ ಅಭ್ಯಾಸದಿಂದ ಪೂರ್ಣವಾಗಿ ನಿಯಂತ್ರಿಸಲ್ಪಡುತ್ತದೆಯೋ ಆಗ ಶಾಂತಿಯನ್ನು ಹೊಂದುತ್ತದೆ. ತನ್ನೊಳಗೆ ತನ್ನ ಆತ್ಮವನ್ನೇ ಕಾಣುತ್ತ ತನ್ನಲ್ಲಿ ತಾನು ಸಂತೋಷಿಸುತ್ತದೆ. ನಮ್ಮೊಳಗಿನ ದಿವ್ಯತೆಯ ಅನಂತ ಆಯಾಮವನ್ನು ಪ್ರವೇಶಿಸಿ ಅದರಲ್ಲಿ ಅಪರಮಿತ ಆನಂದ ಕಾಣುತ್ತದೆ.

ಅನುಭಾವದ ಪರಿಕಲ್ಪನೆ ಇಂದು ನಿನ್ನೆಯದಲ್ಲ. ಅಧ್ಯಾತ್ಮ ಸಾಧನೆಯಲ್ಲಿ ಹಿಂದೆ ಎಷ್ಟೋ ಋಷಿ–ಮುನಿ–ಸಂತ–ಶರಣ–ಮಹಾತ್ಮರು ಇದನ್ನು ಕಂಡುಂಡಿದ್ದಾರೆ. ಅನುಭಾವದ ವಿವೇಚನೆ ಕೆಲವರು ಮಾಡಿ ನೀಡಿದರು. ಕೆಲವರು ಆನಂದಿಸಿದರು; ಹೇಳಲಿಲ್ಲ–ಹೇಳಲಾಗದು ಎಂದರು. ಜಿತಕಾಮನೂ ವೈರಾಗ್ಯಮೂರ್ತಿಯೂ ಪರಿಪೂರ್ಣನಾದ ಅಲ್ಲಮ ಜ್ಞಾನ–ಕ್ರಿಯೆಗಳೆರಡನ್ನೂ ಯೋಗ ಸಾಧನೆಗೆ ಬಳಸಿಕೊಂಡ ಅನುಭಾವಿ ಆಗಿದ್ದಾನೆ. ದೇಹ ಸಂಬಂಧವಾದ ಪ್ರಾಕೃತ ಅಹಂಕಾರವನ್ನು ಜಯಿಸಿ ಪರಾಹಂತಾ ಸ್ಥಿತಿಯಲ್ಲಿ ನಿರಭಿಮಾನದಿಂದ ನಿಂತ ಮಹಾತ್ಮ ಅಲ್ಲಮನಾಗಿದ್ದಾನೆ.

ಅನುಭಾವ: ಅಲ್ಲಮಪ್ರಭು ತನ್ನದೊಂದು ವಚನದಲ್ಲಿ 'ಅನು' ಶಬ್ದವನ್ನು ಹೀಗೆ ಬಳಸಿದ್ದಾರೆ. 'ಅನು' ಪರಬ್ರಹ್ಮ, ಶಿವಸ್ವರೂಪ, ಸ್ಥಲ ಎಂದು

ರೂಪನೆ ಕಂಡರು, ನಿರೂಪನೆ ಕಾಣರು

ತನುವನೆ ಕಂಡರು, ಅನುವನೆ ಕಾಣರು

ಆಚಾರವನೆ ಕಂಡರು, ವಿಚಾರವನೆ ಕಾಣರು

ಗುಹೇಶ್ವರ ನಿಮ್ಮ ಕುಯಿಹನೆ ಕಂಡರು

ಕೂಡಲಱಿಯದೆ ಕೆಟ್ಟರು! (ವಚನ–495)

ದೃಶ್ಯ ಜಗತ್ತನ್ನು ಕಂಡರೇ ವಿನಾ ಅದಕೆ ಪರಮ ಆಧಾರವಾದ ಅದೃಶ್ಯ ಪರಬ್ರಹ್ಮ, ಶಿವ, ತತ್ತ್ವ, ಸ್ಥಲ ಕಾಣಲಿಲ್ಲ.

ಅನುವನರಿಯದೆ, ಆದಿಯ ವಿಚಾರಿಸದೆ

ಅನಾದಿಯಲ್ಲಿ ತಾನೆರೆಂಬುದ ನೋಡದೆ

ಸ್ತೋತ್ರವ ಮಾಡಿ ಫಲವೇನು? (ವಚನ–764)

'ಶಿವ'ನನ್ನು ತಿಳಿಯದೇ, ಆದಿ ಯಾರು ಎಂಬುವುದನ್ನು ವಿಚಾರಿಸದಿದ್ದರೆ ಜಪ–ತಪ–ಸ್ತೋತ್ರ ಏನು ಮಾಡಿದರೂ ಉಪಯೋಗವಿಲ್ಲವೆಂಬುವುದು ಅಲ್ಲಮನ ನಿರ್ದೇಶನವಾಗಿದೆ. ಅಂತೆಯೇ

ಅನು ನೀನೆಂಬುದು ತಾನಿಲ್ಲ, ತಾನರಿದ ಬಳಿಕ ಏನೂ ಇಲ್ಲ,

ಇಲ್ಲದ ಇಲ್ಲವೆ ಎಲ್ಲಿಂದ ಬಪ್ಪುದೊ?

ಅನವರಿದು, ತನುವ ಮರೆದು ಭಾವ ರಹಿತ ಗುಹೇಶ್ವರ (ವಚನ–902)

ಶಿವನನ್ನು ಅರಿಯಬೇಕು ತನುವನ್ನು ಮರೆತು ಭಾವರಹಿತ ಸ್ಥಿತಿ, ಅಸ್ತಿತ್ವ ಮೆರೆಯಬೇಕೆಂಬುದು ಅಲ್ಲಮನ ಅಂಬೋಣ. 'ಅನು' ಎಂದರೆ ಆತ್ಮ 'ಭಾವ' ಎಂದರೆ ಜ್ಞಾನ ಎಂದರ್ಥ. 'ಅನುಭಾವ' ಎಂದರೆ ಬ್ರಹ್ಮಜ್ಞಾನ, ಶಿವಜ್ಞಾನ ಎನ್ನಬಹುದು. ಅನುಭಾವದಿಂದ ಲಿಂಗ, ಜಂಗಮ ಪ್ರಸಾದ ಹುಟ್ಟಿದೆ ಎಂದು ಸಾರಿದ ಅಲ್ಲಮಪ್ರಭು 'ಅನುಭಾವದನುವಿನಲ್ಲಿ ಗುಹೇಶ್ವರಲಿಂಗವನುಪಮ ಸುಃಖಿ'(ವಚನ–170) ಎಂದಿದ್ದಾನೆ. ಒಟ್ಟಾರೆ ಅನುಭಾವವೆಂದರೆ ಇಂದ್ರಿಯಾತೀತ ಸತ್ಯವಸ್ತುವಿನ ನೇರ ಅನುಭವ, ಸಾಕ್ಷಾತ್ಕಾರ ಎನ್ನಬಹುದು.

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಹೇಳುವ ಬಗೆ ಹೀಗಿದೆ: "ಅಲ್ಲಮನ ಅಪರೂಪದ ಅನುಭಾವವು ವಚನಗಳಲ್ಲಿ ಸೂರೆಗೊಂಡಿದೆ. ವಚನಗಳು ಸಾವಿರಾರು. ಆಳಕ್ಕೆ ಆಳ, ವಿಸ್ತಾರಕ್ಕೆ ವಿಸ್ತಾರ, ಎತ್ತರಕ್ಕೆ ಎತ್ತರ ಆ ವಚನಗಳ ಒಳಭಾವ, ಮಾತಿಂಗೆ ಮೀರಿದ ಅನುಭೂತಿ, ಅದಕ್ಕೆ ತಕ್ಕ ಭಾಷೆ, ಶಬ್ದಗಳಲ್ಲಿ ಸೊಬಗು ಸವಿ. ಅಭಿವ್ಯಕ್ತಿಯಲ್ಲಿ ಅಹಂಕಾರ, ಬೇಡಗು–ಬಿನ್ನಾಣ. ಸುಂದರವಾದ ರೂಪಕಗಳು, ಸುಸೂಚ್ಯವಾದ ಚಿತ್ರಣಗಳು ಎಂತಹ ಕವಿಗಳನ್ನೂ ಮಂತ್ರಮುಗ್ಧರನ್ನಾಗಿಸುವವು. ತತ್ತ್ವಜ್ಞಾನ, ತತ್ತ್ವಾನುಭವ ಹಾಗೂ ಕಾವ್ಯಮಾಧುರ್ಯ ಒಂದಾಗಿ ಹರಿದಿವೆ, ನುಡಿಗಡಣದಲ್ಲೆಲ್ಲ!" ಎಂದಿದ್ದಾರೆ.

ಬಸವಣ್ಣನಂತೂ 'ಅನುಭಾವವಿಲ್ಲದೆ ಏನನ್ನೂ ಅರಿಯಬಾರದು', 'ಅನುಭಾವ ಮಾತಿನ ಮಥನವಲ್ಲ', 'ಅರಿವಿನ ಆಪ್ಯಾಯನಕ್ಕೆ ಅನುಭಾವವೆ ಆಶ್ರಯ', ಎಂದು ಅನುಭಾವವೆಂಬುದು ಆತ್ಮವಿದ್ಯೆ ಎಂಬ ನಿಲುವನ್ನು ತಾಳಿದ್ದಾನೆ.

ಅನುಭಾವವೆಂಬುದು 'ಅಂತರಂಗದ ರತ್ನ' ಇದರ ಬೆಳಕಿನ ಅನುಭೂತಿ ಪಡೆದು ಅನುಭವಿಸಿ ಪಟ್ಟ ಆನಂದ ಅದು 'ಮೂಗಮೂಗರ ಪ್ರಸಂಗವಾಗುವುದು. 'ಶಿಶು ಕಂಡ ಕನಸು' (ವಚನ–661) ಆದರೆ ಅಲ್ಲಮ ಅರಿವಿನ ಬಳಿವಿಡಿದೇ ಅನುಭಾವಕ್ಕೇರಿ, ಭಾವವ ಬಳಿವಿಡಿದೇ ನಿರ್ಭಾವಕ್ಕೇರುವ, ನಿಜವೇ, ತನ್ನನ್ನು ಬಳಸಿಕೊಳ್ಳುವಂತೆ ಮಾಡುವ, ನಿಜದಲ್ಲಿಯೇ ಸರ್ವನಿವಾಸಿಯಾಗುವಂತೆಸಗುವ ಅನುಭಾವದ ಪ್ರಮುಖ ವೈಶಿಷ್ಟ್ಯ. ಅಲ್ಲಮನಿಗೆ ಅರಿವೇ ಗುರು ನುಡಿಯೇ ಜ್ಯೋತಿರ್ಲಿಂಗ, ಅನುಭಾವವೇ ಗುರಿ. ಈ ಅರಿವೇ ಅನುಭಾವವನ್ನು ಹೆರುವ ತಾಯಿ. ಅರಿವು ಅನುಭಾವವನ್ನು ಹೆರುವ ಹಂತವನ್ನು ಹೀಗೆ ತಿಳಿಯಪಡಿಸಿದ್ದಾನೆ :

ಎಲೆ ಮನವೆ ನೀ ನಿನ್ನ ನಿಜವ ತಿಳಿವಡೆ

ಆ ನಿನ್ನ ನಿಜವೆ ಹೇಳುವೆ ಕೇಳು!

ಅದು ಕೇವಲ ಜ್ಯೋತಿ, ಅದುವರ್ಣನಾತೀತ!
ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು
ಅದೀಗ ನಿನ್ನ ಪರಿಪೂರ್ಣತ್ವದ ನೆಲೆ!
ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ
ಅದೇ ನಿನ್ನ ಸಮ್ಯಕ್ ಜ್ಞಾನದ ತೋರಿಕೆ
ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ
ನೀ ನಮ್ಮ ಗುಹೇಶ್ವರಲಿಂಗ ಶ್ರೀ ಚರಣನರೆಸಿಕೊಂಡು
ನಿಶ್ಚಿಂತನಾಗಲೆ ಮನವೆ! (ವಚನ–992)

"ನಿಜದ ನಿಜವನರಸತೊಡುಗುವುದು ಅರಿವಿನ ದಾರಿ. ಈ ಅರಸುವಿಕೆಯ ಯಾವುದೋ ಒಂದು ಹಂತದಲ್ಲಿ ಅದಕ್ಕೆ ನಿಶ್ಚಯದ ನೆಲೆ ದೊರೆಯುತ್ತದೆ. ಇದೇ ಅನುಭಾವದ ಮೊದಲ ಮೆಟ್ಟಿಲು" ಎಂದು ಪ್ರೊ. ಬಸವರಾಜ ಪುರಾಣಿಕ ತಿಳಿಸುತ್ತಾರೆ.

ಅನುಭಾವದ ಪ್ರಭಾವ ಸತತವಾಗಿ ಸಾಧಕನಲ್ಲಿ ಸರಾಗವಾಗಿ ಸತತವಾಗಿ ಹರಿಯುವುದು. ಐಹಿಕ ಬದುಕಿನ ಯಾವ ಹಂತಗಳೂ ಸ್ಥಗಿತಗೊಳ್ಳಲಾರವು. ಅನುಭಾವ ಸಾಮೂಹಿಕವಾಗಿ ಹೆಚ್ಚು ಪ್ರಬಲತೆಯನ್ನು ಪಡೆಯುತ್ತದ. ಚೆನ್ನಬಸವಣ್ಣನಂಥ ಷಟ್‌ಸ್ಥಲಚಕ್ರವರ್ತಿ ಅಲ್ಲಮಪ್ರಭು 'ಎನ್ನ ಅನುಭಾವದ ಗಮ್ಯ' ಎಂದಿದ್ದಾನೆ. ಆದರೆ ಅಂತಿಮವಾಗಿ ಅಲ್ಲಮ 'ನಿಶ್ಯಬ್ದವೆ ಅನುಭಾವ' ಎಂದಿದ್ದಾನೆ. ಭಕ್ತಿ, ವಿರಕ್ತಿ, ಮುಕ್ತಿಗೆ ಶಕ್ತಿಯೇ ಅನುಭಾವವಾಗಿದೆ. ಹಾಗಾದರೆ ಅನುಭಾವವೆಂದರೆ ಸತ್ಯವಸ್ತುವಿನ ಅಪರೋಕ್ಷ ಜ್ಞಾನ. ಆ ಅಪರೋಕ್ಷ ಜ್ಞಾನವನ್ನು ಪಡೆದ ಅನುಭಾವಿಗಳ ಸಂಗದಿಂದ ಶರಣನೂ ಅನುಪಮವಾದ ಆತ್ಮಸುಃಖಿ

ಅನುಭಾವ ಪಡೆದ ಮಾರ್ಗ : ಅಲ್ಲಮನಿಗೆ ಸಾಧ್ಯ! ನಮಗ್ಹೇಗೆ ಸಾಧ್ಯವಾಗುವುದು? ಎಂಬ ಪ್ರಶ್ನೆ ಬೇಡ ಆತ ನಮಗೂ ಮಾರ್ಗ ತೋರುವನು. ಅದರ ಕ್ರಮವನ್ನು ವಚನದ ಮೂಲಕ ವಿವರಿಸುವನು:

ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ ಭ್ರಾಂತಿನ ಬೇರ
ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ
ಅಖಂಡಮಂಡಲವೆಂಬ ಭಾವಿ, ಪವನವೆರಾಟಾಳ
ಸುಷುಮ್ನನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯಂಬ ಬೇಲಿಯನಿಕ್ಕಿ
ಆವಾಗಲೂ ಈ ತೋಂಟದಲ್ಲಿ ಜಾಗರವಿದ್ದು

ಗೊಗ್ಗಯ್ಯವೆಂಬ ಕೃಷಿಕನಿಗೆ (ಸಾಧಕ) ತಿಳಿಸುವ ಅನುಭಾವದ ಮಾರ್ಗ ಗಮನಿಸಿ. ಶರೀರವೆಂಬ ಈ ತೋಟದಲ್ಲಿ ಬೆಳೆದ ಕಸ ಭ್ರಾಂತಿ ಅದನ್ನು ಮನವೆಂಬ ಗುದ್ದಲಿಯಿಂದ ಬೇರು ಸಮೇತ ಕಿತ್ತೊಯಬೇಕು. ಸಂಸಾರದ ಹೆಂಟೆಯನ್ನು ಒಡೆದು ಪುಡಿಮಾಡಿ ಬ್ರಹ್ಮಬೀಜ ಬಿತ್ತಬೇಕು ನಿರಂತರವಾಗಿ ಸಾಧನೆ ಮಾಡಬೇಕು. ಪಂಚೇಂದ್ರಿಯ ಒರೆಸಿ ಲಿಂಗ ಅರಸಬೇಕು ಸಮತೆ ಸೈರಣಿಗಳು ತ್ರಿಕರಣಗಳಲ್ಲೂ ಅಳವಡಬೇಕು. ಅನುಭಾವದ ಸಸಿ ಸಲಹಬೇಕು.

ಹೊರಗಣ ಕುರುಹುಗಳು ಕೇವಲ ಬಾಹ್ಯ ಆಚರಣೆಗೆ ಸೀಮಿತವಾಗುವದರ ಬದಲು, ಅನ್ನವು ರಕ್ತವಾಗುವಂತೆ! ಅನುಭಾವವು ಮನೋಗತ ಅನುಭಾವದಾಗಬೇಕು. ಸಕಲವನ್ನು ಮೀರಿದ ಅದರ ನೆಲೆಯನ್ನು ಅನುಭಾವಿ ಅಸ್ತಿತ್ವದ ಸ್ವರೂಪ ಹೀಗೆ ತಿಳಿಸಿದ್ದಾನೆ:

ನೆನಹು ನೆನೆವ ಮನದಲ್ಲಿಲ್ಲ, ತನುವಿನಾಶೆ ಮುನ್ನಿಲ್ಲ.

ಮನ ಮನವನೊಳಕೊಂಡ ಘನ ಘನವನೇನೆಂಬೆ!

ತನ್ನಲ್ಲಿ ತಾನೆಯಾಯಿತ್ತು!

ನೆನೆಯಲಿಲ್ಲದ ನಿಂದ ನಿರಾಳ ಅನಾಗತವಾದುದ ಕಂಡು

ನಾನು ಬೆರಗಾದೆನು.

ಅಂತು ಇಂತು ಎನಲಿಲ್ಲ, ಚಿಂತೆಯಿಲ್ಲದ ಘನವ

ಗುಹೇಶ್ವರಲಿಂಗವ ಬೇರೆ ಅರಸಲಿಲ್ಲ (ವಚನ–674)

ಜ್ಞಾನ ಮತ್ತು ಅರಿವು ಇವುಗಳ ಸಾಧನೆಯನ್ನು ತನ್ನ ಅನುಭಾವದ ಹಂತಗಳಲ್ಲಿ ಸಾಧಕ ಪಡೆದುಕೊಳ್ಳಬೇಕು. ಅಲ್ಲಮನ ಅನುಭಾವ ಹೃದಯದ ಬೆಳಕು. ಜೀವಾತ್ಮನಲ್ಲಿ ಹೊಳೆದ ಈ ಜ್ಯೋತಿಯ ದರ್ಶನವನ್ನು ಪಡೆದು ಅನುಭವ ಅಭಿವ್ಯಕ್ತಗೊಳಿಸಿದ್ದಾನೆ.

ಅಲ್ಲಮನ ಅನುಭಾವವನ್ನು ಶೋಧನ, ದರ್ಶನ, ಸಂಗಮದ ಮೂಲಕ ಮನಗಾಣಬಹುದು.

ಶೋಧನ: ಕುಂಡಲಿನೀ ಸರ್ಪದ ಹೆಡೆಯನ್ನು ಮೆಟ್ಟುವುದು, ಅಹಂಕಾರವೆಂಬ ಮದಗಜವನ್ನು ಮುರಿಯುವುದು, ಮಮಕಾರವೆಂಬ ಕೇಸರಿಯನ್ನು ಪಳಗಿಸಿದಾಗ 'ಅನುಭಾವ ಲಭ್ಯ'ವಾಗುವುದು. ನಿಜವಾದ ಬೇಟೆ ಯಾವುದು? ದೇಹದೊಳಗಿನ ನಿತ್ಯ ಸತ್ಯದ ಶೋಧನೆ.

ದರ್ಶನ: ದೇಹದ ಮೇಲಿನ ಅಧಿಕಾರ ಕೊನೆಯಲ್ಲ, ಅದರೊಳಗೆ ಗುಪ್ತವಾಗಿ ನೆಲೆಸಿರುವ ಗುಹೇಶ್ವರನ ದರ್ಶನ. ಹೃದಯವೇ ಗುಹೆ. ಅದರಲ್ಲಿದ್ದು ಈ ದೇಹದ ಎಲ್ಲಾ ಭಾಗಗಳಲ್ಲೂ ನಿರ್ಲಿಪ್ತವಾಗಿ ವ್ಯಾಪಿಸಿದ ಚೈತನ್ಯವೇ ಈಶ್ವರ. ಎಲ್ಲರಲ್ಲೂ ಗುಹೇಶ್ವರ ಗುಪ್ತವಾಗಿದ್ದಾನೆ. ಅವನನ್ನು ಕಾಣುವುದೇ ನಿಜವಾದ ದರ್ಶನ.

ಸಂಗಮ: ದರ್ಶನವಾದ ಬಳಿಕ ಅರಿತು ಸೇವೆ (ಸಾಧನೆ) ಮಾಡುತ್ತ ಬಂದರೆ ನೀನೂ ಅವನೇ ಆಗುವೆ. ಗುಹೇಶ್ವರನ ಕಂಡು ಅನುಭವಿಸಿದವರೆಲ್ಲರೂ ಅವನೇ ಆಗುವುದೇ ಸಂಗಮ.

ಸಮಾರೋಪ: ಅಲ್ಲಮನು ಕಿರಾತಕ, ಗೊಗ್ಗಯ್ಯ, ಗೋರಕ್ಷಕರ ಪ್ರಸಂಗಗಳಲ್ಲಿ ಅನುಭಾವದ ಶೋಧನೆ, ದರ್ಶನ ಮತ್ತು ಸಂಗಮಗಳ ವಿವರವನ್ನು ಮನಗಾಣುವುದು ಸೂಕ್ತ. ಮೇಲಿನವರಿಗಷ್ಟೆ ಅಲ್ಲದೇ ಅಲ್ಲಮ ಬಸವಾದಿ ಶಿವಶರಣರಿಗೆಲ್ಲರಿಗೂ ಅನುಭಾವ ಮಾರ್ಗವನ್ನೆ ಉಪದೇಶ ಮಾಡಿದ್ದಾನೆ. ಅನುಭಾವದ ಅನುವಿನಲ್ಲಿ ಜೀವಭಾವವಳಿದು ಶಿವಭಾವವೇ ಉಳಿಯಬೇಕೆನ್ನುತ್ತಾನೆ. ಅದನ್ನೇ ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಉಲ್ಲೇಖ ಮಾಡುತ್ತದೆ:

ಜಲೇ ಜಲಮಿವ ನ್ಯಸ್ತಂ ವಹ್ನೌವಹ್ನರಿವಾರ್ಪಿತಮ್

ಪರೇ ಬ್ರಹ್ಮಣಂ ಲೀನಾತ್ಮಾ ವಿಭಾಗೇನ ನ ದೃಶ್ಯತೆ ॥

ನೀರು ನೀರನ್ನು ಬೆರೆಸಿದಂತೆಯೂ ಬೆಂಕಿಯಲ್ಲಿ ಬೆಂಕಿಯನ್ನು ಬೆರೆಸಿದಂತೆಯೂ

ಪರಬ್ರಹ್ಮಸ್ವರೂಪ ಮಹಾಲಿಂಗದಲ್ಲಿ ಆತ್ಮನನ್ನು ಲಯಗೊಳಿಸಿದ ಜೀವಾತ್ಮನು ಪರಬ್ರಹ್ಮ ಸ್ವರೂಪಕ್ಕಿಂತ ಭಿನ್ನವಾಗಿ ತೋರುವುದಿಲ್ಲ. ಇದನ್ನೂ ದಾಟಿ ಒಂದು ಹೆಜ್ಜೆ ಮುಂದೆ ಹೋಗಿ ಅಲ್ಲಮನು

ಬೆರೆಸಿದೆನೆಂಬ ಬಿರುನುಡಿಯ ನುಡಿಗೆ

ನಾಚಿದೆನಯ್ಯಾ ಗುಹೇಶ್ವರಾ (ವಚನ–694)

ಪರವಸ್ತು ಅದು ಬಯಲು, ಶೂನ್ಯ ಅದು ಬೆಡಗು–ಬೆರಗು ಹುಟ್ಟಿಸುವ ಅದ್ಭುತವಾಗಿದೆ. ಅದರೊಡಗೆ ಸಮರಸಸುಖ ಅದ್ಭುತ. ಅಭಿನ್ನವಾದದಿಂದ ಬೆರೆತು ಅನುಭವಿಸಿದ ಬಳಿಕ ಕಾಣಲೂ ಮತ್ತೆ ಅನುಭವಿಸಲೂ ಅಲ್ಲೇನಿದೆ? ಹಾಗೆಯೇ ಕಾಣೆನು ಎಂಬ ಮಾತು ಅಲ್ಲಿ ಸಾಯುವುದು, ಅದಕ್ಕೆ ಅವಕಾಶವೇ ಇಲ್ಲ. ಅರಿವಲ್ಲಿ ಬೆರೆತೆ, ಲಯವಾದೆ ಎಂಬ ಭಾವವೂ ಅಡಗಿಹೋಯಿತು.

ನಾನು–ನೀನು–ಅವನು–ಅದು–ಗುಹೇಶ್ವರ ಹೂಂ ಹೂಂ ಇಲ್ಲ, ಏನೇನೂ ಇಲ್ಲದ್ದು ಇದು ಅಲ್ಲಮನ ಸಹಜ ಅನುಭಾವ. ಅಲ್ಲಮ ತನಗಾದ ಅನುಭಾವದ ಅನುಭವವನ್ನು ಅನುಭೂತಿಸಿ ಆನಂದ ಹೊಂದಿ 'ಅನುವರಿದು, ತನುವ ಮರೆದ, ಭಾವರಹಿತ' ಎನಿಸಿದ್ದಾನೆ.

ಪರಾಮರ್ಶನ ಗ್ರಂಥಗಳು

1. ಪ್ರೊ. ಬಸವರಾಜ ಪುರಾಣಿಕ : ಅನುಭಾವದ ಆಯಾಮಗಳು
2. ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ : ಅಲ್ಲಮಪ್ರಭು
3. ಶ್ರೀ ಸಿದ್ಧೇಶ್ವರ ಸ್ವಾಮಿಗಳು : ಅಲ್ಲಮ ಪ್ರಭುದೇವರ ವಚನ–ನಿರ್ವಚನ
4. ಡಾ. ಎಲ್. ಬಸವರಾಜು : ಶೂನ್ಯಸಂಪಾದನೆ
5. ಡಾ. ನಾ. ಮೊಗಸಾಲೆ & ಡಾ. ಜಿ. ಎಂ. ಹೆಗಡೆ : ಅಲ್ಲಮ ಅಧ್ಯಯನಲೋಕ
6. ಡಾ. ಆರ್. ಬಿ. ಚಿಲುಮಿ : ಹೊಸಗನ್ನಡ ಅನುಭಾವ ಸಾಹಿತ್ಯ
7. ಜಯದಯಾಲ ಗೋಯಂದಕಾ : ಶ್ರೀ ಮದ್‌ಭಗವದ್ಗೀತೆ ತತ್ತ್ವ ವಿವೇಚನೆ ಟೀಕೆ.

❖❖❖

ಋತುಪರ್ಣನ ಕುದುರೆಗಳಿಗೆ
ಹುಲ್ಲನು ತಿನಿಸಿದ ವರಬಾಹುಕನು
ಸೇರಲೆಬೇಕು ಸರಿಹೊತ್ತಿನಲಿ
ನಿಷಧದ ಸ್ವಯಂವರ ತಾಣವನು

ಕರ್ನಾಟಕ ಸಂಗೀತಕ್ಕೆ ಮೈಸೂರು ವಾಗ್ಗೇಯಕಾರರ ಕೊಡುಗೆ

ವಿಜಯಾ
ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ಸಂಶೋಧನಾ ಮಾರ್ಗದರ್ಶಕರು: ಡಾ. ಮೀರಾ ರಾಜಾರಾಂ ಪ್ರಾಣೇಶ್
ಜೈನ್ ಡೀಮ್ಡ್ ಯುನಿವರ್ಸಿಟಿ, ಬೆಂಗಳೂರು

ಕರ್ನಾಟಕದಲ್ಲಿ ಹುಟ್ಟಿ, ದಕ್ಷಿಣ ಭಾರತವಿಡೀ ಹರಿಯುತ್ತಾ ಸಮುದಾಯದ ಸಂಸ್ಕೃತಿ ಪರಿವರ್ಧನೆಯಲ್ಲೂ ತನ್ನ ಛಾಪನ್ನೊತ್ತಿರುವ ಕರ್ನಾಟಕ ಸಂಗೀತವು, ಭಾಷೆ, ರಾಜಕೀಯ ಹಾಗೂ ಭೌಗೋಳಿಕ ಎಲ್ಲೆಗಳನ್ನು ಮೀರಿ ಪ್ರಪಂಚದಾದ್ಯಂತ ರಸಿಕರ ಮನವನ್ನು ಸೂರೆಗೊಂಡಿದೆ. ಕರ್ನಾಟಕ ಸಂಗೀತದ ಈ ಉತ್ಥಾನಕ್ಕೆ ಕಾರಣರಾದ ಅನೇಕಾನೇಕ ಮಂದಿಯಲ್ಲಿ ಮೊದಲ ಪಂಕ್ತಿಯಲ್ಲಿ ಬರುವವರು ವಾಗ್ಗೇಯಕಾರರು.

ಯಾವುದೇ ಕಲೆಗೆ ರಾಜರ ಆಶ್ರಯ ಹಾಗೂ ಪ್ರೋತ್ಸಾಹಗಳು ದೊರೆತಾಗ ಆ ಕಲೆಯ ಸರ್ವತೋಮುಖ ಬೆಳವಣಿಗೆಗೆ ಇಂಬು ದೊರೆತಂತಾಗುತ್ತದೆ ಎನ್ನುವುದು ಇತಿಹಾಸ ವೇದ್ಯವಾದ ವಿಚಾರ. ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಎಲ್ಲ ಲಲಿತಕಲೆಗಳ ನೆಲೆವೀಡಾಗಿ ಸಾಂಸ್ಕೃತಿಕ ಭೂಪಟದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ಮೈಸೂರಿನ ಹಿರಿಮೆಗೂ ಇಲ್ಲಿ ಆಳಿದ ಅರಸರ ಅಪರಿಮಿತ ಕಲಾಸಕ್ತಿ ಹಾಗೂ ಕಲಾಪೋಷಣೆಗಳೇ ಕಾರಣವಾದುವು ಎನ್ನಬಹುದು. ಇವರಲ್ಲಿ ಕೆಲವು ರಾಜರು ಕೇವಲ ಕಲಾಪೋಷಕರಾಗಿಯಷ್ಟೇ ಉಳಿಯದೆ, ಸ್ವತಃ ಕಲಾವಿದರೂ, ವಾಗ್ಗೇಯಕಾರರೂ ಆಗಿದ್ದರೆನ್ನುವುದು ಕೂಡಾ ಗಮನಾರ್ಹ ಅಂಶವಾಗಿದೆ.

ಅತೀವ ಕನ್ನಡ ಭಾಷಾಭಿಮಾನವನ್ನು ಹೊಂದಿದ್ದ ಈ ಒಡೆಯರ ಆಳ್ವಿಕೆಯ ಕಾಲದಲ್ಲಿ ಸಂಗೀತಕಲೆಗೆ ದೊರೆತ ಅಮಿತ ಪ್ರೋತ್ಸಾಹದೊಂದಿಗೆ ಇತರ ಭಾಷೆಗಳೊಂದಿಗೆ ಕನ್ನಡದಲ್ಲೂ ಗೇಯ ರಚನೆಗಳಾಗಬೇಕೆಂಬ ಒತ್ತಾಸೆಯೂ ಸೇರಿದಂತೆ ಮೈಸೂರಿನಲ್ಲಿ ಬಹು ದೊಡ್ಡ ವಾಗ್ಗೇಯ ಪರಂಪರೆಯೇ ಬೆಳೆದು ಬಂದಿತಲ್ಲದೆ ತನ್ಮೂಲಕ ಕರ್ನಾಟಕ ಸಂಗೀತಕ್ಕೆ ಮೈಸೂರು ವಾಗ್ಗೇಯಕಾರರಿಂದ ಯಥೇಚ್ಛ ಕೊಡುಗೆ ದೊರೆಯುವಂತಾಯಿತು.

ಸುಮಾರು 19–20ನೇ ಶತಮಾನಗಳಲ್ಲಿ ಸಮೃದ್ಧವಾಗಿ ಪ್ರಕಾಶಿಸಿದ ಈ ವಾಗ್ಗೇಯ ಪರಂಪರೆಯಲ್ಲಿ ಮೈಸೂರು ಸದಾಶಿವರಾಯರು ಮುಂಚೂಣಿಯಲ್ಲಿದ್ದರೆ, ಅವರ ಬಳಿಕ ವೀಣೆ ಪದ್ಮನಾಭಯ್ಯ, ಮೈಸೂರು ಕರಿಗಿರಿರಾಯರು, ವೀಣೆ ಶೇಷಣ್ಣ, ಮೈಸೂರು ವಾಸುದೇವಾಚಾರ್ಯ, ಬಿಡಾರಂ ಕೃಷ್ಣಪ್ಪ, ವೀಣಾ ಶಿವರಾಮಯ್ಯ, ವೀಣಾ ವೆಂಕಟಗಿರಿಯಪ್ಪ, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಟಿ. ಚೌಡಯ್ಯ, ಸಿ. ರಂಗಯ್ಯ, ಎನ್. ಚೆನ್ನಕೇಶವಯ್ಯ, ಹೆಚ್. ಯೋಗನರಸಿಂಹಂ, ಬಿ.ಕೆ. ಪದ್ಮನಾಭರಾಯರು, ರಾ. ಚಂದ್ರಶೇಖರಯ್ಯ, ಆರ್.ಎನ್. ದೊರೆಸ್ವಾಮಿ ಮುಂತಾದವರು ಪ್ರಮುಖವಾಗಿ ಕಂಡುಬರುತ್ತಾರೆ. ಇವರೆಲ್ಲರ ಕಾಲಾವಧಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸ್ವರಜತಿ–ಜತಿಸ್ವರಗಳು, ವರ್ಣ–ಪದವರ್ಣಗಳು, ಕೃತಿಗಳು, ರಾಗಮಾಲಿಕೆ–ತಾಳಮಾಲಿಕೆಗಳು,

ತಿಲ್ಲಾನಗಳು, 72 ಮೇಳಕರ್ತ ರಾಗಗಳಲ್ಲೂ ಕೃತಿಗಳು ರಚಿಸಲ್ಪಟ್ಟಿದ್ದೇ ಅಲ್ಲದೆ, 'ನಗಮಾ', 'ಜಾವಳಿ'ಗಳೆಂಬ ಹೊಸ ರಚನಾಪ್ರಕಾರಗಳೂ ಸೃಷ್ಟಿಯಾದವು.

ಇವೆಲ್ಲದರ ಜೊತೆಗೆ ಅರಸರ ಉದಾರ ದೂರದರ್ಶಿತ್ವ ಹಾಗೂ ಪ್ರೇರಣೆಯಿಂದಾಗಿ ಇಲ್ಲಿನ ಅನೇಕ ವಾಗ್ಗೇಯಕಾರರು ಅಪರೂಪ ರಾಗ–ತಾಳಗಳಲ್ಲಿಯೂ ಕೃತಿ ರಚಿಸಿರುವುದೇ ಅಲ್ಲದೆ, ಹೊಸ ರಾಗಗಳ ಸೃಷ್ಟಿಯೊಂದಿಗೆ ಹಲವು ಕನ್ನಡ ರಚನೆಗಳೂ ಸೇರಿದಂತೆ ವಿವಿಧ ರಚನಾ ಪ್ರಕಾರಗಳಲ್ಲಿ ಪ್ರಯೋಗವೈವಿಧ್ಯತೆಯನ್ನೂ ಮೆರೆಯುವಂತಾಯಿತು. ಈ ಎಲ್ಲ ಅಂಶಗಳನ್ನೂ ವಿಶೇಷವಾಗಿ ಗಮನದಲ್ಲಿರಿಸಿಕೊಂಡು, ಅವರಲ್ಲಿ ಆಯ್ದ ಕೆಲವು ವಾಗ್ಗೇಯಕಾರರ ಸಾಧನೆಗಳನ್ನು ಅಪರೂಪ ರಾಗಗಳು, ಅಪರೂಪ ತಾಳಗಳು, ವಿಶೇಷ ರಚನೆಗಳು, ಗೇಯ ರೂಪಕಗಳು ಮತ್ತು ಸಂಗೀತ ಶಾಸ್ತ್ರ ಗ್ರಂಥಗಳು ಎಂಬಂತೆ ವಿಭಾಗೀಯವಾಗಿ ಅವಲೋಕಿಸಬಹುದಾಗಿದೆ.

ಅಪರೂಪ ರಾಗಗಳು: ಈ ಪರಿಕಲ್ಪನೆಯಲ್ಲಿ ಪ್ರಸ್ತುತ ಮೂರು ಮಾನದಂಡಗಳನ್ನು ಪರಿಗಣಿಸಲಾಗಿದೆ:

1. ಸ್ವತಃ ವಾಗ್ಗೇಯಕಾರರೇ ಸೃಷ್ಟಿಸಿದ ರಾಗಗಳು.
2. ಶಾಸ್ತ್ರ ಗ್ರಂಥಗಳಲ್ಲಿ ನಾಮಾಂಕಿತಗೊಂಡಿದ್ದರೂ ಲಕ್ಷ್ಯರೂಪದಲ್ಲಿ ಯಾವುದೇ ರಚನೆಗಳು ಕಂಡುಬರದ ರಾಗಗಳು.
3. ಕೇವಲ ಒಂದೆರಡು ರಚನೆಗಳಲ್ಲಷ್ಟೇ ಬಳಸಲ್ಪಟ್ಟಿರುವ, ಅಷ್ಟಾಗಿ ರೂಢಿಯಲ್ಲಿರದ ರಾಗಗಳು.

ಮೈಸೂರು ವಾಗ್ಗೇಯ ಪರಂಪರೆಯಲ್ಲಿ ಬರುವ ವಾಗ್ಗೇಯಕಾರರು ಕರ್ನಾಟಕ ಸಂಗೀತದ ವಿವಿಧ ರಚನಾ ಪ್ರಕಾರಗಳಲ್ಲಿ ಹಲವು ಸತ್ವಯುತ ವಾಗ್ಗೇಯ ರಚನೆಗಳನ್ನು ಮಾಡಿದವರು. ಇವರಲ್ಲಿ ಅನೇಕರು ತಮ್ಮ ರಚನೆಗಳಲ್ಲಿ ಪ್ರಚಲಿತ ರಾಗಗಳಲ್ಲದೆ ಬಹಳಷ್ಟು ಅಪರೂಪ ರಾಗಗಳನ್ನು ಬಳಸಿರುವುದನ್ನು ಕಾಣಬಹುದು.

ಮೈಸೂರು ಸದಾಶಿವರಾಯರು (ಅಂದಾಜು ಕಾಲ: ಕ್ರಿ.ಶ. 1790–1880): ಅಂಕಿತನಾಮ 'ಸದಾಶಿವ'

ಸ್ವರಜತಿ, ತಾನವರ್ಣ, ಪದವರ್ಣ, ಕೃತಿ, ತಿಲ್ಲಾನ ಮುಂತಾದ ವಿವಿಧ ಪ್ರಕಾರಗಳಲ್ಲಿ ಸುಮಾರು 50ಕ್ಕೂ ಹೆಚ್ಚಿನ ರಚನೆಗಳು. ಇವುಗಳಲ್ಲಿ ಪರಿಚಿತ ರಾಗಗಳೊಂದಿಗೆ, ಚಂದ್ರಚೂಡ, ಪುನ್ನಾಗ ತೋಡಿ, ಬಲಹಂಸ, ಪೂರ್ಣಷಡ್ಜ, ಕಿರಣಾವಳಿ, ಜಯಂತಸೇನ–ಎಂಬ ಅಪರೂಪ ರಾಗಗಳ ಬಳಕೆಯಾಗಿರುವುದನ್ನು ಗುರುತಿಸಬಹುದು.

ವೀಣಾ ಪದ್ಮನಾಭಯ್ಯ (ಕ್ರಿ.ಶ. 1842–1900): ಅಂಕಿತನಾಮ 'ಪದ್ಮನಾಭ'

ಜತಿಸ್ವರ, ಸ್ವರಜತಿ, ಸಪ್ತತಾಳೇಶ್ವರಿ, ಕೃತಿ, ಜಾವಳಿ–ಒಟ್ಟು 30 ರಚನೆಗಳು. ಇಲ್ಲಿ ಬಳಸಿರುವ ರಾಗಗಳಲ್ಲಿ ಸ್ವಲ್ಪ ಮಟ್ಟಿಗೆ ಅಪರೂಪವೆನಿಸುವ ಸಾರಂಗ, ವಕುಳಾಭರಣ, ಸರಸಾಂಗಿ ರಾಗಗಳಲ್ಲದೆ, ಕೇವಲ ಶಾಸ್ತ್ರಗ್ರಂಥಗಳಲ್ಲಿ ಮಾತ್ರ ಪ್ರಯೋಗಿಸಿರುವ ಸತ್ಯವತಿ, ಸಿಂಧುಮಂದಾರಿ, ಶುದ್ಧವೇಳಾವಳಿ ಮುಂತಾದ ರಾಗಗಳು ಬಲು ಅಪರೂಪವೆನಿಸುತ್ತವೆ.

ವೀಣೆ ಶೇಷಣ್ಣ (ಕ್ರಿ.ಶ. 1852–1926): ಅಂಕಿತನಾಮ 'ಶೇಷ'

ಗೀತೆ, ಜತಿಸ್ವರ, ವರ್ಣ, ಕೃತಿ, ತಿಲ್ಲಾನ, ಜಾವಳಿ. ಒಟ್ಟು 53 ರಚನೆಗಳು. ಇವರು 2 ರಾಗಮಾಲಿಕಾ ವರ್ಣಗಳನ್ನು ರಚಿಸಿದ್ದು, ಅವುಗಳಲ್ಲಿ 'ಅಭೇರಿಣಿ' (ಗೌರಿ ಮನೋಹರಿ ಜನ್ಯ) ಹಾಗೂ ಕೋಕಿಲ (ಶಂಕರಾಭರಣ ಜನ್ಯ) ಎಂಬ ಅಪರೂಪ ರಾಗಗಳನ್ನು ಬಳಸಿದ್ದಾರೆ. ಇನ್ನೊಂದು ರಾಗಮಾಲಿಕಾ ವರ್ಣವು ಒಟ್ಟು 20 ರಾಗಗಳನ್ನು ಒಳಗೊಂಡಿದ್ದು ಇದರಲ್ಲಿ ಘನರಾಗಗಳು, ದ್ವಿತೀಯ ಘನ ಪಂಚಕ ರಾಗಗಳು ಹಾಗೂ ಹಿಂದುಸ್ತಾನಿ ರಾಗಗಳೊಂದಿಗೆ 'ಗುಮ್ಮ ಕಾಂಭೋಜಿ' (ಮಾಯಾಮಾಳವಗೌಳ ಜನ್ಯ) ಹಾಗೂ 'ಚಿತ್ತಮೋಹಿನಿ' (ಶಂಕರಾಭರಣ ಜನ್ಯ) ಎಂಬ ಅಪರೂಪ ರಾಗಗಳೂ ಸೇರಿವೆ. ಹಾಗೆಯೇ ಅವರು ರಚಿಸಿರುವ ವರ್ಣಗಳಲ್ಲೊಂದು ಅತಿವಿರಳವಾದ ಝಾಲವರಾಳಿ ರಾಗದಲ್ಲಿರುವುದನ್ನು ಗಮನಿಸಬಹುದಾಗಿದೆ. (ಪ್ರಾಣೇಶ್ 2003:117–120)

ಮೈಸೂರು ವಾಸುದೇವಾಚಾರ್ಯರು (ಕ್ರಿ.ಶ. 1865–1961): ಅಂಕಿತನಾಮ 'ವಾಸುದೇವ'

ಜತಿಸ್ವರ, ವರ್ಣ, ಕೃತಿ, ತಿಲ್ಲಾನ, ರಾಗಮಾಲಿಕೆ–ಒಟ್ಟು ಸುಮಾರು 200 ರಚನೆಗಳು. ಇವುಗಳಲ್ಲಿ ಮಂದಾರಿ, ಸುನಾದ ವಿನೋದಿನಿ, ಮೇಘರಂಜಿನಿ, ಋಷಭಪ್ರಿಯ, ವರುಣಪ್ರಿಯ, ಭವಪ್ರಿಯ, ವಕುಳಾಭರಣ, ಶುದ್ಧಮಾಳವಿ ಅಪರೂಪ ರಾಗಗಳಾಗಿವೆ.

ವೀಣಾ ಶಿವರಾಮಯ್ಯ (ಕ್ರಿ.ಶ. 1886–1946): ಅಂಕಿತನಾಮ 'ಶಿವರಾಮ'

ಜತಿಸ್ವರ, ವರ್ಣ, ಕೃತಿ, ತಿಲ್ಲಾನ, ರಾಗಮಾಲಿಕೆ, ನಗಮಾ–ಹೀಗೆ ಒಟ್ಟು ಸುಮಾರು 80 ರಚನೆಗಳು. ಇವುಗಳಲ್ಲಿ ಒಂದು ವರ್ಣವನ್ನು 'ಲಲಿತ ಸಿಂಹಾರವ' (ಸಿಂಹೇಂದ್ರಮಧ್ಯಮದಲ್ಲಿ ಜನ್ಯ) ಎಂಬ ಅರ್ವಾಚೀನ ರಾಗದಲ್ಲಿ ರಚಿಸಲಾಗಿದೆ. ಅಲ್ಲದೆ ಆಧಾರ ಷಡ್ಜ, ಅಂತಗಾಂಧಾರ, ಪಂಚಮ ಸ್ವರಗಳನ್ನು 'ಸ್ವಯಂಭೂ' ಸ್ವರಗಳೆಂದು ಪರಿಗಣಿಸಿ ನಾಲ್ಕು ರಚನೆ (3 ಕೃತಿ ಮತ್ತು ಒಂದು ಮಂಗಳ ಪದ್ಯ) ಗಳನ್ನು ಮಾಡಿದ್ದಾರಲ್ಲದೆ, ಅದಕ್ಕೆ 'ಸ್ವಯಂಭೂಸ್ವರ ರಾಗ'ವೆಂದೇ ಕರೆದಿದ್ದಾರೆ. (ನಾರಾಯಣಮೂರ್ತಿ 2001:47). ಇವಲ್ಲದೆ ಅವರ ನಾಲ್ಕು ರಾಗಮಾಲಿಕೆಗಳಲ್ಲಿ ಒಂದಾದ 'ಸರಸ್ವತಿ ನವರತ್ನ ಮಾಲಿಕಾ'ದಲ್ಲಿ ಅಪರೂಪವಾದ ಬಾಲಚಂದ್ರಿಕಾ, ವಿಜಯಸರಸ್ವತಿ, ಕೋಕಿಲಭಾಷಿಣಿ ರಾಗಗಳನ್ನು ಬಳಸಿದರೆ, 'ಚತುರ್ದಶಮಂಜರೀ ರಾಗರತ್ನಮಾಲಿಕಾ'ದಲ್ಲಿ ಪರಿಚಿತ ರಾಗಗಳ ಜೊತೆಗೆ ದೇವಕುಸುಮಾವಳಿ, ಸತ್ಯಭೂಷಿಣಿ, ನಾದಬ್ರಹ್ಮ, ಹರಿಪ್ರಿಯ, ಹಂಸಭ್ರಮರಿ, ಪದ್ಮಕಾಂತಿ, ನಾದಮೂರ್ತಿ, ಶುದ್ಧರತ್ನಭಾನು–ಮುಂತಾದ ಅತಿ ವಿರಳ ರಾಗಗಳನ್ನು ಬಳಸಿದ್ದಾರೆ. ಹಾಗೆಯೇ 3 ತಿಲ್ಲಾನಗಳಲ್ಲಿ ಒಂದನ್ನು 'ಧುನ್‌ಕಾನಡ' ರಾಗದಲ್ಲಿ ರಚಿಸಿದ್ದರೆ, ಮೂರು ನಗಮಾಗಳಲ್ಲಿ ಒಂದು 'ಧುನ್‌ಪೀಲು' ರಾಗದಲ್ಲಿ ರಚಿಸಲ್ಪಟ್ಟಿದೆ.

ವೀಣಾ ವೆಂಕಟಗಿರಿಯಪ್ಪ (ಕ್ರಿ.ಶ. 1887–1952): ಅಂಕಿತನಾಮಕ್ಕೆ ಬದಲಾಗಿ ರಾಗಮುದ್ರೆ, ಪೋಷಕ ಮುದ್ರೆ, ಕ್ಷೇತ್ರ ಮುದ್ರೆ ಇತ್ಯಾದಿಗಳ ಬಳಕೆ.

ವರ್ಣ, ಕೃತಿ, ರಾಗಮಾಲಿಕೆ, ತಿಲ್ಲಾನ, ನಗಮಾ–ಒಟ್ಟು 41 ರಚನೆಗಳು.

ಇವುಗಳಲ್ಲಿ ಪರಿಚಯವೇ ಇಲ್ಲದ ಮಹೇಶ್ವರಿ (ಶಂಕರಾಭರಣ ಜನ್ಯ), ಉಷಪ್ರಿಯ (ಮಾಯಾಮಾಳವಗೌಳ ಜನ್ಯ), ಖರಹರಪ್ರಿಯ ಜನ್ಯವಾದ ಶಾರದಪ್ರಿಯ, ಶಂಕರಪ್ರಿಯ, ನಟಭೈರವಿ ಜನ್ಯವಾದ ಪ್ರಭುಪ್ರಿಯ, ಲಲಿತಪ್ರಿಯ, ಭುವನ ಗಾಂಧಾರಿ ಮುಂತಾದ ರಾಗಗಳ ಆವಿಷ್ಕಾರ ಕಂಡುಬರುತ್ತವೆ.

ಸಿ. ರಂಗಯ್ಯ (ಕ್ರಿ.ಶ. 1895–1984): ಅಂಕಿತನಾಮ 'ರಂಗ'

ಗೀತೆ, ಲಕ್ಷಣ ಗೀತೆ, ಜತಿಸ್ವರ, ಸ್ವರಜತಿ, ವರ್ಣ, ಕೃತಿ, ಕೀರ್ತನೆ, ಪದ, ತಿಲ್ಲಾನ, ರಾಗಮಾಲಿಕೆ – ಸುಮಾರು 260 ರಚನೆಗಳು. ಬಿಲ್ವದಳ (ತ್ರಿಸ್ವರಿ ರಾಗ), ನಿಗಮಗಾಮಿನಿ, ಕನಕಾಂಗದಾ, ಗೌಳೀಶ್ವರಿ, ಮದುರಾಲಾಪ, ನವಸೂತಿಕಾ, ಸುಕುಮಾರಿ, ತ್ಯಾಗಹಂಸ, ಶಂಕರ ಸಾರೂಪ್ಯ, ಅರುಣಾಂಗಿ, ಶ್ಯಾಮಲಿ, ಸಾಯುಜ್ಯಸಾಧಿನಿ, ಶರಭಧ್ವಜ, ಜಯಷಣ್ಮುಖಿ, ಭದ್ರತೋಡಿ, ನಾದಕಲ್ಯಾಣಿ, ಕೋಕಿಲದೀಪ ಹೀಗೆ ಸುಮಾರು 20ಕ್ಕೂ ಹೆಚ್ಚಿನ ಹೊಸ ರಾಗಗಳನ್ನು ಸೃಷ್ಟಿಸಿ ಅವುಗಳಿಗೆ ಲಕ್ಷ್ಯರೂಪವಾಗಿ ಕೃತಿಗಳನ್ನು ರಚಿಸಿರುವ ಹಿರಿಮೆ ಇವರದು. ಅಷ್ಟು ಮಾತ್ರವಲ್ಲದೆ ದ್ವಿಮಧ್ಯಮಗೌಳ, ಮಾರುವ, ಬಿಭಾಸು, ಗಮಕಸಾಮಂತ, ಗಮನವಾಣಿ, ಚಂದ್ರರೇಖಾ, ಭಕ್ತಪ್ರಿಯ, ಜಯಮೋಹನ, ದೀಪಕ, ಕೋಲಾಹಲ, ಸುಧಾತರಂಗಿಣಿ, ಶಂಕರ ಮೋಹನ, ಚಂದ್ರಿಕಾತೋಡಿ ಮುಂತಾದ ವಿರಳಾತಿವಿರಳವಾದ ಅನೇಕ ಅಪರೂಪ ರಾಗಗಳಲ್ಲೂ ವಾಗ್ಗೇಯತ್ವ ಮೆರೆದಿದ್ದಾರೆ.

ಹೆಚ್. ಯೋಗನರಸಿಂಹಂ (ಕ್ರಿ.ಶ. 1897–1971): ಅಂಕಿತನಾಮ 'ದೇವ'

ಸ್ವರಜತಿ, ವರ್ಣ, ಕೃತಿ, ಪದ, ಜಾವಳಿ, ತಿಲ್ಲಾನ, ರಾಗಮಾಲಿಕೆ, ದಿವ್ಯನಾಮ– ಒಟ್ಟು 36 ರಚನೆಗಳು. ಇವುಗಳಲ್ಲಿ ಲತಾಂತಪ್ರಿಯ (ಮಾಯಾಮಾಳವಗೌಳ ಜನ್ಯ), ಕೋಲಾಹಲ (ಶಂಕರಾಭರಣ ಜನ್ಯ), ನಾದ ತರಂಗಿಣಿ (ಖರಹರಪ್ರಿಯ ಜನ್ಯ), ಭಾನುಧನ್ಯಾಸಿ (ಶುಭಪಂತುವರಾಳಿ ಜನ್ಯ), ಕುಂತಲಕುಸುಮಾವಳಿ (ಕಲ್ಯಾಣಿ ಜನ್ಯ) ಹಾಗೂ ವಾಚಸ್ಪತಿ ಜನ್ಯವಾದ ಗಗನಮೋಹಿನಿ, ಪ್ರಣವಾಕಾರಿ ಮುಂತಾದ ರಾಗಗಳು ಅಪರೂಪದ್ದಾಗಿವೆ.

ಬಿ. ಕೆ. ಪದ್ಮನಾಭ ರಾವ್ (ಕ್ರಿ.ಶ. 1903–1966): ಅಂಕಿತನಾಮ: 'ಪದ್ಮಜಾರ್ಚಿತ'

ವರ್ಣ, ಕೃತಿ, ದೇವರನಾಮ, ತಿಲ್ಲಾನ– ಒಟ್ಟು 55 ರಚನೆಗಳು. ಇವುಗಳಲ್ಲಿ ಅಪರೂಪ ರಾಗಗಳಾಗಿ ಇಂದುಮತಿ (ಕಾಮವರ್ಧಿನಿ ಜನ್ಯ) ಮತ್ತು ಹರಿಕಾಂಭೋಜಿ ಜನ್ಯವಾದ ಹಂಸರೂಪಿಣಿ, ಶಿವಕಾಂಭೋಜಿ ಮುಂತಾದುವು ಪ್ರಯೋಗಿಸಲ್ಪಟ್ಟಿವೆ.

ವೆಂಕಟನಾರಾಯಣ ಉಡುಪ ಶಾಸ್ತ್ರಿಗಳು (ಕ್ರಿ.ಶ. 1906–1983): ಅಂಕಿತನಾಮ: 'ಚಂದ್ರ'

ಜತಿಸ್ವರ, ಸ್ವರಜತಿ, ವರ್ಣ, ಕೃತಿ, ತಿಲ್ಲಾನ–ಒಟ್ಟು 150ಕ್ಕೂ ಹೆಚ್ಚಿನ ರಚನೆಗಳು. ಇವುಗಳಲ್ಲಿ ಲವಂತಿಕ, ಹಾಟಕಾಂಬರಿ, ವರುಣಪ್ರಿಯ, ನಾಗಾನಂದಿನಿ, ಶೂಲಿನಿ, ಬುಧಮನೋಹರಿ ಮುಂತಾದ ವಿರಳ ರಾಗಗಳಲ್ಲದೆ, ವೀರ ಮೋಹಿನಿ, ಮಾಯಾಪ್ರದೀಪ, ಭವತರಂಗಿಣಿ, ಆನಂದವಲ್ಲರಿ ಮುಂತಾದ ನೂತನ ರಾಗಗಳನ್ನು ರಚನೆಗಳಲ್ಲಿ ಬಳಸಿಕೊಳ್ಳಲಾಗಿದೆ.

ರಾ. ಚಂದ್ರಶೇಖರಯ್ಯ (ಕ್ರಿ.ಶ. 1915–1999): ಅಂಕಿತನಾಮ 'ಚಂದ್ರಶೇಖರ'

ವರ್ಣ, ಕೃತಿ, ತಿಲ್ಲಾನ, ಪದ, ದೇವರನಾಮ–ಸುಮಾರು 300ಕ್ಕೂ ಹೆಚ್ಚು ರಚನೆಗಳು. ಇವುಗಳಲ್ಲಿ ಸುಧಾಶ್ರುತಿ, ಅಯೋಧ್ಯ, ಕಾಮೇಶ್ವರಿ, ಭಂಡಮರ್ದಿನಿ, ಅರುಣಾಂಬುಧಿ, ಶೋಭನಸುಂದರಿ, ಹಂಸಕಲ್ಯಾಣಿ, ಶ್ರುತಿಸ್ವರೂಪಿಣಿ ಮುಂತಾದ ಸುಮಾರು 50 ನೂತನ ರಾಗಗಳು ಹಾಗೂ ಫರಜ್, ಸ್ತವರಾಜ, ಧವಳಾಂಬರಿ, ಮಾಂಜಿ ಮೊದಲಾದ ಅಪರೂಪ ರಾಗಗಳನ್ನು ಬಳಸಿರುವ ಬಗ್ಗೆ ತಿಳಿದು ಬರುತ್ತದೆ.

ಆರ್. ಎನ್. ದೊರೆಸ್ವಾಮಿ (ಕ್ರಿ.ಶ. 1916–2002): ಅಂಕಿತನಾಮ 'ಲಕ್ಶ್ಮೀರಮಣ'

ಜತಿಸ್ವರ, ಸ್ವರಜತಿ, ತಾನವರ್ಣ, ಪದವರ್ಣ, ಕೃತಿ, ಭಜನ್, ರಾಗಮಾಲಿಕೆ, ತಿಲ್ಲಾನ, ಜಾವಳಿ, ಸ್ತೋತ್ರಗೀತೆ, ನಗಮಾ–ಒಟ್ಟು 69 ರಚನೆಗಳು. ಜನಪ್ರಿಯ ರಾಗಗಳೊಂದಿಗೆ ವಿಶೇಷವಾಗಿ ಹಿಂದುಸ್ತಾನಿ ರಾಗಗಳಿಂದ ಆಮದಾಗಿರುವ ಚಂದ್ರಕೌಂಸ್, ಪೀಲು, ತಿಲಂಗ್, ಯಮನ್ ಕಲ್ಯಾಣಿ, ಬೃಂದಾವನ ಸಾರಂಗ, ಮಧುವಂತಿ, ದ್ವಿಜಾವಂತಿ, ಬಾಗೇಶ್ರೀ, ರೇವತಿ ಮುಂತಾದ ರಾಗಗಳನ್ನು ಬಳಸಿದ್ದಾರೆ.

ಇಷ್ಟೇ ಅಲ್ಲದೆ ಮೈಸೂರನ್ನಾಳಿದ ಅರಸರಲ್ಲಿ ಪ್ರಸಿದ್ಧ ವಾಗ್ಗೇಯಕಾರರೂ ಆಗಿದ್ದ ಜಯಚಾಮರಾಜ ಒಡೆಯರು ಕೂಡಾ ತಮ್ಮ ರಚನೆಗಳಿಗೆ ದೂರ್ವಾಂಕಿ, ಭಾನುಚಂದ್ರಿಕೆ, ಭೋಗವಸಂತ, ಹಾಟಕಾಂಬರಿ, ಬಾಲಚಂದ್ರಿಕಾ, ಪ್ರತಾಪವರಾಳಿ, ಹಂಸವಿನೋದಿನಿ, ಹಂಸನಟನಿ, ನೀಲವೇಣಿ, ನಾದಬ್ರಹ್ಮ, ಸುರನಂದಿನಿ, ವೀರವಸಂತ, ವಿಜಯವಸಂತ, ಭೂಪಾಲ ಪಂಚಮ, ಶುದ್ಧಸಾಳವಿ, ಜಯಸಂವರ್ಧಿನಿ ಮುಂತಾದ ಅನೇಕ ಅಪರೂಪ ರಾಗಗಳನ್ನು ಬಳಸಿ ಪ್ರಯೋಗಶೀಲತೆಗೆ ತಾವೇ ಸ್ವತಃ ಮಾದರಿಯಾಗಿದ್ದಾರೆ.

ಅಪರೂಪ ತಾಳಗಳು : ಮೈಸೂರು ವಾಗ್ಗೇಯಕಾರರಲ್ಲಿ ಬಹುತೇಕರು ತಮ್ಮ ವಾಗ್ಗೇಯ ರಚನೆಗಳಲ್ಲಿ ಹೆಚ್ಚು ಪರಿಚಿತ ರಾಗಗಳ ಜೊತೆಗೆ ಅಪರೂಪ ರಾಗಗಳನ್ನೂ ಪ್ರಯೋಗಿಸಿದ್ದರೆ, ಇವರಲ್ಲಿ ಕೆಲವರು ಸಾಮಾನ್ಯವಾದ ಆದಿ, ರೂಪಕ, ಛಾಪು ತಾಳಗಳೊಂದಿಗೆ, ಶಾಸ್ತ್ರಕ್ಕಷ್ಟೇ ಸೀಮಿತವಾಗಿದ್ದ ಕೆಲವು ತಾಳಗಳನ್ನೂ ಬಳಸಿ, ಈ ನಿಟ್ಟಿನಲ್ಲೂ ಪ್ರಯೋಗಶ್ರೇಷ್ಠರೆನಿಸಿದ್ದಾರೆ.

ಮೈಸೂರು ಸದಾಶಿವರಾಯರು ತಮ್ಮ ರಚನೆಗಳಲ್ಲಿ ಪರಿಚಿತ ತಾಳಗಳೊಂದಿಗೆ, ಮಧ್ಯಾದಿ, ಮಿಶ್ರ ತ್ರಿಪುಟ ಹಾಗೂ ಹಿಂದುಸ್ತಾನಿ ಪದ್ಧತಿಯಲ್ಲಿ ಬಳಕೆಯಲ್ಲಿರುವ 'ಚೌತಾಲ್'ನ್ನೂ ಪ್ರಯೋಗಕ್ಕೆಳಸಿದ್ದಾರೆ. ವೀಣೆ ಶೇಷಣ್ಣನವರು ಸಂಕೀರ್ಣ ತ್ರಿಪುಟ ತಾಳದಲ್ಲಿ ಜತಿಸ್ವರವೊಂದನ್ನು ರಚಿಸಿದರೆ, ಸಪ್ತರಾಗ ಮಾಲಿಕೆಯನ್ನು ಚತುರಶ್ರ ಧ್ರುವತಾಳದಲ್ಲಿ ನಿಬದ್ಧಗೊಳಿಸಿದ್ದಾರೆ (ಪ್ರಾಣೇಶ್ 2003:115). ಅಲ್ಲದೆ ಅವರ ವರ್ಣಗಳಲ್ಲಿ ಕೆಲವಕ್ಕೆ ಖಂಡ ಧ್ರುವ, ಖಂಡ ಮಠ್ಯ, ಖಂಡ ತ್ರಿಪುಟ, ಸಂಕೀರ್ಣ್ಯ ಮಠ್ಯ ತಾಳಗಳನ್ನು ಬಳಸಿರುವುದು ಗಮನಾರ್ಹವಾಗಿದೆ. ಹಾಗೆಯೇ ಅವರು ರಚಿಸಿರುವ 17 ತಿಲ್ಲಾನಗಳಲ್ಲಿ ಒಂದು ತಿಲ್ಲಾನವು ಪೂರ್ವಿ ಎಂಬ ವಿಶೇಷ ರಾಗದ ಜೊತೆಗೆ ಕರ್ನಾಟಕ ಸಂಗೀತಕ್ಕೆ ವಿಶೇಷ ತಾಳವಾಗಿರುವ 'ಚೌತಾಲ್'ನಲ್ಲಿ ರಚಿಸಲ್ಪಟ್ಟಿರುವುದು ಕೂಡಾ ಗಣನೀಯ ಅಂಶವಾಗಿದೆ.

ಸಿ. ರಂಗಯ್ಯನವರು ಪ್ರಾಚೀನ ವಿಶೇಷವಾದ ಕೆಲವು ತಾಳಗಳಲ್ಲಿ ರಚನೆಗಳನ್ನು ಮಾಡಿದ್ದಾರೆ. ಮೊದಲನೆಯದಾಗಿ 'ರಟ್ಟ ತಾಳ'. ತಾಳದ ಪೂರ್ವಾರ್ಧವು ತ್ರಿಶ್ರ, ಚತುರಶ್ರ,

ಖಂಡ, ಮಿಶ್ರ, ಸಂಕೀರ್ಣ – ಹೀಗೆ ಯಾವುದೇ ನಡೆಯನ್ನು ಹೊಂದಿರಬಹುದು. ಆದರೆ ಉತ್ತರಾರ್ಧವು ಮಾತ್ರ ಚತುರಶ್ರ ನಡೆಯಲ್ಲೇ ಇರಬೇಕೆನ್ನುವುದು ಈ ತಾಳದ ನಿಯಮ (ಪ್ರಭಾಕರ್ 2008:53).

ಉದಾ : ತ್ರಿಶ್ರ ರಟ್ಟ ತಾಳ: ಈ ತಾಳವು ಪೂರ್ವಾಂಗದಲ್ಲಿ 12 ಅಕ್ಷರಗಳೂ ಉತ್ತರಾಂಗದಲ್ಲಿ 16 ಅಕ್ಷರಗಳೂ ಸೇರಿ ಒಟ್ಟು 28 ತಾಳಾಕ್ಷರಗಳನ್ನು ಹೊಂದಿರುತ್ತವೆ.

ರಂಗಯ್ಯನವರನ್ನು ಹೊರತುಪಡಿಸಿ ರಟ್ಟ ತಾಳವನ್ನು ರಚನೆಗಳಲ್ಲಿ ಪ್ರಯೋಗಿಸಿದ ಇನ್ನೊಬ್ಬ ವಾಗ್ಗೇಯಕಾರರಿಲ್ಲದಿರುವುದು ಇಲ್ಲಿ ಗಮನಾರ್ಹ ಅಂಶವಾಗಿದೆ. ಹೀಗೆ ತ್ರಿಶ್ರ ರಟ್ಟ, ಖಂಡ ರಟ್ಟ, ಪಂಚಗತಿ ರಟ್ಟ ತಾಳಗಳಲ್ಲಿ ಕೆಲವು ರಚನೆಗಳನ್ನು ಮಾಡಿರುವ ಇವರು, ಇದಲ್ಲದೆ ಚತುರಶ್ರ ಧ್ರುವ, ತ್ರಿಶ್ರ ತ್ರಿಪುಟ, ಖಂಡ ತ್ರಿಪುಟ, ತ್ರಿಶ್ರ ರೂಪಕತಾಳಗಳಲ್ಲೂ ಕೃತಿ ರಚನೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಎರಡು ದ್ರುತ+ಚತುರಶ್ರ ಜಾತಿಯ ಲಘು ಎಂಬ ಅಂಗರಚನೆಯನ್ನು ಹೊಂದಿರುವ 'ಝೊಂಪಟ'ವೆಂಬ ತಾಳವನ್ನು ಅದೇ ರೂಪದಲ್ಲಿ ತಮ್ಮ ತ್ಯಾಗಹಂಸ ರಾಗದಲ್ಲಿ ರಚಿಸಿರುವ ಕೃತಿಗೆ ಸಂಯೋಜಿಸಿದ್ದಾರೆ. ವೆಂಕಟಮಖಿಯ ಕಾಲದಲ್ಲಿ ಪ್ರಸಿದ್ಧವಾಗಿದ್ದ ಈ ತಾಳವು 15–16ನೇ ಶತಮಾನದಲ್ಲಿ ಆದಿತಾಳವಾಗಿ ರೂಪಾಂತರಗೊಂಡಿತು (ಸತ್ಯನಾರಾಯಣ 2001: 312). ಒಟ್ಟಿನಲ್ಲಿ ಈ ತಾಳವು ಇಂದಿನ ಆದಿ ತಾಳದ ಪ್ರಾಚೀನ ರೂಪವಾಗಿದೆ. ಹಾಗೆಯೇ ರಂಗಯ್ಯನವರು ತಾವು ರಚಿಸಿದ ಗೇಯ ರೂಪಕಗಳಲ್ಲೊಂದಾದ 'ನಿಷ್ಠುರವೈರಾಗ್ಯ–ಧ್ರುವ ಚರಿತ್ರೆ'ಯಲ್ಲಿ 'ಗಂಭೀರ ನಾಟ' ರಾಗದಲ್ಲಿರುವ ಗಣಪತಿ ಸ್ತುತಿಗೆ ಹಿಂದುಸ್ತಾನಿ ಸಂಗೀತ ಪದ್ಧತಿಯಲ್ಲಿ ಬಳಸುವ 'ಸೂಲ್‌ತಾಳ್' ಅಥವಾ 'ಸೂಲ್‌ಪಕ್' ತಾಳವನ್ನು ಪ್ರಯೋಗಿಸಿದ್ದಾರೆ. ದ್ವ್ಯಕ್ಷರ ಗತಿಯೊಂದಿಗೆ ದ್ರುತ+ಅನುದ್ರುತ+ದ್ರುತ – ಎಂಬ ಅಂಗವಿನ್ಯಾಸವನ್ನು ಹೊಂದಿರುವ ಈ ತಾಳದ ಒಂದಾವರ್ತದಲ್ಲಿ ಒಟ್ಟು 10 ಅಕ್ಷರಗಳಿರುತ್ತವೆ (ಸುಂದರಂ 1987:136).

ಬಿ. ಕೆ. ಪದ್ಮನಾಭರಾಯರ ರಚನೆಗಳಲ್ಲೊಂದಾದ 'ಇವರೇ ಮಂತ್ರಾಲಯದ ರಾಯರು' (ಭೈರವಿ) ಎಂಬ ಕೀರ್ತನೆಯು ವಿಶೇಷವಾದ ಮಿಶ್ರನಡೆ ಆದಿತಾಳದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಹಲವು ಅಪರೂಪ ರಾಗಗಳಲ್ಲಿ ಪ್ರಯೋಗತ್ವ ಮೆರೆದಿದ್ದ ಜಯಚಾಮರಾಜ ಒಡೆಯರ್‌ರವರು ಸಹಾ ತಮ್ಮ ರಚನೆಗಳಲ್ಲಿ ಜನಪ್ರಿಯ ತಾಳಗಳಷ್ಟೇ ಅಲ್ಲದೆ, ತ್ರಿಶ್ರ ಝಂಪೆ, ಮಿಶ್ರ ಝಂಪೆ, ಚತುರಶ್ರ ಧ್ರುವ, ಚತುರಶ್ರ ಮಠ್ಯ, ಖಂಡ ರೂಪಕ, ಚತುರಶ್ರ ಅಟ್ಟ, ತ್ರಿಶ್ರ ತ್ರಿಪುಟ, ಖಂಡ ತ್ರಿಪುಟ, ಮಿಶ್ರ ತ್ರಿಪುಟ, ಸಂಕೀರ್ಣ ತ್ರಿಪುಟ – ಮುಂತಾದ ಹಲವು ತಾಳಗಳನ್ನೂ ಬಳಸಿ ತಮ್ಮ ಕ್ರಿಯಾಶೀಲತೆಯನ್ನು ತೋರಿದ್ದಾರೆ.

ವಿಶೇಷ ರಚನೆಗಳು: ಪ್ರಾಯೋಗಿಕವಾಗಿ ವಿಶಿಷ್ಟತೆಯನ್ನು ತೋರುವ ವಾಗ್ಗೇಯ ರಚನೆಗಳನ್ನು ಇಲ್ಲಿ ವಿಶೇಷ ರಚನೆಗಳೆಂದು ಪರಿಗಣಿಸಲಾಗಿದೆ.

ಸಪ್ತತಾಳೇಶ್ವರಿ: ಒಟ್ಟು 420 ತಾಳಾಕ್ಷರಗಳನ್ನು ಹೊಂದಿರುವ ಈ ರಚನೆಯನ್ನು ಏಕಕಾಲದಲ್ಲಿ ಏಳು ಜನರು ಸುಳಾದಿ ಸಪ್ತತಾಳ (ಚತುರಶ್ರ ಧ್ರುವ, ಚತುರಶ್ರ ಮಠ್ಯ, ಚತುರಶ್ರ ರೂಪಕ, ಮಿಶ್ರ ಝಂಪೆ, ತ್ರಿಶ್ರ ತ್ರಿಪುಟ, ಖಂಡ ಅಟ್ಟ, ಚತುರಶ್ರ ಏಕ)ಗಳನ್ನು ಹಾಕಿಕೊಂಡು ಹಾಡಿದಾಗ ಕೊನೆಯಲ್ಲಿ ಎಲ್ಲ ತಾಳಗಳಲ್ಲೂ ಒಂದೇ ಸಮಯದಲ್ಲಿ ರಚನೆಯು ಮುಕ್ತಾಯಗೊಳ್ಳುವುದೇ ಇದರ ವೈಶಿಷ್ಟ್ಯ (ಪ್ರಾಣೇಶ್ 2003:101)

ಇಂತಹ ಒಂದು ಜತಿಸ್ವರವನ್ನು ವೀಣಾ ಪದ್ಮನಾಭಯ್ಯನವರು ತೋಡಿ ರಾಗದಲ್ಲಿ ರಚಿಸಿದ್ದರೆ, ವೀಣಾ ವೆಂಕಟಸುಬ್ಬಯ್ಯನವರಿಗೆ ಗುರು ಕಾಣಿಕೆಯಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು ರೀತಿಗೌಳ ರಾಗದಲ್ಲಿ ರಚಿಸಿರುವ ಸ್ವರಜತಿಯು ಇನ್ನೊಂದು ಸಪ್ತತಾಳೇಶ್ವರಿ. ಹಾಗೆಯೇ ರಂಗಯ್ಯನವರು ಮಧ್ಯಮಾವತಿ ರಾಗದಲ್ಲಿ ರಾಮಾಯಣ ಕಥೆಯನ್ನೊಳಗೊಂಡ ಸಪ್ತತಾಳೇಶ್ವರಿ ಗೀತೆಯನ್ನು ರಚಿಸಿದರೆ, ಇನ್ನೋರ್ವ ವಾಗ್ಗೇಯಕಾರ ವೀಣಾ ವೆಂಕಟರಾಯರು ಸಪ್ತತಾಳೇಶ್ವರಿ ತಿಲ್ಲಾನವನ್ನು ರಚಿಸಿರುವುದು ಕಂಡುಬರುತ್ತದೆ. (ಇವೆರಡೂ ಹಸ್ತಪ್ರತಿಗಳಲ್ಲಿವೆ).

ನಗಮಾ: ಇದು ವಾದ್ಯಗಳಿಗೆಂದೇ ರಚಿತವಾದ ಸಾಹಿತ್ಯರಹಿತ ಸ್ವರ ಪ್ರಬಂಧ. ಹಿಂದುಸ್ತಾನಿ ಪದ್ಧತಿಯ 'ಗತ್'ನ್ನು ಹೋಲುವ ಇದನ್ನು ನಾಲ್ವಡಿಯವರ ಪ್ರೇರಣೆಯಂತೆ ಕರ್ನಾಟಕ ಸಂಗೀತ ಪದ್ಧತಿಗೆ ಅಳವಡಿಸಿ ಬೇಹಾಗ್, ಕೀರವಾಣಿ, ಮಾಲಕೌಂಸ್ ರಾಗಗಳಲ್ಲಿ 3 ನಗಮಾಗಳನ್ನು ರಚಿಸಿದ ವೀಣಾ ವೆಂಕಟಗಿರಿಯಪ್ಪನವರು, ಕರ್ನಾಟಕ ಸಂಗೀತದಲ್ಲಿ ನಗಮಾ ರಚಿಸಿದ ಆದ್ಯಪ್ರವರ್ತಕರೆನಿಸಿದ್ದಾರೆ. ಮುಂದೆ ಇವರನ್ನು ಅನುಸರಿಸಿದ ವೀಣಾ ಶಿವರಾಮಯ್ಯನವರು ಧುನ್‌ಪೀಲು, ಬೇಹಾಗ್, ಪೀಲು ರಾಗಗಳಲ್ಲಿ 3 ನಗಮಾಗಳನ್ನೂ, ಆರ್.ಎನ್. ದೊರೆಸ್ವಾಮಿಯವರು ನಟಭೈರವಿ, ದುರ್ಗಾ, ಧರ್ಮವತಿ ಹಾಗೂ ಚಕ್ರವಾಕ ರಾಗಗಳಲ್ಲಿ 4 ನಗಮಾಗಳನ್ನೂ ರಚಿಸಿದ್ದಾರೆ.

ಇನ್ನು ರಂಗಯ್ಯನವರು ಅತ್ಯಂತ ವಿಶೇಷವಾಗಿ ಏಕಸ್ವರಿ, ದ್ವಿಸ್ವರಿ, ತ್ರಿಸ್ವರಿ ರಾಗಗಳಲ್ಲಿ ಕೃತಿ ರಚಿಸಿದ್ದಾರಲ್ಲದೆ, ಪಂಚಜಾತಿ ರಾಗಮಾಲಿಕಾ ವರ್ಣವೊಂದನ್ನು ರಚಿಸಿದ್ದಾರೆ.

ಗೇಯ ರೂಪಕಗಳು: ಸಿ. ರಂಗಯ್ಯನವರು ಪ್ರಯೋಗದ ದೃಷ್ಟಿಯಿಂದ ಮಹತ್ವವೆನಿಸುವ 'ಅಸುರಭಕ್ತಿ–ನೃಸಿಂಹಾವತಾರ', 'ದೈವರಕ್ಷಿತ ಚಂದ್ರಹಾಸ', 'ನಿಷ್ಠುರವೈರಾಗ್ಯ–ಧ್ರುವಚರಿತ್ರೆ' ಎಂಬ ಮೂರು ಗೇಯ ರೂಪಕಗಳನ್ನು ರಚಿಸಿದ್ದಾರೆ. ಸಂಗೀತ ಪ್ರಧಾನವಾದ ಈ ಗೇಯ ರೂಪಕಗಳು ಗದ್ಯ, ಪದ್ಯ, ಸ್ವಗತ, ಸಂಭಾಷಣೆಗಳಲ್ಲದೆ ಸೂಕ್ತವಾದ ರಾಗ – ತಾಳಗಳೊಂದಿಗೆ ಲಾಲಿತ್ಯಪೂರ್ಣವಾದ ಸರಳ ಕೀರ್ತನೆಗಳು, ಸಾಂದರ್ಭಿಕವಾಗಿ ಬರುವ ಲಾವಣಿ ಹಾಡು, ಜೋಗುಳ ಹಾಡು, ಬೇಟೆ ಹಾಡು, ಸ್ತೋತ್ರ ಹಾಡುಗಳು ಹಾಗೂ ಕಂದ, ಷಟ್ಪದಿ, ದಂಡಕ, ರಗಳೆ, ಶ್ಲೋಕ, ವಚನ ಮುಂತಾದ ಸಾಹಿತ್ಯ ಛಂದೋಲಂಕಾರಗಳಿಂದ ಕೂಡಿದ್ದು, ಈ ರೂಪಕಗಳು ಸಂಗೀತ ಪ್ರಪಂಚಕ್ಕೆ ರಂಗಯ್ಯನವರು ನೀಡಿದ ಅತ್ಯಮೂಲ್ಯ ಕೊಡುಗೆಗಳಾಗಿವೆ.

ಸಂಗೀತ ಶಾಸ್ತ್ರ ಗ್ರಂಥಗಳು: ಸುಮಾರು 19–20ನೇ ಶತಮಾನದ ಪೂರ್ವದಲ್ಲಿ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುವ ಕನ್ನಡ ಪುಸ್ತಕಗಳ ಕೊರತೆ ವಿದ್ಯಾರ್ಥಿಗಳನ್ನು ತೀವ್ರವಾಗಿ ಕಾಡಿತ್ತು. ಇದನ್ನು ನೀಗಿಸಲೆಂಬಂತೆ ಕೆಲವು ವಾಗ್ಗೇಯಕಾರರು ಪಟ್ಟ ಶ್ರಮ ಚಾರಿತ್ರಿಕವಾಗಿ ಅದೊಂದು ಸಾಧನೆಯೇ ಆಗಿತ್ತು.

ಸಂಗೀತ ಪರೀಕ್ಷೆಗಳಿಗೆ ಕನ್ನಡದಲ್ಲಿ ನಿರ್ದಿಷ್ಟವಾದ ಪಠ್ಯಪುಸ್ತಕ ಇಲ್ಲದಿರುವುದನ್ನು ಕಂಡ ರಂಗಯ್ಯನವರು 'ಸಂಗೀತ ಶಾಸ್ತ್ರದ ಪ್ರಥಮ ಪಾಠಗಳು' ಎಂಬ ಲಕ್ಷ್ಯ–ಲಕ್ಷಣ ಸಹಿತವಾದ ಪಠ್ಯಪುಸ್ತಕವೊಂದನ್ನು ರಚಿಸಿದರು.

ವೀಣಾ ಶಿವರಾಮಯ್ಯನವರು ಸುಂದರ ಶಾಸ್ತ್ರಿಗಳ ನೆರವಿನೊಂದಿಗೆ ಕುರುಡು–ಕಿವುಡು ಮತ್ತು ಮೂಗರ ಶಾಲಾ ವಿದ್ಯಾರ್ಥಿಗಳಿಗೆಂದು 'ಸಂಗೀತ ಲಕ್ಷಣ (ಪ್ರಶ್ನೋತ್ತರ

ರತ್ನಾವಳಿ)' ಎಂಬ ಪಠ್ಯಪುಸ್ತಕ ಪ್ರಕಟಿಸಿದರು. ಹಾಗೆಯೇ ವೀಣಾ ವೆಂಕಟಗಿರಿಯಪ್ಪನವರು ಕೂಡಾ ಸಂಗೀತ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗಾಗಿ 'ಸಂಗೀತಾಮೃತ ಸಾರ' ಎಂಬ ಉಪಯುಕ್ತ ಗ್ರಂಥವನ್ನು ರಚಿಸಿದರು.

ಇನ್ನೋರ್ವ ವಾಗ್ಗೇಯಕಾರರಾದ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ ಅವರು ಸಂಗೀತ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ 'ಗಾನಾಮೃತ' ಎಂಬ ಗ್ರಂಥವನ್ನು ಬರೆದರೆ, ವೀಣೆ ಸುಬ್ರಹ್ಮಣ್ಯ ಅಯ್ಯರ್ ಅವರು 'ಸಂಗೀತ ಸಮಯಸಾರ' ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದರು. ಸಂಗೀತ ಶಾಸ್ತ್ರ ಮತ್ತು ಪ್ರಯೋಗಗಳೆರಡರ ಹಲವು ವಿಚಾರಗಳನ್ನು ಅತ್ಯಂತ ವಿಸ್ತ್ರತವಾಗಿ ವಿವರಿಸುವಂತಹ ಈ ಎರಡೂ ಗ್ರಂಥಗಳು ಸಂಗೀತ ವಿದ್ಯಾರ್ಥಿಗಳ ಸಾಧನೆಗೆ ಸಹಕಾರಿಯಾಗುವಂತಹವು.

ಲಕ್ಷ್ಯ–ಲಕ್ಷಣಗಳೆರಡರಲ್ಲೂ ಅಪೂರ್ವ ಪಾಂಡಿತ್ಯ ಪಡೆದಿದ್ದ ಎನ್. ಚೆನ್ನಕೇಶವಯ್ಯನವರು 'ರಾಗಾಲಾಪನ ಪದ್ಧತಿ, ತಾನ ಮತ್ತು ಪಲ್ಲವಿ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಅದರಲ್ಲಿ ಮೊದಲು ರಾಗತ್ರಯೋದಶ ಲಕ್ಷಣಗಳು, ರಾಗಾಲಾಪನ ಕ್ರಮ, ಗಮಕಗಳ ಸ್ಥಾನ, ಘನರಾಗಗಳ ಬಗ್ಗೆ ಹೇಳಿ, ಬಳಿಕ ತಾನ ಮತ್ತು ಪಲ್ಲವಿ ನಿರೂಪಣೆಯ ಬಗ್ಗೆ ಶಾಸ್ತ್ರೋಕ್ತವಾದ ಕ್ರಮವನ್ನು ತಿಳಿಸಿಕೊಟ್ಟಿರುವುದೇ ಅಲ್ಲದೆ ಸುಮಾರು 175 ಪಲ್ಲವಿಗಳನ್ನು ಸ್ವರ ಸಹಿತವಾಗಿ ನೀಡಿದ್ದಾರೆ. ಸಂಗೀತಾಭ್ಯಾಸದ ಅಂತಿಮ ಹಂತದಲ್ಲಿ ಬರುವ ರಾಗ–ತಾನ–ಪಲ್ಲವಿಯ ಬಗ್ಗೆ ವಿಸ್ತ್ರತ ಅರಿವು ಮೂಡಿಸುವ ಈ ಗ್ರಂಥ ವಿದ್ಯಾರ್ಥಿಗಳ ಸಾಧನೆಗೆ ಸಹಕಾರಿಯಾಗಿದೆ.

ಮುಂದೆ ಎಲ್. ರಾಜಾರಾವ್ ಅವರು ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಂಗೀತ ಕಲಾಸಕ್ತರೆಲ್ಲರಿಗೂ ಅನುಕೂಲವಾಗುವಂತೆ 'ಸಂಗೀತಶಾಸ್ತ್ರಸಾರ' ಹಾಗೂ 'ಸಂಗೀತಶಾಸ್ತ್ರಚಂದ್ರಿಕೆ' ಎಂಬ ಎರಡು ಶಾಸ್ತ್ರ ಗ್ರಂಥಗಳನ್ನು ರಚಿಸಿರುವುದು ಕಂಡು ಬರುತ್ತದೆ.

ಸಂಗೀತಕ್ಕೆ ಸಂಬಂಧಿಸಿದ ಗ್ರಂಥಗಳು ಕನ್ನಡದಲ್ಲಿ ದೊರೆಯುವುದು ಅತ್ಯಂತ ದುರ್ಲಭವೇ ಆಗಿದ್ದ ಅಂದಿನ ಸಂದರ್ಭದಲ್ಲಿ ಈ ಎಲ್ಲ ಮಹನೀಯರು ಕೈಗೊಂಡ ಸಂಕಲ್ಪ ಆ ಕಾಲಕ್ಕೆ ಕ್ರಾಂತಿಕಾರಿಯೇ ಆಗಿದ್ದವೆನ್ನಬಹುದು.

ಮೈಸೂರು ವಾಗ್ಗೇಯ ಪರಂಪರೆ ಮುಂದುವರಿದಂತೆ, ಅನಂತರ ಬಂದ ಪ್ರೊ. ರಾಮರತ್ನಂ, ರಾ. ಸತ್ಯನಾರಾಯಣ, ಪ್ರೊ. ರಾ. ವಿಶ್ವೇಶ್ವರನ್ ಮುಂತಾದ ವಾಗ್ಗೇಯಕಾರರು ಅನೇಕ ಶಾಸ್ತ್ರಗ್ರಂಥಗಳನ್ನು ರಚಿಸಿ ಸಂಗೀತದ ಶಾಸ್ತ್ರ ಭಂಡಾರವನ್ನು ಮತ್ತಷ್ಟು ಶ್ರೀಮಂತಗೊಳಿಸಿದ್ದಾರೆ.

ಹೀಗೆ ವಿವಿಧ ಆಯಾಮಗಳಲ್ಲಿ ತಮ್ಮ ಸೃಜನಶೀಲತೆಯನ್ನು ಕ್ರಿಯಾತ್ಮಕವಾಗಿ ಬಳಸಿಕೊಂಡಿರುವ ಮೈಸೂರು ವಾಗ್ಗೇಯಕಾರರು ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅನನ್ಯವಾಗಿದೆ.

ಆಕರ ಗ್ರಂಥಸೂಚಿ

Chennakeshavaiya, N. Rao, Padmanabha B.K. Yoganarasimham, H. (Ed.) 1954. Compositions of Mysore Sadashiva Rao. Mysore: Sangeetha Kalabhivardhini Sabha.

ನಾರಾಯಣಮೂರ್ತಿ, ಎಂ ಎಸ್. (ಸಂ). 2001. ಶಿವರಾಮ ಸಂಗೀತ ಸುಧಾ. ಬೆಂಗಳೂರು: ಅನನ್ಯ ಜಿ. ಎಂ. ಕಲ್ಚರಲ್ ಅಕಾಡೆಮಿ.

ಪ್ರಭಾಕರ್, ಸುಕನ್ಯಾ. 2008. ಮೈಸೂರು ವಾಗ್ಗೇಯಕಾರರ ಸಾಧನೆ ಸಿದ್ಧಿ ಹಾಗೂ ವರ್ಣಗಳು. ಬೆಂಗಳೂರು: ಅನನ್ಯ ಪ್ರಕಾಶನ.

ಪ್ರಭಾಕರ್, ಸುಕನ್ಯಾ. 2012. ಸಂಗೀತಾತ್ಮಕ ಚಿಂತನ ಸೌರಭ. ಮೈಸೂರು: ಡಿವಿಕೆ ಮೂರ್ತಿ ಪ್ರಕಾಶನ.

Pranesh, Meera Rajaram. 2003. Musical Composers During Wodeyar Dynasty (1638-1947 A.D.). Bangalore: Vanamala Center for Art and Culture.

ರಂಗನಾಥ್, ಬಿ ಜೆ. (ಸಂ).2013.ಮೈಸೂರು ವಾಗ್ಗೇಯಕಾರರು. ಎರಡನೇ ವಿಸ್ತೃತ ಮುದ್ರಣ. ಮೈಸೂರು: ಭಾರತೀ ಪ್ರಕಾಶನ.

ಸತ್ಯನಾರಾಯಣ, ರಾ.2001. ಕರ್ನಾಟಕ ಸಂಗೀತವಾಹಿನಿ. ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

ಸಂಪತ್ಕುಮಾರಾಚಾರ್ಯ, ವಿಎಸ್. 1983. ಕರ್ನಾಟಕ ಸಂಗೀತ ಪಾರಿಭಾಷಿಕ ಕೋಶ–ಸಂಪುಟ–1. ಮೈಸೂರು: ಪ್ರಸಾರಾಂಗ ಮೈಸೂರು ವಿಶ್ವ ವಿದ್ಯಾನಿಲಯ.

ಸಂಪತ್ಕುಮಾರಾಚಾರ್ಯ, ವಿ ಎಸ್. ರಾಮರತ್ನಂ, ವಿ. 2000. ಕರ್ನಾಟಕ ಸಂಗೀತ ದೀಪಿಕೆ. ಮೈಸೂರು: ಡಿವಿಕೆ ಮೂರ್ತಿ ಪ್ರಕಾಶನ.

ಶ್ರೀನಿವಾಸ್, ಸೇತೂರಾವ್. (ಸಂ.). 1984. ಗಾನಕಲಾಬಂಧು ಸಂಗೀತ ಚೂಡಾಮಣಿ ಸಂಗೀತ ವಿದ್ವಾನ್ ಬಿ. ಕೆ. ಪದ್ಮನಾಭರಾಯರ ಜೀವನ ಮತ್ತು ಕೃತಿಗಳ ಕುರಿತ ಸ್ಮರಣ ಗ್ರಂಥ. ಮಣಿಪಾಲ: ಮಣಿಪಾಲ ಪವರ್ ಪ್ರೆಸ್.

Sundaram, B M.1987. TALA SANGRAHA.Bangalore: Purcusive Art Centre.

ಯೋಗನರಸಿಂಹಂ, ಹೆಚ್. ಸರಸ್ವತಿ, ಹೆಚ್. ವೈ. 1981. ಗೀತ ಕುಸುಮಾಂಜಲಿ. ಬೆಂಗಳೂರು: ಐ.ಬಿ.ಹೆಚ್. ಪ್ರಕಾಶನ.

ವಿಜಯಾ.2019. ಮೈಸೂರು ಸಿ.ರಂಗಯ್ಯನವರ ಸಂಗೀತ ರಚನೆಗಳ ಅಧ್ಯಯನ–ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಕಿರು ಸಂಶೋಧನಾ ಪ್ರಬಂಧ. ಬೆಂಗಳೂರು: ಜೈನ್ ಡೀಮ್ಡ್ ವಿಶ್ವವಿದ್ಯಾಲಯ.

ಸುರಭಿ ಸಿಂಚನ. ಸಂಗೀತಾತ್ಮಕ ತ್ರೈಮಾಸಿಕ. ಸಂಪುಟ 14. ಸಂಚಿಕೆ 3. 2019. ಮೈಸೂರು: ಸುರಭಿ ಗಾನಕಲಾ ಮಂದಿರ.

ಸುರಭಿ ಸಿಂಚನ. ಸಂಗೀತಾತ್ಮಕ ತ್ರೈಮಾಸಿಕ. ಸಂಪುಟ 15. ಸಂಚಿಕೆ 1,2,3. 2020. ಮೈಸೂರು: ಸುರಭಿ ಗಾನಕಲಾ ಮಂದಿರ.

❖❖❖

ನಾಶವಾದ ನೈಜ ಸಂಸ್ಕೃತಿ

ರೇಶ್ಮಾ ಭಟ್
ಕನ್ನಡ ಉಪನ್ಯಾಸಕಿ, ಸ.ಪ್ರ.ದ. ಕಾಲೇಜು, ವಾಮದಪದವು, ದ.ಕ.

ಆಲ್ ಟೈಮ್ ಲಿಟರೇಚರ್ ಎನ್ನಬಹುದಾದ, ದೇಶ ಭಾಷೆಗಳನ್ನು ಮೀರಿ ನಿಲ್ಲಬಲ್ಲ, ಅಭಿಜಾತ ಅಥವಾ ಕ್ಲಾಸಿಕ್ ಎಂದು ಕರೆಯಿಸಿಕೊಳ್ಳುವ ಒಂದು ಸಾಹಿತ್ಯ ವರ್ಗವಿದೆ. 'ಥಿಂಗ್ಸ್ ಫಾಲ್ ಅಪಾರ್ಟ್' (1958) ಎನ್ನುವುದು ಈ ವರ್ಗಕ್ಕೆ ಸೇರಿದ ಒಂದು ಇಂಗ್ಲಿಷ್ ಕಾದಂಬರಿ. ಇದು ಜಗತ್ತಿನ ಐವತ್ತಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ. ನೈಜೀರಿಯನ್ ಮೂಲದ ಚಿನುವಾ ಅಚಿಬೆ ಈ ಮೂಲಕ ಪ್ರಸಿದ್ಧಿಗೆ ಬಂದ ಲೇಖಕ. ಈತನಿಗೆ 2006ರ ಬೂಕರ್ ಪ್ರಶಸ್ತಿಯನ್ನೂ ಇದು ತಂದುಕೊಡುತ್ತದೆ. ಹೇಗೆ ಬಿಳಿಯರು ನಮ್ಮ ದೇಶಕ್ಕೆ ಒಂದು ಕೈಯಲ್ಲಿ ತಕ್ಕಡಿ ಮತ್ತೊಂದು ಕೈಯಲ್ಲಿ ಬೈಬಲನ್ನು ಹಿಡಿದುಕೊಂಡು ಪ್ರವೇಶಿಸಿದರೋ ಹಾಗೆಯೇ ಆಫ್ರಿಕಾಖಂಡವನ್ನೂ ಪ್ರವೇಶಿಸುತ್ತಾರೆ. ಅವರ ಪ್ರವೇಶದೊಂದಿಗೆ ಅಲ್ಲಿನ ನಿಸರ್ಗಪ್ರಿಯ ಸಂಸ್ಕೃತಿಯೊಂದು ನಿಧಾನಕ್ಕೆ ಕಣ್ಮರೆಯಾಗುತ್ತದೆ. ಅಲ್ಲಿನ ಜನ ಸಮುದಾಯದಿಂದಲೇ ಅವರ ಸಾಂಪ್ರದಾಯಿಕ ಸಮಾಜವೊಂದನ್ನು ನಿರ್ನಾಮಮಾಡುವ ದುರಂತ ಚಿತ್ರಣ ಇಲ್ಲಿದೆ. ಶಕ್ತಿಶಾಲಿಯಾಗಿ, ಸ್ವಾವಲಂಬಿಯಾಗಿ, ನಿಸರ್ಗಕ್ಕೆ ಹತ್ತಿರವಾಗಿ ಬದುಕುತ್ತಿದ್ದ ಜೀವನ ಪದ್ಧತಿಯೊಂದು ಕೊನೆಗೆ ನಿರ್ವೀರ್ಯವಾಗಿ ಬಿಳಿಯರ ಪದತಲದಲ್ಲಿ ಮಂಡಿಯೂರಿ ಶರಣಾದುದು ಶತಮಾನ ಕಂಡ ದುರಂತಗಳಲ್ಲಿ ಒಂದು.

'ಬೋರ್ಗರೆವ ಜ್ವಾಲೆ' ಎಂದೇ ಹೆಸರನ್ನು ಪಡೆದಿದ್ದ ಈ ಕಾದಂಬರಿಯ ನಾಯಕ ಓಕೋಂಕ್ವೋ 'ಜ್ವಲಿಸುವ ಅಗ್ನಿಯು ಕೊನೆಗೆ ದುರ್ಬಲ ಬೂದಿಗೆ ಜನ್ಮ ನೀಡುತ್ತದೆ' ಎಂಬ ಸತ್ಯವನ್ನು ಮನವರಿಕೆ ಮಾಡಿಕೊಳ್ಳುತ್ತಾನೆ. ಇಡೀ ಸಮುದಾಯವನ್ನೇ ರಕ್ಷಿಸಲು ಬದ್ಧನಾಗಿದ್ದ ಆತನಿಗೆ ತನ್ನ ಮಗನೇ ಅನ್ಯ ಧರ್ಮಕ್ಕೆ ಮತಾಂತರಗೊಂಡು ತಾನು ಕಷ್ಟಪಟ್ಟು ಗಳಿಸಿದ್ದ ಬಿರುದುಗಳಿಗೆ ಬಲವಾದ ಹೊಡೆತ ನೀಡಿದಾಗ ಅಸಹಾಯಕನಾಗಿ ಆತ್ಮಹತ್ಯೆಗೆ ಶರಣಾಗುವುದನ್ನು ಈ ಕಾದಂಬರಿ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಹಾಗೆ ನೋಡಿದರೆ ಇದು ನೈಜೀರಿಯಾದ ಇಬೋ ಜನಾಂಗಕ್ಕೆ ಸೇರಿದ ಒಂಭತ್ತು ಹಳ್ಳಿಗಳ ಕಥೆ ಮಾತ್ರವಲ್ಲದೆ ವಸಾಹತುಶಾಹಿಯ ಕಹಿಯುಂಡ ಎಲ್ಲಾ ದೇಶಗಳ ಕಥೆ. ಇಲ್ಲಿ ನಾನು ಕಾದಂಬರಿಯಲ್ಲಿ ಕಾಣಸಿಗುವ ಆ ಸಂಸ್ಕೃತಿಯ ಕೆಲವು ಪದ್ಧತಿ ಆಚರಣೆಗಳ ವಿವರಗಳನ್ನು ನೀಡಿದ್ದೇನೆ. ಅನೇಕ ಕಡೆ ಇದು ನಮ್ಮ ಆಚಾರಗಳನ್ನು ಹೋಲುತ್ತದೆ.

ಕುಸ್ತಿಯಲ್ಲಿ 'ಬೆಕ್ಕು' ಬಿರುದಾಂಕಿತನಾದ ಅಮಲಿಂಜೆಯನ್ನು ಸೋಲಿಸಿದ ಓಂಕೊಂಕ್ವೋ ಉಮುವೋಫಿಯಾ ಎಂಬ ಹಳ್ಳಿಗೆ ಸೇರಿದವನು. ಆದರೆ ಅವನ ಅಪ್ಪ ಉನೋಕ ಸೋಮಾರಿಯಾಗಿಯೇ ಜೀವನ ಕಳೆದವನು. ಹಣ ಸಿಕ್ಕಿದ ಕೂಡಲೆ ಅದನ್ನು ಹೆಂಡದಂಗಡಿಗೆ ಹಾಕಿ ತನ್ನ ಸ್ನೇಹಿತರೊಡನೆ ತಿಂದು ಕುಡಿದು ಕುಣಿದು ಮುಗಿಸಿ ಬರುತ್ತಿದ್ದವನು. 'ಸತ್ತವನೊಬ್ಬನ ಬಾಯಿ ಒಣಗಿ ಹೋಗಿದ್ದರೆ ಆತ ಜೀವಂತವಿರುವಾಗ

ತಿಂದು ಕುಡಿದು ತೃಪ್ತಿಪಡಲಿಲ್ಲ. ಹಾಗಾಗಿ ಆತನ ಬಾಯಿ ಒಣಗಿಹೋಗಿದೆ' ಎಂದು ಹೇಳುತ್ತಿದ್ದವನು. ಅತಿಯಾದ ಸಾಲಗಾರನಾಗಿದ್ದರೂ ಕೊಳಲನ್ನು ನುಡಿಸುವುದು ಆತನ ಇಷ್ಟದ ಕೆಲಸವಾಗಿತ್ತು. ಯುದ್ಧದ ವಿಷಯ ಬಂದರೆ ಅದನ್ನು ನಿವಾರಿಸಿ ಸಂಗೀತದ ಕಡೆ ತನ್ನ ಮಾತನ್ನು ಹೊರಳಿಸುತ್ತಿದ್ದನು. ಮಹತ್ವಾಕಾಂಕ್ಷೆ ಇಲ್ಲದ, ಜೀವನ ಪ್ರೀತಿ ಇದ್ದಂತಹ ಮನುಷ್ಯನಾಗಿದ್ದವನು ತನ್ನ ಮಗ ಓಕೋಂಕ್ವೋನಿಗೆ ಸರಿ ವಿರುದ್ಧವಾದ ಸ್ವಭಾವವನ್ನು ಹೊಂದಿದ್ದವನು.

ಮನೆಗೆ ಯಾರಾದರೂ ಅತಿಥಿಗಳು ಬಂದರೆ ಕೋಲಾಕಾಯಿಯನ್ನು ತಂದು ಅವರೆದುರು ಇಡುವುದು ಆ ಜನಾಂಗದ ಪದ್ಧತಿಯಾಗಿತ್ತು. ಬಂದ ಅತಿಥಿಗಳು ಆಯುಷ್ಯ ಆರೋಗ್ಯ ಹಾಗೂ ದುಷ್ಟಶಕ್ತಿಗಳಿಂದ ರಕ್ಷಣೆ ನೀಡುವಂತೆ ತಮ್ಮ ಪೂರ್ವಜರನ್ನು ಸ್ಮರಿಸುತ್ತಾ ಕೋಲಾ ಕಾಯಿಯನ್ನು ಒಡೆದು, ನಂತರ ಎಲ್ಲರೂ ಸೇರಿ ತಿನ್ನುವುದು ಅವರ ಕ್ರಮವಾಗಿತ್ತು. ಯಾರು ಈ ಕೋಲಾ ಕಾಯಿಯನ್ನು ಕೊಡುತ್ತಾರೋ ಅವರು ಆಯುಷ್ಯವನ್ನೇ ಕೊಟ್ಟಂತೆ ಎಂಬುದು ಅಲ್ಲಿನ ಜನರ ನಂಬುಗೆ. ಕಟ್ಟಿಗೆಯ ರೂಪದಲ್ಲಿದ್ದ ಪೂರ್ವಿಕರ ಆತ್ಮಗಳಿಗೂ ಈ ಕೋಲಾ ಕಾಯಿಯನ್ನು ನೈವೇದ್ಯವಾಗಿ ಅರ್ಪಿಸುತ್ತಿದ್ದರು. ಮಾತು ಮಾತಿಗೂ ಗಾದೆಗಳನ್ನು ಬಳಸುತ್ತಾ ರಂಜನೀಯವಾಗಿ ಮಾತಾಡುವುದನ್ನು ಆ ಜನರು ಕಲಿತಿದ್ದರು. ಸಾಧನೆ ಮಾಡಿದ ವ್ಯಕ್ತಿಗಳಿಗೆ ಬಿರುದುಗಳನ್ನು ನೀಡಿ ಗೌರವಿಸುವ ಸಂಪ್ರದಾಯವನ್ನು ಹೊಂದಿತ್ತು ಆ ಸಮಾಜ. 'ಮಗುವಿನ ಕೈ ಸ್ವಚ್ಛವಾಗಿದ್ದರೆ ಅದು ಅರಸನ ಜೊತೆ ಕುಳಿತು ಉಣ್ಣಬಹುದು' ಎಂಬ ಹಿರಿಯರ ಮಾತು ಮೋಸ ವಂಚನೆಗಳಿಲ್ಲದ ಬದುಕು ಎಲ್ಲದಕ್ಕಿಂತ ಮುಖ್ಯ ಎಂಬ ಸಂದೇಶವನ್ನು ಕಿರಿಯರಿಗೆ ತಲುಪಿಸುತ್ತಿತ್ತು.

ರಾತ್ರಿಹೊತ್ತು ಶಿಳ್ಳೆ ಹೊಡೆಯಬಾರದು, ಮೃಗಗಳು ಇನ್ನಷ್ಟು ಅಪಾಯಕಾರಿಯಾಗಿ ವರ್ತಿಸುತ್ತವೆ, ಹಾವುಗಳ ಹೆಸರನ್ನು ರಾತ್ರಿ ಉಚ್ಚರಿಸಿದರೆ ಅದನ್ನು ಅವುಗಳು ಕೇಳಿಸಿಕೊಂಡು ಮನೆಯ ಹತ್ತಿರ ಸುಳಿದಾಡುತ್ತವೆ. ಹಾಗಾಗಿ ಅವುಗಳಿಗೆ ಬಳ್ಳಿಗಳೋ ಇನ್ನೊಂದೋ ಹೆಸರು ಇಟ್ಟು ಕರೆಯಬೇಕು ಎಂಬೆಲ್ಲಾ ಎಚ್ಚರಿಕೆಗಳನ್ನು ಮಕ್ಕಳಿಗೆ ಕೊಡುತ್ತಿದ್ದರು. ಬೆಳದಿಂಗಳ ರಾತ್ರಿಯನ್ನು ಆ ಜನಾಂಗ ಪೂರ್ತಿಯಾಗಿ ಅನುಭವಿಸುತ್ತಿತ್ತು. 'ಚಂದ್ರಮನ ಬೆಳಕಿನಲ್ಲಿ ಹೆಳವನಿಗೂ ನಡೆಯುವಾಸೆ' ಎಂಬುದು ಅವರಾಡುತ್ತಿದ್ದ ಇಬೋ ಗಾದೆ. ಏನಾದರೂ ವಿಷಯವಿದ್ದರೆ ಆ ಒಂಬತ್ತು ಹಳ್ಳಿಗಳಿಗೂ ತಿಳಿಯುವಂತೆ ಡಂಗುರ ಸಾರಿ ಹೇಳುವ ಪದ್ಧತಿಯೊಂದು ಅಲ್ಲಿತ್ತು. ಸಂತೆಯ ಮೈದಾನದಲ್ಲಿ ಎಲ್ಲರನ್ನೂ ಸೇರಿಸಿ ವಿಷಯವನ್ನು ಚರ್ಚಿಸುತ್ತಿದ್ದರು. ಎಂಬೈನೋ ಮಾರುಕಟ್ಟೆಗೆ ಹೋದ ಉಮವೋಫಿಯಾದ ಹೆಣ್ಣುಮಗಳೊಬ್ಬಳು ಕೊಲೆಯಾಗಿದ್ದಳು. ಆ ಕೊಲೆಗೆ ಪರಿಹಾರವೆಂಬಂತೆ ಎಂಬೈನೋದವರು ಒಬ್ಬಳು ಹೆಣ್ಣನ್ನೂ ಒಬ್ಬ ಹುಡುಗನನ್ನೂ ಪ್ರತಿಯಾಗಿ ಉಮವೋಫಿಯಾಕ್ಕೆ ಕಳುಹಿಸಿಕೊಟ್ಟಿದ್ದರು. ಹೆಣ್ಣು ಕೊಲೆಯಾದ ಹೆಂಡತಿಯ ಸ್ಥಾನವನ್ನು ತುಂಬಿದರೆ, ಹುಡುಗ ಈ ಕಥಾನಾಯಕನಾದ ಓಕೊಂಕ್ವೋನನ್ನು ಅಪ್ಪನೆಂದು ಕರೆಯುತ್ತಾ ಮುಂದಿನ ಮೂರು ವರ್ಷಗಳ ಕಾಲ ಅವನ ಮನೆಯ ಮಕ್ಕಳ ಜೊತೆ ಬೆಳೆಯುತ್ತಾನೆ. ಆದರೆ ತಾನೊಬ್ಬ ಪರಾಕ್ರಮಶಾಲಿ ಎಂದು ತೋರಿಸಿಕೊಳ್ಳಲು ಹಾಗೂ ಕುಲದ ಹಿರಿಯರ ಮಾತನ್ನು ಉಳಿಸಿಕೊಳ್ಳಲು ಬೇಕಾಗಿ ಕಾರಣವಿಲ್ಲದೆ ಆ ಹುಡುಗನ ಕೊಲೆಯನ್ನು ಓಕೊಂಕ್ವೋ ತಾನೇ ಮಾಡುತ್ತಾನೆ.

ಉಮವೋಫಿಯಾದವರು ಸುಖಾಸುಮ್ಮನೆ ಯುದ್ಧಕ್ಕೆ ಕಲಹಕ್ಕೆ ಹೋಗುತ್ತಿರಲಿಲ್ಲ. ಯುದ್ಧ ನ್ಯಾಯಸಮ್ಮತವೆಂದು ಅವರಿಗೆ ಗವಿಗುಡ್ಡಗಳ ದಿವ್ಯವಾಣಿಯಿಂದ ಸಮ್ಮತಿ ಬರಬೇಕಿತ್ತು. ಅಂಥಾ ಸಮ್ಮತಿಯಿಲ್ಲದ ಯುದ್ಧವನ್ನು ಅವರ ಹಿರಿಯಜ್ಜಿ ಅಗಾಡಿನ್ವಾಯಿ ಒಪ್ಪುತ್ತಿರಲಿಲ್ಲ. ಅಗ್ಬಾಲ ಎನ್ನುವ ಪೂಜಾರಿಣಿ ಉಮವೋಫಿಯಾದ ಜನರ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಹೇಳುತ್ತಿದ್ದಳು. ಇಬಾ ಜನಾಂಗದಲ್ಲಿ ರೋಗದಿಂದ ಸತ್ತವರನ್ನು ಮಣ್ಣಿನಲ್ಲಿ ಹೂಳುತ್ತಿರಲಿಲ್ಲ. ಅದು ಭೂಮಿತಾಯಿಗೆ ಮಾಡುವ ಅವಮಾನವೆಂದು ಅವರನ್ನು ದುಷ್ಟಬನಕ್ಕೆ ಒಯ್ದು ಬಿಟ್ಟು ಬರುತ್ತಿದ್ದರು. ಮೈಯೆಲ್ಲ ಬಾವು ಬಂದ ಉನೋಕನನ್ನು ದುಷ್ಟಬನದಲ್ಲಿ ಬಿಟ್ಟು ಬಂದಿದ್ದರು. ಹಾಗಾದರೆ ಈ ದುಷ್ಟಬನವೆಂದರೇನು? ಕೆಟ್ಟ ಖಾಯಿಲೆಗಳಿಂದ ಸತ್ತವರನ್ನು ಹುಗಿಯುವ ಜಾಗ ಮಾತ್ರವಲ್ಲದೆ, ಅವಳಿ ಮಕ್ಕಳನ್ನು, ಕುಲದಿಂದ ಬಹಿಷ್ಕೃತರಾದವರನ್ನೂ, ರೋಗದಿಂದ ಬಳಲುವವರನ್ನು ಬಿಟ್ಟು ಬರುವ ದುಷ್ಟಶಕ್ತಿಗಳಿಂದ ತುಂಬಿದ ಜಾಗವಾಗಿತ್ತು ಅದು.

ಎಲ್ಲರೂ ಕುಳಿತು ಹೆಂಡ ಕುಡಿಯುತ್ತಾ ಹರಟುವುದು ಅವರ ಮೆಚ್ಚಿನ ವಿಷಯವಾಗಿತ್ತು. 'ಹಗಲು ಹೊತ್ತಲ್ಲಿ ಕಪ್ಪೆ ಕಾರಣವಿಲ್ಲದೆ ಓಡುವುದಿಲ್ಲ' – ಮನುಷ್ಯನ ಪ್ರತಿಯೊಂದು ಕ್ರಿಯೆಗೂ ಒಂದು ಕಾರಣವಿದ್ದೇ ಇರುತ್ತದೆ ಎನ್ನುವುದು ಅವರು ಮಾತಿನ ನಡುವೆ ಬಳಸುತ್ತಿದ್ದ ಇನ್ನೊಂದು ಗಾದೆ. ಹಬ್ಬದ ಅಂಗವಾಗಿ ಆಚರಿಸುತ್ತಿದ್ದ ಪವಿತ್ರ 'ಶಾಂತಿ ಸಪ್ತಾಹ'ದ ಅವಧಿಯಲ್ಲಿ ಯಾರೂ ಊರಿನ ಶಾಂತಿಯನ್ನು ಕೆಡಿಸುವಂತಿರಲಿಲ್ಲ. ಒಂದೊಮ್ಮೆ ಆ ಅವಧಿಯಲ್ಲಿ ಶಾಂತಿ ಕದಡಿದರೆ ಅನ್ನ ನೀಡುವ ಭೂಮಿತಾಯಿಯನ್ನು ಅವಮಾನಿಸಿದಂತೆ... ಆಕೆ ಮುನಿದರೆ ದುರ್ಭಿಕ್ಷ್ಯ ಉಂಟಾಗುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಓಂಕೊಂಕ್ವೋ ಒಮ್ಮೆ ಇದನ್ನು ಉಲ್ಲಂಘಿಸಿ ತನ್ನ ಹೆಂಡತಿಗೆ ಹೊಡೆದದ್ದರಿಂದ ಒಂದು ಹೆಣ್ಣು ಮೇಕೆ, ಒಂದು ಕೋಳಿ, ಒಂದು ವಸ್ತ್ರದ ತುಂಡು, ಹಾಗೂ ನೂರು ಕವಡೆಗಳ ತಪ್ಪು ಕಾಣಿಕೆಯನ್ನು ಭೂಮಿತಾಯಿ ಆನಿಗೆ ಸಮರ್ಪಿಸಬೇಕಾಯಿತು. ಈ ಆನಿಯನ್ನು ಪೂಜಿಸುವ ಪೂಜಾರಿ ಎಜಿಯಾನಿ ಪವಿತ್ರ ಸಪ್ತಾಹದ ಉದ್ದೇಶವನ್ನು ತಿಳಿಸಿ ಹೇಳುತ್ತಾ, ಆ ಸಪ್ತಾಹದಲ್ಲಿ ಯಾರೂ ಕೆಟ್ಟ ಮಾತುಗಳನ್ನೂ ಆಡುವಂತಿಲ್ಲ ಮಾತ್ರವಲ್ಲ, 'ನೀನು ನಿನ್ನ ಓಬಿಯ ಒಳಗೆ ಬಂದಾಗ ನಿನ್ನ ಹೆಂಡತಿಯ ಮೇಲೆ ಅವಳ ಪ್ರಿಯಕರ ಮಲಗಿಕೊಂಡಿದ್ದರೂ ನೀನು ಅವಳನ್ನು ಹೊಡೆಯುವಂತಿಲ್ಲ' ಎಂದಿದ್ದ.

ಕಣಜಗಳಲ್ಲಿ ತುಂಬಿರುವ ಗೆಡ್ಡೆಗಳ ದಾಸ್ತಾನಿನ ಮೂಲಕ ಒಬ್ಬ ರೈತನ ಸಿರಿವಂತಿಕೆಯನ್ನು ನಿರ್ಧರಿಸುತ್ತಿದ್ದರು. ಯಾರು ತನ್ನ ಪರಿವಾರವೆಲ್ಲ ಒಂದು ವರ್ಷದವರೆಗೆ ಕುಳಿತು ತಿನ್ನುವಷ್ಟು ಗೆಡ್ಡೆಗಳನ್ನು ಬೆಳೆಯುತ್ತಾರೊ ಅವರು ಅತ್ಯಂತ ಪರಾಕ್ರಮಶಾಲಿಗಳು ಶೂರರು ಎಂಬುದು ಇಬೋಗಳ ನಂಬಿಕೆ. ಇದರ ಒಂದು ಬೆಳೆ ತೆಗೆಯಲು ನಾಲ್ಕು ಹುಣ್ಣಿಮೆಗಳ ಅವಧಿ ಬೇಕಿತ್ತು. ಇದನ್ನು ಒಂಕೋಂಕ್ವೋ ಸಾಧಿಸಿ ತೋರಿಸಿದ್ದ. 'ಯಾರು ತಯಾರಿದ್ದೇನೆ ಎಂದು ಹೇಳುತ್ತಾರೋ ಅದಕ್ಕೆ 'ಚಿ' (ದೇವರು) ತಥಾಸ್ತು ಎನ್ನುತ್ತದೆ'. ಎನ್ನುವ ಇಬೋಗಳು ಶ್ರಮ ಸಂಸ್ಕೃತಿಯಲ್ಲಿ ನಂಬಿಕೆ ಇಟ್ಟವರಾಗಿದ್ದರು. ಆದರೆ ಅವನ ಮಗ ಎನ್ನೋಯಿ ತನ್ನ ತಂದೆ ಉನೋಕನಂತೆ ಸೋಮಾರಿಯಾದದ್ದನ್ನು ಸಹಿಸಲು ಆತನಿಂದ ಸಾಧ್ಯವಾಗುತ್ತಿರಲಿಲ್ಲ. ಸೋಮಾರಿತನವನ್ನು ಆಕಾಶದ ದೇವರಾದ ಅಮಾಡಿಯೋರ ಸಹಿಸುವುದಿಲ್ಲ

ಎಂಬುದು ಆತನ ನಂಬಿಕೆಯಾಗಿತ್ತು. ಭೂಮಿತಾಯಿ ಆನಿಗೆ ಧನ್ಯವಾದ ಅರ್ಪಿಸುವ ಗೆಣಸಿನ ಹಬ್ಬವೂ ಅಲ್ಲಿತ್ತು. ಭೂಮಿಯಲ್ಲಿ ಹೂತ ಸತ್ತ ಆತ್ಮಗಳ ಜೊತೆ ಭೂಮಿತಾಯಿ ಆನಿಗೆ ಸಂಪರ್ಕವಿದ್ದ ಕಾರಣ ಗೆಣಸಿನ ಹಬ್ಬದಂದು ಹಿರಿಯರ ಆತ್ಮಕ್ಕೆ ಹೊಸ ಬೆಳೆಯನ್ನು ಸಮರ್ಪಿಸುವ ಕಾರ್ಯಕ್ರಮವೂ ಇರುತ್ತಿತ್ತು. ಗೆಣಸಿನ ಮುದ್ದೆಯ ಜೊತೆಗೆ ಮಾಂಸದ ಸಾರನ್ನು ಬಂಧು ಬಾಂಧವರೊಂದಿಗೆ ಸೇರಿ ಸವಿದಾದ ನಂತರ ಹಬ್ಬದ ಅಂಗವಾಗಿ ಕುಸ್ತಿ ಪಂದ್ಯಾಟ ನಡೆಯುತ್ತಿತ್ತು. ಪ್ರತಿಯೊಂದು ಹಳ್ಳಿಯಲ್ಲೂ 'ಇಲೋ' ಎನ್ನುವ ಆಟದ ಬಯಲು ಇರುತ್ತಿತ್ತು. ಹಳ್ಳಿಯ ಎಲ್ಲಾ ಕಾರ್ಯಕ್ರಮಗಳೂ ನೃತ್ಯಗಳೂ, ಪಂದ್ಯಾಟಗಳೂ ಅಲ್ಲಿಯೇ ನಡೆಯುತ್ತಿದ್ದವು.

ಈ ಕಾದಂಬರಿಯಲ್ಲಿ ಇಬೋ ಜನಾಂಗಕ್ಕೆ ವಿಶಿಷ್ಟವಾಗಿರುವ ನ್ಯಾಯಾಂಗ ವ್ಯವಸ್ಥೆಯೊಂದು ಅನಾವರಣಗೊಂಡಿದೆ. 'ಎಗ್ವುಗ್ವು'ಗಳೆಂಬ ಮುಖವಾಡ ಧರಿಸಿದ ವೇಷಧಾರಿಗಳ ಮೈಮೇಲೆ ಸತ್ತ ಹಿರಿಯರ ಆತ್ಮಗಳು ಬಂದು ನ್ಯಾಯದಾನವನ್ನು ಮಾಡುತ್ತಿದ್ದವು. ಈ ಪ್ರಕ್ರಿಯೆಯಲ್ಲಿ ಒಂಭತ್ತು ಹಳ್ಳಿಗಳನ್ನು ಒಬ್ಬೊಬ್ಬರು ಪ್ರತಿನಿಧಿಸುವಂತೆ ಒಟ್ಟು ಒಂಭತ್ತು ಎಗ್ವುಗ್ವುಗಳು ಅಲ್ಲಿ ಇರುತ್ತಿದ್ದವು. ಆ ಒಂಭತ್ತು ಬುಡಕಟ್ಟಿನವರ ಮೂಲ ಪಿತೃ ಒಬ್ಬನೇ ಆಗಿದ್ದರೂ ಈಗ ಅವೆಲ್ಲ ಬೇರೆ ಬೇರೆಯಾಗಿ ಗುರುತಿಸಿಕೊಂಡಿದ್ದವು. ಈ ಎಗ್ವುಗ್ವುಗಳ ನಾಯಕನನ್ನು 'ಕ್ರೂರಬನ' ಎಂದು ಕರೆಯುತ್ತಿದ್ದರು. ಇವುಗಳು ಮಾನವರನ್ನು 'ದೇಹಗಳು' ಎಂದು ಸಂಬೋಧಿಸುತ್ತಿದ್ದವು. ಎರಡೂ ಕಡೆಯ ಕಕ್ಷಿದಾರರ ವಾದ ವಿವಾದಗಳನ್ನು ಆಲಿಸಿ, ಸಾಕ್ಷಿದಾರರ ಮಾತುಗಳನ್ನು ಕೇಳಿಸಿಕೊಂಡು, ತಮ್ಮತಮ್ಮಲ್ಲೇ ಚರ್ಚಿಸಿ ವ್ಯಾಜ್ಯಗಳನ್ನು ಪರಿಹರಿಸುತ್ತಿದ್ದವು. ನಮ್ಮಲ್ಲಿದ್ದ ಸರಪಂಚರ ನ್ಯಾಯವ್ಯವಸ್ಥೆಯಂತೆ ಇದೂ ಬಹಳ ಕ್ಷಿಪ್ರವಾಗಿ, ನ್ಯಾಯಯುತವಾಗಿ ನಡೆಯುತ್ತಿತ್ತು.

ಗಂಡು ವಧುದಕ್ಷಿಣೆ ಕೊಟ್ಟು ಮದುವೆಯಾಗುವ ಪದ್ಧತಿ ಅಲ್ಲಿ ಇತ್ತು. ಮದುವೆ ಮುಂತಾದ ಸಮಾರಂಭಗಳಲ್ಲಿ ಊರಿಗೆ ಊರೇ ಪಾಲ್ಗೊಂಡು ಕೆಲಸಗಳನ್ನು ಹಂಚಿಕೊಂಡು ಸಂಭ್ರಮಿಸುತ್ತಿತ್ತು. ಒಬ್ಬ ವ್ಯಕ್ತಿ ವಧುದಕ್ಷಿಣೆಯನ್ನು ಕೊಟ್ಟು ಎಷ್ಟು ಹೆಣ್ಣುಗಳನ್ನು ಬೇಕಾದರೂ ಮದುವೆಯಾಗಬಹುದಿತ್ತು. ತಮ್ಮ ಆವರಣದೊಳಗೆ ಬೇರೆ ಬೇರೆ ಓಬಿ(ಬಿಡಾರ)ಗಳನ್ನು ನಿರ್ಮಿಸಿ ಅವರನ್ನು ಅಲ್ಲಿರಿಸಿಕೊಳ್ಳುತ್ತಿದ್ದರು. ಪ್ರತಿಯೊಬ್ಬರು ಬೇರೆ ಬೇರೆಯಾಗಿಯೇ ಅಟ್ಟು ಉಣ್ಣುತ್ತಿದ್ದುದಲ್ಲದೆ ಗಂಡನಾದವನಿಗೆ ಅವರೆಲ್ಲರ ಬಿಡಾರದಿಂದ ಊಟವನ್ನು ತರುವ ಕ್ರಮವಿತ್ತು.

ಸತ್ತವರ ಆತ್ಮಗಳು ಅನೇಕ ಸಂದರ್ಭಗಳಲ್ಲಿ ಕಾಣಿಸಿಕೊಂಡು ಜೀವಂತ ಇದ್ದವರ ಜೊತೆ ಒಂದು ರೀತಿಯಾಗಿ ಸಂಪರ್ಕವನ್ನು ಇಟ್ಟುಕೊಳ್ಳುತ್ತಿದ್ದವು. ತನ್ನ ಕುಲದವರ ಹತ್ಯೆ ಮಾಡಿದರೆ ಅದು ಭೂಮಿತಾಯಿಯ ವಿರುದ್ಧ ಎಸಗಿದ ಅಪರಾಧವೆಂದು ಪರಿಗಣಿಸಿ ಆರೋಪಿತರಿಗೆ ಏಳುವರ್ಷಗಳ ಗಡಿಪಾರಿನ ಶಿಕ್ಷೆ ವಿಧಿಸಲಾಗುತ್ತಿತ್ತು. ಆಕಸ್ಮಿಕವಾಗಿ ಆದ ಒಂದು ಅವಘಡದಿಂದ ಒಕೊಂಕ್ವೋ ಈ ಶಿಕ್ಷೆಗೆ ಗುರಿಯಾಗಿ ತನ್ನ ತಾಯಿಯ ತವರಾದ ಎಂಬಾಂಟ ಎಂಬ ಹಳ್ಳಿಯಲ್ಲಿ ತನ್ನ ಕುಟುಂಬದವರ ಜೊತೆ ಶಿಕ್ಷೆಯ ಏಳು ವರ್ಷಗಳನ್ನು ಕಳೆಯುತ್ತಾನೆ. ಪಾಪ ಕೃತ್ಯದ ಪ್ರಾಯಶ್ಚಿತ ಕ್ರಿಯೆಯಾಗಿ ಪ್ರಾಣಿಬಲಿಯನ್ನೂ ಪೂರೈಸುತ್ತಾನೆ.

ಇಷ್ಟೆಲ್ಲ ಪದ್ಧತಿ ಆಚರಣೆಗಳಿದ್ದ ಆ ಊರಿನಲ್ಲಿ ಇದ್ದಕ್ಕಿದ್ದ ಹಾಗೆ ಕಬ್ಬಿಣದ ಕುದುರೆಯನ್ನು (ಸೈಕಲ್) ಏರಿ ಬಂದ ಬಿಳಿಚರ್ಮದ ವ್ಯಕ್ತಿಯೊಬ್ಬ ಕಾಣಿಸಿಕೊಳ್ಳುತ್ತಾನೆ.

ಭವಿಷ್ಯವಾಣಿ ನುಡಿಯುವ 'ಓರೇಕಲ್' ಆ ಮನುಷ್ಯ ಕುಲಬಾಂಧವರಲ್ಲಿ ಒಡಕು ತಂದು ಊರನ್ನೇ ನಾಶ ಮಾಡುವನು ಎಂದು ನುಡಿಯುತ್ತದೆ. ಆ ಭವಿಷ್ಯ ಕೇಳಿದ ಅಬಾಮೆಯ ಜನ ಅವನನ್ನು ಕೊಂದು ಅವನ ಕಬ್ಬಿಣದ ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ಹಾಕುತ್ತಾರೆ. ಆದರೆ ಭವಿಷ್ಯ ಹೇಳುವ ಓರೇಕಲ್ ಇನ್ನೂ ಒಂದು ಮಾತನ್ನು ಹೇಳಿರುತ್ತದೆ. ಅದೇನೆಂದರೆ ಈ ಬಿಳಿಜನ ಮಿಡತೆಗಳ ಹಾಗೆ ಗುಂಪು ಗುಂಪಾಗಿ ಬಂದು ಹಳ್ಳಿಗಳನ್ನು ನಾಶ ಮಾಡುತ್ತಾರೆ ಎಂದು. ಆ ನಂತರ ಮತ್ತೆ ಮೂವರು ಬಿಳಿಯರು ಹಳ್ಳಿಯ ಜನರನ್ನು ಕರೆದುಕೊಂಡು ಬಂದು ಮರಕ್ಕೆ ಕಟ್ಟಿದ್ದ ಸೈಕಲನ್ನು ನೋಡಿ ಹೋಗಿದ್ದರು. ಆದರೆ ಕೆಲವು ದಿನಗಳ ನಂತರದ ಸಂತೆಯಲ್ಲಿ ಈ ಬುಡಕಟ್ಟಿನ ಜನರೆಲ್ಲರೂ ಸೇರಿರುವ ಸಂದರ್ಭದಲ್ಲಿ ಆ ಮೈದಾನವನ್ನು ಸುತ್ತುವರೆದ ಬಿಳಿಯರು ಅಲ್ಲಿರುವ ಎಲ್ಲರನ್ನೂ ಗುಂಡು ಹಾರಿಸಿ ಕೊಂದು ಇಡೀ ಅಬಾಮೆಯ ಅಸ್ತಿತ್ವವನ್ನೇ ನಾಶ ಮಾಡಿದ್ದರು. (ನಮ್ಮ ಜಲಿಯನ್‌ವಾಲಾಬಾಗ್ ನೆನಪಾಗುತ್ತಿದೆ) ಇವೆಲ್ಲಾ ಕಥೆಗಳು ಗಡಿಪಾರಾಗಿದ್ದ ಓಕೋಂಕ್ವೋಗೆ ತಿಳಿಯುವಾಗ ಬಿಳಿ ಚರ್ಮದ ಧರ್ಮಪ್ರಚಾರಕರು ಉಮುವೋಫಿಯಾಕ್ಕೂ ಬಂದಾಗಿತ್ತು. ಅಲ್ಲಿ ಒಂದು ಚರ್ಚನ್ನು ಕಟ್ಟಿ ಕೆಲವರನ್ನು ತಮ್ಮ ಕಡೆಗೆ ಒಲಿಸಿಕೊಂಡು ಮತಾಂತರಕ್ಕೂ ತೊಡಗಿದ್ದರು. ಅಗ್ಬಾಲನ ಪೂಜಾರಿಣಿ ಮತಾಂತರಿಗಳನ್ನು 'ತಮ್ಮ ಕುಲದ ಅಮೇಧ್ಯವೆಂದೂ, ಅವರ ರಿಲಿಜನ್ನನ್ನು ಆ ಹೇಸಿಗೆಯನ್ನು ತಿನ್ನಲು ಬರುವ ನಾಯಿಗಳು' ಎಂದೂ ಹೇಳುತ್ತಿದ್ದಳು. ಕತ್ತಿಯನ್ನು ಮಾರಿ ಕೇವಲ ಅದರ ಒರೆಯನ್ನು ಧರಿಸಿಕೊಂಡು ತಿರುಗುವ 'ಎಫುಲೆಫು'ಗಳು (ಹೇಡಿಗಳು) ಎಂದು ಮತಾಂತರಗೊಂಡವರನ್ನು ಅಲ್ಲಿನ ಜನ ಮೂದಲಿಸುತ್ತಿದ್ದರು. ಇವೆಲ್ಲದರ ಮಧ್ಯೆ ಓಕೊಂಕ್ವೋನ ಮಗ ಎನ್ವೋಯಿಯೂ ಮತಾಂತರಗೊಂಡು ಹೊಸ ಧರ್ಮವನ್ನು ಸೇರಿದ್ದ.

ಬುಡಕಟ್ಟಿನವರು ಪೂಜಿಸುತ್ತಿದ್ದ ಕಟ್ಟಿಗೆ ಹಾಗೂ ಮಣ್ಣಿನ ದೇವರುಗಳೆಲ್ಲ ಸುಳ್ಳು ದೇವರುಗಳು ಎನ್ನುತ್ತಿದ್ದ ಬಿಳಿಯರು ಸೃಷ್ಟಿಕರ್ತ ಎನ್ನುವ ತಮ್ಮ ಹೊಸ ದೇವರನ್ನು ಅವರಿಗೆ ಪರಿಚಯಿಸಿದರು. ದುಬಾಷಿ ಇದನ್ನೆಲ್ಲ ಅಲ್ಲಿನ ಜನರಿಗೆ ಹೇಳುತ್ತಿದ್ದ. ಸುಳ್ಳು ದೇವರನ್ನು ಪೂಜಿಸಿದರೆ ಸಾವಿನ ನಂತರ ತೊಂದರೆಗೊಳಗಾಗಬೇಕಾಗುತ್ತದೆ ಎಂಬ ಭಯವನ್ನೂ ಅವರಲ್ಲಿ ಬಿತ್ತಿದ್ದರು. (ಭಾರತದಲ್ಲಿ ಬೈಬಲ್ ಸತ್ಯವೇದ ಆಗಿತ್ತು. ಸುಳ್ಳುವೇದ ಯಾವುದು ಊಹಿಸಿಕೊಳ್ಳಿ) ಭೂಮಿತಾಯಿ ಆನಿ, ಪ್ರಧಾನ ದೇವರು ಚುಕ್ವು, ಗುಡುಗು ಸಿಡಿಲುಗಳ ದೇವರು ಅಮಾಡಿಯೋರ ಇವರೆಲ್ಲ ನಮ್ಮ ದೇವರು ಎಂದು ನಂಬಿದ್ದ ಆ ಜನರಿಗೆ ಅವೆಲ್ಲ ದುಷ್ಟ, ನಿರ್ವೀರ್ಯ ದೇವರುಗಳು ಎಂದಾಗ ನಿಜಕ್ಕೂ ಗೊಂದಲ ಉಂಟಾಯಿತು. ಬಿಳಿ ಚರ್ಮದವರು ಚರ್ಚ್ ನಿರ್ಮಿಸಲು ಜಾಗ ಕೇಳಿದಾಗ, 'ದುಷ್ಟಬನ'ದ ಯಾರೂ ಪ್ರವೇಶಿಸದಿರುವ ಜಾಗವನ್ನು ಅವರಿಗೆ ಕೊಟ್ಟಿದ್ದರು. ಅವರು ಅಲ್ಲಿ ಚರ್ಚನ್ನು ಕಟ್ಟಿದರೆ ದುಷ್ಟಾತ್ಮಗಳ ಉಪದ್ರವದಿಂದ ಸತ್ತು ಹೋಗುತ್ತಾರೆಂದು ಆ ಜಾಗವನ್ನು ನೀಡಿದ್ದರು. ಆದರೆ ಊರಿನ ಹಿರಿಯರಿಗೆ ಅವರೆಲ್ಲ ಸುಖವಾಗಿರುವುದನ್ನು ಕಂಡು ನಿರಾಸೆಯಾಗಿತ್ತು. ಅವರಿಗೆ ಯಾವ ತೊಂದರೆಯೂ ಆಗದೆ ಇರುವುದನ್ನು ಕಂಡ ಆ ಜನರಿಗೆ ಬಿಳಿಯರ ದೇವರ ಬಗ್ಗೆ ನಂಬಿಕೆ ಮೂಡಿ ಮತ್ತೂ ಕೆಲವರು ಮತಾಂತರಗೊಂಡು ವಾರದ ಕೊನೆಯ ದಿನ ಅವರ ದೇವರನ್ನು ಪೂಜಿಸಲು ಚರ್ಚಿಗೆ ಹೋಗುತ್ತಿದ್ದರು. ಅನುಕೂಲಸ್ಥ ರೈತನ ಹೆಂಡತಿಯಾದ ಎನ್ನಿಕಾ

ಕೂಡ ಮತಾಂತರಗೊಂಡಿದ್ದಳು. ಈ ಹಿಂದೆ ಅವಳ ಅನೇಕ ಅವಳಿ ಮಕ್ಕಳನ್ನು ಮಡಕೆಯಲ್ಲಿ ತುಂಬಿಸಿ ದುಷ್ಟಬನದಲ್ಲಿ ಎಸೆಯಲಾಗಿತ್ತು. ಅವಳಿ ಮಕ್ಕಳನ್ನು ಹೆರುವ ಹೆಂಗಸಾಗಿದ್ದ ಅವಳು ಈಗ ಮತ್ತೆ ಗರ್ಭಿಣಿಯಾಗಿದ್ದಳು.

ಪವಿತ್ರವಾದ ಬೂರುಗದ ಮರದ ಕೆಳಗೆ ಕುಳಿತರೆ ಒಳ್ಳೆಯ ಮಕ್ಕಳನ್ನು ಪಡೆಯಬಹುದೆಂಬ ನಂಬಿಕೆ ಅವರಲ್ಲಿತ್ತು. ಆದರೆ ಅವಳಿ ಮಕ್ಕಳು ಭೂಮಿಯಲ್ಲಿ ಜನಿಸುವುದು ಅಪರಾಧ ಎಂದು ತೀರ್ಮಾನಿಸಲಾಗಿತ್ತು. ಕಾಡಿನಲ್ಲಿ ಎಸೆಯುತ್ತಿದ್ದ ಅವಳಿ ಮಕ್ಕಳನ್ನು ಚರ್ಚಿಗೆ ಸಂಬಂಧಪಟ್ಟವರು ತೆಗೆದುಕೊಂಡು ಹೋಗಿ ಕಾಪಾಡತೊಡಗಿದ್ದರು. ಅವರ ದೇವರನ್ನು ನಂಬುವವರ ಸಂಖ್ಯೆ ಹೆಚ್ಚಿಸಬೇಕೆಂಬ ಅವರ ಯೋಜನೆಗೆ ಅದು ಅನುಕೂಲವೇ ಆಗಿತ್ತು. ಮತಾಂತರಗೊಂಡವರು 'ನಿಮ್ಮ ದೇವರುಗಳು ಸತ್ತು ಹೋಗಿವೆ' ಎನ್ನುತ್ತಾ ತಮ್ಮ ಪೂರ್ವಾಶ್ರಮದ ದೇವರ ಗುಡಿಗಳನ್ನು ಸುಟ್ಟುಹಾಕಲು ಮುಂದಾದಾಗ 'ಹೋಗಿ ನಿಮ್ಮ ತಾಯಂದಿರ ಜನನಾಂಗಗಳನ್ನೇ ಸುಟ್ಟು ಹಾಕಿ' ಎಂದು ಅವರ ಪೂಜಾರಿ ಹೇಳಿದ ಮಾತುಗಳು ಅನೇಕ ಅರ್ಥಗಳನ್ನು ಸ್ಫುರಿಸುತ್ತವೆ. ಮತ ಪ್ರಚಾರಕರು ತಮ್ಮೊಡನೆ ಒಂದು ಸರ್ಕಾರ, ನ್ಯಾಯಾಲಯ, ಶಾಲೆ, ಆಸ್ಪತ್ರೆ, ವ್ಯಾಪಾರಿ ಮಳಿಗೆ ಮಾತ್ರವಲ್ಲದೆ ಕಮಿಷನರ್, ಜಿಲ್ಲಾಧಿಕಾರಿ, ವಾರ್ತಾ ವರದಿಗಾರರು, ಇತ್ಯಾದಿ ವ್ಯವಸ್ಥೆಗಳನ್ನೂ ತಂದಿದ್ದರು. ಅವರ ನ್ಯಾಯಾಲಯ ಅವರ ಅನುಯಾಯಿಗಳನ್ನು ಎಲ್ಲಾ ಕಾಲಗಳಲ್ಲೂ ರಕ್ಷಿಸುತ್ತಿತ್ತು. ಬಿಳಿಯನನ್ನು ಕೊಂದ ಅಬಾಮೆಯವನನ್ನು ಗಲ್ಲಿಗೇರಿಸಲಾಗಿತ್ತು, ಕುಲ ಬಹಿಷ್ಕೃತರನ್ನು ಚರ್ಚಿಗೆ ಸೇರಿಸಿಕೊಳ್ಳಲಾಗಿತ್ತು. ಅವರ ಶಾಲೆಯಲ್ಲಿ ಕಲಿತರೆ ಮುಂದಕ್ಕೆ ಅವರ ನ್ಯಾಯಾಲಯದಲ್ಲಿ ಗುಮಾಸ್ತನಾಗಬಹುದಿತ್ತು. ಧರ್ಮಪ್ರಚಾರಕ ಮಿ.ಬ್ರೌನ್ ಒಕೋಂಕ್ವೋನ ಮಗ ಎನ್ವೋಯಿಯನ್ನು (ಈಗ ಅವನು ಐಸ್ಯಾಕ್) ಉಮುರುನಲ್ಲಿರುವ ಶಿಕ್ಷಕರ ತರಬೇತು ಶಾಲೆಗೆ ಕಳುಹಿಸಿದ್ದನು. 'ವ್ಯಕ್ತಿ ಹೇಗೆ ಕುಣಿಯುತ್ತಾನೋ ಹಾಗೆ ಡೋಲು ಬಾರಿಸಲ್ಪಡುತ್ತದೆ' ಇದು ಇನ್ನೊಂದು ಇಬೋ ಗಾದೆ.

ಬಿಳಿಯರನ್ನು ಓಡಿಸಬಹುದು ಆದರೆ ಅವರ ರಿಲಿಜನ್ನಿನ ಬಗ್ಗೆ ನಂಬಿಕೆ ಇರಿಸಿಕೊಂಡ ತಮ್ಮ ಕುಲಬಾಂಧವರ ಮನಸ್ಸನ್ನು ಪರಿವರ್ತಿಸುವುದು ಹೇಗೆ? ನಿವಾರಿಸಲು ಹೊರಟರೆ ಸೈನಿಕರನ್ನು ಕರೆತಂದು ಅಬಾಮೆಯಂತೆ ನಮ್ಮನ್ನೂ ನಿರ್ನಾಮ ಮಾಡುತ್ತಾರೆ; ಇದು ಉಮವೋಫಿಯಾದ ಹಿರಿಯರ ಚಿಂತೆಯ ವಿಷಯವಾಗಿತ್ತು. ಇಬೋಗಳು ಸಂಪತ್ತನ್ನು ಕೊಡು ಎಂದು ದೇವರನ್ನು ಬೇಡಿಕೊಳ್ಳುತ್ತಿರಲಿಲ್ಲ. ಅದರ ಬದಲಿಗೆ ಆರೋಗ್ಯ, ಹೆಚ್ಚು ಮಕ್ಕಳನ್ನು ಕೊಡು ಎಂದು ಕೇಳಿಕೊಳ್ಳುತ್ತಿದ್ದರು. ಮಕ್ಕಳು ಹೆಚ್ಚಾದರೆ ಬಂಧುಗಳು ಹೆಚ್ಚಾಗುತ್ತಾರೆ. ಪ್ರಾಣಿಗಳಿಗಿಂತ ಚೆನ್ನಾಗಿ ಬದುಕಬೇಕಾದರೆ ಬಂಧು ಬಳಗ ಹೆಚ್ಚಿರಬೇಕು, ಪ್ರಾಣಿಯೊಂದು ಮೈಯಲ್ಲಿ ನವೆಯಾದರೆ ಮರಕ್ಕೆ ಉಜ್ಜಿಕೊಳ್ಳುತ್ತದೆ. ಬಂಧುಗಳು ಹೆಚ್ಚಿರುವ ಮನುಷ್ಯ ನವೆಯನ್ನು ತನ್ನ ಬಳಗದ ಒಬ್ಬನಲ್ಲಿ ಕೆರೆಯುವಂತೆ ಹೇಳಿ ಶಮನಗೊಳಿಸಿಕೊಳ್ಳುತ್ತಾನೆ ಎಂಬ ಚಿಂತನೆ ಅವರದು. ಆದರೆ ಹೊಸ ಧರ್ಮ, ಹೊಸ ಪೀಳಿಗೆಯವರ ಆಧುನಿಕ ದೃಷ್ಟಿಕೋನಗಳು ಅಲ್ಲಿನ ಹಿರಿಯರಿಗೆ ಆತಂಕ ಉಂಟುಮಾಡಿದ್ದವು. ಜಮೀನಿನ ವ್ಯಾಜ್ಯಗಳು ಈಗ ಎಗ್ವುಗ್ವುಗಳ ಬಳಿ ಹೋಗದೆ ನ್ಯಾಯಾಲಯಕ್ಕೆ ಕೊಡುವ ಲಂಚ ರುಷುವತ್ತುಗಳ ಮೂಲಕವೇ ತೀರ್ಮಾನವಾಗುತ್ತಿತ್ತು.

ಹೆಬ್ಬಾವು ಇಬಾ ಜನಾಂಗದವರ ಪಿತೃ ಎಂದು ಪರಿಗಣಿಸಲ್ಪಟ್ಟಿತ್ತು. ಅದನ್ನು

ಯಾರೂ ಕೊಲ್ಲುತ್ತಿರಲಿಲ್ಲ, ಒಂದೊಮ್ಮೆ ಕೊಂದರೆ ಮನುಷ್ಯರಂತೆ ಅದಕ್ಕೆ ಸಂಸ್ಕಾರವನ್ನು ಮಾಡಬೇಕಿತ್ತು. ಚರ್ಚಿಗೆ ಸೇರಿದ ಮತಾಂತರಿ ಒಕೋಲಿ ಹೆಬ್ಬಾವನ್ನು ಕೊಂದು ಖಾಯಿಲೆ ಬಂದು ಸತ್ತುಹೋದ ನಂತರ ಮತ್ತೆ ತಮ್ಮ ದೇವರ ಬಗ್ಗೆ ಅಲ್ಲಿಯವರಿಗೆ ನಂಬಿಕೆ ಬಂದಿತ್ತು. ಹೆಬ್ಬಾವನ್ನು ಕೊಂದು ತಿಂದಿದ್ದ ಎನೋಕ ಎಂಬ ಮತಾಂತರಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎಗ್ವುಗ್ವುಗಳ ಮುಖವಾಡವನ್ನೇ ಕಿತ್ತೆಸೆದಿದ್ದ. ಇದರಿಂದ ಕೆರಳಿದ ಎಗ್ವುಗ್ವುಗಳು ಮಿ.ಬ್ರೌನ್ ನಿರ್ಮಿಸಿದ್ದ ಮಣ್ಣಿನ ಚರ್ಚನ್ನು ಕೆಡವಿ ಬೆಂಕಿ ಕೊಟ್ಟಿದ್ದವು. ಇದರ ಬಗ್ಗೆ ಚರ್ಚಿಸುವ ನೆವದಿಂದ ಊರಿನ ಆರು ಹಿರಿಯ ಮುಖಂಡರನ್ನು ಕರೆಸಿಕೊಂಡ ಜಿಲ್ಲಾಧಿಕಾರಿ ಅವರನ್ನು ಮೋಸದಿಂದ ಬಂಧಿಸಿ ಜುಲ್ಮಾನೆ ವಿಧಿಸುತ್ತಾನೆ. ಆ ನಂತರ ಇವೆಲ್ಲದರ ಬಗ್ಗೆ ಚರ್ಚಿಸಲು ಸೇರಿದ್ದ ಅಪಾರ ಜನ ಸಂದಣಿಯಲ್ಲಿ ಬಿಳಿಯರ ವರದಿಗಾರನೊಬ್ಬನನ್ನು ಓಕೋಂಕ್ವೋ ಕೊಂದು ಹಾಕುತ್ತಾನೆ. ಇದನ್ನು ನೋಡಿದ ಆ ಹಳ್ಳಿಯ ಜನರಲ್ಲಿ ಯಾರೊಬ್ಬರೂ ಕೆರಳದೆ ಎಲ್ಲರೂ ಹೇಡಿಗಳಂತೆ ಓಡಿಹೋಗುತ್ತಾರೆ. ತನ್ನ ಜನ ಎಂದೂ ಹೋರಾಟದ ಕಿಚ್ಚನ್ನು ಹೊಂದಲಾರರು ಎಂದು ತಿಳಿದು ಹತಾಶನಾದ ಓಕೋಂಕ್ವೋಗೆ ಇನ್ನು ತನ್ನ ಬದುಕಿಗೆ ಯಾವ ಅರ್ಥವೂ ಇಲ್ಲ ಎಂದು ಅನ್ನಿಸಿ ನೇಣುಗಟ್ಟಿಕೊಳ್ಳುವುದರೊಂದಿಗೆ ಕಾದಂಬರಿ ಮುಗಿಯುತ್ತದೆ.

ಒಂದು ವೇಳೆ ಓಕೋಂಕ್ವೋ ಆತ್ಮಹತ್ಯೆ ಮಾಡಿಕೊಳ್ಳದೆ ಹೋಗಿದ್ದರೆ ಏನಾಗುತ್ತಿತ್ತು? ಬಿಳಿಯ ವರದಿಗಾರನನ್ನು ಕೊಂದ ಅಪರಾಧಕ್ಕೆ ಬಿಳಿಯರೇ ಅವನನ್ನು ನೇಣುಗಂಬಕ್ಕೆ ಏರಿಸುತ್ತಿದ್ದರು. ಯಾವ ದೃಷ್ಟಿಕೋನದಿಂದ ನೋಡಿದರೂ ಓಕೋಂಕ್ವೋನ ಬದುಕುವ ಹಕ್ಕನ್ನು ಆ ವ್ಯವಸ್ಥೆ ನಾಶಮಾಡಿತ್ತು. ಆದರೆ ಆ ಜನಾಂಗದಲ್ಲಿ ಆತ್ಮಹತ್ಯೆ ಮಹಾಪಾಪ, ಅದು ಭೂಮಿತಾಯಿಗೆ ಮಾಡುವ ಅವಮಾನವೆಂದು ಪರಿಗಣಿಸಿ ಆತ್ಮಹತ್ಯೆ ಮಾಡಿಕೊಂಡವನ ಹೆಣವನ್ನೂ ಅವರು ಮುಟ್ಟುತ್ತಿರಲಿಲ್ಲ. ಹಾಗಾಗಿ ಬಿಳಿಜನರ ಪೈಕಿಯವರೇ ಓಕೋಂಕ್ವೋನ ಹೆಣವನ್ನು ಮರದಿಂದ ಇಳಿಸಿ ಅದನ್ನು ಮಣ್ಣುಮಾಡುತ್ತಾರೆ. ಯಾರನ್ನು ತಮ್ಮ ನೆಲದಿಂದ ಹೊಡೆದೋಡಿಸಿ ತನ್ನ ಜನರನ್ನು ಕಾಪಾಡಬೇಕೆಂದು ತೀರ್ಮಾನಿಸಿದ್ದನೋ ಆ ಬಿಳಿಜನರೇ ತನ್ನ ದೇಹವನ್ನು ಮಣ್ಣು ಮಾಡುವಂತೆ ಆದುದು ಆತನ ಜೀವನದ ವಿಪರ್ಯಾಸಗಳಲ್ಲಿ ಒಂದು.

ಪ್ರಕೃತಿ ಪೂಜನ, ಅನೇಕದೇವತಾರಾಧನೆ, ಕೃಷಿ, ಕುಟುಂಬ ಪದ್ಧತಿ, ಸಮೃದ್ಧವಾದ ಭಾಷೆ, ಕಲೆ, ಕ್ರೀಡೆ... ಇವೆಲ್ಲ ಒಂದು ಜೀವನ ಪದ್ಧತಿಯ ಉನ್ನತ ಅಂಶಗಳು. ಅವೆಲ್ಲ ಇದ್ದಂತಹ ಒಂದು ಬುಡಕಟ್ಟು ಜೀವನವನ್ನು ಮತಾಂಧ ವ್ಯವಸ್ಥೆಯೊಂದು ಮುಗಿಸುತ್ತದೆ. ಓಕೊಂಕ್ವೋನ ಸಾವು ಅದು ನೈಜ ಸಂಸ್ಕೃತಿಯೊಂದರ ಸಾವು. ಎನ್ವೋಯಿಯ ಮತಾಂತರ ಅದು ಮುಂದಿನ ತಲೆಮಾರು ತಮ್ಮದನ್ನು ತ್ಯಜಿಸಿ ಕಂಡುಕೊಳ್ಳುವ ಹೊಸ ವ್ಯವಹಾರಿಕ ವ್ಯವಸ್ಥೆ. ಇಂದು ನೈಜೀರಿಯಾದಲ್ಲಿ ಕ್ರೈಸ್ತ ಹಾಗೂ ಇಸ್ಲಾಂ ಮತಗಳ ಸರಿಸಮವಾದ ಪಾರುಪತ್ಯವಿದೆ. ವಸಾಹತು ನಮ್ಮ ದೇಶದಲ್ಲಿ ಮಾಡಿದ ಅನಾಹುತಗಳಿಂದ ಹೆಸರಿನಲ್ಲಿ ಮಾತ್ರ ನಾವೀಗ ಭಾರತೀಯರಾಗಿದ್ದೇವೆ. ನೈಜೀರಿಯಾದ ಇಬೋಗಳಂತೆ ನಮ್ಮ ನೈಜ ಸಂಸ್ಕೃತಿಯನ್ನೂ ನಾವು ಯಾವತ್ತೋ ಕಳೆದುಕೊಂಡಿದ್ದೇವೆ. ಕಳೆದುಕೊಂಡಿದ್ದೇವೆ ಎಂಬುದೇ ತಿಳಿಯದಂತೆ.

❖❖❖

ಚಂಗಾಳ್ವ ರಾಜಮನೆತನದ ಸಮಕಾಲೀನ ಸಾಂಸ್ಕೃತಿಕ ಅಧ್ಯಯನ

(ಪಿರಿಯಾಪಟ್ಟಣ ತಾಲ್ಲೋಕಿನ ಶಾಸನಗಳ ಹಿನ್ನೆಲೆಯಲ್ಲಿ)

ಡಾ. ಸುರೇಶ ಬಿ.ಸಿ., ಡಾ. ಮೋಹನ್ ಕೆ.ಎನ್., ಡಾ. ಸಬೀರಾ ಫೀರ್ದೋಸ್

ಇತಿಹಾಸ ವಿಬಾಗ, ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಣಸೂರು, ಮೈಸೂರು–570015

ಪಿರಿಯಾಪಟ್ಟಣ ತಾಲೂಕು, ಮೈಸೂರು, ಕೊಡಗು, ಹಾಸನದ ಗಡಿ ಭಾಗದಲ್ಲಿ ಬರುವ ತಾಲ್ಲೂಕು ಕೇಂದ್ರ. ಪ್ರಾಚೀನ ಕಾಲದಿಂದಲೂ ಈ ಭಾಗವನ್ನು ಸಾಂಸ್ಕೃತಿಕ ಕೇಂದ್ರವಾಗಿ ಗುರುತಿಸಬಹುದು. ಅದರಲ್ಲಿ ಪ್ರಮುಖವಾಗಿ ಶಿಲಾಯುಗ ಮತ್ತು ಕದಂಬರಿಂದ ಮೈಸೂರು ಅರಸರ ಕಾಲದವರೆಗೂ ವಿವಿಧ ಕಾಲಘಟ್ಟದಲ್ಲಿ ಪ್ರಮುಖ ಕೇಂದ್ರವಾಗಿದ್ದಂತೆ ಕಂಡು ಬರುತ್ತದೆ. ಪ್ರಸ್ತುತ ಚರ್ಚಿತ ವಿಷಯದಲ್ಲಿ ಕಾಲಮಾನವನ್ನೇ ಗಮನಿಸುವುದಾದರೆ ಚಂಗಾಳ್ವರು, ಹೊಯ್ಸಳರು, ವಿಜಯನಗರ ಮತ್ತು ಮೈಸೂರು ಅರಸರ ಸಮಕಾಲೀನರು. ಇವರು ವಿರಾಜಪೇಟೆ, ಪಿರಿಯಾಪಟ್ಟಣ, ಹುಣಸೂರು, ಸೋಮವಾರ ಪೇಟೆ, ಅರಕಲಗೂಡು ಈ ಐದು ತಾಲ್ಲೂಕುಗಳನ್ನು ತಮ್ಮ ಆಡಳಿತ ವಾಪ್ತಿಗೆ ಒಳಪಡಿಸಿಕೊಂಡಿದ್ದರು. ಕೆಲಸಮಯ ಬೆಟ್ಟದಪುರ ಸಹ ಇವರ ಆಡಳಿತ ಕೇಂದ್ರವಾಗಿದ್ದಂತೆ ತೋರುತ್ತದೆ. ಪ್ರಸ್ತುತ ತಾಲ್ಲೂಕಿನಲ್ಲಿ ಲಭ್ಯವಾದ 150 ಶಾಸನಗಳಲ್ಲಿ ಚಂಗಾಳ್ವರಿಗೆ ಸಂಬಂಧಿಸಿದ ಸುಮಾರು 35 ಶಾಸನಗಳು ಇದ್ದು ಅವುಗಳಲ್ಲಿ ಆಡಳಿತಕ್ಕೆ, ಸಂಸ್ಕೃತಿ, ಮತ್ತು ದಿಗ್ವಿಜಯಕ್ಕೆ ಸಂಬಂಧಿಸಿದ್ದು ಇವುಗಳಿಂದ ಚಂಗಾಳರ ವಂಶಾವಳಿ ಮತ್ತು ಅವರ ಕೊಡುಗೆಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಪಿರಿಯಾಪಟ್ಟಣದ ಚನ್ನಿಗರಾಯ ಸ್ವಾಮಿ ದೇವಾಲಯದ ಬಾಗಿಲುವಾಡದಲ್ಲಿ ಇರುವ ಶಾಸನದಲ್ಲಿ ಸೋಮವಂಶದ ಶ್ರೀಕಂಠರಾಜಯ್ಯನ ಮಗ ಕುಲೋತುಂಗ ಚಂಗಾಳ್ವ ಪಿರಿಯಾರಾಜದೇವ ಮಹಾ ಅರಸು ತನ್ನನ್ನೇ ಮಹಾಮಾಂಡಲಿಕ, ಮಹಾಮಂಡಲೇಶ್ವರ ಎಂದು ಕರೆದುಕೊಂಡಿದ್ದಾನೆ. ಕುಲೋತುಂಗನು ಸಿಂಗಾಪಟ್ಟಣವನ್ನೇ ಪುನರ್‌ರಚಿಸಿ ಮುಂದೆ ಪಿರಿಯಾರಾಜಪಟ್ಟಣವೆಂದು ಕರೆಯಲ್ಪಟ್ಟಿತು ಎಂದು ಶಕ ವರ್ಷ 1511ರ ಶಾಸನದಲ್ಲಿ ಉಲ್ಲೇಖಿತವಾಗಿದೆ. ಕೋಟೆಯ ಹೊರಭಾಗದಲ್ಲಿನ 4 ಮತ್ತು 5ನೇ ಶಾಸನಗಳಲ್ಲಿ ಸ್ಪಷ್ಟವಾಗಿಲ್ಲದ ಕುಲೋತುಂಗ ಚಂಗಾಳ್ವನ ಹೆಸರು ಉಲ್ಲೇಖಿತವಾಗಿದೆ.

ಪಿರಿಯಾಪಟ್ಟಣದಲ್ಲಿನ 8ನೇ ಶಾಸನವು ದೊಡ್ಡನೇರಳೆಯಲ್ಲಿದ್ದು, ಶಕ ವರ್ಷ 1534ಕ್ಕೆ ಸೇರಿದ್ದು ಅದರಲ್ಲಿ ನಂಜರಾಯಪಟ್ಟಣದ ರಾಜ ವಿರಪರಾಜಯ್ಯನನ್ನು ಮಹಾಮಾಂಡಲಿಕ, ಮಂಡಲೇಶ್ವರ, ಕುಲೋತುಂಗ ಚಂಗಾಳ್ವ ವೀರ ಶ್ರೀಕಂಠರಾಜಯ್ಯನನ್ನು ಯದುವಂಶದ ಹಾಕ್ಯತಿ ಗೋತ್ರದಲ್ಲಿ ಜನಿಸಿದ ಜ್ಞಾಪಕಾರ್ಥವಾಗಿ ತೀರುಮಲಾಪುರ ಎಂಬ ಹಳ್ಳಿಯನ್ನೇ ತಂದೆತಾಯಿ ಮತ್ತು ಹಿರಿಯರ ಸಮ್ಮುಖದಲ್ಲಿ ಸಾಮೆಯ ಮಠಕ್ಕೆಧಾನ ನೀಡಿದ್ದು ತಿಳಿಯುತ್ತದೆ. 9ನೇ ಶಾಸನವು ಕ್ರಿಸ್ತ ಶಕ 1620ಕ್ಕೆ ಸೇರಿದ್ದು ಇದರಲ್ಲಿಯ ಸಹ ವೀರರಾಜಯ್ಯ ಕುಲೋತುಂಗ ಚಂಗಾಳ್ವ ಮಹಾಮಾಂಡಲಿಕ ಹಳ್ಳಿಯಾದನ್ನು ಸಾಮೆಯ ಮಠಕ್ಕೆಧಾನ ನೀಡಿದ್ದನ್ನು

ಗಮನಿಸಿದರೆ ವೀರ ನಂಜರಾಯದೇವನು ನಂಜರಾಯಪಟ್ಟಣದಲ್ಲಿ ಅಧಿಕಾರಕ್ಕೆ ಬಂದ ಜ್ಞಾಪಕಾರ್ಥವಾಗಿ ಈ ದಾನಗಳನ್ನು ನೀಡಿರಬಹುದೆಂದು ಊಹಿಸಬಹುದಾಗಿದೆ. ಕ್ರಿ.ಶ. 1600ರ ಹಾರನಹಳ್ಳಿ ಶಾಸನದಲ್ಲಿ (10) ನಂಜರಾಯಪಟ್ಟಣ ಅರಸು ಕುಲೋತುಂಗ ಚೆಂಗಾಳ್ವ ಚೆನ್ನೇಯಾ ಬೈರವಪುರದ (ಬೆಟ್ಟದಪುರ) ಅನ್ನದಾನಿ ಮಲ್ಲಿಕಾರ್ಜುನನಿಗೆ ಜಾತ್ರೆಯ ಸಂದರ್ಭದಲ್ಲಿ ಬರುವ ರುದ್ರಂಗಣಗಳವರೆಗೆ ಮಠದ ವತಿಯಿಂದ ಊಟ ಮತ್ತು ವಸತಿಗೆ ಆಗುವ ಖರ್ಚು ವೆಚ್ಚಗಳ ಲೆಕ್ಕದ ನಿರ್ವಹಣೆಗಾಗಿ ಸೇನುಬೊವ ದೇವಪ್ಪಯ್ಯನನ್ನು ದೇವಾಲಯದ ಪರವಾಗಿ ನೇಮಿಸಲಾಯಿತು.

12ನೇ ಶತಮಾನವುಚಪ್ಪರದ ಹಳ್ಳಿಯಲ್ಲಿ ವೀರಗಲ್ಲಿನಲ್ಲಿ ಅಂಕರಸ ಎಂಬಾತ ಅತ್ತಿಕುಪ್ಪೆಯಲ್ಲಿ ಪಶುಗಳನ್ನು ಕದ್ದಿದ್ದ ಕಳ್ಳರ ವಿರುದ್ಧ ಸೆಣಿಸಿ ಪಶುಗಳನ್ನು ರಕ್ಷಿಸಿ ಸ್ವರ್ಗಸ್ತನಾದ ವಿಚಾರವು ಚರ್ಚಿತವಾಗಿದ್ದು. ಇದು ಸಹ ಚೆಂಗಾಳ್ವ ವೀರರಾಜಯ್ಯನ ಕಾಲಕ್ಕೆ ಸೇರಿದ್ದಾಗಿದೆ. ಅಡಗೂರಿನ ಆಲದ ಮರದ ಕೆಳಗಿರುವ 14ನೇ ಶಾಸನದ ವೀರಗಲ್ಲಿನಲ್ಲಿ ಕ್ರಿ.ಶ.1174ರಲ್ಲಿ ವಡಗೊರು(ಅಡಗೂರು) ಭೂವಿಸೆಟ್ಟಿಯ ಬಾವ ಮೈದ ಮಲ್ಲಿಸೆಟ್ಟಿಯ ಮದುವೆ ದಿಬ್ಬಣದ ಮೆರವಣಿಗೆ ಸಂದರ್ಭದಲ್ಲಿ ಕಳ್ಳರ ದಾಳಿ ನಡೆದಿತ್ತು. ಆ ಕಾದಾಟದಲ್ಲಿ ಭುವಿಸೆಟ್ಟಿ ಮರಣಿಸಿದ್ದು ತಿಳಿದುಬರುತ್ತದೆ. ಜೊತೆಗೆ ಅಡಗೂರಿನ ಈ ಶಾಸನದಲ್ಲಿ "ಭುಜಭಲ ಚೆಂಗಾಳ್ವ ದೇವ" ಮತ್ತು ಈತನ ರಾಜದಾನಿಯನ್ನು "ದ್ವಾರವತಿ"ಗೆ ಹೋಲಿಕೆ ಮಾಡಲಾಗಿದೆ. 15ನೇ ವೀರಗಲ್ಲಿ ಶಾಸನ ಕಾಲದ್ದು ಇದರಲ್ಲಿ ಮಲ್ಲಸೆಟ್ಟು ಗೋಪುರ ರಕ್ಷಣೆಯ ಸಂದರ್ಭ ಮೃತ ಹೊಂದಿದ್ದನ್ನು ತಿಳಿಸುತ್ತದೆ. 18ನೇ ವೀರಗಲ್ಲು ಶಾಸನವು ಕಣಗಾಲಿನಲ್ಲಿ ಗೋಸಂರಕ್ಷಣೆ ಕುರಿತದ್ದಾಗಿದೆ. ಪಿರಿಯಾಪಟ್ಟಣದ 22ನೇ ಶಾಸನವು ಅಪ್ಪನಹಳ್ಳಿಯಲ್ಲಿದ್ದು ಕ್ರಿ.ಶ.1521 ದಾಗಿದ್ದು, (ವೀರನಂಜೇಯಾದೇವ ಕುಲೋತುಂಗ ಚಂಗಾಳ್ವನ ಕಾಲ) ಈ ಶಾಸನದಲ್ಲಿ ಅನ್ನದಾನಿ ಮಲ್ಲಿಕಾರ್ಜುನ ಅಂಗ, ರಂಗ ವೈಭೋಗ ಆಚರಣೆಗೆ ಹಳ್ಳಿಯ ಸಕಲ ಆಸ್ತಿಯನ್ನು ವಹಿಸಲಾಯಿತು ಎಂಬ ವಿಷಯ ಪ್ರಸ್ತಾಪಿಸಿದೆ.

25ನೇ ಶಾಸನವು ಸುರ್ಗಹಳ್ಳಿಯಲ್ಲಿದ್ದು, ಕ್ರಿ.ಶ.1598ದಾಗಿದ್ದು, ಈ ಶಾಸನದಲ್ಲಿ ಸುರ್ಗಳ್ಳಿಯನ್ನು ನಂಜರಾಯಪಟ್ಟಣ ಸಿಮೆಯ ಬೆಟ್ಟದಪುರ ಅನ್ನದಾನಿ ಮಲ್ಲಿಕಾರ್ಜುನನ ಸನ್ನಿದಾನಕ್ಕೆ ಕೊಡುಗೆಯಾಗಿ ನೀಡಿದ ವಿಷಯ ಪ್ರಸ್ತಾಪಿಸಿದೆ. ಬ್ಯಾಡರ ಬೆಳಗುಲಿಯ ಮಾದಿಗರ ಕೊಪ್ಪಲಿನ 27ನೇ ಶಾಸನವು ಕ್ರಿ.ಶ.1591ಕ್ಕೆ ಸೇರಿದ್ದು, ಇದರಲ್ಲಿ "ನಂಜರಾಯಪಟ್ಟಣದ ಶ್ರೀಕಂಠರಾಜಯ್ಯನ ಮಗನಾದ ಪಿರಿಯಾರಾಜದೇವ ಮಹಾ ಅರಸರು ಬೆಟ್ಟದಪುರದ ಅನ್ನದಾನಿ ದೇವರಿಗೆ ಕಾರ್ತಿಕ ಪೂಜೆಯ ದೀಪದ ಖರ್ಚಿಗೆ ಕೊಡುಗೆಯನ್ನು ಉಲ್ಲೇಖಿಸಿದೆ. 33ನೇ ಶಾಸನವು ನಿರೂಪದಂತೆ ದೇವರಾಯ ಮಹಾರಾಯ ಗೊಪರಸನ ಇರುಗಾಲಹಳ್ಳಿಯೇ ಕುರುಗಲ್ಲನ್ನು ಬೆಟ್ಟದ ಅನ್ನದಾನಿಗೆ ಅಂಗ–ರಂಗ ಭೋಗನೈವೈದ್ಯ ಕೊಡುಗೆಯಿತ್ತ ಉಲ್ಲೇಖವಿದೆ.

59ನೇ ಶಾಸನವು ಬೆಟ್ಟದಪುರಕ್ಕೆ ಸಂಬಂಧಿಸಿದ್ದು, ಇದರ ಕಾಲಮಾನ ಕ್ರಿ.ಶ.1607 ವಿಜಯನಗರದ ಅರಸು ತಿರುಮಲರಾಜಯ್ಯ ತನ್ನ ತಂದೆ ಮತ್ತು ತಾಯಿಗಳ ನೆನಪಿನ ಕೊಡುಗೆಯಾಗಿ ಬೆಟ್ಟದಪುರದ ಅನ್ನದಾನಿಗೆ 21 ಕುಟುಂಬಗಳ ಕಟ್ಟೆಮಳಲವಾಡಿಯನ್ನೇ ಮೇಲುಕೋಟೆಯ ಶೆಲ್ವಪಿಳ್ಳೆ (ಚೆಲುವನಾರಾಯಣ) ಸಾಕ್ಷಿಯಾಗಿ ಶ್ರೀರಂಗಪಟ್ಟಣದ ಆಡಳಿತಗಾರರ ಮೂಲಕ ಕಟ್ಟೆಮಳಲವಾಡಿ ಪೊಗದಿಯನ್ನು ಪೇರಿಯಾರಾಜನ

ಮೂಲಕ ಅನ್ನದಾನಿಗೆ ಸಂದಾಯಿಸಲು ಭೂಮಿ ಸೂರ್ಯರಿರುವರೆಗೆ ಅಜ್ಞಾಪಿಸಿ ಈ ಶಾಸನ ಹಾಕಿಸಲಾಯಿತು. ಅದೇ ಬೆಟ್ಟದಪುರದ 62ನೇ ಶಾಸನವು ಅನ್ನದಾನಿ ಗುಡಿಯ ಕಂಚಿನ ಗಂಟೆಯ ಮೇಲಿದ್ದು ಇದು ಕ್ರಿ.ಶ.1590ರದ್ದಾಗಿದ್ದು, ಚೆಂಗಾಳ್ವ ಅರಸು ಪಿರಿಯಾರಾಜನು ತನ್ನ ತಂದೆ–ತಾಯಿಗಳ ನೆನಪಿಗೆ ಈ ಗಂಟೆಯನ್ನು ಕೊಡುಗೆಯಿತ್ತಿರುವನು. ಅನ್ನದಾನಿ ಮಲ್ಲಿಕಾರ್ಜುನ ಗುಡಿಯಲ್ಲಿನ 71ನೇ ಶಾಸನವು ಕ್ರಿ.ಶ. 1586ಕ್ಕೆ ಸೇರಿದ್ದು, ಪೆರಿಯಾರಾಜದೇವಅರಸು ತನ್ನ ನಂಜರಾಯಪಟ್ಟಣಕ್ಕೆ ಸೇರಿದ ತುಂಗದ ಸ್ಥಳ ಬಲಿಸೊಗೆ ಸ್ಥಳ, ರಾವಂದೂರು ಸ್ಥಳದ (3 ಹೋಬಳಿ) ಸುತ್ತಮುತ್ತ 33 ಹಳ್ಳಿಗಳನ್ನು ಅನ್ನದಾನಿ ಬೆಟ್ಟದ ಮಲ್ಲಿಕಾರ್ಜುನನಿಗೆ ಅಂಗ–ರಂಗ ಭೋಗಕ್ಕೆ ಬಿಟ್ಟುಕೊಡಲಾಯಿತು.

90ನೇ ಶಾಸನವು ನಿಲವಾಡಿಯಲ್ಲಿ ಕ್ರಿ.ಶ. 1613ರದ್ದಾಗಿದ್ದು, ಇದರಉದ್ದೇಶ ಮಲ್ಲಿಕಾರ್ಜುನನಿಗೆ ದೀಪ, ತುಂಗ, ರಂಗ ಬೋಗಕ್ಕಾಗಿ ನೀಲವಾಡಿಯನ್ನೇ ಕೊಡುಗೆಯಿತ್ತರು. 94ನೇ ಶಾಸನ ಕುಡೂಕೊರಿನಲ್ಲಿದ್ದು, ಇದರಲ್ಲಿ ಚೆಂಗಾನಾಡಿನ ಅನ್ನದಾನಿ ದೇಗುಲವನ್ನು ಲೂಟಿ ಮಾಡಿದ ಮಾಹಿತಿ ಅಪೂರ್ಣವಾಗಿದೆ. ಕ್ರಿ.ಶ. 1565ರ ಆಯತನಹಳ್ಳಿಯ 103ನೇ ಶಾಸನವು ಚಂಗಾಳ್ವರ ಚಿಕ್ಕರಾಜಒಡೆಯನು ಆಯತನಹಳ್ಳಿ & ಮಕಲೀಹಾಳುಗಳನ್ನು ಶ್ರೀಗಿರಿಯ ಮಲ್ಲಿಕಾರ್ಜುನದೇವರ ಅಂಗ ರಂಗಭೂಗಳಿಗೆ ಅರ್ಪಿಸಲಾಯಿತೆಂದು ಉಲ್ಲೇಖಿಸಲಾಗಿದೆ. 109ನೇ ಬೆಟ್ಟದತುಂಗ ಶಾಸನವು 14ನೇ ಶತಮಾನಕ್ಕೆ ಸೇರಿದ್ದು, ಚಂಗಾಳ್ವ ಅರಸರಿಂದ ಬೀರರಾಜನಿಗೆ ನೀಡಿದ ವಿಂಬಳಿಯ ಉಲ್ಲೇಖ ಅಪೂರ್ಣವಾಗಿದೆ. 110ನೇ ಶಾಸನವು ಅದೇ ಸ್ಥಳದಲ್ಲಿದ್ದು, ಕ್ರಿ.ಶ. 1586ರದ್ದು, ಇದರಲ್ಲಿ ಪಿರಿಯಾರಾಜದೇವ ತನ್ನ ತಂದೆ ತಾಯಿಗಳ ಆತ್ಮಶಾಂತಿಗಾಗಿ ಅನ್ನದಾನಿಗೆ ಅಂಗ, ಬೋಗ, ರಂಗಉತ್ಸವಗಳಿಗೆ ತುಂಗದ ಸ್ಥಳದ 9 ಹಳ್ಳಿಗಳನ್ನು ಕೊಡುಗೆ ನೀಡಿದನು. 114ನೇ ಶಾಸನವು ಸನ್ಯಾಸಿಪುರದಲ್ಲಿದ್ದು, ಈ ತಾಮ್ರ ಶಾಸನದಲ್ಲಿ ವೀರ ವೀರೇದೇವ ಮಹಾ ಅರಸರು ನರಸಿಂಹಭಟ್ಟರಿಗೆ ವಿರಾಂಬುಧಿಯನ್ನೇ ಅಗ್ರಹಾರವಾಗಿ ನೀಡಿದ್ದು, ಅದರ ವ್ಯಾಪ್ತಿಯು ಉಕ್ತವಾಗಿದೆ. ವೀರಾಂಬುಧಿಯು ಹಿಟ್ನೇಹೆಬ್ಬಾಗಿಲಿನಿಂದ ಪೂರ್ವ ಕಗ್ಗುಂಡಿಯಿಂದ ಉತ್ತರದ(ಬಡಗ) ಆಲದ ಮರದಿಂದ ಪಶ್ಚಿಮದ (ಪಡುವ) ಕಲಮೊರಟೆಯಿಂದ (ತೆಂಕ) ದಕ್ಷಿಣದಗಳ ನಡುವಿನ ಸಂಪತ್ತನ್ನು ನೀಡಿರುವುದು ಉಲ್ಲೇಖವಾಗಿದೆ. 121ನೇ ದೊಡ್ಡಬೇಲಾಳು ಶಾಸನವು ಕ್ರಿ.ಶ. 1545ರಲ್ಲಿ ಶ್ರೀಕಂಠ ಒಡೆಯನು ದೊಡ್ಡಬೇಳಾಲು ಗ್ರಾಮವನ್ನು ಉಂಬಳಿಯಾಗಿ ನಂದಿಯಾಲದ ಉಂಬಳೇಶ್ವರ ಅರಸರು ಎಂಬ ಚೆಂಗಾಳ್ವರಿಗೆ ಪಲ್ಲಕ್ಕಿ ಕೊಟ್ಟು ಉಂಬಳಿ ಸ್ಥಳದ ವಿವರಣೆ ಇದೆ. 16ನೇ ಶತಮಾನದ 129ನೇ ರಾವಂದೂರು ಶಾಸನದಲ್ಲಿ ರಾವಂದೂರಿನ ಸುತ್ತಣ ಸುಮಾರು 6 ಸ್ಥಳಗಳನ್ನು ಕೊಡುಗೆ ನೀಡಿದ ಅಪೂರ್ಣ ವಿವರಣೆ ಇದೆ.

ಹಿರೇಮಳಲಿಯ 132ನೇ ಶಾಸನವು ಪ್ರಮುಖವಾಗಿದ್ದು, ಇದರಲ್ಲಿ ಕ್ರಿ.ಶ. 1425ರಿಂದ 1503ರವರೆಗಿನ ವಂಶಾವಳಿ ಉಲ್ಲೇಖಿತವಾಗಿದ್ದು, ಚೆಂಗಾಳ್ವ–ನಾಗ–ರಂಗ–ಪಿರಿಯಣ (ನಂಜಾ, ಮಹದೇವ) ಎಂದು ಉಲ್ಲೇಖಿಸಿದೆ. 136ನೇ ಹರೀನಹಳ್ಳಿ ಶಾಸನದಲ್ಲಿ ಕುಪ್ಪೆನಾಡಿನ ಉಲ್ಲೇಖವಾಗಿದ್ದು, ಇದನ್ನು ದಾನವಾಗಿ ನೀಡಿದ ಉಲ್ಲೇಖವಿರುತ್ತದೆ. ಅಂತಿಮವಾಗಿ 140ನೇ ವಡ್ಡರಹಳ್ಳಿ ಶಾಸನದಲ್ಲಿ ಈ ಹೊಸಹಳ್ಳಿಯನ್ನು ಬೆಟ್ಟದಪುರದ

ಅನ್ನದಾನಿಗೆ ದಾನ ಮಾಡಿದ ಉಲ್ಲೇಖವಿದೆ.

ಈಗಾಗಲೇ ನಾವು ಅಧ್ಯಯನಕ್ಕೊಳಪಡಿಸಿರುವ ಸುಮಾರು 35 ಶಾಸನಗಳನ್ನು ಪರಿಗಣಿಸಿದಾಗ ಹೆಚ್ಚಿನ ಶಾಸನಗಳು ಬೆಟ್ಟದಪುರದ ಮಲ್ಲಿಕಾರ್ಜುನನಿಗೆ ಅಗತ್ಯ ಸೇವೆಗಾಗಿ ನೀಡಿದವುಗಳಾಗಿರುವುದು ಕಂಡು ಬರುತ್ತದೆ. ಇನ್ನು ಕೆಲವು ವೀರರ ಸಾಧನೆಗಳನ್ನು ತಿಳಿಸುತ್ತವೆ. ಜೊತೆಗೆ ಇವರ ಸಂಬಂಧ ನೇರವಾಗಿ ಹೊಯ್ಸಳರು ಮತ್ತು ಮೈಸೂರು ಅರಸರೊಂದಿಗೆ ಉತ್ತಮವಾಗಿರಲಿಲ್ಲ. ಬದಲಿಗೆ ವಿಜಯನಗರದ ಅರಸರ ಜೊತೆಗಿನ ಸಂಬಂಧ ಸುಸ್ಥಿತಿಯಲ್ಲಿದ್ದುದ್ದು, ಇವರು ನಂಜರಾಯಪಟ್ಟಣವನ್ನು ಮೂಲಕೇಂದ್ರವಾಗಿ ಹೊಂದಿದ್ದರು. ನಂತರದ ಇವರ ಶಾಸನಗಳಲ್ಲಿ ಸಿಂಗಾಪಟ್ಟಣ ಮತ್ತು ಬೆಟ್ಟದಪುರಗಳ ಬಗ್ಗೆ ಹೆಚ್ಚು ಚರ್ಚೆ ಆಗುವುದರಿಂದ ನಂತರದ ಅಥವಾ ಕಾಲ–ಕಾಲಕ್ಕೆ ಈ ಎರಡು ಸ್ಥಳಗಳನ್ನು ತಮ್ಮ ಆಡಳಿತ ಕೇಂದ್ರವಾಗಿ ಮಾಡಿಕೊಂಡಂತೆ ಕಂಡು ಬರುತ್ತದೆ. ಇವರ ವಂಶಾವಳಿ ಸಾರುವ ಏಕೈಕ ಶಾಸನವಿದ್ದು, ಇದರಲ್ಲಿನ ಉಲ್ಲೇಖ ಮತ್ತು ಶಾಸನಗಳಲ್ಲಿನ ಚರ್ಚಿತ ಹೆಸರುಗಳ ಸಾಮ್ಯತೆ ಕಡಿಮೆಯಿದೆ. ಜನಪದರ ಪ್ರಕಾರ ಪೇರಿಯಾರಾಜನ ಹೆಸರು ಆ ಸ್ಥಳದ ಚರ್ಚೆ ಸಾಮ್ಯತೆ ನೊಡಿದರೆ ಜನಪದ ಇತಿಹಾಸ ಸತ್ಯವೇನಿಸುತ್ತದೆ. ಉಳಿದಂತೆ ಇವರು ಯಾವ ಅರಸರೊಟ್ಟಿಗೆ ಕಾದಾಡಿದ ಉಲ್ಲೇಖವಿಲ್ಲ. ಜೊತೆಗೆ ಇವರ ರಾಜ್ಯದಲ್ಲಿ ಹಲವು ಆಡಳಿತ ಪ್ರದೇಶಗಳ ಉಲ್ಲೇಖವಾಗಿದೆ. (ನಂದಿಯೊಲ ಕುಪ್ಪೆನಾಡು). ಒಟ್ಟಾರೆಯಾಗಿ ಚೆಂಗಾಳ್ವರು ಕ್ರಿ.ಶ.12ನೇ ಶತಮಾನದಿಂದ 17ನೇ ಶತಮಾನದವರೆಗೂ ಶಾಸನಗಳಲ್ಲಿ ಕುಲೋತುಂಗ ಚೋಳ ಚೆಂಗಾಳ್ವ ಎಂದು ಕರೆದುಕೊಂಡಿದ್ದು, ಎಲ್ಲಿಯೂ ಚೋಳರಿಗೂ ಮತ್ತು ಚಂಗಾಳ್ವರಿಗೂ ಇರುವ ಸಂಬಂಧ ಉಲ್ಲೇಖವಾಗದೆ ಇರುವುದರಿಂದ ಬಿರುದು ಅಥವಾ ಹೆಸರಿನ ಬಗ್ಗೆ ನಿಖರತೆ ಇಲ್ಲವಾಗಿದೆ.

ನಂಜರಾಯಪಟ್ಟಣ, ಸಿಂಗಾಪಟ್ಟಣ, ಬೆಟ್ಟದಪುರಗಳನ್ನು ಕೇಂದ್ರವಾಗಿ ಮಾಡಿಕೊಂಡು ವಿಜಯನಗರದ ಕೊನೆಯ ಅರಸರೊಟ್ಟಿಗೆ ಸ್ನೇಹವಿರಿಸಿಕೊಂಡು ಈ ಭಾಗದಲ್ಲಿ ಚೆಂಗಾಳ್ವರು ತಮ್ಮ ಛಾಪನ್ನು ಮುದ್ರೆಯೊತ್ತಿ ಅಚ್ಚಳಿಯದಂತೆ ಮಾಡಿರುವುದು ಜನಪದರ ಇತಿಹಾಸದಲ್ಲಿಯೂ ವ್ಯಕ್ತವಾಗುತ್ತದೆ.

ಆಧಾರಗಳು

1. ಎಪಿಗ್ರಫಿಯಾಕರ್ನಾಟಿಕ್(ಪರಿಷ್ಕೃತ ಮುದ್ರಣ) ಸಂಪುಟ–4, (ಪಿರಿಯಾಪಟ್ಟಣ–ನಾಲ್ಕು)
2. ಎ.ಕ. ಪಿರಿಯಾಪಟ್ಟಣ–1.
3. ಎ.ಕ. ಪಿರಿಯಾಪಟ್ಟಣ– 4 ಮತ್ತು 5.
4. ಎ.ಕ. ಪಿರಿಯಾಪಟ್ಟಣ– 14 ಮತ್ತು 15.
5. ಎ.ಕ. ಪಿರಿಯಾಪಟ್ಟಣ– 18.
6. ಎ.ಕ. ಪಿರಿಯಾಪಟ್ಟಣ– 22.
7. ಎ.ಕ. ಪಿರಿಯಾಪಟ್ಟಣ– 25 ಮತ್ತು 27.
8. ಎ.ಕ. ಪಿರಿಯಾಪಟ್ಟಣ– 33.
9. ಎ.ಕ. ಪಿರಿಯಾಪಟ್ಟಣ– 59.
10. ಎ.ಕ. ಪಿರಿಯಾಪಟ್ಟಣ– 62.
11. ಎ.ಕ. ಪಿರಿಯಾಪಟ್ಟಣ– 63 ಮತ್ತು 64.

12. ಎ.ಕ. ಪಿರಿಯಾಪಟ್ಟಣ– 71 ಮತ್ತು 72.
13. ಎ.ಕ. ಪಿರಿಯಾಪಟ್ಟಣ– 90.
14. ಎ.ಕ. ಪಿರಿಯಾಪಟ್ಟಣ– 94.
15. ಎ.ಕ. ಪಿರಿಯಾಪಟ್ಟಣ– 103.
16. ಎ.ಕ. ಪಿರಿಯಾಪಟ್ಟಣ– 109 ಮತ್ತು 110.
17. ಎ.ಕ. ಪಿರಿಯಾಪಟ್ಟಣ– 113 ಮತ್ತು 114.
18. ಎ.ಕ. ಪಿರಿಯಾಪಟ್ಟಣ– 121 ಮತ್ತು 122.
19. ಎ.ಕ. ಪಿರಿಯಾಪಟ್ಟಣ– 129 ಮತ್ತು 132.
20. ಎ.ಕ. ಪಿರಿಯಾಪಟ್ಟಣ– 136 ಮತ್ತು 137.
21. ಎಪಿಗ್ರಫಿ ಆಫ್ ಕರ್ನಾಟಕ, ಪಿರಿಯಾಪಟ್ಟಣ– 140.

❖❖❖

ಬೆಳಕಿರದ ದಾರಿಯಲು
ಅಳುಕಿಲ್ಲ ಪಾದದೊಳು
ಭರವಸೆಯ ಬೆಳಕಿನೊರತೆ
ಒಳಗೊಲ್ಲೋ ಬೆಳಗುತಿರಲು

ಕರ್ನಾಟಕದಲ್ಲಿನ ಭೂ ಸುಧಾರಣೆಗಳು

ಡಾ. ರಮೇಶ ಟಿ
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು

ಭಾರತದಲ್ಲಿ ನಡೆದ ರೈತ ಚಳುವಳಿಗಳು ಕೃಷಿಕ್ಷೇತ್ರದ ಅಮೂಲಾಗ್ರ ಪರಿವರ್ತನೆಯ ಮುಖ್ಯ ಕಾರ್ಯಕ್ರಮವಾಗಿದ್ದು, 1857ರ ಮಹಾಸಂಗ್ರಾಮಕ್ಕೆ ಒಂದು ಸಾಮಾಜಿಕ ತಳಹದಿಯನ್ನು ಕಲ್ಪಿಸಿಕೊಟ್ಟಿದ್ದವು. ಈ ರೈತ ಚಳುವಳಿಗಳು ಕಾಲಕಾಲಕ್ಕೆ ದನಿಯೆತ್ತುತ್ತ ಕಿಸಾನ್‌ಸಭಾದ ಸ್ಥಾಪನೆಯೊಂದಿಗೆ ಒಂದು ಸಂಘಟಿತ ಚಳುವಳಿಯಾಗಿ ರಾಷ್ಟ್ರವ್ಯಾಪಿ ಅಸ್ತಿತ್ವವನ್ನು ಪಡೆದುಕೊಂಡಿದ್ದವು. ಆದರೂ ಇವುಗಳಿಗಿದ್ದ ಬೆಂಬಲ ಒಂದೇ ರೂಪದ್ದಾಗಿರದೆ ಬೇರೆ ಬೇರೆ ಕೃಷಿವರ್ಗಗಳಿಂದ ವಿಭಿನ್ನ ಪ್ರಕ್ರಿಯೆಗಳನ್ನೊಳಗೊಂಡಿದ್ದವು. ಸ್ವಾತಂತ್ರ್ಯ ನಂತರ ರಾಷ್ಟ್ರೀಯ ನಾಯಕರು ಭೂಸುಧಾರಣೆಯ ಬಗ್ಗೆ ತಮಗಿರುವ ಬದ್ಧತೆಯನ್ನು ಘೋಷಿಸಿದರೇ ವಿನಹ ಅದನ್ನು ಕಾರ್ಯರೂಪಕ್ಕೆ ತರಲಿಲ್ಲ. ಸಮಾಜವಾದಿಗಳು ಬಹಳ ಕಡೆ ಕೃಷಿ ಹೋರಾಟಗಳಲ್ಲಿ ತೀವ್ರವಾಗಿ ಭಾಗಿಯಾದರು. ಆದರೆ ಎಲ್ಲೆಲ್ಲಿ ಕೃಷಿ ವಿಷಯಗಳ ಬಗ್ಗೆ ಕ್ಷೋಭೆ ಉಂಟಾಯಿತೋ ಅಲ್ಲೆಲ್ಲ ಸರ್ಕಾರವು ಅದನ್ನು ನಿವಾರಿಸಲು ಪ್ರಯತ್ನಿಸಿತು.[1]

ಭೂಮಿ, ಆಸ್ತಿ, ಒಡೆತನಗಳ ಕಲ್ಪನೆ ಇರದ ಮಾನವ ನಿಸರ್ಗದ ಒಂದು ಭಾಗವಾಗಿದ್ದು ತದನಂತರದಲ್ಲಿ ಆದಂತಹ ಬದಲಾವಣೆಗಳು ಸ್ವಾರ್ಥತೆಯನ್ನು ಮೂಡಿಸಿತು. ನಂತರದ ಭೂ ಖಂಡದ ಇತಿಹಾಸದಲ್ಲಿ ಬಲಾಢ್ಯರ ಮತ್ತು ಬಹುಸಂಖ್ಯಾತರ ದಬ್ಬಾಳಿಕೆ ನಿರಂತರವಾಗಿ ಸಾಗಿ ತಾರತಮ್ಯತೆ ಬೆಳೆಸಿ ದುಡಿಯುವ ಮತ್ತು ಶ್ರೀಮಂತ ವರ್ಗ ಸೃಷ್ಠಿಯಾಯಿತು. ಈ ರೀತಿಯ ಒಡೆತನದ ಇತಿಹಾಸ ಒಂದೊಂದು ದೇಶದ ಕಥೆಗಳು ಒಂದೊಂದು ತೆರನಾಗಿದೆ. ಅಂಥ ಶೋಷಣಾ ಇತಿಹಾಸದಲ್ಲಿ ಭಾರತದ ಗೇಣಿ ರೈತರ ಬದುಕು ಒಂದಾಗಿದೆ. ಗೇಣಿ ಸಮಸ್ಯೆ ಎಂಬುದು ಚೀನಾ ಮತ್ತು ಜಪಾನ್‌ನಂತಹ ರಾಷ್ಟ್ರಗಳಲ್ಲೂ ಇದ್ದಿತು. ಆದರೆ ಅವೆಲ್ಲ ಈ ಶತಮಾನದ ಆದಿಯಲ್ಲೇ ಪರಿಹಾರಗೊಂಡವು. ಆದರೆ ಭಾರತದ ಸಮಸ್ಯೆ ಸ್ವಾತಂತ್ರ್ಯಾನಂತರವು ಅವ್ಯವಾಹತವಾಗಿ ಮುಂದುವರಿಯಿತು. ಅನಕ್ಷರತೆ, ಅಜ್ಞಾನ, ನಮ್ಮ ಪರಂಪರೆ ಸಲ್ಲಿಸಿದ ಸ್ವಾಮಿ ನಿಷ್ಠೆ ಹಾಗೂ ಪಟ್ಟಭದ್ರರ ರಾಜಕೀಯ ಹಿಡಿತ ಮೊದಲಾದವು ಈ ಮುಂದುವರಿಕೆಗೆ ಕಾರಣವಿರಬಹುದು. ಆದರೂ ಎಚ್ಚೆತ್ತ ಮನಸ್ಸುಗಳ ಸ್ವಾಭಿಮಾನೀ ಹೋರಾಟ ಮತ್ತು ಮಾನವೀಯ ಮೌಲ್ಯಗಳಿಗಾಗಿ ತುಡಿದ ಚಿಂತನಪರ ನಾಯಕರ ನೇತೃತ್ವ ಭಾರತದಲ್ಲಿ ಹಲವು ರೈತ ಚಳುವಳಿಗಳನ್ನು ಹುಟ್ಟುಹಾಕಿತು. ಅವುಗಳಲ್ಲಿ 1855ರಲ್ಲಿ ಬ್ರಿಟೀಷರ ವಿರುದ್ಧ ನಡೆದ ಮಧ್ಯಭಾರತದ ಸಂತಾಲರ ಚಳವಳಿ, 1875ರಲ್ಲಿನ ಮಾರ್ವಾಡಿಗಳು ಮತ್ತು ಲೇವಾದೇವಿಗಾರರ ವಿರುದ್ಧ ನಡೆದ ದುರ್ಖ ರೈತ ಚಳವಳಿ, 1870ರಿಂದ 1885ರ ವರೆಗೆ ಬಂಗಾಳದ ಜಮೀನುದಾರರ ವಿರುದ್ಧ ನಡೆದ ಗೇಣಿ ರೈತರ ಚಳವಳಿ, 19ನೇ ಶತಮಾನದ ಆರಂಭದಲ್ಲಿ ಪಂಜಾಬಿನಲ್ಲಿ ಲೇವಾದೇವಿಗಾರರ ವಿರುದ್ಧ ನಡೆದ

ರೈತಚಳವಳಿ ಒರಿಸ್ಸಾದ ಸತ್ನಾಮ್ ರೈತ ಬಂಡಾಯ, ಕರ್ನಾಟಕದಲ್ಲಿ 1835–1837ರ ಸುಮಾರಿನಲ್ಲಿ ನಡೆದ ದಕ್ಷಿಣ ಕನ್ನಡ ಮತ್ತು ಕೊಡಗುಗಳಲ್ಲಿನ ರೈತ ಬಂಡಾಯ, 1935–40ರ ಸುಮಾರಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಕರ ದೇಸಾಯಿರವರ ಮುಖಂಡತ್ವದಲ್ಲಿ ನಡೆದ ಹಾಲಕ್ಕಿ ಒಕ್ಕಲಿಗರ ಆಂದೋಳನ ಪ್ರಮುಖವಾಗಿದ್ದವು.[2] ಆದರೆ ಅವುಗಳಲ್ಲಿ ಕೆಲವು ಆಯಾ ಸಂದರ್ಭದ ಪ್ರಕೋಪದಲ್ಲಿ ಹುಟ್ಟಿಕೊಂಡು ಅಲ್ಲಲ್ಲೇ ನಂದಿ ಹೋದವು. ಅದರಲ್ಲೂ ಕರ್ನಾಟಕದಲ್ಲಿನ ಆಂದೋಲನಗಳು ಸಂಪೂರ್ಣವಾಗಿ ನೆಲಕಚ್ಚಿಹೋದವು. ಇದರಿಂದಾಗಿ ಗೇಣಿದಾರರಿಗೆ, ಬಡರೈತರಿಗೆ, ಕೃಷಿಕೂಲಿ ಕಾರ್ಮಿಕರಿಗೆ ದಿಕ್ಕು ತೋಚದಂತಾಯಿತು. ಇಂಥ ಸಂದರ್ಭದಲ್ಲಿ ಕರ್ನಾಟಕದ ಎಲ್ಲಾ ಶೋಷಿತರಿಗೆ ದಾರಿದೀಪವೆನ್ನುವಂತೆ ಉದ್ಭವಿಸಿ ಸ್ವಾಭಿಮಾನದ ಕಿಚ್ಚು ಹಚ್ಚಿದ ಐತಿಹಾಸಿಕ ಘಟನೆ ಕಾಗೋಡು ಗೇಣಿ ರೈತ ಚಳವಳಿ. 1950ರಲ್ಲಿ ಗೇಣಿ ರೈತರ ಸ್ವಾಭಿಮಾನದ ಪ್ರತೀಕವಾಗಿ ಹುಟ್ಟಿಕೊಂಡ ಈ ಐತಿಹಾಸಿಕ ಚಳವಳಿಯು ಮುಂದಿನ ಅನೇಕ ಮಾರ್ಪಾಟುಗಳಿಗೆ, ಶಾಸನಗಳ ರಚನೆಗೆ ಕಾರಣವಾಯಿತು. ಇಂತಹ ಶಾಸನಗಳಲ್ಲಿ ಭೂಸುಧಾರಣೆ ಎಂಬುದು ಬಹಳ ಮುಖ್ಯವಾದ ಭೂ ವ್ಯವಸ್ಥೆಯ ಮಾರ್ಪಾಟಾಗಿದೆ.

ಭೂ ಸುಧಾರಣೆ ಎಂದರೆ ಅದು ಶಾಸನಬದ್ಧ ಅಧಿಕಾರ ಪಡೆದು ಆಡಳಿತ ಕಾರ್ಯಾಚರಣೆಯ ಮೂಲಕ ಖಾಸಗಿ ಹಿಡುವಳಿದಾರರ ಚಟುವಟಿಕೆಗಳನ್ನು ಸರ್ಕಾರವು ನಿಯಂತ್ರಿಸುವುದರಿಂದ ಹೊರಹೊಮ್ಮಿದ ಕಾರ್ಯ ಸರಣಿಯನ್ನು ಸೂಚಿಸುತ್ತದೆ. ಇಲ್ಲಿ ಭೂ ಸುಧಾರಣೆ ಎಂದರೆ ಭೂಮಿಯ ಒಡೆತನ, ಹತೋಟಿ ಹಾಗೂ ಉಪಯೋಗದ ವಿಚಾರವಾಗಿ ಬಳಕೆಯಲ್ಲಿರುವ ಪದ್ಧತಿಯಲ್ಲ ಬದಲಿಗೆ ಒಡೆತನದ ಪುನರ್ ಹಂಚಿಕೆ ಮತ್ತು ಭೂ ಮಾನವ ಸಂಬಂಧಗಳಲ್ಲಿ ಮಾರ್ಪಾಡು ತರುವುದಾಗಿದೆ. ಭೂ ಸುಧಾರಣೆಯ ಕೈಕೆಳಗೆ ಅನುಸರಿಸುವ ಕಾರ್ಯಗತಿಗಳ ಮೂಲಕ ಕೃಷಿ ವಿನ್ಯಾಸದಲ್ಲಿ ಈ ಕೆಳಗಿನ ಕೆಲವು ಮಾರ್ಪಾಡುಗಳು ಬೇರೆ ಬೇರೆ ಮಟ್ಟದಲ್ಲಿ ಕಂಡುಬಂದವು. ಅವುಗಳೆಂದರೆ.

1. ಭೂಮಿಯ ಹಂಚುವಿಕೆ ಮತ್ತು ಹಿಡುವಳಿಗಳಲ್ಲಿ ಮಾರ್ಪಾಡು ತರುವುದಕ್ಕಾಗಿ ಸಾರ್ವಜನಿಕ ಅಥವಾ ಖಾಸಗೀ ಜಮೀನುಗಳ ಪುನರ್ ಹಂಚಿಕೆ,

2. ವೈಯಕ್ತಿಕ ಹಿಡುವಳಿಗಳನ್ನು ಒಗ್ಗೂಡಿಸುವುದರ ಮೂಲಕ ಭೂಮಿಯ ಮೇಲಿರುವ ಹತೋಟಿಯ ಮಾದರಿಯನ್ನು ಪುನರ್‌ವ್ಯವಸ್ಥೆಗೊಳಿಸುವುದು.

3. ಜಮೀನುಗಳ ಹಂಚಿಕೆ ಮಾಡಿ ಅಥವಾ ಮಾಡದೆ ಜಮೀನಿನ ಒಡೆತನ ಮತ್ತು ಗೇಣಿ ಹಕ್ಕುಗಳಲ್ಲಿ ಮಾರ್ಪಾಡುಗಳನ್ನು ತರುವುದು, ಪುನರ್ ಹಂಚಿಕೆಗೆ ಒದಗುವ ಜಮೀನನ್ನು ಹೊಸ ಮಾಲೀಕರಿಗಾಗಿ ಇಲ್ಲವೇ ಆಯಾ ಜಮೀನಿನಲ್ಲಿ ಸಾಗುವಳಿ ಮಾಡುವ ರೈತರಿಗಾಗಲಿ ನೀಡುವುದು ಅಥವಾ ಜಮೀನಿನ ಪುನರ್ ಹಂಚಿಕೆಗೆ ಕೈಯಿಡದೆ ಆಯಾ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಗೇಣಿದಾರರಿಗಾಗಲಿ ಅಥವಾ ಕೃಷಿ ಕಾರ್ಮಿಕರಿಗಾಗಲಿ ಅವುಗಳ ಒಡೆತನವನ್ನು ನೀಡುವುದು.

4. ಭೂ ಒಡೆತನದಲ್ಲಿ ಬದಲಾವಣೆ ಮಾಡದೆ ಅಥವಾ ಜಮೀನಿನ ಪುನರ್ ಹಂಚಿಕೆ ಮಾಡದೆ ಗೇಣಿಯ ಷರತ್ತುಗಳಲ್ಲಿ ಮಾರ್ಪಾಡು ತರುವುದು ಅಥವಾ ಇದರೊಂದಿಗೆ ಜಮೀನನ್ನು ಸಾಗುವಳಿ ಮಾಡುತ್ತಿರುವ ಹಕ್ಕುಗಳನ್ನು ರಕ್ಷಿಸಬಹುದು

ಅಥವಾ ಬದಲಾಯಿಸಬಹುದು. ಜಮೀನುಗಳಲ್ಲಿ ವಾಡಿಕೆಯಿಂದ ಬಂದ ಹಕ್ಕುಗಳನ್ನು ಬದಲಾಯಿಸುವುದು ಸಹ ಸೇರಿರುತ್ತದೆ.

ಈ ಎಲ್ಲಾ ಕಾಯಕ್ರಮಗಳಲ್ಲದೆ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಯಮಿಸುವುದು, ಅವರ ಸಂಕಷ್ಟಗಳನ್ನು ಹಗುರಗೊಳಿಸುವಂತಹ ಕಲ್ಯಾಣಕಾರ್ಯಕ್ರಮಗಳನ್ನೂ ಕೈಗೊಳ್ಳುವುದು ಮತ್ತು ಜಮೀನು ದಾಖಲಾತಿಗಳನ್ನು ಪರಿಷ್ಕರಿಸಿ ತಾತ್ಕಾಲೀನಗೊಳಿಸುವುದೂ ಸಹ ಕೂಡಿರುತ್ತದೆ. ಒಟ್ಟಿನಲ್ಲಿ ಭೂ ಸುಧಾರಣೆಯ ಎರಡು ಮುಖ್ಯ ಅಂಶಗಳೆಂದರೆ, ಗೇಣಿದಾರರಿಗೆ ಭೂ ಒಡೆತನದ ಹಕ್ಕನ್ನು ದೊರಕಿಸಿಕೊಡುವುದು ಹಾಗೂ ನಿಗದಿತ ಭೂಮಿತಿಗಿಂತ ಹೆಚ್ಚಿರುವ ಭೂಮಿಯನ್ನು ಹಂಚುವುದಾಗಿದೆ. ಹಾಗೆಯೇ ನೂರಾರು ವರ್ಷಗಳಿಂದ ನಡೆದು ಬಂದಂತಹ ಗೇಣಿಪದ್ಧತಿಯಲ್ಲಿ ಹಲವು ವಿಧಗಳಿವೆ. ಅವುಗಳೆಂದರೆ ಮೂಲಗೇಣಿ, ಚಲಗೇಣಿ, ವಾಯಿದೆ ಗೇಣಿ ನ್ಯಾಯಗೇಣಿ. ಮೂಲಗೇಣಿಯ ಪ್ರಕಾರ ಸರ್ಕಾರದಿಂದ ಭೂಮಿಯನ್ನು ಗೇಣಿಗೆ ಪಡೆದ ರೈತ ಆ ಭೂಮಿಯ ಒಡೆತನವನ್ನು ತನ್ನದಾಗಿಸಿಕೊಂಡು ವಂಶಪಾರಂಪರ್ಯವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದನು. ಇವನು ಯಾರಿಗೂ ಈ ಭೂಮಿಯನ್ನು ಉಪಗೇಣಿಗೆ ಕೊಡುವ ಹಕ್ಕಿರಲಿಲ್ಲ. ಚಲಗೇಣಿ ಎಂದರೆ ತಾತ್ಕಾಲಿಕ ಗೇಣಿ. ಈ ಗೇಣಿದಾರನ ಬಳಿ ಗೇಣಿ ಒಪ್ಪಂದದ ಪತ್ರವಿರುವುದಿಲ್ಲ. ಗೇಣಿಯನ್ನು ಇವರು ನಗದು ಅಥವಾ ಧಾನ್ಯ ರೂಪದಲ್ಲಿ ಸಂದಾಯಮಾಡಬೇಕು. ಭೂ ಮಾಲಿಕ ತನಗೆ ಇಷ್ಟ ಬಂದಾಗ ಗೇಣಿದಾರನನ್ನು ಒಕ್ಕಲೆಬ್ಬಿಸಬಹುದಾಗಿತ್ತು. ವಾಯಿದೆ ಗೇಣಿ ಎಂದರೆ ಒಂದು ನಿಗದಿತ ಸಮಯದವರೆಗೆ ಮಾತ್ರ ಗೇಣಿ ಕೂಡಲ್ಪಡುತ್ತಿದ್ದು, ವಾಯಿದೆ ಮುಗಿದ ಮೇಲೆ ಭೂ ಮಾಲಿಕ ತನ್ನ ಸ್ವಂತ ವ್ಯವಸಾಯಕ್ಕೆಂದು ವಾಪಸ್ಸು ಪಡೆಯಬಹುದಾಗಿತ್ತು. ನ್ಯಾಯಗೇಣಿಯ ಪ್ರಕಾರ ಗೇಣಿದಾರ ತನ್ನ ಜೀವಿತ ಕಾಲದವರೆಗೆ ಗೇಣಿ ಮಾಡಬಹುದಾಗಿದ್ದು, ಗೇಣಿದಾರನ ಮರಣದ ತರುವಾಯ ಭೂ ಮಾಲಿಕ ತನ್ನ ಭೂಮಿಯನ್ನು ಹಿಂದಕ್ಕೆ ಪಡೆದುಕೊಳ್ಳಲಾಗುತ್ತಿದ್ದಿತು.

ಯಾವುದೇ ದೇಶದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಭೂಸುಧಾರಣೆ ಒಂದು ಪ್ರಮುಖ ಸಾಧನವಾಗಿದೆ ಅದರಲ್ಲೂ ಭಾರತ, ಅದರ ಭಾಗವಾದ ಕರ್ನಾಟಕದಂತಹ ಬಡ ದೇಶಗಳಲ್ಲಿ ಇದು ಮಹತ್ವದ್ದಾಗಿದೆ. ಏಕೆಂದರೆ ಕೃಷಿ, ಮಾನವನ ಉಳಿದೆಲ್ಲ ಕ್ಷೇತ್ರಗಳ ಪ್ರಗತಿಗೂ ಜೀವನಾಧಾರವಾಗಿದೆ. ಕೈಗಾರಿಕಾ ಉತ್ಪನ್ನದಿಂದ ಆದಾಯ ಹೆಚ್ಚಬಹುದೇ ವಿನಃ ಅದು ಹಸಿವನ್ನು ಇಂಗಿಸಲಾರದು. ಇದನ್ನು ಮನಗಂಡ ಕರ್ನಾಟಕ ಸರ್ಕಾರ ಕೃಷಿ ಭೂಮಿ ಒಡೆತನದಲ್ಲಿ ಮಹಾನ್ ಬದಲಾವಣೆಯನ್ನು ಬಯಸಿತು. ಈವರೆಗೆ ಇದ್ದ ವ್ಯವಸ್ಥೆಯಲ್ಲಿ ಬಹುಪಾಲು ಭೂಮಿ ಕೆಲವೇ ಜಾಗೀರುದಾರರು, ಜಮೀನ್ದಾರರು, ಇನಾಮ್ತಿದಾರರು ಮೊದಲಾದವರ ಸ್ವಾಧೀನದಲ್ಲಿದ್ದಿತು. ಭೂಹೀನರು ಮತ್ತು ಗೇಣಿದಾರರು ಇವುಗಳಲ್ಲಿ ಗುತ್ತಿಗೆ ಅಥವಾ ಇತರ ಗೇಣಿ ಆಧಾರದ ಮೇಲೆ ದುಡಿಯುವವರಾಗಿದ್ದರು.[3] ಜನಸಂಖ್ಯಾ ಹೆಚ್ಚಳವಾದಂತೆ ಭೂಹೀನರು ಹಾಗೂ ಗೇಣಿದಾರರು ಜೀವನೋಪಾಯಕ್ಕಾಗಿ ಭೂಮಿಗೆ ಅಂಟಿಕೊಳ್ಳುವುದು ಅನಿವಾರ್ಯವಾಯಿತು. ಏಕೆಂದರೆ ಅದು ಬಿಟ್ಟು ಬೇರೇನೂ ಅವರಿಂದ ಸಾಧ್ಯವಾಗದು. ಹಾಗಾಗಿ ಭೂಮಿಯನ್ನು ಅವಲಂಭಿಸುವವರು ಅಧಿಕಗೊಂಡರು. ಭೂಮಾಲೀಕನಲ್ಲಿ ಇವರು ಗೇಣಿಗಾಗಿ ಮುಗಿಬೀಳತೊಡಗಿದರು. ಇದನ್ನು

ದುರುಪಯೋಗ ಮಾಡಿಕೊಂಡ ಭೂಮಾಲೀಕರು ಗೇಣಿದಾರರನ್ನು ನ್ಯಾಯಬಾಹಿರ ಕರಾರುಗಳಿಗೆ ಒಳಪಡಿಸಿ ಶೋಷಿಸಲಾರಂಬಿಸಿದರು. ಇದನ್ನು ಗಮನಿಸಿದ ಸರ್ಕಾರ ಭೂಹೀನ ಸೃಷ್ಟಿಕರು ಹಾಗೂ ಗೇಣಿದಾರರ ಜಮೀನನ್ನು ಹಸನುಗೊಳಿಸುವ ಯತ್ನ ಮಾಡಿತು. ಜನರ ಒಲವನ್ನು ತಮ್ಮೆಡೆ ಸೆಳೆದುಕೊಳ್ಳುವ ಮತ್ತೊಂದು ಪರೋಕ್ಷ ಆಸಕ್ತಿ ಹೊಂದಿದ ರಾಜಕೀಯ ಪಕ್ಷಗಳು ಹಾಗು ಅವುಗಳ ಧುರೀಣರು ಕೂಡ ಆ ಬಗ್ಗೆ ಕಾಳಜಿವಹಿಸತೊಡಗಿದರು.

ಆಧುನಿಕ ಕರ್ನಾಟಕದಲ್ಲಿ ಜಾರಿಯಾದ ಭೂಸುಧಾರಣಾ ಶಾಸನಗಳ ಕಾಲವನ್ನು ಮೂರುಹಂತಗಳಲ್ಲಿ ನೋಡಬಹುದಾಗಿದೆ. ಅವುಗಳೆಂದರೆ

1) ವಸಾಹತು ಪೂರ್ವದಿಂದ ಸ್ವಾತಂತ್ರ್ಯದ (1947)ವರೆಗೆ,
2) ಸ್ವಾತಂತ್ರ್ಯದಿಂದ ಏಕೀಕರಣದ (1956)ವರೆಗೆ ಮತ್ತು
3) ಏಕೀಕರಣದ ನಂತರದಿಂದ ಪ್ರಸ್ತುತ ಅಧ್ಯಯನದ (2000) ವರೆಗೆ

ಆಧುನಿಕ ಕರ್ನಾಟಕದ ಭೂವ್ಯವಸ್ಥೆಗೆ ಸಂಬಂಧಪಟ್ಟ ಶಾಸನಗಳ ಜಾರಿಯ ಆರಂಭವನ್ನು ಸಾಂಪ್ರದಾಯಿಕವಾಗಿ ಪಾಳೆಗಾರರು, ಮೈಸೂರಿನ ರಾಜರು, ಹೈದರ್‌ಆಲಿ, ಟಿಪ್ಪು, ಪೂರ್ಣಯ್ಯ ಹಾಗೂ ಬ್ರಿಟೀಷರ ಆಳ್ವಿಕೆಯ ಕಾಲಕ್ಕೆ ಸೇರಿದ್ದಾಗಿದ್ದಿತು. ಈ ಅವಧಿಯಲ್ಲಿ ಭೂಹಿಡುವಳಿ ಬಗ್ಗೆ ಜಾರಿಗೊಂಡ ಶಾಸನ ಹಾಗೂ ನಿಯಮಾವಳಿಗಳನ್ನು ಭೂಸುಧಾರಣೆಗಳೆಂದು ಕರೆಯಲಾಗದು. ಏಕೆಂದರೆ ಅವು ಕೇವಲ ಭೂಮಾಪನ ಹಾಗೂ ಅವುಗಳಿಗೆ ಸಂಬಂಧಿಸಿದ ದಾಖಲೆಗಳ ಉಸ್ತುವಾರಿ, ಸಂರಕ್ಷಣೆ ಮತ್ತು ಕಂದಾಯ ವಸೂಲಿ ಕುರಿತ ಶಾಸನಗಳಾಗಿದ್ದವು. ಅಲ್ಲದೆ ಅಂದು ಭೂ ಒಡೆತನ ಸರ್ಕಾರದ್ದೊಂದೇ ಆಗಿದ್ದಿತು. 1881ರಲ್ಲಿ ರಚನೆಗೊಂಡ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಾಮಾಜಿಕ ಕಳಕಳಿಯ ಸೋಗಿನ ಗಣ್ಯವರ್ತಕರು ಅಥವಾ ಜಮೀನ್ದಾರರಾಗಿದ್ದ ಗುಂಪೊಂದು ಸೇರಿಕೊಂಡಿದ್ದು, ಇವರನ್ನು ಜಿಲ್ಲಾಧಿಕಾರಿಯು ನಾಮಕರಣದ ಮೂಲಕ ಕಳುಹಿಸಿಕೊಡಲಾಗುತ್ತಿದ್ದಿತು. ಈ ಅವಧಿಯಲ್ಲಿ ಅಂದರೆ 1881 ರಿಂದ 1947ರ ವರೆಗೆ ಈ ಸದಸ್ಯರು ಕೇವಲ ಆಡಳಿತದಲ್ಲಿ ದಿವಾನರೊಡನೆ ಪಾಲ್ಗೊಂಡಿದ್ದನ್ನು ಬಿಟ್ಟರೆ ಬೇರೇನೂ ಆಗಲಿಲ್ಲ. ಯಾವುದೇ ರೀತಿಯ ಶಾಸನ ಜಾರಿಮಾಡುವ ಅಧಿಕಾರ ಅವರಿಗಿರಲಿಲ್ಲ. ಈ ಪ್ರಜಾಪ್ರತಿನಿಧಿ ಸಭೆಯು ಜಾರಿಗೊಳಿಸಿದ ಒಂದು ಗಮನಾರ್ಹಶಾಸನವೆಂದರೆ ಇನಾಮ್ ಭೂಮಿಗಳು ಮತ್ತು ಗೇಣಿದಾರರಿಗೆ ಸಂಬಂಧಿಸಿದುದಾಗಿದ್ದಿತು.[4] ಇನಾಮ್ ಭೂಮಿಗಳಿಂದ ಸರಕಾರದ ಖಜಾನೆಗೆ ತಪ್ಪದೆ ಕಂದಾಯ ಬರುವಂತಾಯಿತು. ಹೀಗೆ ಭೂಮಿ ಪಡೆದ ಇನಾಮ್ತಿದಾರರು ಊಳಿಗಮಾನ್ಯ ವ್ಯವಸ್ಥೆಗೆ ದಾರಿ ಮಾಡಿದರು.

ಸ್ವಾತಂತ್ರ್ಯಾ ನಂತರದ ಭೂ ಸುಧಾರಣಾ ವ್ಯವಸ್ಥೆ ಸ್ವಾತಂತ್ರ್ಯ ನಂತರ ಕೆಲವು ಬದಲಾವಣೆಗಳನ್ನು ಕಂಡಿತು. ಇನಾಮ್ ಭೂಮಿ ಹಾಗೂ ಗೇಣಿ ನಿಯಮಾವಳಿಯ ಬಗ್ಗೆ ಕೆಲವು ಶಾಸನ ಜಾರಿಗೊಂಡವು. 1947ರ ಡಿಸೆಂಬರ್‌ನಲ್ಲಿ ಇನಾಮ್ ಭೂಮಿಗಳನ್ನು ರದ್ದುಗೊಳಿಸಿ ಸರ್ಕಾರ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಆದರೆ ಅವು ಶಾಸನವಾಗಿ ಜಾರಿಗೊಳ್ಳಲಿಲ್ಲ. 1950ರಲ್ಲಿ ಜಾರಿಗೊಂಡ ಮೈಸೂರ್ ಎಲಿಮಿನೇಟೆಡ್ ವಿಲೇಜಸ್ ಆಕ್ಟ್, ಇನಾಮ್‌ದಾರರಿಂದ ಗೇಣಿದಾರರನ್ನು ರಕ್ಷಿಸಲು ಕೆಲವು ನಿಯಮಗಳನ್ನು ಒಳಗೊಂಡಿದ್ದಿತು.

ಇದಾದ ನಾಲ್ಕು ವರ್ಷಗಳ ನಂತರ ಅಂದರೆ 1954ರಲ್ಲಿ (1947 ಡಿಸೆಂಬರ್‌ನಲ್ಲಿ

ಅಂಗೀಕರಿಸಿದ ಗೊತ್ತುವಳಿ) ಶಾಸನವಾಗಿ ಕೆಲವು ಪ್ರಾಂತ್ಯಗಳಲ್ಲಿ ಜಾರಿಗೆ ಬಂದಿತು. ಈ ಶಾಸನ ಇನಾಮ್ತಿಯನ್ನು ರದ್ದುಗೊಳಿಸಿತು. ಇದನ್ನು 1952ರ ಮೈಸೂರು ಟೆನೆನ್ಸಿ ಕಾಯಿದೆ ಅಥವಾ ಇನಾಮ್ ರದ್ದತಿ ಶಾಸನವೆಂದು ಕರೆಯಲಾಗಿದೆ. ಮೈಸೂರು ಸಂಸ್ಥಾನದ ಗೇಣಿ ಒಕ್ಕಲುಗಳ ಹೊಟ್ಟೆಗೆ ಬರೆಹಾಕಿದ ಕಾಯಿದೆಯಾಗಿದೆ. ಈ ಕಾಯಿದೆ ಗೇಣಿಯನ್ನು ಫಸಲಿನ ಒಂದನೇ ಮೂರಕ್ಕಿಂತ ಜಾಸ್ತಿ ಇರಬಾರದೆಂದು ಮಾಡಿತು. 12 ವರ್ಷಕ್ಕಿಂತ ಜಾಸ್ತಿ ಅವಧಿಯಲ್ಲಿ ಗೇಣಿ ಮಾಡಿಕೊಂಡಿದ್ದ ಒಕ್ಕಲುಗಳಿಗೆ ಖಾಯಂ ಹಕ್ಕುಗಳನ್ನು ನೀಡಿತು. ಆದರೆ ಕಾಯ್ದೆ ಪ್ರಕಾರ ಭೂಮಾಲೀಕ ತನ್ನ ಸ್ವಂತ ಸಾಗುವಳಿಗೆಂದು ಭೂಮಿ ಬಿಡಿಸಿಕೊಳ್ಳಬಹುದಾಗಿತ್ತು. ಜೊತೆಗೆ ಗೇಣಿ ಬಾಕಿಯಿದ್ದರೆ ಗೇಣಿ ಜಮೀನಿನಲ್ಲಿ ಒಕ್ಕಲು, ಕೃಷಿ ಮಾಡದೇ ಇದ್ದರೆ, ಜಮೀನು ಹಾಳುಗೆಡವಿದ್ದರೆ, ಭೂಮಾಲಿಕ ಗೇಣಿದಾರನನ್ನು ಒಕ್ಕಲೆಬ್ಬಿಸಹುದಾಗಿತ್ತು. ಇವು ವಾಸ್ತವದಲ್ಲಿ ಭೂಮಾಲೀಕರಿಗೆ ಒಕ್ಕಲೆಬ್ಬಿಸಲು ಸರ್ಕಾರವೇ ತೋರಿಸಿಕೊಟ್ಟ ಉಪಾಯಗಳಾಗಿದ್ದವು. ಅದುವರೆಗೆ ಕಾನೂನಿನ ಚೌಕಟ್ಟಿನ ಹೊರಗೆ ನಡೆಯುತ್ತಿದ್ದ ಒಕ್ಕಲೆಬ್ಬಿಸುವಿಕೆಗೆ ಈಗ ಕಾಯಿದೆಯ ಅಧಿಕೃತ ಮುದ್ರೆಯನ್ನೊತ್ತಿತ್ತು. ಪರಿಣಾಮವಾಗಿ ರಾಜ್ಯದ ಭೂಮಾಲೀಕರು ಇದರ ಪ್ರಯೋಜನ ಪಡೆದುಕೊಂಡರು.[5]

ಮದ್ರಾಸ್ ಪ್ರಾಂತ್ಯ ಕರ್ನಾಟಕಕ್ಕೇ ಸೇರ್ಪಡೆಯಾಗುವುದಕ್ಕೆ ಮುಂಚೆ ದಕ್ಷಣ ಕನ್ನಡ ಮತ್ತು ಕೊಳ್ಳೆಗಾಲದಲ್ಲಿ ಅನ್ವಯವಾಗುತ್ತಿದ್ದ ಕಾನೂನೆಂದರೆ ಒಕ್ಕಲೆಬ್ಬಿಸುವುದರ ವಿರುದ್ಧ 1954 ಮದ್ರಾಸ್ ಕಾನೂನು, ಇದು ಗೇಣಿದಾರರನ್ನು ಭೂಮಾಲೀಕರು ತಮ್ಮ ಮನಸೋಇಚ್ಛೆ ಒಕ್ಕಲೆಬ್ಬಿಸುವುದರ ವಿರುದ್ಧ ರಕ್ಷಣೆ ಕೊಟ್ಟಿತು. 1956ರಲ್ಲಿ ಈ ಕಾನೂನು ಕೆಲವು ತಿದ್ದುಪಡಿಕಂಡಿತು. ಇದರ ಪ್ರಕಾರ ಭೂಮಾಲಿಕ ತಾನು ಸ್ವಂತ ವ್ಯವಸಾಯ ಮಾಡುವುದಾದರೆ ಭೂಮಿಯನ್ನು ಗೇಣಿದಾರನಿಂದ ಬಿಡಸಿಕೊಳ್ಳಬಹುದಿತ್ತು. ಹೀಗೆ ಬಿಡಿಸಿಕೊಂಡಾಗ ಅರ್ಧಭಾಗ ಭೂಮಿಯನ್ನು ಗೇಣಿದಾರನಿಗೆ ಬಿಟ್ಟುಕೊಡಬೇಕಾಗಿತ್ತು. ಭೂಮಾಲಿಕನ ಬಳಿ 13 ಎಕರೆಗಿಂತ ಹೆಚ್ಚು ನೀರಾವರಿ ಜಮೀನಿದ್ದರೆ ಗೇಣಿದಾರ ಭೂಮಾಲಿಕನಿಗೆ ಭೂಮಿಯನ್ನು ಬಿಟ್ಟುಕೊಡಬೇಕಾಗಿರಲಿಲ್ಲ. ಅಲ್ಲದೆ ವೃತ್ತಿ ತೆರಿಗೆ ಮತ್ತು ಆದಾಯ ತೆರಿಗೆ ಕಟ್ಟುತ್ತಿದ್ದ ಭೂಮಾಲಿಕರಿಗೆ ಗೇಣಿದಾರರು ಭೂಮಿಯನ್ನು ಹಿಂದಿರುಗಿಸಬೇಕಾಗಿರಲಿಲ್ಲ. ವ್ಯವಸಾಯ ಮಾಡುತ್ತಿರುವ ಗೇಣಿದಾರ ಮದ್ರಾಸ್ ಕಾನೂನು 1954ರ ಪ್ರಕಾರ ಭೂಮಾಲೀಕ ಗೇಣಿದಾರನಿಂದ ಹೆಚ್ಚಿನ ಗುತ್ತಿಗೆ ವಸೂಲು ಮಾಡುವುದರ ವಿರುದ್ಧ ನಿಬಂಧನೆಗಳಿದ್ದವು. ಅವರು ಬೆಳೆಯುತ್ತಿರುವ ಶೇಕಡ 33 ರಿಂದ 40 ಭಾಗ ಮಾತ್ರ ಭೂಮಾಲೀಕನಿಗೆ ಕೊಡುವಂತೆ ಕಾನೂನನ್ನು ರೂಪಿಸಲಾಗಿತ್ತು. ಈ ಎಲ್ಲಾ ಕಾನೂನುಗಳು ಗೇಣಿದಾರರ ಹಾಗೂ ಸಣ್ಣ ಭೂಮಾಲೀಕರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿದ ಕಾನೂನುಗಳಾಗಿದ್ದವು.

ಗೇಣಿದಾರರ ಹಿತ ರಕ್ಷಣೆಯ ಬಗ್ಗೆ ಯಾವುದೆ ಪ್ರಚಾರಗಳಿಲ್ಲದೆ ಒಳಗೊಳಗೇ ಅವರಿಗೆ ಭದ್ರತೆ ನೀಡಿದ್ದ ಕಾನೂನುಗಳು ಇವಾಗಿದ್ದವು. ಆದರೆ ಜಮೀನ್ದಾರಿಶಾಹಿಯ ಎದುರಿನಲ್ಲಿ ಇಂತಹ ಸುಧಾರಣೆಗಳು ಜಾಸ್ತಿಕಾಲ ನಿಲ್ಲಲಿಲ್ಲ. 1954ರಲ್ಲಿ ಕಡಿದಾಳ್ ಮಂಜಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಧಾರ್ಮಿಕ ಜಹಗೀರಿ ಮತ್ತು ಇನಾಂ ರದ್ದತಿ ಶಾಸನವನ್ನು ಜಾರಿಗೆ ತಂದಿದ್ದರು. ಇದೂ ಕೂಡ ಹಲ್ಲಿಲ್ಲದ ಶಾಸನವಾಗಿದ್ದು, ಪ್ರಾಂತ್ಯದ ಹೆಚ್ಚಿನ ಧಾರ್ಮಿಕ ಸಂಸ್ಥೆಗಳ ಆಸ್ತಿಪಾಸ್ತಿ ಈ ಶಾಸನದ ಹೊರಗೇ ಉಳಿದಿದ್ದವು. ಇದಾದ ಒಂದು ವರ್ಷದ ಮೇಲೆ ಅಂದರೆ 1955ರಲ್ಲಿ ರಿಂಜಿಯಸ್

ಅಂಡ್ ಛಾರಿಟೆಬಲ್ ಆಕ್ಟ್ ಜಾರಿಮಾಡಿ ಧಾರ್ಮಿಕ ಮಠಮಾನ್ಯಗಳ ಇನಾಮ್ತಿಗಳನ್ನೂ ರದ್ದುಗೊಳಿಸಲಾಯಿತು. ಹಾಗಾಗಿ 47,440 ಎಕರೆ ಜಾಗೀರುಹೊಂದಿದ್ದ ಶೃಂಗೇರಿ ಮೊದಲಾದ ಮಠಗಳ ಜಾಗೀರುಗಳು ರದ್ದಾದವು.[6] ಕೇಂದ್ರದಲ್ಲಿ ಅಧಿಕಾರ ರೂಢವಾಗಿದ್ದ ಕಾಂಗ್ರೆಸ್ ಪಕ್ಷಕೂಡ ರಾಷ್ಟ್ರಮಟ್ಟದಲ್ಲೆ ಜಮೀನ್ದಾರಿ ವ್ಯವಸ್ಥೆಯನ್ನು ನಿರ್ಮೂಲನಗೊಳಿಸುವಲ್ಲಿ ಅಮೂಲಾಗ್ರ ಭೂಸುಧಾರಣೆಗೆ ಬದ್ಧವಾಗಿದ್ದಿತು. ಕರ್ನಾಟಕದಲ್ಲಿ ಜಮೀನ್ದಾರಿ ವ್ಯವಸ್ಥೆ ಅತ್ಯಲ್ಪದ್ದಾಗಿದ್ದುದರಿಂದ ತೀವ್ರಗಾಮಿ ರಾಜಕಾರಣಿಗಳು ಇನಾಮ್ತಿ ಕಡೆಗೆ ಗಮನಹರಿಸಿದರು. ಈ ವೇಳೆಯಲ್ಲಿ ವರ್ಗರಹಿತ ಸಮಾಜ ರಚನೆಮಾಡಲಿಕ್ಕಾಗಿ ತಮ್ಮನ್ನು ಅಧಿಕಾರಕ್ಕೆ ತನ್ನಿ ಎಂಬ ಕಮ್ಯೂನಿಷ್ಟರ ಘೋಷಣೆ ಕಾಂಗ್ರೆಸ್ಸಿಗರನ್ನು ಚರಿತಗೊಳಿಸಿತು. ಹಾಗಾಗಿ ಕಾಂಗ್ರೆಸ್ ಪಕ್ಷ ಅಮೂಲಾಗ್ರ ಸಾಮಾಜಿಕ ಆರ್ಥಿಕ ಬದಲಾವಣೆಗಾಗಿ ಸ್ವಲ್ಪಸ್ವಲ್ಪ ಕ್ರಮಗಳನ್ನು ಕೈಗೊಳ್ಳತೊಡಗಿತು. ಮೇಲಾಗಿ ಇನಾಮ್ತಿ ಉಳ್ಳವರ ಸಂಖ್ಯೆ ಕೂಡ ರಾಜ್ಯದಲ್ಲಿ ಕಡಿಮೆಯಾಗಿದ್ದಿತು. ಸಮಾಜದ ಎಲ್ಲಾ ಸವಲತ್ತು ಮತ್ತು ಅಧಿಕಾರವನ್ನುಗಳಿಸಿದ್ದ ಈ ವರ್ಗ ಅನ್ಯರ ಹೊಟ್ಟೆಯುರಿಗೂ ಕಾರಣವಾಗಿದ್ದಿತು. ಮೇಲಾಗಿ ಈ ಗುಂಪು ರಾಜಕೀಯದಲ್ಲಿ ಬಲಹೀನವಾಗಿದ್ದಿತು. ಹಾಗಾಗಿ ಇನಾಮ್ತಿಯನ್ನು ರದ್ದುಗೊಳಿಸಲು ಸರ್ಕಾರ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮಗಳಿಂದ ಅದಕ್ಕೆ ಗಂಡಾಂತರವಿರಲಿಲ್ಲ. ಆದರೆ ಧಾರ್ಮಿಕ ಸಂಸ್ಥೆಗಳ ಜಮೀನುಗಳನ್ನು ಜನರಲ್ ಇನಾಮ್ತಿ ಕಾಯಿದೆ ತಂದಷ್ಟು ಸುಲಭವಾಗಿ ತರಬಹುದಾಗಿರಲಿಲ್ಲ. ಏಕೆಂದರೆ ಮಠಗಳು ರಾಜ್ಯದಲ್ಲಿ ಹಲವು ಆಸಕ್ತಿಯುಳ್ಳ ಗುಂಪುಗಳ ಮೇಲೆ ತಮ್ಮದೇ ಆದ ಪ್ರಭಾವ ಉಳ್ಳವಾಗಿದ್ದವು. ಆ ಕಾರಣದಿಂದಾಗಿ ಧಾರ್ಮಿಕ ಇನಾಮ್ತಿಗಳ ರದ್ದತಿ ಶಾಸನ ಒಂದು ವರ್ಷ ತಡವಾಗಿ ಜಾರಿಯಾಯಿತು.[7]

ಸ್ವಾತಂತ್ರ್ಯಕ್ಕಿಂತಲೂ ಮುಂಚೆ ಬ್ರಿಟೀಷ್ ಹಾಗೂ ದೇಶೀಯ ರಾಜಸಂಸ್ಥಾನಗಳಲ್ಲಿ ಹಂಚಿಹೋಗಿದ್ದ ರಾಜಕೀಯ ಹಾಗೂ ಆಡಳಿತಾತ್ಮಕ ಅಂಶಗಳನ್ನು ಒಂದೇ ಒಂದು ರಾಜಕೀಯ ಅಂಗದ ಅಡಿಯಲ್ಲಿ ತರುವ ಉದ್ದೇಶದಿಂದ ಕರ್ನಾಟಕ ರಾಜ್ಯವನ್ನು ಪುನರ್‌ರಚಿಸಲಾಯಿತು. ಕೃಷಿ ರಚನೆಗಳು ಹಾಗೂ ಆಗ ಬಳಕೆಯಲ್ಲಿದ್ದ ಕೃಷಿ ಸಂಬಂಧಗಳು ಒಂದಕ್ಕೊಂದು ಬಹಳ ಭಿನ್ನವಾಗಿದ್ದವು. ಕೃಷಿ ನಿಯಮಗಳೂ ಇದಕ್ಕಿಂತ ಬೇರೆಯಾಗಿರಲಿಲ್ಲ. ಇವೆರಡರ ನಡುವೆ ಹುಟ್ಟಿದ ರೈತ ಚಳುವಳಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ವಿಚಾರಗಳನ್ನು ಹುಟ್ಟುಹಾಕಿದವು. ಈ ದಿಶೆಯಲ್ಲಿ ಸರ್ಕಾರವು ರಾಜ್ಯದಲ್ಲೆಲ್ಲಾ ಅಸ್ತಿತ್ವದಲ್ಲಿರುವ ಎಲ್ಲಾ ಕಾನೂನು ಹಾಗೂ ಪದ್ಧತಿಗಳಿಗೆ ಒಂದು ಸರಿಯಾದ ರೂಪ ಕೊಡುವ ಉದ್ದೇಶದಿಂದ ಕೃಷಿ ಸಂಬಂಧಿ ವಿಷಯಗಳ ಮೇಲೆ ಒಂದು ವ್ಯವಸ್ಥಿತ ನಿಯಂತ್ರಣವನ್ನು ತರಲು ರಾಜ್ಯದ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದ್ದ ಕಾಯಿದೆ ನಿಬಂಧನೆಗಳನ್ನೆಲ್ಲ ಕ್ರೋಢೀಕರಿಸಿ ಒಂದು ಏಕರೂಪ ಪರಿಣಾಮಕಾರಿಯಾದ ಭೂಸುಧಾರಣಾ ಶಾಸನವನ್ನು ರೂಪಿಸುವುದು ಅವಶ್ಯವಾಯಿತು.[8] ಮೇಲಾಗಿ ಅತ್ಯಧಿಕ ಭೂಮಿ ಒಡೆತನವುಳ್ಳ ಶ್ರೀಮಂತ ವರ್ಗದ ಹತೋಟಿ ಅಥವಾ ಶೋಷಣೆಯಿಂದ ಗೇಣಿದಾರರನ್ನು ರಕ್ಷಿಸುವುದು ಮುಖ್ಯವಾಗಿದ್ದಿತು. ಇದರೊಂದಿಗೆ ಕೇಂದ್ರ ಸರ್ಕಾರದ ಮಾರ್ಗದರ್ಶಿ ಸೂತ್ರಗಳು, ಯೋಜನಾ ಆಯೋಗ ಹಾಗೂ ಕಾಂಗ್ರೆಸ್ ಪಕ್ಷದ ನಿರ್ಣಯಗಳು ಮಧ್ಯಸ್ಥಿಕೆಯ ರದ್ಧತಿಗೆ, ಹಾಗೂ ಗರಿಷ್ಠ ಭೂಮಿಯನ್ನು ಜಾರಿಗೆ

ತರಲು ಒತ್ತಾಯಿಸಿದವು. 1950ರ ದಶಕದ ಸಮಾಜವಾದಿಗಳು ಹಾಗೂ ಕಮ್ಯೂನಿಷ್ಟರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಹಲವಾರು ರೈತ ಚಳುವಳಿಗಳು ನಡೆದಿದ್ದು, ಅವುಗಳಲ್ಲಿ ಕಾಗೋಡು ಸತ್ಯಾಗ್ರಹ ಪ್ರಮುಖವಾಗಿದ್ದು ಇದು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಯ ಕಹಳೆ ಊದಿ ಸರ್ಕಾರದ ಮೇಲೆ ಪ್ರಭಾವ ಬೀರಿ ಇದರಿಂದ ಮಣಿದ ಸರ್ಕಾರ ಮೈಸೂರು ಗೇಣಿ ಪದ್ಧತಿ ಹಾಗೂ ಕೃಷಿ ಭೂಮಿ ಕಾನೂನು ಸಮಿತಿ ಎಂಬ ಉನ್ನತ ಸಮಿತಿಯನ್ನು 1957ರ ಮೇ ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಶ್ರೀ.ಎಸ್. ನಿಜಲಿಂಗಪ್ಪನವರು ತಮ್ಮ ಸಹೋದ್ಯೋಗಿ ಬಿ.ಡಿ. ಜತ್ತಿಯವರ ನೇತೃತ್ವದಲ್ಲಿ ನೇಮಿಸಿದರು. ಸಮಿತಿಯು 10, ಸೆಪ್ಟೆಂಬರ್ 1957ರಲ್ಲಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತು. ರಾಜ್ಯದ ವಿವಿಧ ಭಾಗಗಳಲ್ಲಿ ಚಾಲ್ತಿಯಲ್ಲಿದ್ದ ಭೂಗೇಣಿ ಪದ್ಧತಿಯ ಸಮೀಕ್ಷೆ ನಡೆಸಿ ಈ ಕೆಳಕಂಡ ಅಂಶಗಳಿಗೆ ಸೂಕ್ತ ಕ್ರಮ ಹಾಗೂ ಪರಿಹಾರಗಳನ್ನು ಆ ಸಮಿತಿ ಸೂಚಿಸಬೇಕಿದ್ದಿತು.

ಅವುಗಳೆಂದರೆ :

1. ಗೇಣಿದಾರರಿಗೆ ಭೂಮಿಯ ಒಡೆತನ ಕ್ರಮಬದ್ಧಗೊಳಿಸುವಿಕೆ.
2. ಕುಟುಂಬಗಳಿಗೆ ಸಂಖ್ಯಾಧಾರಿತ ಭೂ ಹಿಡುವಳಿಯ ಒಡೆತನ
3. ಸ್ವಂತ ಬೇಸಾಯಕ್ಕೆ ಜಮೀನ್ದಾರರು ಇಟ್ಟುಕೊಳ್ಳಬಹುದಾದ ಜಮೀನು,
4. ಜಮೀನು ಕಳೆದುಕೊಂಡ ಜಮೀನ್ದಾರರಿಗೆ ನಿಗಧಿಗೊಳಿಸಬಹುದಾದ ಪರಿಹಾರ.
5. ಕೃಷಿಯೇತರರಿಂದ ಕೃಷಿ ಭೂಮಿಯ ವಶ ಇತ್ಯಾದಿ,
6. ಉಳುವವನಿಗೆ ಭೂಮಿ ಎಂಬ ತತ್ವವನ್ನಾಧರಿಸಿ ಕಾರ್ಯನಿರ್ವಹಿಸಿದ ಸಮಿತಿ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿತು. ಅವುಗಳೆಂದರೆ

1. ಜಮೀನ್ದಾರಿ ಮತ್ತು ಗೇಣಿಪದ್ಧತಿಯನ್ನು ರದ್ದುಗೊಳಿಸುವುದು.
2. ಗುತ್ತಿಗೆಯ ನಿಷೇಧ
3. ಸ್ವಂತವಾಗಿ ಬೇಸಾಯ ಮಾಡುವವನಿಗೆ ಭೂಮಿ.
4. ಜಮೀನ್ದಾರರ ಸ್ವಂತ ಸಾಗುವಳಿ ಮಾಡಬಹುದಾದಷ್ಟು ಭುಮಿಯನ್ನು ಮಾತ್ರ ವಾಪಸ್ ಪಡೆಯಲರ್ಹರೇ ಹೊರತು, ಪೂರ್ತಿ ಹಿಡುವಳಿಗಳನ್ನೆಲ್ಲ ಗಳಿಸಿ ಕೊಳ್ಳುವಂತಿಲ್ಲ.

ಈ ಎಲ್ಲಾ ಸಲಹೆಗಳ ಆಧಾರದ ಮೇಲೆ ಸರ್ಕಾರ ಮಸೂದೆಯೊಂದನ್ನು ರಚಿಸಿ ಶಾಸನ ಸಭೆಯ ಮುಂದಿಡಲು ತೀರ್ಮಾನಿಸಿತು. ಕೆಲವೇ ದಿನಗಳಲ್ಲಿ ಸರ್ಕಾರ ಬದಲಾಗಿ ಬಿ.ಡಿ.ಜತ್ತಿಯವರು ಮುಖ್ಯಮಂತ್ರಿಗಳಾದರು. ಅವರ ಮಂತ್ರಿಮಂಡಲದಲ್ಲಿ ಕಂದಾಯಮಂತ್ರಿಗಳಾಗಿದ್ದ ಕಡಿದಾಳ್ ಮಂಜಪ್ಪನವರು ನವೆಂಬರ್ 29, 1958ರಲ್ಲಿ ಶಾಸನ ಸಭೆಯ ಮುಂದಿಟ್ಟರು. 46 ಮಂದಿ ಸದಸ್ಯರನ್ನೊಳಗೊಂಡ ಎರಡೂ ಶಾಸನ ಸಭೆಗಳ ಜಾಯಿಂಟ್ ಸೆಲೆಕ್ಟ್ ಸಮಿತಿಯು 64 ದಿನಗಳ ಕಾಲ ಪರಿಶೀಲಿಸಿ ತನ್ನ ವರದಿಯನ್ನು 25, ಮಾರ್ಚ್ 1961ರಂದು ವಿಧಾನಸಭೆಯ ಮುಂದಿಟ್ಟಿತು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ನವೆಂಬರ್ 1961ರಲ್ಲಿ ಈ ಬಿಲ್ಲನ್ನು ರಾಷ್ಟ್ರಪತಿಗಳ ಒಪ್ಪಿಗೆ ಪಡೆಯಲು ಕಳುಹಿಸಲಾಯಿತು. ಕೊನೆಗೆ ಮಾರ್ಚ್, 5, 1962ರಲ್ಲಿ ರಾಷ್ಟ್ರಪತಿಯವರ ಒಪ್ಪಿಗೆ ಪಡೆದು ಕರ್ನಾಟಕ ಭೂ ಸುಧಾರಣಾ ಶಾಸನವಾಯಿತು.[9] ಸರ್ಕಾರದ ವಿಳಂಬ ನೀತಿಯಿಂದಾಗಿ ಅಲ್ಪಸ್ವಲ್ಪ ಪ್ರಗತಿಪರ ಅಂಶಗಳೂ ಇಲ್ಲಿ ನಾಶವಾಗಿ ಭೂ ಸುಧಾರಣೆಯ ಬಗ್ಗೆ ಸಮಿತಿ ರಚಿಸಿದ ಎಂಟು ವರ್ಷಗಳ ನಂತರ ಈ ಕಾನೂನು ಅಕ್ಟೋಬರ್ 2,

1965ರಲ್ಲಿ ಜಾರಿಗೆ ಬಂದಿತು.

ಭೂ ಸುಧಾರಣೆಯ ಬಗ್ಗೆ ಸಮಿತಿ ರಚಿಸಿದ ಎಂಟು ವರ್ಷಗಳ ನಂತರ ಈ ಕಾನೂನು ಅಕ್ಟೋಬರ್ 2, 1965ರಲ್ಲಿ ಜಾರಿಗೆ ಬಂದಿತು. ಆದರೂ ಸಹ ಇದನ್ನು 1961 ಕಾಯಿದೆ ಎಂದೆ ಕರೆಯಲಾಗಿದೆ.[10] ಅದು ಒಳಗೊಂಡ ಮುಖ್ಯ ಅಂಶಗಳೆಂದರೆ,

1) ಯಾವುದೇ ಸಂಸ್ಥೆಗಳು ಭೂಮಿಯನ್ನು ಪಡೆಯುವಂತಿಲ್ಲ.

2) ಗೇಣಿದಾರರು ನೀಡಬೇಕಾದ ಗೇಣಿಯ ಪ್ರಮಾಣದಲ್ಲಿ ಯಾವ ಬದಲಾವಣೆಯ ಸೂಚನೆಯೂ ಇರಲಿಲ್ಲ.

3) ಜಮೀನುಗಳಿಂದ ಗೇಣಿದಾರರನ್ನು ಭೂಮಾಲೀಕರು ಒಕ್ಕಲೆಬ್ಬಿಸಬೇಕಾದರೆ ಒಂದು ವರ್ಷದೊಳಗೆ ತಕರಾರು ಅರ್ಜಿ ಸಲ್ಲಿಸುವುದು.

4) ಒಂದು ಕುಟುಂಬಕ್ಕೆ ಭೂ ಪರಿಮಿತಿ 27 ಪ್ರಮಾಣಿತ ಎಕರೆಗಳಿಗೆ ಸೀಮಿತವಾಗಿರತಕ್ಕದ್ದು. ಐದು ಮಂದಿ ಇರುವ ಕುಟುಂಬ 216 ಎಕರೆಯ ವರೆಗೆ ಒಣ ಭೂಮಿಯನ್ನು ಹೊಂದಬಹುದು.

5) ಸ್ವಂತ ವ್ಯವಸಾಯಕ್ಕಾಗಿ ಮಾತ್ರ ಜಮೀನನ್ನು ಸ್ವಾಧೀನ ಪಡೆಯಬಹುದು.

6) ಗೇಣಿ ಜಮೀನು ಕೂಡುವ ಪದ್ಧತಿ ನಿಷೇಧ.

7) ಗೇಣಿ ಜಮೀನಿನ ಸ್ವಾಮ್ಯವನ್ನು ಮೊದಲು ಸರ್ಕಾರ ಪಡೆದು ಅನಂತರ ಸಂಬಂಧಿಸಿದ ಗೇಣಿದಾರನಿಗೆ ಅದರ ಒಡೆತನವನ್ನು ನೀಡುವುದು.

8) ಪ್ಲಾಂಟೇಷನ್‌ಗಳ ಪರಮಾವಧಿ ಮಿತಿ ನೂರು ಎಕರೆಗಳು.

9) ಭೂ ಸುಧಾರಣೆಯಿಂದ ಭೂಮಿಯನ್ನು ಕಳೆದುಕೊಂಡವರಿಗೆ ಹತ್ತು ಸಾವಿರ ರೂಗಳವರೆಗೆ ಒಂದೇ ಕಂತಿನಲ್ಲಿ ಪರಿಹಾರ ನೀಡಲು ಅವಕಾಶ.

10) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನ್ಯಾಯಾಧೀಶರು ಭೂ ಪಂಚಾಯ್ತಿಗಳನ್ನು ರೂಪಿಸುವುದು. ಭೂ ಪಂಚಾಯ್ತಿಗಳ ಮುಂದೆ ವಕೀಲರು ಹಾಜರಾಗಲು ಅವಕಾಶ.

1965ರಲ್ಲಿ ಜಾರಿಗೊಂಡ ಈ ಹೊಸ ಭೂಸುಧಾರಣಾ ಕಾಯಿದೆಯು ಕೆಲವು ಮಾದರಿಯ ಭೂಮಾಲಿಕರಿಗೆ ವಿನಾಯಿತಿ ನೀಡಿದರೂ, ಮೊಟ್ಟಮೊದಲ ಬಾರಿಗೆ ಗೇಣಿಗೆ ಜಮೀನನ್ನು ಕೊಡುವ ಪದ್ಧತಿಯನ್ನೇ ಪ್ರತಿ ಬಂಧಿಸಿತು. ರಕ್ಷಣಾ ಬಲಗಳು ಹಾಗು ವಾಣಿಜ್ಯ ನೌಕೆಗಳಲ್ಲಿ ಸೇವೆ ಮಾಡುತ್ತಿದ್ದವರು, ಅಲ್ಪ ವಯಸ್ಕರವು, ಮದುವೆಯಾಗದ ಹೆಂಗಸರು, ವಿಧವೆಯರು, ಅಂಗವಿಕಲರು, ಬುದ್ಧಿಮಾಂದ್ಯರು, ತಾವು ಪಡೆದಿದ್ದ ಜಮೀನಿನ ವಿಸ್ತೀರ್ಣದ ಆಧಾರದ ಮೇಲೆ ಸಣ್ಣ ಹಿಡುವಳಿದಾರರು ಎಂದು ಘೋಷಿತರಾದವರುಗಳಿಗೂ ವಿನಾಯಿತಿ ನೀಡಲಾಗಿತ್ತು. ಪ್ರಚಲಿತವಾಗಿದ್ದ ಗೇಣಿಗಳಲ್ಲಿ ಯಾವುವು ಪ್ರತಿಬಂಧಕ್ಕೆ ಒಳಗಾದವೋ ಅವುಗಳನ್ನು ಅಳಿಸುವುದಕ್ಕೆ ಭೂಮಾಲೀಕರು ಗೇಣಿದಾರರಿಗೇ ಒಡೆತನವನ್ನು ಕಡ್ಡಾಯವಾಗಿ ಮಾರುವಂತೆ ನಿರ್ಬಂಧಪಡಿಸಬಹುದಾಗಿತ್ತು. ಈ ಕಾಯಿದೆ ಭೂಮಿಯನ್ನು ಗುತ್ತಿಗೆಗೆ ಕೊಡುವುದನ್ನು ನಿಷೇಧಿಸಿತು. ಕೃಷಿಯೇತರರು ಕೃಷಿ ಭೂಮಿಕೊಳ್ಳಲು ಅನರ್ಹರು. ಭೂಮಿತಿ ನಿಗಧಿಕೂಡ ಇದರ ಮತ್ತೊಂದು ಲಕ್ಷಣ. ಗೇಣಿ ನೀಡಿದ ಜಮೀನಿನ ಪುನರ್ ಸ್ವಾಧೀನವನ್ನು ಇದು ಪ್ರತಿಬಂಧಿಸಿತು.[11] ಆದರೆ ಉಗ್ರಾಣ, ಕಾರ್ಖಾನೆ, ಗೃಹನಿರ್ಮಾಣ ಅಥವಾ ಭೂಮಾಲಿಕನು ಸ್ವತಃ ಬೇಸಾಯಮಾಡಲು ಬಯಸಿದಾಗ, ಗೇಣಿದಾರ ಗುತ್ತಿಗೆ ಪಾವತಿ ಮಾಡದಿದ್ದಾಗ ಅಥವಾ ಅನಧಿಕೃತವಾಗಿ ಒಳಗೇಣಿಗೆ ಅಥವಾ ಪರಬಾಕಿಗೆ ನೀಡಿದಾಗ

ಜಮೀನನ್ನು ಎರಡು ವರ್ಷಗಳಿಗಿಂತ ಹೆಚ್ಚಿಗೆ ಬೇಸಾಯ ಮಾಡದೆ ಇದ್ದಾಗ ಅಥವಾ ಜಮೀನನ್ನು ಹಾಳುಗೆಡವಿದಾಗ ಮಾಲೀಕ ಜಮೀನನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿದ್ದಿತು. ಈ ಎಲ್ಲಾ ಬಗೆಯ ಸಂದರ್ಭಗಳಲ್ಲೂ ಭೂನ್ಯಾಯ ಮಂಡಲಿಯ ವಿವೇಚನೆಯುತ ತೀರ್ಮಾನ ಪ್ರಮುಖವಾಗಿದ್ದಿತು.

ಶ್ರೀಮಂತ ಭೂ ಹಿಡುವಳಿದಾರರು ಅಧಿಕಾರಿವರ್ಗದವರ ಮೇಲೆ ಪ್ರಭಾವ ಬೀರಿ ಗರಿಷ್ಠ ಮಿತಿಯ ಕಾನೂನಿನಡಿಯಲ್ಲಿ ಇದ್ದ ಹೆಚ್ಚುವರಿ ಭೂಮಿಯಲ್ಲಿ ಬಹಳ ಕಡಿಮೆ ಪ್ರಮಾಣದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಶ್ರೀಮಂತ ಭೂಮಾಲಿಕರಿಗೆ ಈ ಕಾಯಿದೆಯಿಂದಾಗಿ ಹೆಚ್ಚಿನ ನಷ್ಟವೇನೂ ಆಗಲಿಲ್ಲ. ಇದರೊಂದಿಗೆ ಐದು ಜನರಿರುವ ಕುಟುಂಬಗಳಿಗೆ ಹೆಚ್ಚುವರಿ ಯೂನಿಟ್‌ಗಳನ್ನು ನೀಡಿದ್ದು ಹಾಗೂ ಬೆಳೆದ ವಯಸ್ಸಿನ ಗಂಡುಮಕ್ಕಳನ್ನು ಪ್ರತ್ಯೇಕ ಕುಟುಂಬ ಎಂದು ಪರಿಗಣಿಸಿದ್ದು ಅವರಿಗೆ ಹಸ್ತಕ್ಷೇಪ ಮಾಡಲು ಬಹಳ ಅವಕಾಶ ಮಾಡಿಕೊಟ್ಟಿತು. ಇನ್ನೊಂದು ಮುಖ್ಯ ಅಂಶವೆಂದರೆ ಕರ್ನಾಟಕದ ವಾಣಿಜ್ಯ ಕೃಷಿಗೆ ಆಧಾರವಾದ ಪ್ಲಾಂಟೇಶನ್‌ಗಳಿಗೆ ಗರಿಷ್ಠ ಮಿತಿಯ ಕಾರಣದಿಂದ ತೊಂದರೆ ಆಗಲಿಲ್ಲ. ಕರ್ನಾಟಕದ ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಕಾಲಕಾಲಕ್ಕೆ ಪರಿಶೀಲಿಸುವ ವ್ಯವಸ್ಥೆ ಇಲ್ಲದೇ ಇದ್ದುದರಿಂದ ಅವರಿಗೆ ಗರಿಷ್ಠ ಮಿತಿಗಿಂತ ಹೆಚ್ಚಿನ ಭೂಮಿ ಇದ್ದರೂ ಬೇರೆ ಯಾವ ಸಮಸ್ಯೆಗಳೂ ಎದುರಾಗಲಿಲ್ಲ. ನಿಖರವಾಗಿ ಹೇಳುವುದಾದರೆ ಕರ್ನಾಟಕದ ಬಂಡವಾಳಶಾಹಿ ಕೃಷಿಕವರ್ಗ ಎಂದಿನಂತೆಯೇ ಇತ್ತು. ಕರ್ನಾಟಕದಲ್ಲಿ ಬಲಿಷ್ಟ ಜನಾಂಗಗಳ ರಾಜಕೀಯ ಶಕ್ತಿಯನ್ನು ಕುಂಠಿತಗೊಳಿಸಿ ಎಲ್ಲರಿಗೂ ಪ್ರಾತಿನಿಧ್ಯ ದೊರಕುವಂತೆ ಮಾಡಿದರೂ, ಅವರ ಆರ್ಥಿಕ ಸ್ಥಿತಿ ಇದರಿಂದ ಬಲಹೀನವಾಗಲಿಲ್ಲ.[12] ಭೂ ಸುಧಾರಣೆಗಳ ಕಾರಣದಿಂದ ಹಳ್ಳಿಗಾಡಿನ ಕಡೆಗಳಲ್ಲಿ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳು ಕಾಲಿಡಲು ಸಾಧ್ಯವಾಯಿತು. ಪಟ್ಟಣಗಳು, ಕೈಗಾರಿಕೆಗಳು ಮತ್ತು ಸಾಲದ ವ್ಯವಹಾರಗಳು ರೈತರ ಜನಜೀವನಕ್ಕೆ ಸೇರ್ಪಡೆಯಾಗತೊಡಗಿದವು. ಹೀಗಾಗಿ ಕರ್ನಾಟಕದ ಭೂಸುಧಾರಣೆಗಳು ಬಂಡವಾಳದ ವಹಿವಾಟಿಗೆ ಬಹಳ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಕೆಳವರ್ಗದ ಜನರಿಗೆ ಕೆಲವು ಲಾಭಗಳನ್ನು ದೊರಕಿಸಿಕೊಟ್ಟವು ಕೃಷಿಸಮಾಜದಲ್ಲಿ ಬೆಳೆಯಬಹುದಾದ ವರ್ಗ ಸಂಬಂಧಗಳು ಸಡಿಲಗೊಂಡವು. ಕಾಯಿದೆಯಿಂದ ಸಮಾಜದ ಬಲಿಷ್ಠ ವರ್ಗಗಳ ಅಸ್ತಿತ್ವಕ್ಕೆ ಧಕ್ಕೆ ಉಂಟಾಗಲಿಲ್ಲ. ಹೀಗೆ ಕರ್ನಾಟಕದ ರೈತಸಂಘಟನೆಯ ಇತಿಹಾಸದಲ್ಲಿ ಭೂ ಸುಧಾರಣೆಗಳು ಬಹಳ ಪ್ರಮುಖವಾದ ಪಾತ್ರವಹಿಸಿದೆ.

ಕೊನೆಯ ಟಿಪ್ಪಣಿ

1. ಗುಪ್ತ ಡಿ.ಸಿ., ಇಂಡಿಯನ್ ಗಮರ್ನ್‌ಮೆಂಟ್ ಅಂಡ್ ಪೊಲಿಟಿಕ್ಸ್ (ನವದೆಹಲಿ, 1977), ಪು–37–46.
2. ಡಾ. ಹಿ.ಚಿ. ಬೋರಲಿಂಗಯ್ಯ., ಕರ್ನಾಟಕದಲ್ಲಿ ಭೂಸುಧಾರಣೆ : ಒಂದು ಪಕ್ಷಿ ನೋಟ, ಕಾಗೋಡು ಚಳವಳಿ, ಸುವರ್ಣ ಸಂಪುಟ, ಭಾಗ–2, (ಶಿವಮೊಗ್ಗ, 2002), ಪು–667–668
3. ರಾಜನ್, ಎಂ.ಎಸ್., ಕರ್ನಾಟಕದಲ್ಲಿ ಭೂ ಸುಧಾರಣೆ, (ಬೆಂಗಳೂರು, 1987), ಪು–68–74.

4. ಫಾಲಾಕ್ಷ., ಸಮಗ್ರ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, (ಮೈಸೂರು, 2004), ಪು–264–266.
5. ಡಾ.ಹಿ.ಚಿ. ಬೋರಲಿಂಗಯ್ಯ., ಅದೇ, ನಂ.42, ಪು.671–672.
6. ವಿಧಾನಸಭಾ ನಡವಳಿಕೆಗಳು, ಸಂಪುಟ 10–17, 26. 12. 1965 ಪತ್ರಗಾರ ಇಲಾಖೆ, (ಬೆಂಗಳೂರು, 1965,) ಪು–1015–45.
7. ಪಾಲಾಕ್ಷ, ಅದೇ, ನಂ. 44, ಪು–266.
8. ಪಿ.ಸಿ. ಜೋಶಿ., ಲ್ಯಾಂಡ್ ರಿಫಾರ್ಮ್ಸ್ ಇನ್ ಇಂಡಿಯ, ಟ್ರೇಂಡ್ಸ್, ಅಂಡ್ ಪರ್ಸ್ಪೆಕ್ಟಿವ್ಸ್ (ನವದೆಹಲಿ, 1975), ಪು– 48–54.
9. ಬೋರಲಿಂಗಯ್ಯ., ಅದೇ, ನಂ.45., ಪುಟ–671.
10. ರಾಜನ್ ಎಂ.ಎಸ್., ಕರ್ನಾಟಕದಲ್ಲಿ ಭೂ ಸುಧಾರಣೆ, (ಬೆಂಗಳೂರು, 1987), ಪು.63–78.
11. ಬಸವೇಶ್ವರರ ಸಮಕಾಲೀನರು, ಬಸವಸಮಿತಿ ಪ್ರಕಟ, (ಬೆಂಗಳೂರು, 1968), ಪು–584–588.
12. ಮೈಸೂರು ರಾಜ್ಯದ ಭೂ ಸುಧಾರಣೆಯ 1958ನೇ ಸಾಲಿನ ವಿಧೇಯಕ ಸಂಯುಕ್ತ ಪರಿಶೀಲನಾ ಸಮಿತಿ ವರದಿ, ರಾಜ್ಯಪತ್ರಾಗಾರಿ ಇಲಾಖೆ, (ಬೆಂಗಳೂರು, 1961), ಪು.3–4.
13. ವೈ.ಎನ್. ಕೃಷ್ಣರಾವ್., ಸ್ವಾತಂತ್ರ್ಯೋತ್ತರ ಕೃಷಿರಂಗ ಅವಲೋಕನ, (ಬೆಂಗಳೂರು, 1987), ಪು–34–42.

❖❖❖

ದಿಟ್ಟಿ ಹರಿಯುವಷ್ಟು ಪೂರ ಬಟ್ಟಬಯಲೆ ತುಂಬಿದೆ
ದಿಕ್ಕು ಕಾಣದಷ್ಟು ದೂರ ಮೌನ ಚಾಚಿ ಮಲಗಿದೆ
ಮೌನ ಬಯಲು ಎಲ್ಲೋ ಅಲ್ಲಿ ಬಾನನಪ್ಪಿ ಹಿಡಿದಿವೆ
ಬಾನೆ ಮೌನವಾಗಿ ಈಗ ಎಲ್ಲ ಕಡೆಯೂ ಹರಡಿದೆ

ಅಳಿವಿನಂಚಿನಲ್ಲಿರುವ ಗಿಡಮೂಲಿಕೆಗಳು ಮತ್ತು ನಾಗಬನ

ಆರ್. ದುರ್ಗಾ ಮೆನನ್
ಸಂಶೋಧನಾ ವಿದ್ಯಾರ್ಥಿ, ಮಣಿಪಾಲ ವಿಶ್ವವಿದ್ಯಾನಿಲಯ

ತುಳುನಾಡಿನ ಜನ ಮೊದಲಿನಿಂದಲೂ ಅನ್ನ ನೀರು ಕೊಡುವ ಭೂಮಿಯಲ್ಲಿ ಗಾಳಿ ಬೆಳಕು ಕೊಡುವ ಪ್ರಕೃತಿಯಲ್ಲಿ ದೇವರನ್ನು ಕಂಡುಕೊಂಡವರಲ್ಲದೆ ಅತ್ಯಂತ ಭಯ ಭಕ್ತಿಯಿಂದ ಪೂಜಿಸುತ್ತಾ ಬಂದವರು. ತುಳುನಾಡಿನಲ್ಲಿ ಬೇಸಾಯವು ಪ್ರಧಾನ ವೃತ್ತಿಯಾಗಿದೆ. ಈ ಬೇಸಾಯವನ್ನು ತುಳುವರು ಧಾರ್ಮಿಕ ಶ್ರದ್ಧೆಯಿಂದ ಮುನ್ನಡೆಸಿಕೊಂಡು ಬಂದಿದ್ದಾರೆ. ತುಳು ಹಬ್ಬಗಳಲ್ಲಿ ಕೃಷಿ ಸಂಬಂಧ ಹಬ್ಬಗಳೇ ಹೆಚ್ಚು. ಎಲ್ಲಾ ಹೆಚ್ಚಿನ ಹಬ್ಬಗಳು ಕೃಷಿ ಪ್ರಧಾನವಾದದ್ದು. ಪಂಚಭೂತಗಳು ತುಳುವರ ಹಬ್ಬಗಳಲ್ಲಿ ಅಂತರ್ಗತಗೊಂಡಿರುವುದು ವಿಶೇಷ. ಭಾರತವು ನಾಗರೀಕತೆಯ ತೊಟ್ಟಿಲು, ತುಳು ಸಂಸ್ಕೃತಿ ಆ ತೊಟ್ಟಿನಲ್ಲಿರುವ ಮಗು. ತುಳುನಾಡು ನಾಗಾರಾಧನೆ, ಭೂತರಾಧನೆ, ದೇವತಾರಧನೆಯ ಒಟ್ಟಿಗೆ ಪ್ರಕೃತಿಯನ್ನು ಕೂಡ ಆರಾಧಿಸುವ ನಾಡು. ಕಲ್ಲು ಮಣ್ಣು, ಗಿಡ, ಮರ, ಹೂ, ನದಿ, ಕಡಲು, ಹಣ್ಣುಕಾಯಿ, ಪ್ರಾಣಿಪಕ್ಷಿ ಎಲ್ಲವನ್ನೂ ಆರಾಧಿಸುತ್ತ ಅದರಲ್ಲಿ ದೈವತ್ವವನ್ನು ಕಾಣುವ ನಾಡು ತುಳುನಾಡು.

ತುಳುನಾಡು ಸಮೃದ್ಧವಾಗಿ ಮಳೆಯಾಗುವ ಭೂಭಾಗವಾಗಿದ್ದು, ಇಲ್ಲಿ ಅರಣ್ಯಗಳು ವಿಪುಲವಾಗಿದ್ದವು. ಈ ವನಗಳಲ್ಲಿ ಉರಗಗಳ ಸಂತಾನವೂ ಸಮೃದ್ಧವಾಗಿದ್ದುದು ಸಹಜವೇ ಆತಂಕಕಾರಿ ಹಾಗೂ ಅಪಾಯಕಾರಿ ನಿಸರ್ಗ ಶಕ್ತಿಗಳನ್ನು ವಿವಿಧ ಆರಾಧನೆಗಳಿಂದ ಒಲಿಸಿಕೊಳ್ಳುವ ಪ್ರಯತ್ನ ಎಲ್ಲ ಜನಾಂಗಗಳಂತೆ ತುಳುವರಲ್ಲೂ ಬೆಳೆದು ಬಂದಿದೆ. ಹೀಗೆ ಭಯ, ಕನಸುಗಳಿಂದ ಮೈವಡೆದು ಮೂಡಿದ ದೇವತೆ ನಾಗ ಎಂಬುದಾಗಿ ಅಮೃತ ಸೋಮೇಶ್ವರರೂ ಅಭಿಪ್ರಾಯ ಪಡುತ್ತಾರೆ. ಹೀಗಾಗಿ ನಾಗಬನಗಳಲ್ಲಿರುವ ಗಿಡಮೂಲಿಕೆಗಳು ಮತ್ತು ಮರಗಳನ್ನು ಮುಟ್ಟಲು ಜನರು ಭಯಪಡುತ್ತಾರೆ. ಇದನ್ನು ಭಯವೆಂದೂ ಹೇಳಬಹುದು ಅಥವಾ ಭಕ್ತಿಯೆಂದೂ ಹೇಳಬಹುದು. ವಿಶೇಷ ಔಷಧೀಯ ಅಂಶಗಳುಳ್ಳ ಈ ನೈಸರ್ಗಿಕ ಸಂಪತ್ತು ನಾಗಬನಗಳಿಂದಾಗಿ ಉಳಿದುಕೊಂಡಿದೆ.

ನಾಗರ ಪಂಚಮಿ ಹಬ್ಬದಂದು ಕೆಲವೊಂದು ಗಿಡಮರಗಳು ವಿಶೇಷ ಪಾತ್ರವನ್ನು ವಹಿಸುತ್ತದೆ. ನಾಗಬನದ ಸುತ್ತಲೂ ಗಿಡಮೂಲಿಕೆಗಳಿದ್ದವು. ಔಷಧೀಯ ಗುಣವುಳ್ಳ ಮರಗಳ ಮಧ್ಯೆ ನಾಗಬನ ಕಲ್ಲಿತ್ತು. ಒಂದು ಕಾಲದಲ್ಲಿ ಒಂದು ಫೀಟ್ ಉದ್ದದ ದಪ್ಪನಾದ ಮುರಕಲ್ಲನ್ನು ಪೂಜೆ ಮಾಡುತ್ತಿದ್ದರು ಎಂದು ಹೇಳಲಾಗುತ್ತಿತ್ತು. ಬಳಿಕ ನಾಗನಿಗೆ ಒಂದು ಬಿಂಬವನ್ನು ನೀಡಿ ಪೂಜೆ ಮಾಡಲಾಗುತ್ತಿತ್ತು.

ಆಟಿ ಅಮಾವಾಸ್ಯೆ ಕಳೆದು ಬರುವ ಪಂಚಮಿಯಂದು 'ನಾಗರ ಪಂಚಮಿ' ಬರುತ್ತದೆ. ಹಾಗಾಗಿ ಇದು ಸಾಮಾನ್ಯವಾಗಿ ಆಟಿ ತಿಂಗಳಲ್ಲಿಯೇ ಬರುತ್ತದೆ. ಕೆಲವೊಮ್ಮೆ **'ಸೋಣ'** ತಿಂಗಳಲ್ಲಿಯೂ ಬರುವುದಿದೆ. ತುಳುನಾಡು ನಾಗಲೋಕವಾಗಿತ್ತೆಂದೂ, ಇಲ್ಲಿಗೆ ನಾಗಬ್ರಹ್ಮ, ನಾಗಲಿಂಗ, ಬ್ರಹ್ಮಲಿಂಗಂ ಬೆರ್ಮೆರ್, ಶೇಷನಾಗ, ಅನಂತ ಪದ್ಮನಾಭ,

ಸುಬ್ರಹ್ಮಣ್ಯ ಮೊದಲಾದ ಬೇರೆ ಬೇರೆ ನಾಗರೂಪಗಳಿಂದ ಆತನನ್ನು ತುಳುನಾಡಿನಲ್ಲಿ ಆರಾಧಿಸುತ್ತಾರೆ. 'ನಾಗರ ಪಂಚಮಿ' ಎಂಬುದಕ್ಕೆ ಶ್ರಾವಣ ಮಾಸದ ಪಂಚಮಿ, ನಾಗರ ಪಂಚಮಿ, ಚಾಂದ್ರಮಾನ ಪಕ್ಷದ ಐದನೆಯ ದಿನ; ನಾಗದೇವರ ಪೂಜೆಗೆ ಪ್ರಶಸ್ತವಾದ ದಿನ ; The fifth day of the fortnight in the fifth lunar month ; festival day for the serpent god ಎಂಬ ಅರ್ಥ ವಿವರಣೆ ತುಳು ನಿಘಂಟಿನಲ್ಲಿದೆ.

ಪ್ರಸ್ತುತ ನನ್ನ ಸಂಶೋಧನಾ ಲೇಖನದಲ್ಲಿ ನಾಗಬನದಲ್ಲಿರುವ ಗಿಡಮೂಲಿಕೆಗಳು ಮತ್ತು ಮರಗಳ ಬಗ್ಗೆ ಹಾಗೂ ಆಚರಣೆಗಳಲ್ಲಿ ದೇವಸ್ಥಾನ, ದೈವಸ್ಥಾನಗಳಲ್ಲಿ ಅವುಗಳ ಬಳಕೆ ಮತ್ತು ಅದರೊಳಗಡಗಿರುವ ಔಷಧೀಯ ಗುಣಗಳ ಬಗ್ಗೆ ವಿವರಿಸಲಾಗಿದೆ.

ನಾಗಬನದಲ್ಲಿ ಕಂಡುಬರುವ ಮರ/ ಗಿಡ/ ಮೂಲಿಕೆಗಳು

ಕೇಪುಲ : ನಾಗನ ಕಲ್ಲಿನ ಬಳಿ ಕೇಪುಲ ಹೂವಿನ ಗಿಡ ಕಡ್ಡಾಯವಾಗಿ ಕಲ್ಲಿನ ಬದಿಯಲ್ಲಿ ಇರುತ್ತಿತ್ತು. ಇದು ನಾಗನಿಗೆ ಬಹಳ ಪ್ರಿಯ ಎಂದು ಹೇಳಲಾಗುತ್ತಿತ್ತು. ಇದು ಅಳಿದು ಹೋಗಬಾರದೆನ್ನುವ ಕಾರಣದಿಂದಾಗಿ ಇದನ್ನು ನಾಗನ ಕಲ್ಲಿನ ಬದಿಯ ಬಳಿ ಇಡಲಾಗುತ್ತಿತ್ತು. ಇದರ ರಸವನ್ನು ಹುಟ್ಟಿದ ಮಗುವಿಗೆ ಮಗುವಿನ ಅಂಗಾಂಗಗಳು ಗಟ್ಟಿಯಾಗಲು ನೀಡುತ್ತಿದ್ದರು. ೀಪುಲ ಗಿಡದ ಕೊಂಬೆಯಿಂದ ಆಟಿ ಕಳಂಜನ ಕಿರೀಟ ಮಾಡುತ್ತಾರೆ.

ನಾಗಸಂಪಿಗೆ : ಈ ಮರವು ಕೂಡ ನಾಗಾರಧನೆಯಲ್ಲಿ ಬಹಳ ಪ್ರಮುಖ ಸ್ಥಾನವನ್ನು ಪಡೆದಿರುವ ಮರವಾಗಿರುತ್ತದೆ. ಈ ಮರದ ಅತ್ಯಂತ ಆಕರ್ಷಕ ಭಾಗವೆಂದರೆ ಅದರ ಪರಿಮಳಯುಕ್ತ ಹೂವುಗಳು. ಇದನ್ನು ಸುಗಂಧ ದ್ರವ್ಯಗಳು ಮತ್ತು ಸೌಂದರ್ಯವರ್ಧಕಗಳಾಗಿ ಬಳಸುತ್ತಾರೆ.

ನಾಗಸಂಪಿಗೆ ನಾಗನಿಗೆ ಪ್ರಿಯವಾದ ಹೂವುಗಳಲ್ಲಿ ಒಂದು. ನಾಗಬನದ ಬಳಿ ಈ ಮರವೂ ಕಾಣಸಿಗುತ್ತದೆ. ಮರದ ಹೆಚ್ಚಿನ ಭಾಗಗಳು ಔಷಧೀಯ ಮೌಲ್ಯವನ್ನು ಹೊಂದಿವೆ. ನಾಗಸಂಪಿಗೆ ಹೂವನ್ನು ಗಣೇಶನಿಗೆ 21 ಪುಷ್ಪ ಪೂಜೆಯ ಸಮಯದಲ್ಲಿ ಕೆಳಗಿನ ಮಂತ್ರವನ್ನು ಜಪಿಸುವಾಗ ಅರ್ಪಿಸಲಾಗುತ್ತದೆ. 'ಓಂ ಗಜಾನನಾಯ ನಾಗ ಕೇಸರ ; ಪುಷ್ಯಂ ಸಮರ್ಪಯಾಮಿ'

ನಾಗಲಿಂಗ ಪುಷ್ಪ : ಬಹಳ ಸುಂದರವಾದ, ಪರಿಮಳಭರಿತವಾದ ಹೂವುಗಳಿಗೆ ಹೆಸರುವಾಸಿ ನಾಗನ ಪೂಜೆಯಲ್ಲಿ ತುಳುನಾಡಿನಲ್ಲಿ ಇದನ್ನು ಬಳಸುತ್ತಾರೆ. ನಾಗರ ಹೆಡೆಯಲ್ಲಿ ಲಿಂಗದ ರೂಪವನ್ನು ಕಂಡು ಭಕ್ತಿ ಪರವಶರಾಗುತ್ತಾರೆ. ಇದನ್ನು ಶಿವಪೂಜೆಯಲ್ಲೂ ಬಳಸುತ್ತಾರೆ. ನಾಗರ ಹೆಡೆಯ ಕೆಳಗೆ ಲಿಂಗದ ರೂಪದ ಹೂವಿನಕಾರಕ್ಕೆಂದೇ ಈ ದೈವತ್ವ! ಹೂವಿನ ಲಿಂಗವೇ ವಿಚಿತ್ರವಾಗಿದ್ದು ಸೌಂದರ್ಯವನ್ನು ತಂದುಕೊಡಲು ಕಾರಣವಾಗಿದೆ.

ಅರಕೆದ ಬೂರು : ನಾಗಬನದಲ್ಲಿ ಕಾಣಸಿಗುವ ಒಂದು ರೀತಿಯ ಗಿಡಮೂಲಿಕೆ ಇದು. ಗೋವುಗಳಿಗೆ ಹಾಲು ಹೆಚ್ಚಾಗಲು ಇದನ್ನು ಬಳಸುತ್ತಿದ್ದರು. ಗೋವುಗಳನ್ನು ದೇವರ ಸ್ವರೂಪ ಎಂದು ಹೇಳುತ್ತೇವೆ. ಹಾಲಿನಿಂದ ದೇವಸ್ಥಾನಗಳಲ್ಲಿ ದೇವರಿಗೆ ಅಭಿಷೇಕ ಹಾಗೂ ಅದರಿಂದ ನಾನಾ ರೀತಿಯ ಫಲಗಳನ್ನು ಪಡೆಯಬಹುದು.

ಹೆಬ್ಬಲಸು : ನಾಗಬನದಲ್ಲಿ ಕಾಣಸಿಗುವ ಇನ್ನೊಂದು ರುಚಿಯಾದ ಹಣ್ಣಿನ ಮರ.

ಇದರ ಬೀಜದ ಎಣ್ಣೆ ತಯಾರಿಸಿ ಹಿಂದಿನ ಕಾಲದಲ್ಲಿ ಅಡುಗೆಗೆ ಈ ಎಣ್ಣೆಯನ್ನು ಬಳಸುತ್ತಿದ್ದರು.

ಕೂವೆ : ಇದು ನಾಗಬನದಲ್ಲಿ ಇರುವ ಇನ್ನೊಂದು ಗಿಡಮೂಲಿಕೆ. ಇದನ್ನು ಮಕ್ಕಳಿಗೆ ಮಣ್ಣಿ ಮಾಡಲು ಬಳಸುತ್ತಿದ್ದರು.

ಮುತ್ತುಗದ ಮರ : ಇದರ ಚಿಗುರನ್ನು ಕಷಾಯ ಮಾಡಲು ಉಪಯೋಗಿಸುತ್ತಿದ್ದರು. ಇದರ ಕಟ್ಟಿಗೆಗಳನ್ನು ಹೋಮದಲ್ಲಿ ಬಳಸುತ್ತಿದ್ದರು. ಚರ್ಮರೋಗಕ್ಕೆ ಔಷಧಿಯಾಗಿ, ಸಂತಾನ ಭಾಗ್ಯಕ್ಕಾಗಿ ಹಾಗೂ ಬಣ್ಣ ಮಾಡಲು ಇದರ ಹೂವನ್ನು ಬಳಸುತ್ತಿದ್ದರು.

ನೆಲ್ಲಿ: ಸಕ್ಕರೆ ಕಾಯಿಲೆಗೆ ಉತ್ತಮ. ಏಕಾದಶಿಯಲ್ಲಿ ನೆಲ್ಲಿ ಮರದ ಕೆಳಗೆ ಕುಳಿತು ಶಿವ, ವಿಷ್ಣು ಮತ್ತು ಲಕ್ಷ್ಮೀದೇವಿಯನ್ನು ಪೂಜಿಸುತ್ತಾರೆ.

ರಾಮಪತ್ರೆ : ಮಸಾಲೆ ಪದಾರ್ಥವಾಗಿ ಇದನ್ನು ಬಳಸುತ್ತಿದ್ದರು. ಇದರ ಬೀಜದ ಹೊರಕವಚವನ್ನು ಬಣ್ಣ ಕೊಡಲು ಉಪಯೋಗಿಸುತ್ತಿದ್ದರು

ಚೇರೆಮರ : ಇದು ವಿಷಯುಕ್ತ ಮರ ಇದರ ಅಂಟು ತಾಗಿದರೆ ಕೈ ಕಾಲು ಊದಿಕೊಳ್ಳುತ್ತದೆ. ಆದರೆ ಇದರ ಹಣ್ಣಿನಲ್ಲಿ ಔಷಧೀಯ ಗುಣಗಳಿವೆ. ಇದನ್ನು ಸರೋಳಿ ಮರದ ಎಲೆಯಲ್ಲಿ 15 ನಿಮಿಷದ ಕಾಲ ಇಟ್ಟು ತಿನ್ನಬೇಕು. ಆದುದರಿಂದ ಈ ಹಣ್ಣಿಗೆ ತುಳುವಿನಲ್ಲಿ ಮಾನದಿಗೆ ಮಲ್ತ್ ತಿನೊಡಾಯಿನ ಫಲ ಎಂದು ಹೇಳುತ್ತಾರೆ.

ಕುದುಕಸೊಪ್ಪು: ನಾಗಬನದಲ್ಲಿ ಕಾಣಸಿಗುವ ವಿಶೇಷವಾದ ಗಿಡಮೂಲಿಕೆಗಳಲ್ಲೊಂದು. ಇದು ಹಳದಿ ಹಣ್ಣನ್ನು ಬಿಡುತ್ತದೆ. ತಿನ್ನಲು ಯೋಗ್ಯ. ಇದಕ್ಕೆ ಕುದುಕ ಪರ್ದ್ ಎಂಬ ಹೆಸರೂ ಕೂಡ ಇದೆ. ಇದರಿಂದ ಎಣ್ಣೆಯನ್ನು ತಯಾರಿಸುತ್ತಾರೆ. ಈ ಎಣ್ಣೆಯನ್ನು ನೋವಿನ ಎಣ್ಣೆಯಾಗಿ ಬಳಸುತ್ತಾರೆ. ಈ ಹಣ್ಣನ್ನು ಸುಗಂಧದ್ರವ್ಯಗಳಿಗೆ ಕೂಡಾ ಬಳಸುತ್ತಾರೆ. ಇದರ ಎಲೆಯು ಹುಡಿಯಾಗುತ್ತದೆ. ಈ ಹುಡಿಯನ್ನು ದೇವಸ್ಥಾನಗಳಲ್ಲಿ ರಂಗೋಲಿ ಹಾಕಲು ಬಳಸುತ್ತಾರೆ. ದೇವಸ್ಥಾನಗಳಲ್ಲಿ ಬಲಿಕಲ್ಲಿಗೆ ಇದರ ಎಲೆಗಳನ್ನು ಹಾಕುತ್ತಾರೆ.

ಬಂಥದ ಮರ : ನಾಗಬನದಲ್ಲಿ ಕಾಣಸಿಗುತ್ತದೆ. ಇದರ ಹಣ್ಣನ್ನು ತಿನ್ನಬಹುದು. ಇದರ ಹಣ್ಣಿನ ಬೀಜದಿಂದ ಎಣ್ಣೆಯನ್ನು ತಯಾರಿಸುತ್ತಾರೆ. ಮೀನು ಹಿಡಿಯುವವರು ಈ ಎಣ್ಣೆಯನ್ನು ತಮ್ಮ ದೋಣಿಗಳಿಗೆ ಹಚ್ಚುತ್ತಾರೆ.

ಮಂಡಗೆ ಬೂರು : ಇದರ ಬೀಜ ಶಿವಲಿಂಗದಂತಿರುತ್ತದೆ. ಇದನ್ನು ಶಿವಲಿಂಗಿ ಬಳ್ಳಿ ಎಂದೂ ಕರೆಯುತ್ತಾರೆ. ದೀಪಾವಳಿ ದಿನದಂದು ಸ್ನಾನ ಮಾಡುವ ಹಂಡೆಗೆ ಇದರ ಬಳ್ಳಿಯನ್ನು ಕಟ್ಟುತ್ತಾರೆ. ಇದರ ಬೀಜ ಶಿವಲಿಂಗದಂತಿರುತ್ತದೆ. ಇದು ಅಪಾರ ಔಷಧೀಯ ಗುಣಗಳನ್ನು ಹೊಂದಿದೆ.

ಅಶ್ವತ್ಥ ಮರ : ಬ್ರಹ್ಮ ವಿಷ್ಣು, ಮಹೇಶ್ವರನ ವಾಸವಿದೆ. ಇದರ ಚಿಗುರಿನಿಂದ ಗರ್ಭಸ್ರಾವ ಆಗುತ್ತದೆ. ಆಮ್ಲಜನಕ ಕೊಡುತ್ತದೆ. ಅಶ್ವತ್ಥ ಮರ ಮತ್ತುಕಹಿಬೇವಿಗೆ ಮದುವೆ ಮಾಡುವ ಆಚರಣೆ ಇದೆ. ಅದಕ್ಕೆ ನೂಲುಕಟ್ಟಿ ಪೂಜೆ ಮಾಡುತ್ತಾರೆ.

ನಾಗಾರಾಧನೆಯ ಆಚರಣೆಯಲ್ಲಿ ಸಂಪಿಗೆ, ಹೊನ್ನೆ, ರೆಂಜೆ, ಸುರಗೆ, ಕೇದಗೆ ಈ ಎಲ್ಲಾ ಮರಗಳು ಕೂಡ ಬಹಳ ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ನಾಗಾರಾಧನೆಯ ಆಚರಣೆಯಲ್ಲಿ ಈ ಎಲ್ಲಾ ಮರ ಗಿಡಗಳೂ ಆರಾಧಿಸಲ್ಪಡುತ್ತದೆ. ನಾಗನ ಗಿಡ ಮರಗಳೆಂದೇ ಜನರು ಈ ಮರಗಳನ್ನು ಪೂಜಿಸುತ್ತಾರೆ ಆರಾಧಿಸುತ್ತಾರೆ.

ನಾಗಬನ ಆಚರಣೆಯಲ್ಲಿ ವಿಶೇಷವಾಗಿ ಬಳಸುವುದರಿಂದ ಈ ಮರಗಳನ್ನು ಕಡಿಯಲು ಕೂಡ ಹಿಂಜರಿಯುತ್ತಾರೆ. ಈ ಮರಗಳು ನಾಗನ ಕಟ್ಟೆಯ ಬಳಿ ಇದ್ದರೆ ಯಾವುದೇ ಕಾರಣಕ್ಕೂ ಯಾವುದೇ ರಸ್ತೆಯ ನಿರ್ಮಾಣ ಕಾರ್ಯದಲ್ಲೂ ಅದನ್ನು ಯಾರೂ ಮುಟ್ಟಲು ಹಿಂಜರಿಯುತ್ತಾರೆ.

ತುಳುನಾಡಿನಲ್ಲಿ ಮಾತ್ರವಲ್ಲದೆ ವಿಶ್ವದಾದ್ಯಂತ ನಾಗನಪೂಜೆ ಮಾಡಿ ನಂಬುತ್ತಾರಲ್ಲದೆ ನಾಗನ ಆಚರಣೆಗಳಲ್ಲಿ ಈ ಎಲ್ಲಾ ವೃಕ್ಷಗಳೂ ಕೂಡ ಪ್ರಮುಖ ಪಾತ್ರವನ್ನೂ ವಹಿಸುತ್ತದೆ ಹಾಗೂ ಆರಾಧಿಸಲ್ಪಡುತ್ತದೆ.

ಅಡಿಟಿಪ್ಪಣಿಗಳು

1. ತುಳುವ ಜಾನಪದ : ಕೆಲವು ನೋಟಗಳು 2007 ಡಾ. ಅಮೃತ ಸೋಮೇಶ್ವರ ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ : ಪುಟ. 17
2. ತುಳು ನಿಘಂಟು: ಸಂಪುಟ–04,; 1997, ಡಾ.ಯು.ಪಿ.ಉಪಾಧ್ಯಾಯ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ : ಪುಟ. 1734
3. ತುಳುವ ಜಾನಪದ, ಕೆಲವು ನೋಟಗಳು 2007 ಡಾ. ಅಮೃತ ಸೋಮೇಶ್ವರ, ಪೂರ್ವೋಕ್ತ ಲೇಖನ : ತುಳುನಾಡಿನ ನಾಗಪೂಜೆ ; : ಪುಟ. 16
4. ಅದೇ : ಪೂರ್ವೋಕ್ತ, ಪುಟ. 26, 27
5. ತುಳು ನಡೆನುಡಿ, 1998, ವೆಂಕಟರಾಜ ಪುಣಂಚಿತ್ತಾಯ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ, ಪುಟ 62, 63

ಪರಮಾರ್ಶನ ಗ್ರಂಥಗಳು

ಡಾ. ನಿಕೇತನ	:	ತುಳುಸಾಹಿತ್ಯ ಪರಂಪರೆ ಒಂದು ಅವಲೋಕನ
ಡಾ. ಶಿವರಾಮ ಶೆಟ್ಟಿ	:	ಸಸ್ಯ ಜಾನಪದ
ಡಾ. ಅಶೋಕ್ ಆಳ್ವ	:	ಪ್ರಾಣಿ ಜಾನಪದ
ಕೆಂದಬಾಡಿ ಗಟ್ಟಪ್ಪ ರೈ	:	ಬೇಟೆಯ ನೆನಪುಗಳು.
ಕೆ.ಎಲ್ ಪುಂಡತ್ತಾಯ	:	ನೆಲ ಮೂಲದ ಹಬ್ಬಗಳು.
ಡಾ. ಬಿ.ಶಿವರಾಮ ಶೆಟ್ಟಿ	:	ಸಸ್ಯ ಜಾನಪದ
ಡಾ. ಪುರುಷೋತ್ತಮ ಬಿಳಿಮಲೆ	:	ಕರಾವಳಿ ಜಾನಪದ
ಚಿನ್ನಪ್ಪ ಕೆ.ಗೌಡ	:	ಸೇರಿಗೆ

ವಕ್ತೃಗಳ ವಿವರ:

ಉದಯ ಕುಮಾರ್ ಶೆಟ್ಟಿ : ಔಷಧಿ ವನದ ಮೇಲ್ವಿಚಾರಕರು, ಪಿಲಿಕುಳ

ಬೆನೆಟ್ ಅಮ್ಮಣ : ಮಾಜಿ ಸದಸ್ಯರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

❖❖❖

ಠಾಗೋರ್ ಮತ್ತು ಕುವೆಂಪುರವರ ವಿಶ್ವಮಾನವತ್ವದ ಪರಿಕಲ್ಪನೆ

ಡಾ ಮಹಾಂತ ಗೌಡ
ಕನ್ನಡ ಸಹಾಯಕ ಪ್ರಾಧ್ಯಾಪಕರು
ದೇವಾನಾಂಪ್ರಿಯ ಅಶೋಕ ಸ.ಪ್ರ.ದ. ಕಾ, ಮಸ್ಕಿ

ಡಾ. ಧನಂಜಯ ಪಿ. ಕೆ.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ. ಮಹಿಳಾ ಕಾಲೇಜು, ಮಂಡ್ಯ

ಪೀಠಿಕೆ

ಅಖಂಡ ಪರಂಪರೆಯನ್ನು ಹೊಂದಿರುವ ಭಾರತವು ವೈವಿಧ್ಯಮಯ ದೇಶ. ಅದರ ಭಾಷೆ, ಸಂಸ್ಕೃತಿ, ಸಾಹಿತ್ಯ, ವೈಚಾರಿಕತೆ, ತಾತ್ವಿಕತೆ, ದಾರ್ಶನಿಕತೆ ವಿಶಿಷ್ಟವೂ, ವಿಭಿನ್ನವೂ ಅರ್ಥಪೂರ್ಣವೂ ಆಗಿದೆ. ಪ್ರಸ್ತುತ ಅಧ್ಯಯನದಲ್ಲಿ ವಿಶ್ವಗುರು ಹಾಗೂ ರಾಷ್ಟ್ರಕವಿ ಠಾಗೋರ್ ಮತ್ತು ಕುವೆಂಪುರವರ ವಿಶ್ವಮಾನವತ್ವದ ಪರಿಕಲ್ಪನೆಯನ್ನು ಸೂಕ್ಷ್ಮವಾಗಿ ಗುರುತಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗಿದೆ. 'ಶ್ರೀಸಾಮಾನ್ಯನೇ ಭಗವನ್ ಮಾನ್ಯಂ' ಎಂಬ ಮಹಾಧೀಕ್ಷ ಸ್ಥಾನ ತುಂಬಿದ ಧೀಮಂತರ ವಿಚಾರಧಾರೆಗಳನ್ನು ತೌಲನಿಕವಾಗಿ ನೋಡಲಾಗಿದೆ.

ರಸ ಋಷಿ ಕುವೆಂಪುರವರು ವಿಶ್ವ ಕಂಡ ಮಹಾನ್ ಸಾಹಿತಿ. ಆಧುನಿಕ ಕವಿ ರವೀಂದ್ರನಾಥ ಠಾಗೋರ್‌ರು ಪಾಶ್ಚಿಮಾತ್ಯ ಪೂರ್ವ–ಪಶ್ಚಿಮ ಸಾಹಿತ್ಯದ ಸಾರವನ್ನು ಹೀರಿ ಬೆಳೆದು ವಿಶ್ವಮಟ್ಟದಲ್ಲಿ ನಿಂತವರು. ನಾಡಗೀತೆಯನ್ನು ಏಕತೆಯಲ್ಲಿ ಅದರಲ್ಲೂ ವಿಶೇಷವಾಗಿ ರಾಷ್ಟ್ರಗೀತೆಯ ಮಾದರಿಯಲ್ಲಿ ಹಾಡಿದರೆ ಕರ್ನಾಟಕಕ್ಕೆ ಮತ್ತು ಕನ್ನಡಕ್ಕೆ ಹೆಚ್ಚು ಭೂಷಣವಾಗುತ್ತದೆ. ಇಬ್ಬರಲ್ಲೂ ಸಾಮ್ಯತೆಯಿದೆ, ಆದರ್ಶಮಯತೆಯಿದೆ, ವಿಶ್ವಪ್ರಜ್ಞೆ, ಮಾನವೀಯ ಅಂತಃಕರಣವು ತುಂಬಾ ಔದಾರ್ಯದಿಂದ ಕೂಡಿದೆ ಎಂದು ವಿಮರ್ಶಿಸಲಾಗುತ್ತದೆ.

ವಿಶ್ವಗುರು ರವೀಂದ್ರನಾಥ ಠಾಗೋರ್‌ರ ವಿಶ್ವಮಾನವ ಪರಿಕಲ್ಪನೆ

ಬಂಗಾಳದ ಸಂಸ್ಕೃತಿಗೆ ಪರಂಪರಾಗತ ಪರಮಾರ್ಥ ಹುಡುಕಾಟದ ಒಂದು ಅನುಭಾವಿಕ ಪರಂಪರೆ ಇದೆ. ವಿಶಾಲ ಅರ್ಥದಲ್ಲಿ ಹಿಂದೂ ಎನ್ನಬಹುದಾದ ಹಾಗೂ ಉದಾರವಾದ ಸೂಫಿ ಸಂತ ಪರಂಪರೆಯ ಸಮ್ಮಿಳನದ ಅನುಭಾವಿಕ ಪರಂಪರೆ ಬಂಗಾಳೀ ಮನಸ್ಸಿನ ಮೇಲೆ ಮಾಡಿದ ಪ್ರಭಾವ ಅಗಾಧವಾದದ್ದು. ಈ ವ್ಯಕ್ತಿತ್ವದ ಆಧುನಿಕ ಪ್ರತಿಮೆಯಂತೆ ರವೀಂದ್ರನಾಥ ಠಾಕೂರರು ಕಾಣುತ್ತಿದ್ದರು. ರವೀಂದ್ರರಿಗೆ ನೊಬೆಲ್ ತಂದುಕೊಟ್ಟ 'ಗೀತಾಂಜಲಿ' ಕವನ ಸಂಕಲನವು ಅನುಭಾವಿಯೊಬ್ಬನ ನಿರಂತರ ಹುಡುಕಾಟದ ಆಶಯವನ್ನು ಅನೇಕ ಕವನಗಳಲ್ಲಿ ಹೊಂದಿದೆ. ಅಲೆಮಾರಿಯ 'ಪಯಣ' ಇಲ್ಲಿ ಬಹುಪಾಲು ಕವನಗಳಲ್ಲಿ ಪ್ರತಿಮೆಗಳಲ್ಲಿ ಸರಮಾಲೆಯಾಗಿ ಕಂಡುಬರುತ್ತವೆ. ಪರಮಾರ್ಥದ ಹುಡುಕಾಟದ 'ಪಥಿಕ'ನಾಗಿ ಇಲ್ಲಿ ಕವನಗಳ ನಾಯಕ ಕಂಡುಬರುತ್ತಾನೆ. ಯಾಂತ್ರಿಕ ಜಗತ್ತಿನ ಪಶ್ಚಿಮಕ್ಕೆ ಈ ಅನುಭಾವಿ ಹುಡುಕಾಟವು, ಅವರು ಕಟ್ಟಿಕೊಂಡ ಪಾಪ ಪರಿಹಾರದ ನಿವಾರಣೆಯ ಪ್ರತಿಮೆಯಾಗಿ ಕ್ರೈಸ್ತನ ಹುಡುಕಾಟಕ್ಕೆ ಸಂವಾದಿಯಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ಯುರೋಪಿನ ಬಹುಭಾಗದಲ್ಲಿ ಠಾಗೂರರು ಜನಪ್ರಿಯವಾಗಿ ಬಿಟ್ಟಿದ್ದರು. ಯುರೋಪಿನ ಭೌತಶರೀರಕ್ಕೆ ಪರಮಾರ್ಥದ ಆತ್ಮವನ್ನು ಕೊಡುವವರಂತೆ

ಇವರು ಕಂಡಿದ್ದು ಆಶ್ಚರ್ಯವೇನೂ ಅಲ್ಲ.

ರವೀಂದ್ರನಾಥ ಠಾಕೂರರು ಪ್ರಮುಖವಾದ ತಮ್ಮ ಎರಡು ಕಾದಂಬರಿಗಳಲ್ಲಿ (ಗೋರಾ ಮತ್ತು ಘರೇ ಬೈರೇ) ಭಾರತದ ಹಿಂದೂ ಧರ್ಮವು ಇಪ್ಪತ್ತನೆಯ ಶತಮಾನದಲ್ಲಿ ಹಿಡಿದ ಅವನತಿಯ ದಾರಿಯನ್ನು ಕುರಿತು ಚಿಂತಿಸುತ್ತಾರೆ. ರಾಷ್ಟ್ರೀಯತೆಯ ಪ್ರಶ್ನೆಯನ್ನೂ ಚರ್ಚಿಸಿದ್ದಾರೆ. ಅವರ ಪ್ರಸಿದ್ಧ ಕಾದಂಬರಿ ಗೋರಾ. ಹಿಂದೂ ಧರ್ಮ, ಬ್ರಾಹ್ಮೋಯಿಸಂ, ಬ್ರಿಟಿಷ್ ವಸಾಹತು ಆಡಳಿತ ಮತ್ತು ಆಧುನಿಕ ಮಹಿಳೆಯ ಸಮಸ್ಯೆ– ಹೀಗೆ ಹತ್ತು ಹಲವು ಆಯಾಮಗಳಲ್ಲಿ ಬೆಳೆಯುತ್ತದೆ. ಧರ್ಮ ಸಂಘರ್ಷದ ಪ್ರಸ್ತಾಪವಿದೆ. ಆದರೆ ಮುಖ್ಯವಾಗಿ ಕಾದಂಬರಿಯು ನಿಜವಾದ ಭಾರತವು ಧರ್ಮಕ್ಕಿಂತ ಮೇಲು ಮತ್ತು ಆಧುನಿಕ ತಿಳುವಳಿಕೆಯ ಕಡೆಗೆ ಮುಖ ಮಾಡುತ್ತದೆ ಎಂದು ಹೇಳುತ್ತದೆ. ಗೋರಾ(ಗೌರಿ ಮೋಹನ್) ಐರಿಷ್ ತಂದೆಗೆ ಹುಟ್ಟಿದ್ದರೂ, ತನ್ನ ಹುಟ್ಟಿನ ಮೂಲವೇ ಗೊತ್ತಿಲ್ಲದೇ ಬೆಳೆಯುತ್ತ ಕಟ್ಟಾ ಹಿಂದೂವಾಗುತ್ತಾನೆ. ಬ್ರಿಟಿಷರನ್ನು ಸಿಟ್ಟಿನಿಂದ ದ್ವೇಷಿಸುತ್ತಾನೆ. ಆದರೆ ಕ್ರಮೇಣ ಈ ಧರ್ಮದ ಅಭಿಮಾನಕ್ಕಿಂತ ದೇಶಪ್ರೇಮ ದೊಡ್ಡದು ಎಂದು ಅರಿಯುತ್ತಾನೆ. ಠಾಕೂರರು ಈ ಕಾದಂಬರಿಯಲ್ಲಿ ಚಿತ್ರಿಸಿದ ಎರಡು ಪ್ರಧಾನ ಹೆಣ್ಣು ಪಾತ್ರಗಳು (ಸುಚರಿತ, ಲೋಲಿಟ) ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಮತ್ತು ಅಂಥ ಅಸ್ತಿತ್ವವನ್ನು ಬಯಸುವ ಹೆಣ್ಣುಗಳು. ಧರ್ಮವನ್ನು ಈ ಕಾರಣದಿಂದ ದೂರವೇ ಇಟ್ಟಿರುತ್ತಾರೆ.

ಶ್ರೇಣೀಕೃತ ಭಾರತದ ಸಮಾಜವನ್ನು ಅಂತ:ಕರಣದಿಂದ ಬದಲಿಸಬೇಕೆನ್ನುವ ಗಾಂಧೀಜಿಯವರ ಪ್ರಯತ್ನ ಕೇವಲ ಆದರ್ಶವಾಗಿ ಉಳಿಯಿತೆನ್ನುವುದು, ಚರಿತ್ರೆಯ ಕಟುಸತ್ಯದ ತರ್ಕವನ್ನು ನೋಡಿದವರಿಗೆಲ್ಲರಿಗೂ ಗೊತ್ತು. ಡಾ.ಅಂಬೇಡ್ಕರ್ ಅವರು ಇಂಥ ಕಟುಸತ್ಯವನ್ನು ಅರಿತಿದ್ದರು. ಸಾಮಾಜಿಕ ಅಂತಸ್ತು, ಹಕ್ಕಿನ ಬೇಡಿಕೆಯಲ್ಲಿ ದಕ್ಕುತ್ತದೆ ಎನ್ನುವುದನ್ನು ಅವರು ಮನಗಂಡಿದ್ದರು. ಆದರೆ ಅಭಿವೃದ್ಧಿ ಕುರಿತ ಗಾಂಧೀಜಿಯ ಆರ್ಥಿಕ ಹಾಗೂ ಭಾಷಿಕವಾದ ಚಿಂತನೆಗಳಿಗೆ ಪ್ರಸ್ತುತತೆಯು ಬಂದೊದಗಿದ ಕಾಲ ಇದು. ರವೀಂದ್ರರ 'ಆಧುನಿಕ ಅನುಭಾವಿ ಸತ್ವ'ದ ಚಿಂತನೆಯೂ ಈಗ ಮನುಷ್ಯನನ್ನು ಗಾಢವಾಗಿ ಕಾಡುತ್ತಿರುವ ಕಾಲವಾಗಿದೆ. ಇವೆರಡೂ ಪರಸ್ಪರ ವಿರೋಧಿ ಚಿಂತನೆಗಳಲ್ಲ. ಒಂದು ಮುಖ್ಯವಾದ ಕೇಂದ್ರದಲ್ಲಿ ಇವೆರಡೂ ಸಂಧಿಸುವ ಅನಿವಾರ್ಯತೆಯನ್ನು ನಮ್ಮ ಕಾಲದ 'ತಿಳುವಳಿಕೆ'ಯು ಎದುರುನೋಡುತ್ತಿದೆ. ಬದುಕಿನಂತೆಯೇ ಸಾವನ್ನು ಸಂತೋಷದಿಂದ ಒಪ್ಪಿಕೊಂಡ ಸಹಮಾನವರೊಡನೆ, ಸಮಸ್ತ ವಿಶ್ವದೊಡನೆ ಸಂಭ್ರಮದಿಂದ ಭಾಂಧವ್ಯವನ್ನು ಸ್ವೀಕರಿಸಿದ ರವೀಂದ್ರರ ಹೊಸಹೊಸ ಪ್ರತಿಮೆಗಳು ನಮ್ಮನ್ನು ಎದುರುಗೊಳ್ಳುತ್ತವೆ. ತಾಯಿ ತನ್ನ ಬಲಗಡೆಯ ಸ್ತನದಿಂದ ಮಗುವನ್ನು ಬಿಡಿಸಿದಾಗ ಅದು ಅಳುತ್ತದೆ, ಮರುಗಳಿಗೆಯಲ್ಲೆ ಎಡಗಡೆಯ ಸ್ತನದಲ್ಲಿ ಸಮಾಧಾನ ಕಂಡುಕೊಳ್ಳುತ್ತದೆ ಎಂಬುವುದು ವಿಶ್ವಗುರುವಿನ ಅಂತರಂಗದ ವಿಚಾರವಾಗಿದೆ.

ರಾಷ್ಟ್ರಕವಿ ಕುವೆಂಪುರವರ ವಿಶ್ವಮಾನವ ಪರಿಕಲ್ಪನೆ

(ಮನುಜಮತ–ವಿಶ್ವಪಥ–ಸರ್ವೋದಯ–ಸಮನ್ವಯ–ಪೂರ್ಣದೃಷ್ಟಿ)

ಮನುಜಮತ : ಆ ಮತ, ಈ ಮತ ತೊಲಗಿ ಮನುಜಮತ ಬೆಳೆಯಬೇಕು. ಪ್ರಪಂಚದಲ್ಲಿ ಎಷ್ಟು ಜನರಿದ್ದಾರೆಯೋ ಅವರೆಲ್ಲರೂ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಕ್ಕುದಾರರಾಗಿದ್ದಾರೆ. ಯಾರೊಬ್ಬರೂ ಇನ್ನೊಬ್ಬರ ಮತ (ಅಭಿಪ್ರಾಯ)

ಕ್ಕೆ ಮಣಿಯಬಾರದು. ಒಬ್ಬರ ಅಭಿಪ್ರಾಯವನ್ನು ಕ್ಟಣ್ಮುಚ್ಚಿ ಒಪ್ಪಿಕೊಳ್ಳುತ್ತಿರುವುದೇ ಜಗತ್ತಿನಲ್ಲುಂಟಾಗಿರುವ ಎಲ್ಲ ಸಮಸ್ಯೆಗಳಿಗೂ ಕಾರಣ ಪ್ರತಿಯೊಬ್ಬನೂ ತನ್ನ ತನ್ನ ಅಭಿಪ್ರಾಯವನ್ನು ಅಭಿಯಕ್ತಗೊಳಿಸಬೇಕು. ಆಗ ಮತವೆಂಬ ಮಾತೇ ಇರುವುದಿಲ್ಲ. ಸಮಸ್ಯೆಗಳೂ ಇರುವುದಿಲ್ಲ. ತಾನು ಅಭಿವ್ಯಕ್ತಗೊಳಿಸುವ ಮತ(ಅಭಿಪ್ರಾಯ) ವಿಶ್ವದ ಒಳಿತಿಗೆ ಸಹಾಯಕವಾಗುವಂತಹ ಅಭಿಪ್ರಾಯವಾಗಿರಬೇಕು. ಸಂಕುಚಿತ ಅಭಿಪ್ರಾಯವಾಗಬಾರದು ತನ್ನ ಒಳಿತನ್ನು ಮಾತ್ರ ಚಿಂತಿಸಬಾರದು.

ವಿಶ್ವಪಥ: ಒಬ್ಬೊಬ್ಬರದೂ ಒಂದೊಂದು ದಾರಿಯಾಗಬಾರದು. ಒಬ್ಬ ವ್ಯಕ್ತಿ, ಒಂದು ಸಮಾಜ, ಒಂದು ನಗರ, ಒಂದು ರಾಜ್ಯ, ಒಂದು ರಾಷ್ಟ್ರಕ್ಕೆ ಮಾತ್ರ ಸೀಮಿತವಾಗಬಾರದು ಪ್ರತಿಯೊಬ್ಬರ ಆಲೋಚನೆಗಳೂ, ದೃಷ್ಟಿಯೂ ವಿಶ್ವದ ಉದ್ಧಾರದ್ದೇ ಆಗಿರಬೇಕು. ಸಂಕುಚಿತಾಭಿಪ್ರಾಯಗಳಿರಬಾರದು. ಇದು ವಿಶ್ವಪಥ.

ಸರ್ವೋದಯ: ಉದ್ಧಾರವಾಗಬೇಕಾದುದು ಒಬ್ಬರಲ್ಲ; ಇಲ್ಲವೇ ಒಂದು ಪಕ್ಷ ಅಥವಾ ಗುಂಪಿನವರಲ್ಲ. ವಿಶ್ವದ ಪ್ರತಿಯೊಬ್ಬ ವ್ಯಕ್ತಿಯ ಉದ್ಧಾರವಾಗಬೇಕು. ಎಲ್ಲಿಯೂ ಇವನು ಮೇಲು, ಇವನು ಕೀಳು ಎಂಬ ಅಭಿಪ್ರಾಯವಿರಬಾರದು. ಯಾರೂ ಸೋಮಾರಿಯಾಗಿರದೆ ತಮ್ಮ ತಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ಅಧಿಕವಾಗಿ ಉಳ್ಳವರು ಮಧ್ಯಮ ವರ್ಗ ಮತ್ತು ಕನಿಷ್ಠ ವರ್ಗದವರಿಗೆ ಸಹಾಯ ಮಾಡಿ, ಅವರೂ ತನ್ನಂತೆ ಬೆಳೆಯಲು ಅವಕಾಶ ಮಾಡಿಕೊಡಬೇಕು. ಇದರಿಂದ ದೇಶದಲ್ಲಿ ಯಾವ ಸಮಸ್ಯೆಯೂ ಉದ್ಭವಿಸದೆ, ಎಲ್ಲರೂ ಶಾಂತಿಯಿಂದ ಸೋದರಭಾವದಿಂದ ಜೀವಿಸಲು ಸಹಾಯವಾಗುತ್ತದೆ. ಇದು ಸರ್ವೋದಯ.

ಸಮನ್ವಯ: ಸರ್ವೋದಯವಾದ ಮೇಲೆ ಎಲ್ಲರೂ ಒಟ್ಟಿದಾಗಿ ಬೆರೆಯಬೇಕು. ಬೇರೆ ಬೇರೆಯಾಗಿ ಇರುವುದಿಲ್ಲ. ಎಲ್ಲರೂ ಒಟ್ಟಾಗಿ ಸೇರಿ ಜಗತ್ತಿನ ಪ್ರಗತಿಯ ಬಗ್ಗೆ ಚಿಂತಿಸಬೇಕು. ತಮ್ಮಲ್ಲಿಯೇ ಬರುವ ಅರೆಕೊರೆಗಳನ್ನು ಪರಸ್ಪರ ಚರ್ಚೆಯಿಂದ ತಾವು ತಾವೇ ಪರಿಹರಿಸಿಕೊಳ್ಳಬೇಕು. ವಿಶ್ವಮಾನವತ್ವವನ್ನು ಬೆಳೆಸಿಕೊಳ್ಳಬೇಕು.

ಪೂರ್ಣದೃಷ್ಟಿ : ಎಲ್ಲರನ್ನೂ ಎಲ್ಲವನ್ನೂ ಹಸಿರು ಕಾಮಾಲೆ ಕಣ್ಣಿನಿಂದ ಕಾಣದೆ, ಎಲ್ಲರನ್ನೂ ಮುಕ್ತ ಮನಸ್ಸಿನಿಂದ ಕಾಣುವುದು. ಯಾವುದೇ ಪೂರ್ವಗ್ರಹವಿರಬಾರದು. ಮಿತಮತದ ಅಂಶಿಕ ದೃಷ್ಟಿ ತೊಲಗಿ ಎಲ್ಲವನ್ನೂ ಎಲ್ಲರನ್ನೂ ಭಗವತ್ ದೃಷ್ಟಿಯಿಂದ ಕಾಣುವುದು. ಇದು ಪೂರ್ಣದೃಷ್ಟಿ ಜಗತ್ತಿನ ಎಲ್ಲ ಮಾನವರ ಉದ್ದಾರಕ್ಕೆ ಕಾರಣವಾಗುವುವೋ ಅವು ಯಾವ ಒಂದು ದೇಶ, ಒಂದು ಮತ, ಒಂದು ಭಾಷೆಗೆ ಸೀಮಿತವಾಗಿರದೆ ವಿಶ್ವದ ಎಲ್ಲ ದೇಶ, ಒಂದು ಮತ, ಒಂದು ಭಾಷೆಗೆ ಸೀಮಿತವಾಗಿರದೆ ವಿಶ್ವದ ಎಲ್ಲ ದೇಶ, ಮತ, ಭಾಷೆಗೆ ಅನ್ವಯವಾಗುವಂತಿರಬೇಕು. ಈ ಭಾವನೆಗಳೇ ಮೂಲ ಮೌಲ್ಯಗಳು. ಈ ಮೌಲ್ಯಗಳು ಮಾನವರಲ್ಲಿ ವಿಶ್ವಮಾನವತ್ವವನ್ನು ಬೆಳೆಸುತ್ತದೆ.

ವಿಶ್ವಮಾನವರಾಗಲು ನಾವು ಸಾಧಿಸಲೇಬೇಕಾದ ಮೂಲಭೂತ ಸ್ವರೂಪದ ತತ್ತ್ವಪ್ರಣಾಳಿಕೆ:

ಸಪ್ತಸೂತ್ರ – ಕುವೆಂಪು

1. "ಮನುಷ್ಯಜಾತಿ ತಾನೊಂದೆವಲಂ" ಎಂಬುವುದನ್ನು ನಿರೂಪಾಧಿಕವಾಗಿ ಸ್ವೀಕರಿಸಬೇಕು.

2. "ವರ್ಣಾಶ್ರಮವನ್ನು ತಿದ್ದುವುದಲ್ಲ ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೋಲಿಕ್, ಪ್ರಾಟಿಸ್ಟೆಂಟ್, ಸಿಖ್, ನಿರಹಂಕಾರಿ, ಇತ್ಯಾದಿ, ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.
3. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.
4. 'ಮತ' ತೊಲಗಿ 'ಆಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.
5. ಮತ 'ಮನುಜಮತ' ವಾಗಬೇಕು., ಪಥ 'ವಿಶ್ವಪಥ' ವಾಗಬೇಕು, ಮನುಷ್ಯ 'ವಿಶ್ವಮಾನವ'ನಾಗಬೇಕು.
6. ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರು ಯಾವ ಒಂದು ಮತಕ್ಕೂ ಸೇರದೆ ಪ್ರತಿಯೊಬ್ಬನು ತಾನು ಕಂಡುಕೊಳ್ಳುವ ತನ್ನ ಮತಕ್ಕೆ ಮಾತ್ರ ಸೇರಬೇಕು ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೋಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳಹಚ್ಚುವಂತಾಗಬಾರದು.
7. ಯಾವ ಒಂದು ಗ್ರಂಥವು 'ಏಕೈಕ ಪರಮಪೂಜ್ಯ' ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳೆನ್ನೆಲ್ಲಾ ಓದಿ ತಿಳಿದು ತನ್ನ ದರ್ಶನವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

ಠಾಗೋರ್, ಕುವೆಂಪುರವರ ದೃಷ್ಟಿ ಮತ್ತು ದರ್ಶನ

ದಿವ್ಯಸಾದೃಶ್ಯವಾದ ವಿಶ್ವಮಾನವತ್ವದ ಪರಿಕಲ್ಪನೆ ಕುವೆಂಪು ಮತ್ತು ಠಾಗೋರ್‌ರಲ್ಲಿ ಒಂದಲ್ಲ ಒಂದು ರೀತಿಯ ಅವಿನಾಭಾವ ಸಂಬಂಧವನ್ನು ಕಲ್ಪಿಸುವ ಹಾಗೂ ತೌಲನಿಕ ಕ್ರಮದಿಂದ ನೋಡುವ ಮತ್ತು ಸಾಮ್ಯತೆಗಳನ್ನು ಗುರುತಿಸುವ ಅಧ್ಯಯವು ಇದಾಗಿದೆ. ಮಾನವತಾವಾದಿ ಉದಾರವಾದಿ ಜಾತಿ, ಬಣ್ಣ, ಭೇದ, ನಿರಾಕರಣೆ ಮತ ಧರ್ಮ ಶ್ರೇಣಿ ವ್ಯವಸ್ಥೆ ಸಾಮಾಜಿಕ ಕಳಕಳಿ ರಾಜಕೀಯ ಕಸುವು ವೈಚಾರಿಕ ಪ್ರಜ್ಞೆ ತಿಳಿಯುವ ಮೂಲ ಇದಾಗಿದೆ. ಕರ್ನಾಟಕದ ನಾಡಗೀತೆಯಲ್ಲಿ ಹಾಗೂ ಭಾರತದ ರಾಷ್ಟ್ರಗೀತೆಯಲ್ಲಿ ಇರುವಂತಹ ಕೆಲವು ಮನೋನಿರ್ಧಾರಗಳನ್ನು ನೋಡಿದರೆ ಮನಸ್ಸಿಗೆ ತುಂಬಾ ಹತ್ತಿರವೆನಿಸುವ ಅಂಶಗಳು ಗೋಚರವಾಗುತ್ತವೆ.

ಕುವೆಂಪುರವರ ದರ್ಶನ

ಕುವೆಂಪು ನಿಸರ್ಗದ ನಿರ್ಮಲ ನಿತಾಂತ ತಾಣಗಳ ಅರಿವಿಕೆಯನ್ನು ಕೆಲವೊಮ್ಮೆ ಆಧ್ಯಾತ್ಮದ ಹಾಗೂ ಸಾಮಾಜಿಕ ಸಂಬಂಧಗಳ ಸಮ್ಮಿಲನವನ್ನು ಗುರುತಿಸುವ ನಿಟ್ಟಿನಲ್ಲಿ ಸಾಹಿತ್ಯದ ಸೊಬಗನ್ನು ಸೂಚಿಸುತ್ತಾರೆ. ಶ್ರೀಸಾಮಾನ್ಯನಲ್ಲಿಯೂ ಭಗವಂತನನ್ನು ಕಾಣುವ ಇವರು ವಿಶ್ವಪ್ರೇಮವನ್ನು ಮನುಷ್ಯನಲ್ಲಿ ತುಂಬುವ ಕ್ರಿಯಾತ್ಮಕ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು. ನಮ್ಮೆಲ್ಲರಿಗೂ ತಿಳಿದ ಸಂಗತಿಯಾಗಿದೆ.

ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕ್ಕೆ

ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕ್ಕೆ
ಓ ಬನ್ನಿ! ಸೋದರರೇ ವಿಶ್ವಪಥಕ್ಕೆ!

ಈ ಮನುಜ ಮತ, ವಿಶ್ವಪಥ, ವಿಜ್ಞಾನದೃಷ್ಟಿ, ವಿಚಾರಬುದ್ದಿಗಳು ನಮ್ಮ ಜನ ಹೃದಯದ ನಿತ್ಯ ಮಂತ್ರಗಳಾಗುವಂತೆ, ನಮ್ಮ ಜನಮನದ ಧ್ಯೇಯೋಕ್ತಿಗಳಾಗುವಂತೆ ಮಾಡುವ ಕರ್ತವ್ಯ ನಮ್ಮದಾಗಬೇಕೆಂದು ಹಾರೈಸುತ್ತಾರೆ.

ಉಪಸಂಹಾರ

ಅರಮನೆಯಲ್ಲಿ ಹುಟ್ಟಿ, ನೆರಮನೆಯಲ್ಲಿ ಬೆಳೆದು ಗುರುಮನೆಯಲ್ಲಿ ಶ್ರೇಯಸ್ಸು ಕಂಡ ಭಾರತೀಯ ಸಾಹಿತ್ಯ ಪರಂಪರೆ ಕೆಲವು ಧೀಮಂತ ವ್ಯಕ್ತಿಗಳನ್ನು ಕೊಟ್ಟಿದೆ. ಠಾಗೋರ್ ಮತ್ತು ಕುವೆಂಪು ಅಂಥ ಧೀಮಂತ ವ್ಯಕ್ತಿಗಳು.

ಒಟ್ಟಾರೆಯಾಗಿ ಹುಟ್ಟುತ್ತಾ ಮನುಷ್ಯ ವಿಶ್ವಮಾನವನಾಗಿ ಹುಟ್ಟುತ್ತಾನೆ. ಬೆಳೆಯುತ್ತಾ ಬೆಳೆಯುತ್ತಾ ಅಲ್ಪಮಾನವನಾಗುತ್ತಾನೆ. ಪುನ: ಆ ಮನುಷ್ಯರನ್ನ ವಿಶ್ವಮಾನವನ್ನಾಗಿಸುವುದು ಶಿಕ್ಷಣ. ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ಹಾಗೂ ಠಾಗೋರರು ತಮ್ಮ ಸಾಹಿತ್ಯ ಮತ್ತು ಶಾಂತಿ ನಿಕೇತನದ ಮೂಲಕ ವಿಶ್ವಮಾನವ ಸಂದೇಶವನ್ನು ನೀಡಿ, ನಮ್ಮೊಂದಿಗೆ ನಿತ್ಯನೂತನವಾಗಿದ್ದಾರೆ.

ಪರಾಮರ್ಶನ ಗ್ರಂಥಗಳು

1. ಕುವೆಂಪು ಸೂಕ್ತಿ – ನಂಜೇಗೌಡ
2. ಕುವೆಂಪು ಕೃತಿ ವಿಮರ್ಶೆ (ಸಮಗ್ರ) – ಕೆ.ಸಿ. ರೆಡ್ಡಿ
3. ಕವೀಂದ್ರ – ರವೀಂದ್ರ – ಬಿ.ಹೆಚ್. ಶ್ರೀಧರ್
4. ನನ್ನ ಬಾಲ್ಯದ ನೆನಪುಗಳು – ರವೀಂದ್ರನಾಥ ಠಾಕೂರ್ (ಅನುವಾದ : ಅಹೋಬಲ ಶಂಕರ)

❖❖❖

ಕತ್ತಲ ಕಡಲೊಳು ಮುಳುಗಿದೆ ಬುವಿಯು
ಎತ್ತಿ ಹಿಡಿಯಲು ಬೇಕಿದೆ ಅವತಾರವು
ಬೆಳಕಿನುದಯದೊಳು ಕಡಲು ಮುಳುಗುವುದು
ಬುವಿಯ ಎತ್ತುವುದು ರವಿಯವತಾರವು

ತೇಜಸ್ವಿ ಕಾದಂಬರಿಗಳಲ್ಲಿ ಶ್ರೀ ಸಾಮಾನ್ಯರ ವಿಶಿಷ್ಟ ಲೋಕ

ಡಾ. ಶಂಕರೇಗೌಡ ಎನ್.ಎಸ್.
ಕನ್ನಡ ಸಹ ಪ್ರಾಧ್ಯಾಪಕರು, ನೆಲಮಾಕನಹಳ್ಳಿ, ಮಳವಳ್ಳಿ ತಾಲ್ಲೂಕು
ಮಂಡ್ಯ ಜಿಲ್ಲೆ–571430

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತೇಜಸ್ವಿ ಅವರ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ತೇಜಸ್ವಿ ಸಾಹಿತ್ಯ ನವ್ಯ ಚಳುವಳಿಯ ಪ್ರೇರಣೆಯಿಂದ ರೂಪುಗೊಂಡರೂ, ನಂತರದಲ್ಲಿ ಭಿನ್ನವಾದ ಕಥನ ಮಾರ್ಗವನ್ನು ರೂಢಿಸಿಕೊಂಡದ್ದು ಗಮನಾರ್ಹವಾದುದು. ಹಿಂದಿನ ಸಾಹಿತ್ಯದ ಅರಿವಿರುವುದರಿಂದ ಹೊಸ ಸಂವೇದನೆಗಳ ಮೂಲಕ ಕಲಾತ್ಮಕ ಮಾದರಿಗಳ ಪುನರ್ ಸೃಷ್ಟಿಯಲ್ಲಿ ಯಶಸ್ವಿಯಾಗಿರುವುದು ಶ್ರೀ ಸಾಮಾನ್ಯರನ್ನು ಮುಖಾಮುಖಿಗೊಂಡದ್ದು ಕಥನಕಾರರ ಸೋಪಜ್ಞತೆಗೆ ನಿದರ್ಶನವಾಗಿದೆ. ಪ್ರಧಾನ ಸಂಸ್ಕೃತಿಯ ಪ್ರವಾಹದಲ್ಲಿ ಕಣ್ಮರೆಯಾದ ಸಾಮಾನ್ಯ ಜನರ ಹಲವು ಉಪಸಂಸ್ಕೃತಿಗಳ ಸೃಜನಶೀಲ ಮೌಲ್ಯಗಳನ್ನು ಪ್ರತಿಪಾದಿಸಿರುವುದು ಎದ್ದು ತೋರುತ್ತದೆ. ಸಾಂಸ್ಕೃತಿಕ ಪರಿಸರದ ಮೂಲ ಸೆಲೆಯಿಂದ ಕಾದಂಬರಿಗಳು ರೂಪುಗೊಂಡಿರುವುದರಿಂದ ಮಾನವ ಮತ್ತು ನಿಸರ್ಗದ ನಡುವಿನ ಸಂಬಂಧಗಳು ಸ್ಥಾಯಿಯಾಗಿರದೆ ಜಂಗಮರೂಪಿಯಾಗಿವೆ. ಗ್ರಾಮೀಣ ಪರಿಸರದ ಶ್ರಮ ಸಂಸ್ಕೃತಿಯು ಇಲ್ಲಿ ಅಭಿವ್ಯಕ್ತಗೊಂಡಿರುವುದರಿಂದ, ಅಲ್ಲಿನ ಗಾಳಿಯೊಂದಿಗೆ ಗಾಳಿಯಾಗಿ, ಮಣ್ಣಿನೊಳಗಣ ಕಣವಾಗಿ ಬೆರೆತ ಪರಿಣಾಮದಿಂದ ಕಥಾನಕಗಳ ನಾಡಿಮಿಡಿತ ಹದವತ್ತಾಗಿ ಸಾಗಿದೆ. ತೇಜಸ್ವಿಯವರ ಸಾಹಿತ್ಯಕ ಮತ್ತು ಸಾಮಾಜಿಕ ಕಾಳಜಿಗಳು ಗ್ರಾಮೀಣ ಬದುಕನ್ನು ಶೋಧನೆಗೆ ಗುರಿಪಡಿಸಿರುವುದರಿಂದ ಕಥನದ ಮಾದರಿಗಳು ಬದುಕನ್ನು ಗ್ರಹಿಸಿಕೊಂಡು ಹಲವು ಒತ್ತಡಗಳನ್ನು ದಕ್ಕಿಸಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಕಥೆ, ಕಾದಂಬರಿಗಳಲ್ಲಿ ಅಭಿವ್ಯಕ್ತಗೊಂಡಿರುವ ಶ್ರೀ ಸಾಮಾನ್ಯರ ವಿಶಿಷ್ಟ ಲೋಕವನ್ನು ಶೋಧಿಸುವುದು ಈ ಪ್ರಬಂಧದ ಆಶಯವಾಗಿದೆ.

ರಸಋಷಿ ಕುವೆಂಪು ಅವರು ಸಾಮಾನ್ಯ ವ್ಯಕ್ತಿಗಳಿಗೆ 'ಶ್ರೀ ಸಾಮಾನ್ಯರು' ಎಂಬ ಪರಿಕಲ್ಪನೆ ನೀಡಿ ತಮ್ಮ ಸಾಹಿತ್ಯದಲ್ಲಿ ಬೆವರು ಸಂಸ್ಕೃತಿಯ ಹಲವು ವಿಶಿಷ್ಟ ಪಾತ್ರಗಳನ್ನು ಜೀವಂತಿಕೆಯಿಂದ ಸೃಷ್ಟಿಸಿ ಹೊಸ ಭಾಷ್ಯ ಬರೆದಿದ್ದಾರೆ. ಅದರ ಮುಂದುವರಿದ ಭಾಗವೆಂಬಂತೆ ತೇಜಸ್ವಿಯವರು ಕೃಷಿಕ ಪರಿಸರದೊಡನೆ ಒಂದಾಗಿ ಭಾರತೀಯ ಗ್ರಾಮೀಣ ಸಮಾಜದೊಂದಿಗೆ ಬೆರೆತ ನಂಟಿನ ಪರಿಣಾಮವಾಗಿ, ಶ್ರೀ ಸಾಮಾನ್ಯರ ಬದುಕು ಅವರ ಸಾಹಿತ್ಯದ ಮುಖ್ಯ ವಸ್ತುವಾಯಿತು. ಭಾವುಕತೆಯನ್ನು ಮೀರಿ, ಸಾಮಾಜಿಕ ಸಂಬಂಧಗಳನ್ನು ವಿಶ್ಲೇಷಿಸುವ ಪ್ರಯತ್ನ ಸಾಚಾ ಅನುಭವಗಳ ಸರಳ ಅಭಿವ್ಯಕ್ತಿಗೆ ಕಾರಣವಾಯಿತು. ಲೋಕಾನುಭವದಿಂದ ಉದಿಸಿದ ಸತ್ವಯುತ ಕಾಣ್ಕೆಗಳು ಕಥಾನಕಗಳ ಮೂಲ ದ್ರವ್ಯವಾದ ಪರಿಣಾಮದಿಂದ ತೇಜಸ್ವಿಯವರ ಕಥನಗಳು ಜನ ಸಾಮಾನ್ಯರ ಆಶೋತ್ತರಗಳ ಪ್ರತಿಬಿಂಬಗಳಾಗಿವೆ. ಶುದ್ಧ ಗ್ರಾಮೀಣ ಪರಿಸರದ ದಟ್ಟವಾದ ಅನುಭವಗಳು, ಬೇಸಾಯ ಕ್ಷೇತ್ರದಲ್ಲಿನ ಅನುಭವದ ಮೂಲಕ ಪರಿಸರವನ್ನು

ವಿಸ್ಮಯಪೂರಿತವಾಗಿ ಪರಿಭಾವಿಸಿದ ರೀತಿ, ಧ್ಯಾನಸ್ಥ ಸ್ಥಿತಿಯ ಅಭ್ಯಾಸಕ್ರಮ, ಕುವೆಂಪು ಅವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ, ಲೋಹಿಯಾ ಅವರ ಚಿಂತನೆಗಳು ತೇಜಸ್ವಿ ಕಾದಂಬರಿಗಳ ಭದ್ರ ಬುನಾದಿಯಾಗಿರುವುದು ಮಾತ್ರವಲ್ಲದೆ, ಅವರ ಸಾಹಿತ್ಯ ಬದುಕನ್ನು ರೂಪಿಸಿದ ಶಕ್ತಿಗಳಾಗಿವೆ. ಜನ ಸಾಮಾನ್ಯರ ಭಾಷಿಕ ನುಡಿಗಟ್ಟುಗಳನ್ನು ತಮ್ಮ ಕಥನಲೋಕದಲ್ಲಿ ಬಳಸಿಕೊಂಡಿರುವುದು ಭಾಷಿಕ ವಿರಾಟ್‌ರೂಪವನ್ನು ದರ್ಶಿಸುವುದು ಮಾತ್ರವಲ್ಲದೆ, ಹೊಸ ಹಾದಿಯಲ್ಲಿ ಮುನ್ನಡೆದ ಪ್ರತೀಕವಾಗಿರುವುದು ಗಮನಾರ್ಹವಾದುದು.

'ಸ್ವರೂಪ' ನವ್ಯ ಕಾದಂಬರಿಗಳ ಹಲವು ಲಕ್ಷಣಗಳನ್ನು ಗರ್ಭೀಕರಿಸಿಕೊಂಡು ಬಂದ ಕೃತಿ. ಆತ್ಮಶೋಧ, ಅಂತರಂಗದ ತಾಕಲಾಟ, ಪಾಪಪ್ರಜ್ಞೆಯ ಕಾಡುವಿಕೆ, ಮಾನಸಿಕ ಸಂಘರ್ಷ, ಸ್ವಗತ, ಮನುಷ್ಯನ ಅಸ್ತಿತ್ವದ ನೆಲೆಗಳನ್ನು ಪ್ರಜ್ಞಾಪ್ರವಾಹ ತಂತ್ರದ ಮೂಲಕ ವ್ಯಾಖ್ಯಾನಿಸುವುದು, ಮೌನದ ಒಗಟನ್ನು ಒಡೆಯುವುದು, ಮುಂತಾದ ಲಕ್ಷಣಗಳು ಎದ್ದು ತೋರುತ್ತವೆ. ಗ್ರಾಮೀಣ ಪರಿಸರದಲ್ಲಿ ಶ್ರೀನಿವಾಸ ಮತ್ತು ಹೇಮಂತ, ಶಿಕಾರಿಗಾಗಿ ಕುಳಿತಿರುವ ಸಂದರ್ಭದಲ್ಲಿ ಶ್ರೀನಿವಾಸ ತನ್ನ ಭೂತಕಾಲದ ಕಥೆಯನ್ನು ಬಿಚ್ಚುತ್ತಾನೆ. ಹಲವು ವಿರೋಧಾತ್ಮಕ ತಾತ್ತ್ವಿಕತೆಯನ್ನು ಸಮಾಜದ ಕಟಕಟೆಯಲ್ಲಿ ಮುಖಾಮುಖಿಗೊಳಿಸಿ ಯಾವುದೇ ತೀರ್ಪನ್ನು ನೀಡದೆ ಸಹೃದಯರ ಚಿಂತನೆಗೆ ಆಸ್ಪದ ನೀಡಿರುವುದರಲ್ಲಿ ಸ್ವರೂಪ ಕಾದಂಬರಿಯ ಅನನ್ಯತೆ ಗೋಚರವಾಗುತ್ತದೆ. ಇಲ್ಲಿ ಮೌನ ಮತ್ತು ಶಿಕಾರಿಗೂ ಬಿಡಿಸಲಾಗದ ಸಂಬಂಧವಿದ್ದು, ಒಂದಕ್ಕೊಂದು ವಿರುದ್ಧ ನೆಲೆಯ ಪ್ರತಿಮೆಗಳಾಗಿ ದುಡಿಯುತ್ತವೆ. ಕಾದಂಬರಿಯಲ್ಲಿ ವ್ಯಕ್ತಗೊಂಡಿರುವ ಶಿಕಾರಿಯ ಔಚಿತ್ಯವನ್ನು ಜಿ.ಎಚ್.ನಾಯಕರು ಹೀಗೆ ವ್ಯಾಖ್ಯಾನಿಸುತ್ತಾರೆ. "ಶಿಕಾರಿ ಇದು ಸ್ವರೂಪದಲ್ಲಿ ತಂತ್ರಭಾಗವೂ ಹೌದು; ತತ್ತ್ವ ಭಾಗವೂ ಹೌದು. ಶ್ರೀನಿವಾಸ ಶಿಕಾರಿಗೆ ಸಂಬಂಧಿಸಿದಂತೆ ಹಿಂದಿನ ಎರಡು ಘಟನೆಗಳನ್ನು ಪ್ರಸ್ತಾಪಿಸುತ್ತಾನೆ. 1) ಭಿಲ್ಲರ ತಿಮ್ಮಯ್ಯ ಹಂದಿಯೇ ನುಗ್ಗಿ ಕೊರೆ ನಾಟಿದ್ದರಿಂದ ದೃಷ್ಟಿ ಮಂಜಾಗಿ ಪಡುತ್ತಿರುವ ಪಾಡು. 2) ಹಂದಿಯೆಂದು ಭಾವಿಸಿ ಜೊತೆಯ ಬೇಟೆಗಾರನೊಬ್ಬನನ್ನು ಶ್ರೀನಿವಾಸನೇ ಗುಂಡಿಕ್ಕಿ ಕೊಂದ ಸಂಗತಿ. ಈ ಎರಡೂ ಶಿಕಾರಿಯ ಸಂದರ್ಭಗಳಲ್ಲಿ ಬೇಟೆಗೆ ಗುರಿಯಾದದ್ದು ಪ್ರಾಣಿಯಲ್ಲ; ಮನುಷ್ಯನೇ. ಇದು ಗಮನಿಸಬೇಕಾದ ಅಂಶ."[1] ಸಾಹಿತ್ಯದ ಅಭಿರುಚಿಯುಳ್ಳ ಯುವಕನೊಬ್ಬ ಹಳ್ಳಿಗೆ ಹೋಗಿ ಒಟ್ಟು ಪರಿಸರದ ನಾನಾ ವ್ಯಾಪಾರಗಳಿಗೆ ಪ್ರತಿಕ್ರಿಯೆ ತೋರಿಸುವುದು ಸ್ವರೂಪ ಕಾದಂಬರಿಯ ಅನುಭವ ದ್ರವ್ಯ. ನೂರು ಕ್ರೌರ್ಯಗಳು ಹಲವು ದುರಂತಗಳು ಘಟಿಸಿ ಹೋದರೂ, ಆತ್ಮಹತ್ಯೆಯ ಅಂಚಿನವರೆಗೆ ಸಾಗಿದ್ದ ಶ್ರೀನಿವಾಸ ಬದುಕಿಗೆ ವಿಮುಖವಾಗದೆ ಕ್ರಿಯಾಶೀಲವಾಗುವುದು ಶ್ರೀ ಸಾಮಾನ್ಯರ ಜೀವನೋತ್ಸಾಹವನ್ನು ಸೂಚಿಸುತ್ತದೆ.

ತೇಜಸ್ವಿಯವರ ಪ್ರಕೃತಿ ಲೋಕದಲ್ಲಿ ಹಲವು ಗುಣಗಳ ಸಾಮಾನ್ಯ ಮನುಷ್ಯ ಸಂಬಂಧಗಳು ಎದ್ದು ನಿಲ್ಲುತ್ತವೆ. ಇಂತಹ ಮನುಷ್ಯರುಗಳನ್ನು ನಾಗರೀಕ ಪ್ರಪಂಚ ಕ್ಷುದ್ರ ಜೀವಿಗಳೆಂದು ಭಾವಿಸಿದವರಾಗಿದ್ದಾರೆ. ಆದರೆ ಅವರಿಗೆ ನಿಸರ್ಗದತ್ತವಾಗಿ ಸಿದ್ಧಿಸಿರುವ ವಿಭಿನ್ನ ಕ್ಷೇತ್ರಗಳ ಸೃಜನಾತ್ಮಕ ಜ್ಞಾನ ವಿಜ್ಞಾನಗಳ ಕ್ರಿಯಾಶೀಲತೆಯನ್ನು ಹೆಕ್ಕಿ ತೋರಿಸುವುದರಲ್ಲಿ ತೇಜಸ್ವಿಯವರ ಸಾಹಿತ್ಯದ ಅನುಭವಗಳ ಮಹತ್ತ್ವ ಅರಿವಾಗುತ್ತದೆ. 'ನಿಗೂಢ ಮನುಷ್ಯರು' ಕಾದಂಬರಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳನ್ನು

ಅನ್ವೇಷಿಸುತ್ತಾ, ಉದ್ದಕ್ಕೂ 'ಉಗ್ರಗಿರಿ' ಮನುಷ್ಯ ಪಾತ್ರಗಳೊಡನೆ ಸಾಂಕೇತಿಕ' ಸಂಬಂಧಗಳನ್ನು ಕಲ್ಪಿಸುತ್ತದೆ. ಕಾದಂಬರಿಯ ಕೊನೆಯತನಕ ಪ್ರಕೃತಿಯಲ್ಲಿ ಮಳೆ, ಗಾಳಿ, ಪ್ರವಾಹ, ಭೂಕಂಪಗಳು ವ್ಯಾಪಿಸಿಕೊಳ್ಳುತ್ತವೆ. ಅವಿವಾಹಿತ ಬರೆಹಗಾರನಾದ ಜಗನ್ನಾಥ, ರಂಗಪ್ಪ ಮತ್ತು ಹಲವು ಬಾಳ್ವೆಗಳ ಮೊತ್ತವಾದ ಗೋಪಾಲಯ್ಯ ಈ ಮೂವರಿಗೂ, ಉಗ್ರಗಿರಿಯಾದಿಯಾಗಿ, ಪ್ರಕೃತಿಯ ಚಲನೆಗೂ, ಜೀವನಕ್ಕೂ ಅವಿನಾಭಾವ ಸಂಬಂಧವಿರುತ್ತದೆ. ಇವುಗಳ ಸಂಸರ್ಗದೊಳಗೆ ಶ್ರೀಸಾಮಾನ್ಯರ ವಿಚಾರಗಳು ತರಂಗ ತರಂಗವಾಗಿ ಹಬ್ಬಿಕೊಳ್ಳುತ್ತವೆ.

ಉಗ್ರಗಿರಿ ಗೋಪಾಲಯ್ಯನ ಏಲಕ್ಕಿ ತೋಟ ಮಾತ್ರವಲ್ಲದೆ ಮನುಷ್ಯರನ್ನು ಬಲಿ ತೆಗೆದುಕೊಳ್ಳುತ್ತದೆ. ಪ್ರಕೃತಿಯಲ್ಲಿನ ಪ್ರೀತಿ ಮತ್ತು ಕ್ರೌರ್ಯಗಳನ್ನು ಇದು ಒಟ್ಟಿಗೆ ಧ್ವನಿಸುತ್ತದೆ. ಕುವೆಂಪು ಉನ್ನತ್ತರಂತೆ ಪ್ರಕೃತಿಯ ಸೌಂದರ್ಯವನ್ನು ಚಿತ್ರಿಸಿದರೆ, ತೇಜಸ್ವಿಯವರು ನಿಸರ್ಗದ ರಮಣೀಯತೆಯೊಡನೆ ಕ್ರೌರ್ಯದ ವಿವಿಧ ಆಯಾಮಗಳನ್ನು ಶೋಧಿಸುತ್ತಾರೆ. ಮೌನದ ಮೂರ್ತಿಯಂತಿರುವ 'ಶಾರಿ' ನಿಗೂಢತೆಯ ಹೊಣೆಯನ್ನು ಹೊತ್ತವಳಂತೆ ಕಂಡು ಬರುತ್ತಾಳೆ. ಶಾರಿಯು ಕೂಡಾ ತನ್ನ ಮೌನದಿಂದ ಎಲ್ಲರನ್ನು ಕಾಡತೊಡಗುತ್ತಾಳೆ. "ಮಾನವ ಬದುಕಿಗೆ ಇಷ್ಟು ಸಂಘರ್ಷಮುಖಿಯಾಗಿ ಪ್ರಾಕೃತಿಕ ಅಸ್ತಿತ್ವವು ಸವಾಲೊಡ್ಡುವುದು ಕನ್ನಡದಲ್ಲಿ ಬಹುಶಃ 'ನಿಗೂಢ ಮನುಷ್ಯರು' ಒಂದೇ ಅನಿಸುತ್ತದೆ. ನಿಗೂಢವಾಗುತ್ತಿದ್ದ ಪ್ರಕೃತಿಗೆ ಪ್ರತ್ಯೇಕವಾದ ಒಂದು ವ್ಯಕ್ತಿತ್ವ ದೊರೆತಿರುವುದು ಇಲ್ಲಿಯೇ"[2] ಎನ್ನುವುದಕ್ಕಿಂತ ಕುವೆಂಪು ಪ್ರಕೃತಿಯನ್ನು ಪರಿಭಾವಿಸಿದ ರೀತಿಗಿಂತ, ತೆಜಸ್ವಿಯವರು ಮತ್ತೊಂದು ಪ್ರಜ್ಞೆಯಿಂದ ನಿಸರ್ಗವನ್ನು ದರ್ಶಿಸುತ್ತಾರೆ ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಿಂದ ಇಲ್ಲಿನ ಶ್ರೀಸಾಮಾನ್ಯರು ಹಲವು ಸತ್ಯಗಳ ಸ್ಮಾರಕಗಳಂತೆ ಉಳಿದುಬಿಡುತ್ತಾರೆ.

'ಕಾಡು ಮತ್ತು ಕ್ರೌರ್ಯ' ಕಾದಂಬರಿ 'ಜೂಲ್ಯ' ಎಂಬ ಸಾಮಾನ್ಯ ವ್ಯಕ್ತಿಯನ್ನು ಅಸಾಧಾರಣ ಮರಿವಿಜ್ಞಾನಿ ಎಂದು ಚಿತ್ರಿಸುವುದು ಅಪೂರ್ವವಾಗಿದೆ. "ಜೂಲ್ಯ ಹಳ್ಳಿ ವಿಜ್ಞಾನಿ, ಹಕ್ಕಿ ಹಿಡಿಯಲು ಮಡಿಕೆ ತಂತ್ರ ರೂಪಿಸಿದವನೂ ಅವನೇ."[3] ಎಂಬುದು ಕಳ್ಳಭಟ್ಟಿ ತಯಾರಿಸುವುದು, ಮಡಿಕೆಗೆ ಎರಡು ತೂತು ಮಾಡಿ ತಲೆಗೆ ಕೌಚಿಕೊಂಡು ಕಲ್ಮನೆ ಕೆರೆಯಲ್ಲಿ ಹಕ್ಕಿಗಳನ್ನು ಹಿಡಿಯುವ ಪ್ರಕ್ರಿಯೆ ಜೂಲ್ಯನ ಬುದ್ಧಿವಂತಿಕೆ ಹಾಗೂ ಜ್ಞಾನ ವೈಶಾಲ್ಯವನ್ನು ತೆರೆದಿಡುತ್ತದೆ. ಡೈನಾಮಿಕ್ ಕೇಪಿನಲ್ಲಿ ಕುರಿಯ ಕರುಳುಗಳನ್ನು ಇಟ್ಟು ಕಾಡು ಮೃಗಗಳನ್ನು ಬೇಟೆಯಾಡುವ ಮಾರ್‍ಯನ ಕೌಶಲ್ಯ ಅಪ್ರತಿಮವಾದುದು. ಸಾಮಾನ್ಯರಲ್ಲಿನ ಅಸಮಾನ್ಯ ಜ್ಞಾನ ಕೌಶಲ್ಯಗಳನ್ನು ಗುರುತಿಸುವುದು ಮೂಲ ಆಶಯವಾಗಿದ್ದು, ಇಲ್ಲೆಲ್ಲ ಸಹೃದಯರಿಗೆ ತಿಳಿಯದ ಎಷ್ಟೋ ವಿಷಯಗಳು ಅನಾವರಣಗೊಂಡು ಬೆರಗು ಹುಟ್ಟಿಸುತ್ತವೆ.

ಪ್ರಕೃತಿ ಮತ್ತು ಬದುಕಿನ ಅನಂತ ರೂಪಗಳನ್ನು 'ಕರ್ವಾಲೋ' ಕಾದಂಬರಿಯ ತೆರೆದಿಡುತ್ತದೆ. ಪ್ರಕೃತಿಯ ತೊಟ್ಟಿಲಲ್ಲಿ ಜನ್ಮ ತಾಳಿದ ಹಲವು ಸಾಮಾನ್ಯ ವ್ಯಕ್ತಿತ್ವಗಳು ನಿಸರ್ಗದತ್ತವಾಗಿ ಒಂದೊಂದು ಜ್ಞಾನದ ನೆಲೆಯಲ್ಲಿ ಪರಿಣಿತಿ ಹೊಂದಿರುತ್ತವೆ. ಅವರು ಹೊಂದಿರುವ ಪರಿಜ್ಞಾನದ ಮಹತ್ವ ಅವರಿಗೆ ತಿಳಿದಿರುವುದೇ ಇಲ್ಲ. ಜಗತ್ತನ್ನೇ ಬೆಚ್ಚಿ ಬೀಳಿಸುವ, ವೈಜ್ಞಾನಿಕ ಪ್ರಪಂಚವನ್ನು ಅಲ್ಲೋಲ, ಕಲ್ಲೋಲ ಮಾಡಬಲ್ಲ ಸೃಷ್ಟಿಶೀಲ ಲೋಕದ ಅರಿವು ತನಗಿದೆ ಎಂಬ ತಿಳುವಳಿಕೆ ಲವಲೇಶವು ಇಲ್ಲದ ಮಂದಣ್ಣನಂತಹ

ಗ್ರಾಮೀಣ ಪರಿಸರದ ಪಾತ್ರಗಳ ಹುಡುಕಾಟದಲ್ಲಿ ತೇಜಸ್ವಿಯವರ ಶ್ರೀಸಾಮಾನ್ಯರ ಸಾಹಿತ್ಯದ ತಳಪಾಯದ ಅಡಿಗಲ್ಲುಗಳು ಎದ್ದು ನಿಲ್ಲುತ್ತವೆ. ಹಾಗೆ ನೋಡಿದರೆ ತೇಜಸ್ವಿಯವರ ಕಥೆ, ಕಾದಂಬರಿ, ಪರಿಸರದ ಕಥೆ, ಅಣ್ಣನ ನೆನಪು ಮುಂತಾದ ಸೃಜನಶೀಲ ಕೃತಿಗಳಲ್ಲಿ ಶ್ರೀ ಸಾಮಾನ್ಯರೇ ಮೇಲುಗೈ ಪಡೆದಿದ್ದಾರೆ. ಗ್ರಾಮೀಣ ಸಂಸ್ಕೃತಿಯ ಉಸಿರಿನೊಂದಿಗೆ ಬೆರೆತ ಪರಿಣಾಮದಿಂದ, ತೇಜಸ್ವಿಯವರ ಪಾತ್ರಗಳು ರಕ್ತ ಮಾಂಸದಿಂದ ಕೂಡಿದ ಜೀವಂತ ಸ್ವರೂಪಗಳಾಗಿ ಕಂಗೊಳಿಸುತ್ತವೆ. ಮಂದಣ್ಣ, ಪ್ಯಾರ, ಹಾವುಗೊಲ್ಲರ ಎಂಗ್ಟ, ಬಿರ್ಯಾನಿ ಕರಿಯಪ್ಪ, ನಾರ್ವೆ ರಾಮಯ್ಯ ಮಾತ್ರವಲ್ಲದೆ ಅಮಾನವ ಜೀವಿಯಾದ, ಕಿವಿ, ನಾಯಿಯು ಮುಖ್ಯವಾಗಿ ಬಿಡುತ್ತದೆ. ಇವರನ್ನು ಹೊರತುಪಡಿಸಿದರೆ ಕಾದಂಬರಿಗೆ ಅಸ್ತಿತ್ವ ಇಲ್ಲವೇನೋ ಎಂಬಂತೆ ಒಂದಕ್ಕೊಂದು ಹೆಣೆಗೆ ಹಾಕಿಕೊಂಡಿವೆ. “ಮಂದಣ್ಣನ ನಿರೂಪಣೆ ಆಧರಿಸಿ ಕರ್ವಾಲೋ ಬಿಡಿಸಿದ ಚಿತ್ರ ವಾಸ್ತವತೆಗೆ ಹಿಡಿದ ಕನ್ನಡಿಯಂತಿದೆ. ಈ ಯಶಸ್ಸಿನ ಕೀರ್ತಿ ಕರ್ವಾಲೊರಿಗಿಂತಲೂ ಹೆಚ್ಚಿಗೆ ಮಂದಣ್ಣನಿಗೇ ಸಲ್ಲತಕ್ಕದ್ದು. ಅವನ ವೀಕ್ಷಣಾಸಾಮರ್ಥ್ಯ, ಸ್ಮರಣಶಕ್ತಿ ಮತ್ತು ನಿರೂಪಣೆಯ ಕೌಶಲ ಒಂದೊಂದೂ ಅದ್ವಿತೀಯವಾದದ್ದು, ಶ್ರೇಷ್ಠ ವಿಜ್ಞಾನಿಯ ಮಟ್ಟದ್ದು”[4] ಎಂಬ ಮಾತುಗಳು ಮಂದಣ್ಣನ ಪರಿಪೂರ್ಣ ವ್ಯಕ್ತಿತ್ವ ಹಾಗೂ ಸಾಮಾನ್ಯ ವ್ಯಕ್ತಿಗಳ ಉನ್ನದ ಜ್ಞಾನ ನಿಧಿಗೆ ಸಾಕ್ಷಿಯಾಗುತ್ತವೆ.

ಹಾರುವೆ ಓತಿಯ ಯಾತ್ರೆಯ ಉದ್ದಕ್ಕೂ ಹಲವಾರು ವೈಚಾರಿಕ ಮತ್ತು ಮಾನವೀಯ ದೃಶ್ಯಗಳು ಎದುರಾಗುವುದರಿಂದ ಕಾಡಿನ ಯಾತ್ರೆ ಯಾರಿಗೂ ನಿರಸವಾಗುವುದಿಲ್ಲ. ಕೊನೆಗೂ ಹಾರುವ ಓತಿಯನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಇದರಿಂದ ಯಾತ್ರೆ ನಿಷ್ಫಲಗೊಂಡಿತು ಎನ್ನಲಾಗದು. ಜೀವ ಸೃಷ್ಟಿಯ ರಹಸ್ಯಗಳನ್ನು ಸಂಪೂರ್ಣವಾಗಿ ತಿಳಿಯಲು ಪ್ರಯತ್ನಿಸಿದರೂ, ಮಾನವ ಪ್ರಯತ್ನಕ್ಕೆ ಮೀರಿದ ಅನೇಕಾನೇಕ ಸತ್ಯಗಳನ್ನು ಕಾಲ ತನ್ನ ಗರ್ಭದಲ್ಲಿ ಬಚ್ಚಿಟ್ಟುಕೊಳ್ಳುತ್ತದೆ. ಆದರೆ ಸಾಧನೆಯ ಹಾದಿಯ ಅನುಭವಗಳು ಅಂಧಕಾರವನ್ನು ತೊರೆದು ಜ್ಞಾನದ ದಿಗಂತಗಳನ್ನು ವಿಸ್ತರಿಸುತ್ತವೆ. “ಬದುಕಿನ ನಿಗೂಢತೆಗೆ ಕರ್ವಾಲೊ ಕೇವಲ ಬೆರಗಿನಲ್ಲಿ ಪ್ರತಿಕ್ರಿಯಿಸುವುದಿಲ್ಲ. ನಮ್ಮ ಅರಿವಿಗೆ ಗೋಚರವಾಗದಿರುವ ಸತ್ಯಗಳು ಇವೆ ಎಂಬುದನ್ನು ಅವರು ನಂಬಿದರೂ ಅವುಗಳನ್ನು ಅರಿಯುವುದೇ ಅವರ ಜೀವನದ ಪ್ರಧಾನ ಕಾಳಜಿಯಾಗಿದೆ ಮತ್ತು ಇದು ಒಂದು ಜೀವನ ರೀತಿಯನ್ನೆ ಸಾಂಕೇತಿಸುವಂತಿದೆ”[5] ಎಂಬ ಅಭಿಪ್ರಾಯವನ್ನು ಅಲ್ಲಗಳೆಯಲಾಗದು. ಜೀವ ಸೃಷ್ಟಿ ಮತ್ತು ನಿಸರ್ಗ ಸೃಷ್ಟಿಯ ಅನಂತ ಮುಖಗಳ ಅಧ್ಯಯನ ಮಾನವನಿಗೆ ಇನ್ನೂ ಸಾಧ್ಯವಾಗಿಲ್ಲ ಎಂಬುದನ್ನು ಇದು ಧ್ವನಿಸುತ್ತದೆ. ಇಲ್ಲೆಲ್ಲಾ ಶ್ರೀ ಸಾಮಾನ್ಯ ಮತ್ತು ಪ್ರಕೃತಿಯ ಮುಖಾಮುಖಿ ವಿಶಿಷ್ಟವಾಗಿ ತೆರೆದುಕೊಳ್ಳುತ್ತದೆ.

‘ಚಿದಂಬರ ರಹಸ್ಯ’ ಪ್ರಕೃತಿ ಮತ್ತು ಅಮಾನವೀಯ ಸಮಾಜದ ಸುತ್ತ ಹೆಣೆಯಲ್ಪಟ್ಟ, ಹಲವು ಒಳಬೇಗುದಿಗಳ ಜ್ವಲಂತ ಸಮಸ್ಯೆಗಳನ್ನು ಒಳಗೊಂಡ ಕೃತಿ. ಸೃಷ್ಟಿ ಮತ್ತು ನಾಶವಾಗುತ್ತಿರುವ ಆತ್ಮಗಳ ನಿಗೂಢ ವೈಚಿತ್ರ್ಯಗಳನ್ನು ಬಯಲು ಮಾಡುವುದು ಕಾದಂಬರಿಯ ಅಂತಿಮ ಗುರಿ. ಏಲಕ್ಕಿ ಬೆಳೆಯ ಕುಸಿತಕ್ಕೆ ಕಾರಣ ಶೋಧಿಸಲು ಬಂದ ಅಂಗಾಡಿ ಹಲವು ಜಟಿಲ ವಿಷಯಗಳ ಬೆನ್ನುಹತ್ತಿ ದಾರಿ ತಪ್ಪುತ್ತಾನೆ. ಜೋಗಿಹಾಳರ ಸಾವಿನ ಸುತ್ತ ಹಲವು ಜಟಿಲ ಸಮಸ್ಯೆಗಳು ಹೆಣೆದುಕೊಳ್ಳುತ್ತವೆ.

ಕಾಲೇಜು ಹುಡುಗರು, ರಫಿ ಜಯಂತಿಯರ ಪ್ರೇಮದ ಚಿದಂಬರ ರಹಸ್ಯವನ್ನು ಬಿಡಿಸುತ್ತಾರೆ. ಏಲಕ್ಕಿಗೆ ತಗುಲಿರುವ ರೋಗದ ವೈರಸ್ ಕಂಡು ಹಿಡಿಯಲು ಹೊರಟ ಪಾಟೀಲರು ಹಲವು ಸಿಕ್ಕುಗಳಲ್ಲಿ ಸಿಕ್ಕು ದಾರಿ ತಪ್ಪುತ್ತಾರೆ. ರಾಮಚಂದ್ರ ಮತ್ತು ಆತನ ವಿದ್ಯಾರ್ಥಿಗಳು ದೇಶವನ್ನು ಬದಲಿಸಲು ಸೋಲುತ್ತಾರೆ. ಸಾಮಾನ್ಯರ ದೃಷ್ಟಿಯಲ್ಲಿ ಬದುಕನ್ನು ಸಂಕುಚಿತ ಅಸಂಬದ್ಧ, ಅರ್ಥ ಪರಂಪರೆಗಳಿಂದ ವ್ಯಾಖ್ಯಾನಿಸಲಾಗದು ಎಂಬ ದೃಷ್ಟಿಕೋನ ಕಾದಂಬರಿಯುದ್ದಕ್ಕೂ ಸುಳುಹು ಹಾಕಿದೆ.

ಇಪ್ಪತ್ತನಾಲ್ಕು ಗಂಟೆಗಳ ಒಳಗೆ ನಡೆದು ಹೋಗುವ ವಿದ್ಯಾಮಾನ 'ಜುಗಾರಿ ಕ್ರಾಸ್' ಕಾದಂಬರಿ ಒಳಗೊಂಡಿರುವಂತೆ ಕಂಡರೂ, ಆ ಅವಧಿಯಲ್ಲಿ ಒಂದು ಶತಮಾನದ ಸಾಂಸ್ಕೃತಿಕ ಪರಿಸರದ ಕಥೆಯನ್ನು ಬಿಚ್ಚಿಡುತ್ತದೆ. "ಕಥೆ ಓದುತ್ತಾ ಯಾವುದೋ ಒಂದು ಚಿರಪರಿಚಿತ ವಲಯದಲ್ಲಿರುವಂತೆನಿಸುತ್ತದೆ. ನನ್ನ ಕಥೆ ಅವರ ಹೃದಯದೊಳಗೆ ಹುದುಗಿದ್ದ ಭಾವನೆಗಳನ್ನು, ಅನುಭವಗಳನ್ನು ಜಾಗೃತಗೊಳಿಸುತ್ತದೆ. ಎಂದರೆ ನನ್ನ ಕಥೆಯ ಮುಖಾಂತರ ಓದುಗರು. ಅವರ ಕಥೆಯನ್ನೇ ಓದಿಕೊಂಡಿದ್ದಾರೆ"[6] ಎಂಬ ತೇಜಸ್ವಿಯವರ ಮಾತಿನಲ್ಲಿ 'ಜುಗಾರಿ ಕ್ರಾಸ್' ಕಾದಂಬರಿಯ ಅನುಭವಗಳು ಶ್ರೀ ಸಾಮಾನ್ಯರ ಅನುಭವಗಳಾಗಿ ರೂಪುಗೊಂಡು ಸಹೃದಯರ ಕಣ್ಣ ಮುಂದೆ ದೃಶ್ಯ ರೂಪಕಗಳಂತೆ ವ್ಯಕ್ತವಾಗಲು, ಅಂತಹ ಸಮಾಜದೊಂದಿಗೆ ಬದುಕುತ್ತಿರುವ ಜೀವನ ವಿಧಾನ ಮುಖ್ಯವಾಗುತ್ತದೆ.

ಮಲೆನಾಡಿನ ದಟ್ಟ ಕಾನನದ ನಡುವೆ ಜುಗಾರಿ ಕ್ರಾಸ್ ಮತ್ತು ಅಸುಪಾಸಿನ ಹಳ್ಳಿಗಳು ಕಾಳದಂಧೆಯ ತವರೂರಾಗಿವೆ. ಒಂದು ಕಾಲದಲ್ಲಿ ತಣ್ಣಗಿದ್ದ ವಾತಾವರಣ ಕಾವೇರುತ್ತಿದೆ. ಹಲವು ಆಕಸ್ಮಿಕಗಳೊಡನೆ ಜರುಗುವ ಭೂಗತ ಜಗತ್ತಿನ ಚಟುವಟಿಕೆಗಳು ತಲ್ಲಣಕಾರಿ ಪ್ರಸಂಗಗಳಿಗೆ ಕಾರಣವಾಗಿವೆ. ರಾಜಕೀಯ ಭ್ರಷ್ಟತೆಯೊಡನೆ ಮಟ್ಕಾ, ಜೂಜು, ಲಾಟರಿ, ಗಾಂಜಾ, ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ, ನಿರಂತರವಾಗಿ ನಡೆಯುತ್ತಿದೆ. ಘಟನೆಗಳ ಮಧ್ಯದಲ್ಲಿ ಹಲವು ಭೀಕರ ಪ್ರಸಂಗಗಳು ಜರುಗಿ ಹೋದರೂ ಅವುಗಳಿಗೆ ಯಾರ ಬಳಿಯೂ ಉತ್ತರ ಇಲ್ಲ. ಮೇದರಹಳ್ಳಿಯ ಅವಸಾನ, ದ್ಯಾವಮ್ಮನ ಗಂಡ ನಾಪತ್ತೆಯಾಗುವುದು, ಹೃದಯಹೀನ ಪ್ರಪಂಚದ ಪ್ರತಿನಿಧಿಗಳಾದ ದೌಲತ್‌ರಾಮ್ ಮತ್ತು ಕರುಣಾಕರ ಕುಟ್ಟಿ ಅವರ ಕ್ರೌರ್ಯ, ಶತ್ರುಗಳೊಡನೆ ಸೆಣಸುತ್ತಾ ಕತ್ತಲಲ್ಲಿ ಬಂಧಿಯಾಗಿರುವ ಕುಂಟರಾಮ, ಕೆಂಪು ಕಲ್ಲಿನ ಆಸೆಗಾಗಿ ದೋಣಿಹಳ್ಳದ ಜಾಡು ಹಿಡಿದು ಹುಚ್ಚರಾದ ಜನ, ಕನಸುಗಾರಿಕೆ ಮತ್ತು ಹುಚ್ಚಾಟಗಳ ಅತಿರೇಕದಲ್ಲಿ ವಿಹರಿಸುವ ಸುರೇಶ, ಅಬ್ಬೂಸಾಲಿಯ ದಳ್ಳಾಳಿ ಬುದ್ಧಿ, ತಾನು ಮಾಡುವ ಕ್ರಿಯೆಗಳ ಆದಿ ಅಂತ್ಯ ಗೊತ್ತಿಲ್ಲದಿದ್ದರೂ, ಅಕ್ರಮ ಚಟುವಟಿಕೆಗಳ ನಂಟಿನೊಡನೆ ಬದುಕುವ ಶಾಸ್ತ್ರಿ, ಮನ್ಮಥ ಬೀಡಾ ಸ್ಟಾಲ್‌ನ ಶೇಷಪ್ಪ, ರತ್ನಮೂಲದ ಕೆಂಪು ಹರಳಿನೊಡನೆ ಸಂಬಂಧ ಸಾಧಿಸುವ ಗುರ್ರಾಜ ಪಂಡಿತನ ದ್ವಿಸಂಧಾನ ಕಾವ್ಯ, ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗುವ ರಾಜಪ್ಪ, ಮುಂತಾದ ಘಟನೆಗಳು ಶ್ರೀ ಸಾಮಾನ್ಯರ ಸಹಜ ಸ್ಥಿತಿಯಿಂದ ಪ್ರಕಟಗೊಳುತ್ತವೆ. ಸತ್ಯದ ಬೆನ್ನು ಹತ್ತಿದವರ ಅಂತ್ಯ ಸಾವಿನಲ್ಲಿ ಕೊನೆಯಾಗುವುದು ಆಕಸ್ಮಿಕವೇನಲ್ಲ. ಆದರೆ ಆಕಸ್ಮಿಕವಾಗಿ ಇಂದಹದೊಂದು ಜಾಲದೊಳಕ್ಕೆ ಸಿಲುಕಿ ತಮ್ಮ ಸ್ವಭಾವಸಿದ್ಧ ಸಾಹಸ ಪ್ರವೃತ್ತಿಯಿಂದ ರಹಸ್ಯಗಳ ಬೆನ್ನು ಹತ್ತಿ ಅವುಗಳಿಂದ ಬಿಡಿಸಿಕೊಳ್ಳುವವರು ಸುರೇಶ್ ಮತ್ತು ಗೌರಿ ಮಾತ್ರ. ಇದು ಸಾಮಾನ್ಯ ಜನರ

ಜೀವನೋತ್ಸಾಹ ಮತ್ತು ಸೃಜನಶೀಲತೆಯನ್ನು ಸೂಚಿಸುತ್ತದೆ.

ಸಮಾಜದ ಒಳಗೆ ಸಂಘರ್ಷ ಅನಿವಾರ್ಯ, ಪುನರುಜ್ಜೀವನದ ಸಾಧ್ಯತೆಗಳನ್ನು ಉದ್ದೀಪಿಸುವ ಮೂಲಶಕ್ತಿ ಮತ್ತು ಅಂತಃಪ್ರೇರಣೆಗೂ, ತೇಜಸ್ವಿಯವರ ಕಾದಂಬರಿಗಳಿಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿಗಳ ಆತ್ಮ, ಪರಿಸರ ಎರಡು ವಿನಾಶದ ಅಂಚಿಗೆ ಚಲಿಸುವ ಮಾರ್ಗದ ಅರಿವಿಲ್ಲದೆ ಹೋದರೆ 'ಚಿದಂಬರ ರಹಸ್ಯ'ದ ಪರಿಸರ ಮತ್ತು ಸಾಮಾಜಿಕ ಪತನವನ್ನು, 'ಜುಗಾರಿ ಕ್ರಾಸ್'ನ ಅವಸಾನವನ್ನು ಅರಗಿಸಿಕೊಳ್ಳಲಾಗದು. ಮನುಷ್ಯ ಸಮಾಜ ಬದುಕುತ್ತಿರುವ ಅನುಭವದ ಹಿಂದೆ ಇರುವ ಸಂವೇದನೆಗಳನ್ನು ಸಾಮಾಜಿಕ ಸಂದರ್ಭದ ಅರಿವಿನ ಹಾದಿಯಲ್ಲಿ ವಿಶ್ಲೇಷಿಸಿದಾಗ ಕಾದಂಬರಿ ಹೊರಡಿಸುವ ಧ್ವನಿಗಳ ಅರ್ಥ ಜನಮೂಲವಾಗಿದೆ. "ಜುಗಾರಿ ಕ್ರಾಸ್ ಮೂಲಕ ತೇಜಸ್ವಿ ಒಂದು ಆಧುನಿಕ ಪುರಾಣವನ್ನು ಸೃಷ್ಟಿಸಿದ್ದಾರೆ. ಅದನ್ನೊಂದು ಪುರಾಣವಾಗಿ ಓದಲು ನಮಗೆ ಸಾಧ್ಯವಾದರೆ ಆಗ ತೇಜಸ್ವಿ ಕಥನ ಸಾಧಿಸಿರುವ ಹೊಸ ಸಿದ್ಧಿಯ ಸ್ವರೂಪದ ಪರಿಚಯವಾಗುತ್ತದೆ"[7] ಎಂಬ ಅಭಿಪ್ರಾಯ ಅರ್ಥಪೂರ್ಣವಾದುದು. ಊಹೆ ಮತ್ತು ತರ್ಕಕ್ಕೆ ಮೀರಿದ ಸಂಬಂಧಗಳ ಕುತೂಹಲ ಆಧುನಿಕ ಪ್ರಪಂಚದ ಗರ್ಭದಿಂದ ಉದಿಸಿದ್ದು, ನಾಗರೀಕ ಜಗತ್ತಿನ ಕ್ಷುದ್ರ ಲೋಕದಲ್ಲಿ ಅದಕ್ಕೆ ಎದುರಾಗುವ ಸಾಹಸ ಮನಸ್ಸುಗಳು ಜೀವಂತವಾಗಿವೆ ಎಂಬುದು ಸಮಾಧಾನದ ಸಂಗತಿಯಾಗಿದೆ.

'ಜುಗಾರಿ ಕ್ರಾಸ್', ಸಾಹಿತ್ಯ ಮತ್ತು ಸಹೃದಯ ವರ್ಗಕ್ಕಿರಬೇಕಾದ ಸಾಮಾಜಿಕ ಬದ್ಧತೆಯನ್ನು ಪ್ರತಿಪಾದಿಸುತ್ತದೆ. ಭಾರತೀಯ ಪರಿಸರದ ಕಟುವಾಸ್ತವಗಳ ಬಗ್ಗೆ ಅನುಸಂಧಾನ ಮಾಡುತ್ತಾ, ಹೊಸ ಸಂಬಂಧಗಳನ್ನು ವೃದ್ಧಿಸಲು ಪ್ರಯತ್ನಿಸುತ್ತದೆ. ಸಾಮಾನ್ಯ ಜನರ ವಿಷಾದಕರ ಸತ್ಯಗಳ ಅನ್ವೇಷಣೆಗೆ ಮುಂದಾದಾಗ ಮನುಷ್ಯ ಮತ್ತು ಪರಿಸರ ಪ್ರಜ್ಞೆ ದಟ್ಟವಾದ ವಿಶಿಷ್ಟತೆಗೆ ಒಳಗಾಗುತ್ತದೆ. ಅನುಭವ ಕಥನದ ಸರಳತೆ ಹಾಸ್ಯ ವಿನೋದಗಳಿಂದ ಕೂಡಿದ ಶ್ರೀ ಸಾಮಾನ್ಯರ ಭಾಷಿಕ ಶೈಲಿ, ಓದುಗರನ್ನು ಸೆಳೆದು ನಿಲ್ಲಿಸುವ ಕುತೊಹಲಕಾರಿ ಪ್ರಸಂಗಗಳ ನಿರೂಪಣೆ, ಕಾದಂಬರಿಯ ಕಥನ ಕ್ರಿಯೆಗೆ ಪೂರಕವಾಗಿ ನೆಲೆಗೊಂಡಿವೆ. ನೈತಿಕ ಬದುಕಿನ ಶೋಧ ತೇಜಸ್ವಿಯವರ ಕಾದಂಬರಿಗಳ ಅಂತರಾತ್ಮವಾಗಿದೆ.

ತೇಜಸ್ವಿಯವರ ಕಥನ ಸಾಹಿತ್ಯದಲ್ಲಿ ಶ್ರೀ ಸಾಮಾನ್ಯರ ಭಾವನಾಂಶ ಚಿಂತನಾಂಶಗಳು ಸಹಜವೆಂಬಂತೆ ಮೈದಾಳಿವೆ. ಮಲೆನಾಡಿನ ಪರಿಸರದ ಅಲೆಮಾರಿ ಜನಾಂಗದ ಸ್ಥಿತ್ಯಂತರಗಳು ಪ್ರಧಾನಧಾರೆಯಾಗಿ ಚಿತ್ರಣಗೊಂಡಿವೆ. 'ನಿಗೂಢ ಮನುಷ್ಯರು' ಕಾದಂಬರಿಯಲ್ಲಿ ಆದಿ ಮಾನವರಂತೆ ಕಾಣುವ ಮರಸರ, ಕುಳುಪ ಶ್ರೀ ಸಾಮಾನ್ಯರ ಬದುಕಿನ ಮೂಲ ಸೆಲೆಯಂತಿದ್ದಾರೆ. 'ಕರ್ವಾಲೊ' ಕಾದಂಬರಿಯು ಬಿರಿಯಾನಿ ಕರಿಯಪ್ಪ, ಮಂದಣ್ಣ, ಪ್ಯಾರ ಮುಂತಾದವರ ಬದುಕಿನ ಸಂದಿಗ್ಧತೆಗಳನ್ನು ತೆರೆದಿಟ್ಟರೆ, ಅಲೆಮಾರಿ 'ಗೋಸಾಯಿಗಳ ಜೀವನ ಸಂಸ್ಕೃತಿಯನ್ನು 'ಚಿದಂಬರ ರಹಸ್ಯ' ಅನಾವರಣಗೊಳಿಸುತ್ತದೆ. ಹಕ್ಕಿ–ಪಿಕ್ಕಿ ಜನಾಂಗ ಇವೇ ಮೊದಲಾದ ಜನ ಸಾಮಾನ್ಯರ ಪಾತ್ರಗಳನ್ನು 'ಮಾಯಾಲೋಕ' ಕಾದಂಬರಿ ಅರ್ಥಪೂರ್ಣವಾಗಿ ಚಿತ್ರಿಸಿದರೆ, ಸಮಾಜದ ಮುಖ್ಯವಾಹಿನಿಗೆ ಬಾರದೆ ಕಾಡಿನಲ್ಲೇ ನಿಗೂಢವಾಗಿ ಉಳಿದುಬಿಡುವ ಮಾಸ್ತಿ, ಬೈರನ ಪಾತ್ರಗಳನ್ನು 'ಪರಿಸರದ ಕಥೆ' ಮನ ಮುಟ್ಟುವಂತೆ ಕಟ್ಟಿಕೊಡುತ್ತದೆ. ಕನ್ನಡ ಸಾಹಿತ್ಯ ಲೋಕಕ್ಕೆ ಅಪರಿಚಿತವಾಗಿದ್ದ ಅದೆಷ್ಟೋ ಶ್ರೀ ಸಾಮಾನ್ಯರ

ಸಂವೇದನೆಗಳನ್ನು ಚಿತ್ರಿಸಿರುವುದರಲ್ಲಿ ತೇಜಸ್ವಿಯರ ಕಾದಂಬರಿಗಳ ಲೋಕ ಹೊಸ ಕಾಣ್ಕೆಯನ್ನು ನೀಡುತ್ತದೆ. ಇಲ್ಲಿನ ಪಾತ್ರಗಳು ನಮ್ಮ ಸುತ್ತಮುತ್ತಲಿನ ಪಾತ್ರಗಳೆಂಬಂತೆ ಜೀವಂತವಾಗಿ ಒಡಮೂಡಿವೆ.

ಕೊನೆ ಟಿಪ್ಪಣಿಗಳು

1. ಜಿ.ಹೆಚ್.ನಾಯಕ, ಅನಿವಾರ್ಯ, ಪು. 90
2. ಡಾ. ಎನ್.ಕೆ.ಕೋದಂಡರಾಮ, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಪು. 243.
3. ಕಾಡು ಮತ್ತು ಕ್ರೌರ್ಯ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪು. 112.
4. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕರ್ವಾಲೊ, ಪು. 113.
5. ಟಿ.ಪಿ.ಅಶೋಕ, ತೇಜಸ್ವಿ ಕಥನ, ಪು. 39
6. ಪೂರ್ಣಚಂದ್ರ ತೇಜಸ್ವಿ, ಎಂಟು ಲೋಕ, ಪು. 113
7. ಟಿ.ಪಿ.ಅಶೋಕ, ತೇಜಸ್ವಿ ಕಥನ, ಪು. 95

ಪರಾಮರ್ಶನ ಗ್ರಂಥಗಳು

1. ಅಶೋಕ.ಟಿ.ಪಿ, ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ) 1993
2. ಕೋದಂಡರಾಮ ಎನ್.ಕೆ., ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಮಾಲೆ, ದಾರಿದೀಪ ವಿದ್ಯಾಸಂಸ್ಥೆಯ ಆವರಣ, ಬೋಗಾದಿ, ಮೈಸೂರು–1996
3. ನರೇಂದ್ರದೇರ್ಲ, ಎಂಟುಲೋಕ, ಮಿತ್ರ ಮಾಧ್ಯಮ ಪ್ರಕಾಶನ, ಬಸವೇಶ್ವರ ನಗರ, ಬೆಂಗಳೂರು–2000
4. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ಕಾಡು ಮತ್ತು ಕ್ರೌರ್ಯ, ಪುಸ್ತಕ ಪ್ರಕಾಶನ, ಮೈಸೂರು–2013.
5. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ಕರ್ವಾಲೊ, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, ಇಪ್ಪತ್ತೊಂದನೆಯ ಮುದ್ರಣ, 2003
6. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, ಎಂಟನೆಯ ಮುದ್ರಣ, 2004.
7. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, ಐದನೆಯ ಮುದ್ರಣ, 2008.
8. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ಮಾಯಾಲೋಕ:1, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, 2004
9. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ಸ್ವರೂಪ ನಿಗೂಢ ಮನುಷ್ಯರು, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, 2004.
10. ನಾಯಕ.ಜಿ.ಎಚ್. ಅನಿವಾರ್ಯ, ಅಕ್ಷರ ಪ್ರಕಾಶನ, ಸಾಗರ, 1980.

❖❖❖

ಕುಂಬಾರಕಿಯ ತತ್ತ್ವದಲ್ಲಿ ಶಿಶುನಾಳ ಶರೀಫರ ಚಿಂತನೆ

ಡಾ. ರವಿಶಂಕರ್ ಎ.ಕೆ.
ಸಹಾಯಕ ಪ್ರಾಧ್ಯಾಪಕ, ಕ್ರಿಸ್ತು ಜಯಂತಿ ಕಾಲೇಜು(ಸ್ವಾಯತ್ತ), ಬೆಂಗಳೂರು–560077

ಸಮಾಜವು ಆಧುನಿಕತೆಗೆ ಸದಾ ಕಿಟಕಿಯಾಗಿದೆ. ಈ ಸಂದರ್ಭದಲ್ಲಿ ಕಳೆದ ಬದುಕಿನ ಚರಿತ್ರೆಯ ಮೂಲಕವೇ ಬದಲಾವಣೆಯನ್ನೂ ವಿನ್ಯಾಸಗೊಳಿಸುವ ಹೊಣೆಯು ಮೌಲ್ಯಕ್ಕಿರುತ್ತದೆ. ಈ ಮೌಲ್ಯವು ಎಲ್ಲರಲ್ಲೂ ಕಾಣುವುದಿಲ್ಲ. ಮೌಲ್ಯಹೊಂದಿದವರು ಮಾತ್ರ ಆದರ್ಶವಾಗಿ ಉಳಿಯುತ್ತಾರೆ. ಮೌಲ್ಯವೆಂದರೆ ನುಡಿದಂತೆ ನಡೆಯುವುದು. ಅವರ ನಡತೆಯೇ ಈ ಸಮಾಜಕ್ಕೆ ಮಾದರಿಯಾಗುತ್ತದೆ. ಕರ್ನಾಟಕದ ಕಬೀರನೆಂದು ಕರೆಯಲ್ಪಡುವ ಶಿಶುನಾಳ ಶರೀಫರು ಗುರು ಗೋವಿಂದಭಟ್ಟರ ಜೊತೆಯಲ್ಲಿ ಸಮಾಜಕ್ಕೆ ಮಾದರಿಯಾದವರು. 19ನೇ ಶತಮಾನದ ಅಂದರೆ 1819ರಲ್ಲಿ ಧಾರವಾಡ ಜಿಲ್ಲೆಯ ಶಿಶುವಿನಹಾಳದಲ್ಲಿ ಮುಸಲ್ಮಾನ ಮತದಲ್ಲಿ ಒಬ್ಬ ಸಾಮಾನ್ಯ ಮನುಷ್ಯನು ಜನಿಸಿದನು. ಅಂದು ಭಾರತವು ಬ್ರೀಟಿಷರ ಆಳ್ವಿಕೆ ಹಾಗೂ ಆಧುನಿಕತೆಯ ಪ್ರವೇಶಕ್ಕೆ ಒಳಗಾಗಿದ್ದು ಈ ಸಮಾಜಕ್ಕೆ ಬದಲಾವಣೆಯ ಗಾಳಿಯು ಬೀಸುತ್ತಿತ್ತು. ಇಂತಹ ಬದಲಾವಣೆಗಳಿಗೆ ಭಾರತದ ಹದಿನೆಂಟು ಶತಮಾನಗಳಿಗೂ ಮೀರಿದ ಇತಿಹಾಸ ಚರಿತ್ರೆಯ ಬದುಕನ್ನು ನೆನಪಿಸುವ ಕಾರ್ಯವನ್ನು ಅಂದಿನ ದಾರ್ಶನಿಕರು ಕೈಗೊಂಡಿದ್ದರು. ಅವರನ್ನು ಯೋಗಿಗಳು ಎಂದು ಕರೆಯಲಾಯಿತು. ಶಿಶುನಾಳ ಶರೀಫರು ತತ್ತ್ವಪದಗಳನ್ನು ಜನರ ಹಾಡುಗಳಾಗಿ ನುಡಿದರು. ಅಂತಹ ನಾನೂರಕ್ಕು ಹೆಚ್ಚು ಹಾಡುಗಳು ಜನಪದರಲ್ಲಿ ಉಳಿದುಬಂದವು. ಕೆಲವು ಸಂಗ್ರಹವಾದವು. ನೂರಾರು ಹಾಡುಗಳು ಸಂಗೀತಕ್ಕೆ ಅಳವಡಿಕೆಯಾಗಿ ವಿಶ್ವದಾದ್ಯಂತ ಪಸರಿಸಿದವು. ಜಾತಿ, ಧರ್ಮಗಳನ್ನು ಬದುಕಿನ ಸಂಸ್ಕೃತಿಯಾಗಿ ನಿರ್ವಚಿಸಿದ ತತ್ತ್ವಜ್ಞಾನಿಗಳಿವರು. ಗುಡಿಯ ನೋಡಿರಣ್ಣ, ಕೋಡಗನ ಕೋಳಿ ನುಂಗಿತ್ತಾ, ಬಿದ್ದಿಯಬ್ಬೇ ಮುದುಕಿ, ತರವಲ್ಲ ತಗಿ ನಿನ್ನ ತಂಬೂರಿ, ಮೋಹದ ಹೆಂಡತಿ, ಹಾವು ತುಳಿದೇನೆ ಮಾನಿನಿ, ಗಿರಣಿ ವಿಸ್ತಾರ ನೋಡಮ್ಮ, ಸೂಜಿಯೇ ನೀನು, ಸುಗ್ಗಿಮಾಡೋಣು, ಶೀಗಿಹುಣ್ಣಿವಿ ದಿನ, ಕುರುಬರೋ ನಾವು, ಗುಡುಗುಡಿಯ ಸೇದಿನೋಡೋ, ಸೋರುತಿಹುದು ಮನೆಯ ಮಾಳಿಗಿ, ಕುಂಬಾರಕಿ, ಎಂಥಾ ಮೋಜಿನ ಕುದುರಿ ಇಂತಹ ಯಾವುದೇ ಹಾಡುಗಳು ದೇಸಿ ಪದಗಳಿಂದ, ಅನುಭವಗಳಿಂದ ಲೋಕತತ್ತ್ವವನ್ನು ಕಟ್ಟುತ್ತವೆ.

'ಕುಂಬಾರಕಿ ಈಕಿ ಕುಂಬಾರಕಿ' ಎಂಬ ತತ್ತ್ವಪದವನ್ನು ಈ ಸಮಾಜದ ಬದುಕಿಗಾಗಿ ನಾವು ನಿರ್ಮಿಸಿಕೊಳ್ಳಬೇಕಾದ ವ್ಯಕ್ತಿತ್ವವನ್ನು ಕುರಿತು ಸರಳವಾಗಿ ಹಾಡಾಗಿಸಿ ನುಡಿದಿದ್ದಾರೆ. ಇಂತಹ ತತ್ತ್ವಪದವನ್ನು ಕುಂಬಾರಿಕೆಯ ಹಿನ್ನಲೆಯಲ್ಲಿಯೇ ವಿವರಿಸಿಕೊಳ್ಳುತ್ತಾ, ವ್ಯಕ್ತಿತ್ವ ನಿರ್ಮಾಣದ ಮೌಲ್ಯವಾಗಿ ಅಧ್ಯಯನ ಮಾಡಬಹುದು. ಭೂಮಿ ಎಲ್ಲರಿಗೂ ಆಶ್ರಯ ನೀಡಿರುವ ತಾಯಿ. ಅದರ ಸಕಲ ಚರಾಚರಗಳು ಇಲ್ಲಿನ ಸಂಸ್ಕೃತಿಯ ಪ್ರತೀಕಗಳು. ಈ ಮಣ್ಣನ್ನೇ ನಂಬಿ ಬದುಕುವ ಹಲವು ಬಾಳ್ವೆಗಳು ಸದಾ ಹೊಸತೊಂದು ಪಾಠಗಳನ್ನು ನಿರ್ವಚಿಸುತ್ತಲೇ ಇರುತ್ತವೆ. ಅದೇ ರೀತಿಯಲ್ಲಿ ಕುಂಬಾರ

ಕೆಲಸವು ಒಂದು. ಈ ಕೆಲಸವನ್ನೇ ಶರೀಫರು ಮನುಷ್ಯನ ಬದುಕಿಗೆ ಹೋಲಿಸುತ್ತಾ ಬಾಳ್ವೆಯ ತತ್ತ್ವವಾಗಿಸಿದ್ದಾರೆ.

ವೃತ್ತಿಧರ್ಮವನ್ನೇ ನಂಬಿಕೊಂಡು ಬದುಕುತ್ತಿದ್ದ ಕಾಲದಲ್ಲಿ ಈ ಮೇಲು-ಕೀಳಿಗಿಂತ ಮನುಷ್ಯ ಹಾಗೂ ಆತನ ವೃತ್ತಿ ಮುಖ್ಯವಾಗಿದ್ದವು. ಪ್ರತಿ ವೃತ್ತಿಯೂ ಸೃಷ್ಟಿಯ ಮೂಲವನ್ನು ಹೇಳುತ್ತಿತ್ತು. ಚಮ್ಮಾರನು ವಿಶ್ವಕ್ಕೆ ರಕ್ಷಣೆ ನಾನು ಚಪ್ಪಲಿ ಹೊಲಿಯುವೆ ಎನ್ನುತ್ತಾ ತೃಪ್ತಗೊಂಡರೆ, ಕಮ್ಮಾರನು ಲೋಕಕೆ ಶಕ್ತಿಯಾದ, ಅಗಸನು ಲೋಕದ ಕೊಳೆಯನ್ನು ತೆಗೆದರೆ, ಬ್ರಾಹ್ಮಣನು ಲೋಕವನ್ನೇ ಪೂಜಿಸಿದ. ಕುಂಬಾರನು ಕೂಡ ಒಂದು ಮಡಕೆಯನ್ನು ಸೃಷ್ಟಿಸುವಾಗ ಈ ಲೋಕದ ಕಾಳಜಿಯನ್ನು ಹೊಂದಿದ್ದನು. ಎಲ್ಲರದೂ ಒಂದಲ್ಲ ಒಂದು ರೀತಿಯಲ್ಲಿ ಲೋಕದ ಕಾಳಜಿಯೇ ಆಗಿದೆ. ಬಸವಣ್ಣನವರ ಒಂದು ಅರ್ಥಪೂರ್ಣ ವಚನವನ್ನು ನಿರೂಪಿಸಬಹುದು. ಕುಂಬಾರನ ಕಾರ್ಯವನ್ನು ಒಂದು ಸೃಷ್ಟಿಯ ಕಾರ್ಯದಂತೆ ನಿರೂಪಿಸಿದ್ದಾರೆ.

ನಿನ್ನಾಳಿ ಕುಂಬಾರನ ಕೆಲಸದೋಪಾದೆ
ಉದಕ ಶೈತ್ಯವನೆ ಕೊಟ್ಟು,
ನೂಲೆಳೆಯಲಿಗೋಣ ಕೊಯ್ದು,
ವಾಯುವಿನ ಶೈತ್ಯದಲಿ ಆರಿಸಿ,
ಅಗ್ನಿ ಮುಖದಲ್ಲಿ ಬೇರೆ ಬಾಂದವೆಂದನಿಸಿದಂತೆ
ಕೂಡಲ ಸಂಗಮದೇವ॥

ಬಸವಣ್ಣನವರ ವಚನದ ಪ್ರಕಾರ ಇಷ್ಟು ಪ್ರಬುದ್ಧವಾದ ಈ ಕುಂಬಾರಿಕೆಯು ಮನುಷ್ಯನ ಬದುಕಿನ ತತ್ತ್ವಪದಗಳ ಕಡೆ ಬೆಸೆದಿರುವ ವಿಸ್ತಾರವು ಅಗ್ರಮಾನ್ಯವೇ ಆಗಿದೆ.

ಕುಂಬಾರಕಿ ಈಕಿ ಕುಂಬಾರಕಿ ಈ
ಬ್ರಹಾಂಡವೆಲ್ಲ ತುಂಬಿಕೊಂಡಿರುವ ॥ಪ॥

ಶಿಶುನಾಳ ಶರೀಫರು ತತ್ತ್ವಪದಗಳನ್ನು ಬರೆದ ಪರಂಪರೆಯು ಇಂದಿಗೂ ಉತ್ತರ ಕರ್ನಾಟಕದ ಸಾಹಿತ್ಯ ಸಂಸ್ಕೃತಿಯಲ್ಲಿ ಎದ್ದುಕಾಣುತ್ತದೆ. ತತ್ತ್ವದೊಳಗಣ ಬದುಕು ಬಹಳ ದೊಡ್ಡದು. ಹರ-ಹರಿಯ ಮೀರಿ ಇರುವು ಕಾಣಬಹುದು. ಅಂತಹ ಇರುವಿಗಾಗಿ ನಾವು ನಿತ್ಯ ಹೋರಾಡಬೇಕಿದೆ. ಕುಂಬಾರ ಮಾಡುವ ಗಡಗಿ ಎಷ್ಟು ಸೂಕ್ಷ್ಮವೋ ಅದರ ಮೌಲ್ಯವೂ ಅಷ್ಟೇ ಅರ್ಥಪೂರ್ಣ. ಅದನ್ನು ತಯಾರಿಸುವುದು ಬಹಳ ಕಷ್ಟ ಹಾಗೂ ಕುಶಲಕಲೆ. ಈ ಬದುಕು ಕೂಡ ಅದೇ ಮಾದರಿಯಲ್ಲಿದೆ. ಇಡೀ ಬ್ರಹಾಂಡವನ್ನೇ ತುಂಬಿಕೊಂಡು ರಚನೆಗೊಂಡಿದೆ. ಜೀವವನ್ನು ಸೃಷ್ಟಿಸುವವಳು ಹೆಣ್ಣು. ಶರೀಫರು ಈ ಕಾರಣದಿಂದಲೇ ಕುಂಬಾರಕಿ ಎಂದಿದ್ದಾರೆ. ಒಂದು ಹೆಣ್ಣು ತನ್ನ ಜ್ಞಾನವನ್ನೆಲ್ಲಾ ಬಳಸಿ, ಇಲ್ಲಿ ಒಂದು ಗಡಗಿಯನ್ನು ತಯಾರಿಸುತ್ತಿದ್ದಾಳೆ. ಆ ಗಡಗಿ ನಮ್ಮ ಬದುಕೇ ಆಗಿದೆ. ಅದನ್ನು ತಿಳಿಯುವುದು ನಮ್ಮ ಕರ್ತವ್ಯ. ಇಲ್ಲದಿದ್ದರೆ ಇವರದೇ ನುಡಿಯಲ್ಲಿ ಹೆಡ್ಡ, ಮೂಢಾತ್ಮರಾಗುತ್ತೇವೆ.

ಚಿನ್ನ ಎಂಬುವ ಮಣ್ಣನು ತರಸಿ
ತನು ಎಂಬುವ ನೀರನು ಹಣಿಸಿ
ಮನ ಎಂಬುವ ಹುದಲನು ಕಲಸಿ
ಗುಣ ಎಂಬುವ ಸೂಸನು ಹಾಕಿ ॥1॥

ಒಂದು ವ್ಯಕ್ತಿತ್ವವು ಹೇಗೆ ರೂಪಿತವಾಗುತ್ತದೆ ಎಂಬುದಕ್ಕೆ ಈ ಸಾಲುಗಳು ಕನ್ನಡಿ ಹಿಡಿದಿವೆ. ಮಣ್ಣನ್ನು ಸಂಪತ್ತಿಗೆ ಹೋಲಿಸಲಾಗಿದೆ. ಎಲ್ಲದನ್ನೂ ಸೃಷ್ಟಿಸುವ ಕಾರಣ ಇದನ್ನು ಚಿನ್ನ ಎನ್ನುತ್ತಾರೆ. ಸಾಮಾನ್ಯವಾಗಿ ಮಡಕೆ ಮಾಡಲು ಮಣ್ಣು ಬೇಕು. ಆ ಮಣ್ಣು ಚಿನ್ನದಂತೆ ಅಂದರೆ ನಾವು ಕಲಿಯುವ ಜ್ಞಾನಕ್ಕೆ ಹೋಲಿಸಲಾಗಿದೆ. ಬಸವಣ್ಣನವರು ಮಡಕೆ ಮಾಡುವಡೆ ಮಣ್ಣೆ ಮೊದಲು ಎಂದಿದ್ದಾರೆ. ಈ ಮಣ್ಣನ್ನು ನೀರಿನಲ್ಲಿ ಹದವಾಗಿ ಕಲಸಬೇಕು. ಆ ನೀರು ಯಾವುದು ಎಂದರೆ ತನುವೆಂಬ ನೀರು. ಈ ದೇಹವನ್ನು ಸರಿಯಾಗಿ ಬಳಸಿದರೆ ಅರ್ಥಪೂರ್ಣ ಕಾರ್ಯಗಳು ನಡೆಯುತ್ತವೆ. ಈ ಮಣ್ಣನ್ನು ಕಲಸುವಾಗ ಅಂದರೆ ಈ ಜ್ಞಾನವನ್ನು ಹದವಾಗಿಸುವಾಗ ಉಂಟಾಗುವ ಗೊಂದಲಗಳನ್ನು ಅತ್ಯಂತ ಸೂಕ್ಷ್ಮವಾಗಿ ಬಿಡಿಸಬೇಕು. ಅಲ್ಲಿ ನಯ, ಸೂಕ್ಷ್ಮತೆ, ಕೌಶಲ ಎಲ್ಲವೂ ಮುಖ್ಯ. ಅದನ್ನು ಈ ರೀತಿಯಲ್ಲಿ ತಿಳಿಸಿದ್ದಾರೆ. ಮಣ್ಣನ್ನು ಹದವಾಗಿ ಕಲಸುವಾಗ ಯಾವುದೇ ಹುದುಲ (ಗೋಜಲು, ಕೆಸರು, ಗೊಂದಲ)ಗಳಿದ್ದರೂ ಸರಿಯಾಗಿ ನುಣುಪಾಗಿ ಕಲಸಬೇಕು ಅದಕ್ಕೆ ಗುಣವೆಂಬ ಸೂಸನು ಹಾಕಬೇಕು ಎಂದಿದ್ದಾರೆ. ಇದು ವರ್ತಮಾನದ ಚಿಂತನೆಗಳಿಗೂ ತುಂಬಾ ಅನ್ವಯವಾಗುತ್ತದೆ. ನಮ್ಮ ವ್ಯಕ್ತಿತ್ವ ಪ್ರಕಟಿಸುವಾಗ ನಮ್ಮ ಗುಣವನ್ನು ಅಗತ್ಯಕ್ಕೆ ಅನುಗುಣವಾಗಿ ಬಳಸಬೇಕಿದೆ. ಇದೇ ವಿಚಾರವನ್ನು ಗಡಗಿ ಮಾಡುವಾಗ ಅಗತ್ಯಕ್ಕೆ ಅನುಗುಣವಾಗಿ ನೀರು ಚಿಮುಕಿಸುತ್ತಾ ಹದವನ್ನು ತಂದುಕೊಳ್ಳುವಂತೆ ನಾವು ಗುಣ ಪ್ರಯೋಗ ಮಾಡಬೇಕಿದೆ.

ಭಕ್ತಿ ಎಂಬುವ ತಿಗರಿಯ ಮಾಡಿ
ಧ್ಯಾನ ಎಂಬುವ ಬಡಗಿಯ ಊರಿ
ಮುನ್ನೂರರವತ್ತ ಸುತ್ತನು ತಿರಗಿ
ಗಡಗಿ ತಯಾರು ಮಾಡುವಾಕಿ ॥2॥

ಹದವಾಗಿ ಕಲಸಿದ ಮಣ್ಣಿನಲ್ಲಿ ನಾವು ಏನಾದರೂ ಮಾಡಬಹುದು. ಆದರೆ ಅದು ಉಪಯೋಗವಾಗುವಂತಿರಬೇಕು. ಬದುಕಿಗೆ ಅನ್ನ ಮುಖ್ಯ. ಅದನ್ನು ಬೇಯಿಸಲು ಒಂದು ಪಾತ್ರೆ ಅಗತ್ಯವಿದೆ. ಶತಮಾನಗಳ ಹಿಂದೆ ಮಣ್ಣಿನ ಗಡಿಗಿಗಳನ್ನೆ ವಿವಿಧ ಆಕಾರಗಳಲ್ಲಿ ತಯಾರಿಸಿ ಬಳಸುತ್ತಿದ್ದರು. ಬಳಸುವಾಗ ಬಹಳ ಎಚ್ಚರ ಹಾಗೂ ಕೋಮಲ ಸ್ವಭಾವ ಇರಬೇಕಿತ್ತು. ಶರೀಫರು ಈ ಕಾರಣದಿಂದಲೇ ವ್ಯಕ್ತಿತ್ವವನ್ನು ಈ ಗಡಗಿಗೆ ಹೋಲಿಸಿದ್ದಾರೆ. ಈ ಗಡಗಿ ಮಾಡಲು ಈಗ ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತಿ ಎಂಬ ತಿಗರಿಯ ಅಗತ್ಯವಿದೆ. ತಿಗರಿ ಎಂದರೆ ಕುಂಬಾರನ ಚಕ್ರ, ಇದನ್ನು ಕುಲಾಲ ಚಕ್ರ ಎಂದು ಕೂಡ ಕರೆಯುವರು. ಈ ಚಕ್ರದಲ್ಲಿ ನಮ್ಮ ಬದುಕೇ ನಿಂತಿದೆ. ಅದು ತಿರುಗಿದಂತೆ ನಮ್ಮ ಬದುಕು ರೂಪುಗೊಳ್ಳುತ್ತದೆ. ಇದನ್ನು ಕಾಲಕ್ಕೆ ಹೋಲಿಸಲಾಗಿದೆ. ನಾವು ಕಾಲಕ್ಕೆ ತಕ್ಕಂತೆ ವಿವಿಧ ವೇಷ, ಭಾಷೆಗಳ ಧರಿಸಿ ಸಮಾಜಕ್ಕೆ ಉಪಯೋಗವಾಗುತ್ತೇವೆ. ಅದನ್ನು ತಿರುಗಿಸುವಾಗ ಧ್ಯಾನದಲ್ಲಿ ಮನಸ್ಸು ಹಾಗೂ ಆಸಕ್ತಿಯ ಶ್ರದ್ಧೆ ಯಾವ ಪ್ರಮಾಣದಲ್ಲಿರುತ್ತದೆಯೋ ಅದೇ ಮಾದರಿಯಲ್ಲಿ ಕುಶಲ ಕಲೆಯನ್ನು ಅದರ ಮೇಲೆ ಪ್ರಯೋಗಿಸಿ, ಮುನ್ನೂರರವತ್ತ ಸುತ್ತನು ತಿರಗಿ ಎನ್ನುತ್ತಿದ್ದಾರೆ ಶರೀಫರು. ಅಂದರೆ ಒಂದು ವರ್ಷದ ಕಾಲವನ್ನೇ ಇಲ್ಲಿ ಸ್ಪಷ್ಟವಾಗಿ ದಾಖಲಿಸಿದ್ದಾರೆ. ಅಂದರೆ ಈ ಬದುಕು ಒಂದು ಸುತ್ತು ತಿರುಗುವ ಕಾಲವನ್ನೇ ಇಲ್ಲಿ ಹೇಳಲಾಗಿದೆ. ಭಕ್ತಿಯ ಚಕ್ರದಲ್ಲಿ ಧ್ಯಾನದ ಕುಶಲತೆ ಮೂಲಕ ಒಂದು ಗಡಗಿ ತಯಾರಿಸಿದಂತೆ ನಾವು ಬದುಕಬೇಕಿದೆ. ಆ

ಬದುಕಿನ ಎಚ್ಚರ ಹಾಗೂ ಮೌಲ್ಯಗಳನ್ನು ಮುಂದಿನ ತತ್ತ್ವಗಳಲ್ಲಿ ದಾಖಲಿಸಿದ್ದಾರೆ.

ಆಚಾರ ಎಂಬುವ ಆವಿಗೆ ಮುಚ್ಚಿ
ಅರಿವು ಎಂಬುವ ಬೆಂಕಿಯ ಹಚ್ಚಿ
ಸಾವಿರ ಕೊಡಗಳ ಸುಟ್ಟು ಇಂದು
ಸಂತಿಗೆ ಒಯ್ದು ಮಾರುವಾಕಿ ॥3॥

ಸದ್ಗುಣಗಳು ಈ ಸಮಾಜದ ನಿರೀಕ್ಷೆ. ಇದರಿಂದ ಸರ್ವರಿಗೂ ಒಳಿತಾಗುತ್ತದೆ. ಎಲ್ಲಾ ಆದರ್ಶಗಳು, ಕಾನೂನುಗಳು ಕೂಡ ಈ ಕುರಿತೇ ನಿರೂಪಿತವಾಗಿವೆ. ವ್ಯಕ್ತಿತ್ವ ಎನ್ನುವುದು ಹಲವು ಅನುಭವಗಳ ನಿರೂಪಿತ ಹದವಾದ ಸ್ವರೂಪ. ಅದು ಕಲಿಕೆಗಳಿಂದ ಸ್ವಯಂ ಸೃಜನಗೊಳ್ಳಬೇಕು. ಅಂತಹ ಗುಣವನ್ನು ಶರೀಫರು ಗಡಗಿಯನ್ನು ಹದವಾಗಿ ಬೇಯಿಸುವಂತೆ ಬೇಯಿಸಿ ನಿರ್ಮಿಸಬೇಕು ಎಂದು ತಿಳಿಸಿದ್ದಾರೆ. ಆಚಾರ ಎಂಬುವ ಆವಿಗೆ ಮುಚ್ಚುವುದು ಎಂದರೆ ವಿಸ್ತಾರವಾದ ಅರ್ಥವಿದೆ. ಆವಿಗೆ ಎಂದರೆ ಗಡಗಿಗಳನ್ನು ಬೇಯಿಸಲು ಬಳಸುವ ಒಲೆ. ಆ ಒಲೆಯ ಮೇಲೆ ಗಡಗಿಗಳನ್ನು ಸುಡುವುದು ಒಂದು ಕ್ರಮ. ಈ ಆವಿಗೆಗೆ ಮೂರು ಬಾಯಿಗಳಿರುತ್ತವೆ. ಇದರ ಮೇಲೆ ವಿವಿಧ ಆಕಾರದ ಗಡಗಿಗಳನ್ನು ಜೋಡಿಸುವ ವಿಶೇಷ ಕ್ರಮವಿದೆ. ಇದನ್ನು ಆವಿಗೆ ಕಟ್ಟುವುದು ಎನ್ನುವರು. ಇದು ಬಹಳ ಅನುಭವದಿಂದ ಕ್ರಮವಾಗಿ ಮಾಡುವ ಕೆಲಸ. ಶರೀಫರು ಇದನ್ನೇ ಆಚಾರವೆಂದು ಕರೆದಿದ್ದಾರೆ. ಇಂತಹ ಪರಿಪೂರ್ಣದ ಆಚಾರದ ಆವಿಗೆಯನ್ನು ಮುಚ್ಚಿ ಇದಕ್ಕೆ ಅರಿವು(ಜ್ಞಾನ) ಎಂಬ ಬೆಂಕಿಯನ್ನು ಹಚ್ಚಬೇಕು. ಬೆಂಕಿ ಸುಡುತ್ತದೆ. ಬೇಯಿಸುತ್ತದೆ. ಪರಿಪೂರ್ಣಗೊಳಿಸುತ್ತದೆ. ಆದರೆ ಅದು ಅತಿಯಾದರೆ ನಾಶವನ್ನೂ ಮಾಡುತ್ತದೆ. ಅದರ ಹಿತಮಿತದ ಜ್ಞಾನ ನಮಗಿರಬೇಕು. ಈ ಬದುಕು ಈ ರೀತಿಯ ಸಾವಿರಾರು ಕೊಡಗಳ ಸುಟ್ಟು ನಿರ್ಮಿಸಿದ್ದಾಗಿದೆ. ಈ ಆವಿಗೆಯ ವಿಚಾರವನ್ನು ವಚನಕಾರ್ತಿ ಅಕ್ಕಮಹಾದೇವಿ ಆವಿಗೆಯ ಕಿಚ್ಚಿನಂತೆ ಸುಳಿ ಸುಳಿದು ಬೆಂದೆ ಎಂದಿದ್ದಾರೆ. ಜ್ಞಾನದ ಪರಿಪಕ್ವತೆಯನ್ನು ಸ್ಪಷ್ಟಪಡಿಸಿದ್ದಾರೆ. ಭೀಮಕವಿಯು ಆವಗೆಯೊಳಗೆ ತಂಪುಗಳುಂಟೆ ಎನ್ನುತ್ತಾನೆ. ಮಹಾಲಿಂಗರಂಗ ಕವಿಯು ಆವಿಗೆಯ ಬಲು ಗಿಚ್ಚಿನುರಿಯೊಳು ಬೇವ ಮಡಕೆಗಳಂತೆ ಎಂದಿದ್ದಾನೆ. ಇಂತಹ ಪರಿಪಕ್ವ ಜ್ಞಾನವನ್ನು ಈ ಬದುಕಿನಲ್ಲಿ ಕಲಿತು ಸಮಾಜವೆಂಬ ಸಂತೆಯಲ್ಲಿ ನಿತ್ಯವೂ ಮಾರುತ್ತೇವೆ. ಇಂತಹ ಜ್ಞಾನವನ್ನು ಸೃಷ್ಟಿಮಾಡುವ ಕುಂಬಾರಕಿಯನ್ನು ಶರೀಫರು ಕೆಲವೇ ಪದದಲ್ಲಿ ದಾಖಲಿಸಿದ್ದಾರೆ.

ಮೂರು ಕಾಸಿಗೊಂದು ಕುಡಕಿಯ ಮಾರಿ
ಆರು ಕಾಸಿಗೊಂದು ಗಡಗಿಯ ಮಾರಿ
ವಸುಧೆಯೊಳು ಶಿಶುನಾಳಧೀಶನ ಮುಂದೆ
ಧ್ಯಾನದ ಮಗಿಯೊಂದು ಇಡುವಾಕಿ ॥4॥

ಕುಡಕಿ, ಗಡಗಿ, ಮಗಿ ಇವು ವಿವಿಧ ಆಕಾರದ ಮಡಕೆಗಳು(ಗಡಗಿಗಳು)

ಕುಡಕಿ : ಚಿಕ್ಕ ಮಣ್ಣಿನ ಮಡಿಕೆ, ಪಲ್ಯ, ಸ್ವಲ್ಪ ಅನ್ನ, ಸಾರು, ಹಾಲು, ಮೊಸರು, ತುಪ್ಪ ಮೊದಲಾದವನ್ನು ಬೇಯಿಸಲು ಕಾಯಿಸಲು ಬಳಸುವ ಮಣ್ಣಿನ ಚಿಕ್ಕ ಪಾತ್ರೆ. ಮಡಿಕೆ–ಕುಡಿಕೆ ಜೋಡಿಪದ.

ಕುಡಕಿ ಕುರಿತು ಕೆಲವು ಗಾದೆಗಳಿವೆ :

ಕೂತು ಉಂಡರೆ ಕುಡಕಿ ಹೊನ್ನು ಸಾಲದು.

ಮಡಕೆ ಲಾಭ ಕುಡಿಕೇಲೆ ಹೋಯ್ತು.

ಮಾತಿನಲ್ಲಿ ಆಗದವನ ಮನದಲ್ಲಿ ತೂತಿನ ಕುಡಿಕೆಯ ಆಶೆ (ನಗೆ ಮಾರಿತಂದೆ)

ಗಡಗಿ : ಇದನ್ನು ಮಡಿಕೆ, ಮಡಕೆ, ಗಡುಗೆ ಈ ರೀತಿಯಲ್ಲೆಲ್ಲಾ ಕರೆಯುವರು. ಮಡಕೆ ಗಡುಗೆ, ಸ್ವಾರೆ, ಭಾಂಡಿ, ಮಣ್ಣಿನ ಪಾತ್ರೆ ಇವೆಲ್ಲವನ್ನೂ ಗಡಿಗೆ ಅಥವಾ ಗಡಗಿ ಎಂದು ಕರೆಯುವರು. ಸ್ವಲ್ಪ ದೊಡ್ಡ ಆಕಾರ ಹೊಂದಿರುವ ಈ ಮಣ್ಣಿನ ಪಾತ್ರೆಗಳನ್ನು ನೀರು ಸಂಗ್ರಹಿಸಲು, ಅಡುಗೆ ಮಾಡಲು, ಧಾನ್ಯಗಳನ್ನು ಸಂಗ್ರಹಿಸಲು ಬಳಸುತ್ತಿದ್ದರು. ವಿವಿಧ ಆಕಾರದಲ್ಲಿ ಇವುಗಳನ್ನು ವಿನ್ಯಾಸಗೊಳಿಸುವ ಮೂಲಕ ಮನೆಯ ಶೃಂಗಾರವನ್ನು ಈ ಮೂಲಕವೂ ಸ್ವರೂಪಗೊಳಿಸುತ್ತಿದ್ದರು.

ಈ ಗಡಗಿ ಪದವನ್ನು ಮೋಳಿಗೆ ಮಾರಯ್ಯನ ವಚನದಲ್ಲಿ ತುಪ್ಪದ ಗಡಿಗೆಯಂತೆ ಇದು ಹಸನಲ್ಲ ಎಂದು ಬಳಸಿದರೆ, ವಚನಕಾರ್ತಿ ರೇವಮ್ಮ ಅವರು ಗಡಿಗೆಯ ತುಪ್ಪ ಹೆಡಿಗೆಯ ಮೃಷ್ಠಾನ್ನ ತುಡುಗಣಿಯಂತೆ ತಿಂಬವಂಗೆ ಮತ್ತೊಡೆಯರ ಕಟ್ಟಳೆಯೆ ಎಂಬುದಾಗಿ ತಮ್ಮ ವಚನಗಳಲ್ಲಿ ಬಳಸಿದ್ದಾರೆ. ಎಸ್.ವಿ ಪರಮೇಶ್ವರ ಭಟ್ಟರು ಗಡಿಗೆಯೊಳು ಕಡಲುದಕವ ಮೊಗೆ ಮೊಗೆದು ತಹೆನೆಂಬ ಸಾಹಸಿ ಕಡಲ ಕಂಡವನಲ್ಲ ಎಂದಿದ್ದಾರೆ. ಕುರುಡಿ ಮದುವೆ ಆದರೆ ಮನೆ ಗಡಿಗೆಗೆ ಮೂಲ, ಅತ್ತೆ ಒಡೆದ ಗಡಿಗೆಗೆ ಬೆಲೆ ಇಲ್ಲ, ಗಂಡಾಗುಂಡಿ ಮಾಡಿ ಗಡ್ಡಿ(ಗಡಿಗೆ) ತುಪ್ಪ ನುಂಗಿದಾಂಗ ಎಂಬ ಗಾದೆಗಳು ನಮ್ಮ ಜನಪದರಲ್ಲಿ ಬಳಕೆಯಲ್ಲಿದ್ದವು. ಗಡಿಗೆ ಕುರಿತು ಕತ್ಲದಾಗ ಕರಿಯಪ್ಪಕುಂತಾನ ಎಂಬ ಒಗಟು ಕೂಡ ಬಳಕೆಯಲ್ಲಿದೆ.

ಮಗಿ–ಮಣ್ಣಿನ ತಂಬಿಗೆ, ಚೆಂಬು, ನೀರು ತುಂಬಲು ಬಳಸುವ ಮಣ್ಣಿನ ಚಿಕ್ಕಪಾತ್ರೆ.

“ಗಡಿಗೆ ಹೋಗಿದ್ದಕ್ಕೆ ಮಗಿ ಕೊಟ್ಟು ಶಾಸ್ತ್ರ ಕೇಳಿದರಂತೆ” “ಮಗೆ ಮಾಡದ ಕುಂಬಾರ ಗುಡಾಣ ಮಾಡ್ಯಾನೇನು” ಎಂಬ ಗಾದೆಗಳು ನಮ್ಮ ಜನಪದರಲ್ಲಿ ಬಳಕೆಯಲ್ಲಿದ್ದವು.

ಈಗ ಶರೀಫರ ತತ್ತ್ವಪದವನ್ನು ಗಮನಿಸೋಣ. ಮೂರು ಕಾಸಿಗೊಂದು ಕುಡಿಕೆಯ ಮಾರಿ ಎನ್ನುವಾಗ, ಈ ಮೂರು ಕಾಸು ಎಂದರೆ ಕಡಿಮೆ ಹಣ ಎಂದು ತಿಳಿಯಬಹುದು. ಆದರೆ ಆ ಮೂರು ಕಾಸು ಕುರಿತು ಇಲ್ಲಿ ಹೇಳುತ್ತಿಲ್ಲ. ಮೂರು ಕಾಸು ಎಂದರೆ ಮೂರು ಗುಣಗಳು ಸತ್, ರಜಸ್ಸು, ತಮಸ್ಸು ಕುರಿತು ಹೇಳುತ್ತಿದ್ದಾರೆ. ಹಾಗೆ ಕೆಲವರು ಬೇರೆ ಬೇರೆ ಗುಣಗಳನ್ನು ಹೇಳಿದ್ದಾರೆ. ಎಲ್ಲವೂ ಸಮಾನ ಅರ್ಥಗಳೇ ಆಗಿವೆ. ವ್ಯಕ್ತಿತ್ವವೆಂಬ ಕುಡಿಕೆಯನ್ನು ಈ ಮೂರುಗುಣಗಳ ಅಳವಡಿಕೆಗಾಗಿ ನಾವು ಮಾರಬೇಕಾಗುತ್ತದೆ. ಆರು ಕಾಸಿಗೊಂದು ಗಡಗಿಯ ಮಾರಿ ಎಂದಾಗ ಇಲ್ಲಿನ ಆರು ಕಾಸು ಸ್ವಲ್ಪ ಹೆಚ್ಚು ಹಣ ಎಂದಾದರೂ ಇಲ್ಲಿನ ಚಿಂತನೆ ಅರಿಷಡ್ವರ್ಗಗಳನ್ನು ಕುರಿತಾದುದು. ಕಾಮ–ಕ್ರೋಧ–ಲೋಭ–ಮೋಹ–ಮದ–ಮತ್ಸರಗಳೆಂಬ ಈ ಆರುಗುಣಗಳನ್ನು ಗೆಲ್ಲಲು ಬದುಕಿನಲ್ಲಿ ನಮ್ಮ ವ್ಯಕ್ತಿತ್ವವನ್ನು ವಿನಿಯೋಗಿಸಬೇಕಾಗುತ್ತದೆ. ಹೀಗೆ ಸಂಪಾದಿಸಿದ ವ್ಯಕ್ತಿತ್ವವನ್ನು ವಸುಧೆಯೊಳಗೆ ಅಂದರೆ ಈ ಭೂಮಿಯಲ್ಲಿ ಲೀಲೆಯಂತಿರುವ ಶಿಶುವಿನಹಾಳ ಅಧೀಶನಾದ(ಒಡೆಯ)ವನ ಮುಂದೆ ಒಂದು ಮಗಿಯಂತಹ ಸ್ವರೂಪದಲ್ಲಿ ತಂದು ಇಡುವವಳು ಈ ಕುಂಬಾರಕಿ ಎಂದು ಲೋಕದ ತತ್ತ್ವವನ್ನು ನುಡಿದಿದ್ದಾರೆ. ಈ ದೇವರು ನಮ್ಮ ನಂಬಿಕೆಯೇ ಆಗಬಹುದು ಅಥವಾ

ನಾವು ನಂಬುವ ಯಾವುದೇ ದೇವರಾಗಬಹುದು ಅದರ ಮುಂದೆ ಈ ಕುಂಬಾರಕಿ ನಿರ್ಮಿಸಿದ ಅರ್ಥಪೂರ್ಣ ವ್ಯಕ್ತಿತ್ವದ ಒಂದಂಶವನ್ನಾದರೂ ಶರಣುಗೊಳಿಸಬೇಕು. ನಾವು ನಮ್ಮನ್ನು ಪರಿಪೂರ್ಣವಾಗಿ ನಂಬಬೇಕು. ನಂಬುವಂತಹ ಕಾರ್ಯಗಳನ್ನೇ ಈ ಭೂಮಿಯಲ್ಲಿ ನಿತ್ಯಮಾಡಬೇಕು ಎಂದಿದ್ದಾರೆ ನಮ್ಮ ತತ್ತ್ವಪದಕಾರರು.

ಟಿಪ್ಪಣಿ

ಆವಿಗೆ ಕಟ್ಟುವುದು : ಆವಿಗೆ ಕಟ್ಟುವಾಗ ಮೊದಲಿಗೆ ದೊಡ್ಡ ದೊಡ್ಡ ಗಡಿಗೆ, ಹರಿವಾಣ, ಪಚೇಲಿ, ಕೊಡ ಇತ್ಯಾದಿಗಳನ್ನು ಕೆಳಭಾಗದಲ್ಲಿ ಜೋಡಿಸಬೇಕು. ಅದರ ಮೇಲೆ ಚಿಕ್ಕ ಚಿಕ್ಕ ಗಡಿಗಿ, ಚಟಿಕೆ ಮುಂತಾದವುಗಳನ್ನು ಬೋರಲಾಗಿ ಹೊಂದಿಸುವರು ಹೀಗೆ ಹೊಂದಿಸುವಾಗ ಉರಿ ಎಲ್ಲೆಡೆ ಹರಡಲು ಅನುಕೂಲವಾಗಲೆಂದು ಅಲ್ಲಲ್ಲಿ ಒಡೆದ ಮಡಕೆ ಚೂರು, ಬೋಕಿಗಳನ್ನು ಆನಿಕೆಯಾಗಿ ಹಚ್ಚವರು. ಎಲ್ಲ ಮಡಿಕೆ ಕುಡಿಕೆಗಳನ್ನು ಜೋಡಿಸಿಯಾದ ಮೇಲೆ ಕೊನೆಯಲ್ಲಿ ಮುಚ್ಚಳಗಳನ್ನು ಬೋರಲಾಗಿ ಹೊಂದಿಸುವರು. ಆಮೇಲೆ ಆವಿಗೆಯ ಮೇಲ್ಭಾಗದಲ್ಲಿ ಸೊಪ್ಪು ಹುಲ್ಲು, ಸೆದೆಯನ್ನು ಹರಡಿ ಅದರ ಮೇಲೆ ಹಸಿಯಾದ ಬೂದಿಯನ್ನು ಮೇಲು ಹೊದಿಕೆಯಾಗಿ ಮುಚ್ಚುವರು. ಆವಿಗೆ ಕಟ್ಟುವಾಗ ತಳದಲ್ಲಿ ಉರುವಲು ಕಿಚ್ಚು ಎಲ್ಲೆಡೆ ಪಸರಿಸಲು ಅನುಕೂಲವಾಗುವಂತೆ ಅಲ್ಲಲ್ಲಿ ಮರದ ತುಂಡುಗಳನ್ನು ಇಟ್ಟು ಆವಿಗೆಯ ಹಿಂಭಾಗದಲ್ಲಿ ಹೊಗೆ ಹೋಗಲು ಕಿಂಡಿಗಳನ್ನು ಬಿಡುವರು. ಆಮೇಲೆ ಆವಿಗೆಯ ಬಾಯಿಯ ಮೂಲಕ ಬೆಂಕಿಯನ್ನು ಹಾಕಿ ಉರವಲನ್ನು ಮೆಲ್ಲಕೆ ಒಳಕ್ಕೆ ಚಾಚುತ್ತಾ ಆವಿಗೆ ಸುಡಲು ಆರಂಭಿಸುವರು. (ಕುಂಬಾರಿಕೆ ವೃತ್ತಿ ಪದಕೋಶ)

ಅಧ್ಯಯನ ಕೃತಿಗಳು

1. ಭಾರತೀಯ ತತ್ತ್ವಶಾಸ್ತ್ರ ಪ್ರವೇಶ, ಎಂ. ಪ್ರಭಾಕರ ಜೋಶಿ, ಎಂ.ಎ. ಹೆಗಡೆ ಸಿದ್ದಾಪುರ, 2008, ಅಕ್ಷರ ಪ್ರಕಾಶನ ಹೆಗ್ಗೋಡು
2. ಶಿಶುನಾಳ ಶರೀಫ್ ಸಾಹೇಬರ ಗೀತೆಗಳು, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ(ಸಂ)., 1985, 2010, ಸಪ್ನ ಬುಕ್ ಹೌಸ್, ಬೆಂಗಳೂರು
3. ಕುಂಬಾರಿಕೆ ವೃತ್ತಿ ಪದಕೋಶ, ಬಸವರಾಜ ಕುಂಚೂರು, 2007, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

❖❖❖

ಇಳೆ ತೇವವಾಗಿ
ಧಗೆಯಾರಿತು
ತೇವದೊಡನೆ ಹೊಸ ಹಸಿರ
ನಗೆ ಮೂಡಿತು

ಅನ್ಯಭಾಷಿಕರಿಗಾಗಿ ಕನ್ನಡ

ಗಿರೀಶ ಭಟ್ ಅಜಕ್ಕಳ
ಪ್ರಾಧ್ಯಾಪಕ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ –574237

ಯಾವುದೇ ಒಂದು ಹೊಸ ಭಾಷೆಯನ್ನು ಆ ಭಾಷೆ ಗೊತ್ತಿಲ್ಲದವರಿಗೆ ಕಲಿಸುವುದು ಸುಲಭದ ಕೆಲಸವಲ್ಲ. ಅದರಲ್ಲೂ ಮುಖಾಮುಖಿ ತರಗತಿಯ ಮೂಲಕ ಅಥವಾ ಮಾತಿನ ಮೂಲಕ ಕಲಿಸುವುದಕ್ಕಿಂತ ಪುಸ್ತಕದ ಮೂಲಕ ಕಲಿಸುವುದು ಮತ್ತಷ್ಟು ಕಷ್ಟದ ಕೆಲಸ. ಒಂದು ಪರಭಾಷೆಯಾಗಿ ಯಾವ ಭಾಷೆಯನ್ನು ಕಲಿಯಲು ಸುಲಭ ಎಂದು ಯೋಚಿಸಿದರೆ ಬಹುಶಃ ಜಗತ್ತಿನಲ್ಲಿ ಇಂಗ್ಲಿಷೇ ಅತ್ಯಂತ ಸುಲಭದ ಭಾಷೆ ಅನಿಸುತ್ತದೆ. ಯಾಕೆಂದರೆ ಅದರಲ್ಲಿ ಇರುವ ವ್ಯಾಕರಣದ ನಿಯಮಗಳು ಅತ್ಯಂತ ಕಡಿಮೆ.

ಕನ್ನಡದ ಅಥವಾ ತುಳುವಿನ ಪದರಚನೆಯ ನಿಯಮಗಳನ್ನು ನೋಡಿದರೆ ಇಂಗ್ಲಿಷ್ ಯಾಕೆ ಸುಲಭದ ಭಾಷೆ ಎಂದು ಗೊತ್ತಾಗುತ್ತದೆ. ಉದಾಹರಣೆಗೆ: 'ಬರು' ಎನ್ನುವ ಕ್ರಿಯೆಯನ್ನು ಭೂತಕಾಲದಲ್ಲಿ ಸೂಚಿಸಲು ಇಂಗ್ಲಿಷಿನಲ್ಲಿ 'ಕೇಮ್' ಎನ್ನುವ ಒಂದು ಪದ ಗೊತ್ತಿದ್ದರೆ ಸಾಕು. ಆದರೆ ಕನ್ನಡದಲ್ಲಿ ಹೇಳುವಾಗ ಕರ್ತೃಪದವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಭೂತಕಾಲವೊಂದರಲ್ಲೇ ಅದು ಪಡೆಯುವ ರೂಪಗಳೆಷ್ಟು!? ಬಂದೆ, ಬಂದೆವು, ಬಂದ/ಬಂದನು, ಬಂದಳು, ಬಂತು, ಬಂದರು, ಬಂದವು, ಬಂದಿರಿ ಹೀಗೆ. ತುಳುವಿನಲ್ಲಾದರೆ, ಪದರಚನೆಯ ಬಗ್ಗೆ ಇನ್ನೂ ಒಂದೆರಡು ಹೆಚ್ಚು ಅಂಶಗಳನ್ನು ತಿಳಿದಿರಬೇಕು. ನಾನು 'ಬಂದೆ' (ಯಾನ್ ಬತ್ತೆ) ಎನ್ನುವಾಗ ಬಳಸುವ 'ಬತ್ತೆ'ಯ ಉಚ್ಚಾರ ಬೇರೆ. ಅವನು 'ಬಂದ' (ಆಯೆ ಬತ್ತೆ) ಎನ್ನುವಲ್ಲಿ ಬಳಸುವ 'ಬತ್ತೆ'ಯ ಉಚ್ಚಾರ ಬೇರೆ. ಹೀಗಾಗಿ ಕನ್ನಡಕ್ಕಿಂತಲೂ ತುಳು ವ್ಯಾಕರಣ ಕಷ್ಟ ಎಂದುದು.

ತಾತ್ಪರ್ಯವೇನೆಂದರೆ ಇಂಗ್ಲಿಷನ್ನು ಇಂಗ್ಲಿಷಿನ ಮೂಲಕ ಕಲಿಸುವುದಕ್ಕಿಂತಲೂ ಕನ್ನಡದ ಮೂಲಕ ಕಲಿಸುವುದು ಸುಲಭ. ಅಂದರೆ ಹಾಗೆ ಇಂಗ್ಲಿಷನ್ನು ಕಲಿಯುವವರು ಮೊದಲು ಕನ್ನಡವನ್ನು ಕಲಿತಿದ್ದರೆ ಅಷ್ಟೇ ಸಾಲದು. ಕನ್ನಡದ ಭಾಷೆ ಎಷ್ಟು ಸಂಕೀರ್ಣವಾದುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು, ಅಷ್ಟೇ ಅಲ್ಲ; ಇಷ್ಟು ಸಂಕೀರ್ಣವಾದುದನ್ನು ಕಲಿತಿದ್ದೇನೆ ಎಂದು ತಿಳಿದುಕೊಂಡಿರಬೇಕು.

ಇಂಗ್ಲಿಷಿನ ಮೂಲಕ ಕನ್ನಡವನ್ನು ಕಲಿಸುವ ಸಾಹಸದ ಕೆಲಸವನ್ನು ಡಾ.ಎನ್. ತಿರುಮಲೇಶ್ವರ ಭಟ್ಟರು ಮಾಡಿದ್ದಾರೆ. ಇದು ಅಭಿನಂದನೀಯವಾದ ಕೆಲಸ. ಅವರು ಇತ್ತೀಚೆಗೆ ಹೊರತಂದಿರುವ 'ಅನ್ಯಭಾಷಿಕರಿಗೆ ಕನ್ನಡ ಪಠ್ಯ' ಎಂಬ ಕೃತಿ ಕನ್ನಡವನ್ನು ಕಲಿಯಬಯಸುವ ಮತ್ತು ಇಂಗ್ಲಿಷ್ ಗೊತ್ತಿರುವ ಮಂದಿಗೆ ತುಂಬ ಉಪಯುಕ್ತವಾಗಬಲ್ಲದು.

ಇತ್ತೀಚೆಗೆ ಕೆಲವೊಮ್ಮೆ ಭಾಷಾವಿಜ್ಞಾನಿಗಳು ಏನಾದರೂ ಹೊಸತು ಮಾಡಬೇಕೆಂಬ ಹುಮ್ಮಸ್ಸಿನಲ್ಲಿ ಏನೇನೋ ಪ್ರಯೋಜನವಿಲ್ಲದ ಪ್ರಯೋಗಗಳನ್ನು ಮಾಡುವುದುಂಟು. ಚಿಕ್ಕ ಮಕ್ಕಳಿಗೆ ಅ, ಆ, ಇ, ಈ ವರ್ಣಮಾಲೆ ಕಲಿಸುವ ಕ್ರಮವನ್ನು ಬಿಟ್ಟು

ಯಾವಯಾವದೋ ಪದಗಳನ್ನೇ ಆರಂಭದಲ್ಲಿ ಕಲಿಸುವ ಅವೈಜ್ಞಾನಿಕ ಕ್ರಮವನ್ನು ಶಿಫಾರಸು ಮಾಡಿದ್ದುಂಟು. ಇಂಗ್ಲಿಷ್ ಕಲಿಸಲು ಬಳಸುವ ವಿಧಾನ ಕನ್ನಡದಂಥ ಭಾಷೆಗೆ ಸೂಕ್ತವಲ್ಲ ಎಂದು ನಮಗೆ ಗೊತ್ತಿರಬೇಕು. ಇನ್ನು ಭಾಷೆಗೆ ಸಂಬಂಧಿಸಿದ ಅಥವಾ ವ್ಯಾಕರಣದ ಪಾರಿಭಾಷಿಕಗಳನ್ನು ಬದಲಿಸುವುದೇ ಸುಲಭಗೊಳಿಸುವ ದಾರಿ ಎಂದು ಭಾವಿಸುವವರೂ ಇರುತ್ತಾರೆ. ಹೀಗೆ ಮಾಡಲು ಹೊರಟು ಕ್ರಿಯಾಪದಗಳನ್ನು 'ವರ್ಬ್' ಎನ್ನುವ ಬದಲು 'ಆಕ್ಷನ್ ವರ್ಡ್' ಎಂದು ಹೇಳುವವರಿದ್ದಾರೆ. ಅದರಿಂದ ಪ್ರಯೋಜನವೇನಿಲ್ಲ. ಹಾಗೆ ನೋಡಿದರೆ ಇಂಗ್ಲಿಷಿನ 'ಸ್ಲೀಪ್' ಎನ್ನುವುದು ಕ್ರಿಯಾಪದವೇ. ಅದರಲ್ಲಿ 'ಆಕ್ಷನ್' ಏನಿದೆ!? ನಮಗೆ ಬೇಕಾದುದು 'ವ್ಯಾಕರಣ ಪ್ರಜ್ಞೆ'. ಆ ಪ್ರಜ್ಞೆಯ ಹಿಂದಿರುವ ತರ್ಕವನ್ನು ಗ್ರಹಿಸಿದರೆ ಹೊಸ ಭಾಷೆಯನ್ನು ಕಲಿಯುವುದು ಅಷ್ಟರಮಟ್ಟಿಗೆ ಸುಲಭ.

ಕೃತಿಯ ಮುನ್ನುಡಿಯಲ್ಲಿ ಡಾ. ಜನಾರ್ದನ ಭಟ್ಟರು ಸೂಚಿಸಿರುವಂತೆ, ಡಾ.ಎನ್.ಟಿ. ಭಟ್ಟರು ವ್ಯಾಕರಣದ ಪಾರಿಭಾಷಿಕ ಪದಗಳನ್ನು ಹಿಂಜರಿಕೆಯಿಲ್ಲದೆ ಬಳಸಿದ್ದಾರೆ. ಉದಾಹರಣೆಗೆ ಕ್ರಿಯಾಪದ, ನಾಮಪದ ಇತ್ಯಾದಿ. ಕೇವಲ ಪಾರಿಭಾಷಿಕ ಪದಗಳನ್ನು ಬಳಸುವುದಷ್ಟೇ ಅಲ್ಲ; ಸಾಂಪ್ರದಾಯಿಕವಾಗಿ ಬಂದ ಉಪಯುಕ್ತ ಬೋಧನಾವಿಧಾನವನ್ನೂ ಡಾ. ಎನ್.ಟಿ. ಭಟ್ಟರು ಉಳಿಸಿಕೊಂಡಿದ್ದಾರೆ. ವರ್ಣಮಾಲೆಯನ್ನು ಪರಿಚಯಿಸಿ ಬಳಿಕ ಇತರ ಭಾಷಿಕ ಅಂಶಗಳನ್ನು ಕಲಿಸುವ ವಿಧಾನವನ್ನೇ ಅವರು ಅನುಸರಿಸಿದ್ದಾರೆ. ಕನ್ನಡ, ಹಿಂದಿ, ಸಂಸ್ಕೃತ, ಮಲಯಾಳದಂತಹ ಭಾಷೆಗಳಿಗೆಲ್ಲ ಇದುವೇ ಅತ್ಯುತ್ತಮವಾದ, ಕಾಲಪರೀಕ್ಷಿತ ಮತ್ತು ಕಾಲಪರೀಕ್ಷೆಯಲ್ಲಿ ಗೆದ್ದ ಮಾದರಿ. ಡಾ. ಭಟ್ಟರು ಅಂತರಾಷ್ಟ್ರೀಯ ಧ್ವನಿಲಿಪಿಯ ಮೂಲಕ ವರ್ಣಗಳ ಉಚ್ಚಾರವನ್ನು ತಿಳಿಸುತ್ತಾರೆ. ಮುಖ್ಯವಾಗಿ ಕನ್ನಡದ ಸ್ವರಾಕ್ಷರ ಮತ್ತು ವ್ಯಂಜನಾಕ್ಷರಗಳನ್ನು ಹೇಗೆ ಉಚ್ಚರಿಸಬೇಕು ಎನ್ನುವುದನ್ನು ಇಂಗ್ಲಿಷ್ ಉಚ್ಚಾರಣೆಯ ಮೂಲಕ ತಿಳಿಸಿದ್ದಾರೆ. ಇಂಗ್ಲಿಷ್ ಗೊತ್ತಿರುವವರಿಗೆ ಕಲಿಸುವಾಗ ಇದು ಬಹಳ ಮುಖ್ಯವಾದದ್ದು.

ಆದರೆ, ಕೇವಲ ಅಂತಾರಾಷ್ಟ್ರೀಯ ಧ್ವನಿಲಿಪಿ (ಐಪಿಎ) ಅಥವಾ ಡಯಕ್ರಿಟಿಕಲ್ ಮಾರ್ಕ್‌ಗಳ ಮೂಲಕ ಎಷ್ಟು ತೋರಿಸಿದರೂ ಕೂಡ ಕನ್ನಡ ವರ್ಣಗಳ ಅಥವಾ ಪದಗಳ ಸರಿಯಾದ ಉಚ್ಚಾರಣೆ ಇಂಗ್ಲಿಷ್ ಮಾತನಾಡುವವರಿಗೆ ಅರ್ಥ ಆಗುವುದು ಕಷ್ಟ. ಅದರ ಬದಲಾಗಿ ಇಂಗ್ಲಿಷಿನ ಪದಗಳಲ್ಲಿ ಆಯಾ ಅಕ್ಷರ ಅಥವಾ ವರ್ಣಗಳು ಬಂದಾಗ ಹೇಗೆ ಉಚ್ಚರಿಸುತ್ತಾರೋ ಅಂತಹ ಮಾದರಿಯನ್ನು ನೀಡಿದರೆ ಸುಲಭವಾಗಿ ಗೊತ್ತಾದೀತು. ಡಾ. ಭಟ್ಟರು ಅಂತಹ ಉದಾಹರಣೆಗಳನ್ನು ನೀಡುತ್ತಾರೆ. 'ಅ' ಅನ್ನುವ ಕನ್ನಡ ಅಕ್ಷರವನ್ನು ಪರಿಚಯಿಸುತ್ತಾ ಅದನ್ನು ಹೇಗೆ ಉಚ್ಚರಿಸುವುದು ಅಂತ ತಿಳಿಸಿಕೊಡಲು 'ಅಂಬ್ರೆಲ್ಲಾ' ಪದವನ್ನು ಬಳಸುತ್ತಾರೆ. ಅದದಲ್ಲಿ 'ಯು' ಅನ್ನುವ ಮೊದಲ ಅಕ್ಷರವನ್ನು ಯಾವ ರೀತಿ ಉಚ್ಚರಿಸುತ್ತೇವೋ ಅದೇ ರೀತಿ ಈ 'ಅ'ಕಾರವೆಂಬ ಕನ್ನಡದ ಮೊದಲಿನ ಸ್ವರಾಕ್ಷರವನ್ನು ಉಚ್ಚರಿಸಬೇಕು ಅಂತ ತಿಳಿಸುತ್ತಾರೆ.

ಕನ್ನಡ ಕಾಗುಣಿತಗಳ ಪರಿಚಯವನ್ನು ಕೂಡ ಇದೇ ಮಾದರಿಯಲ್ಲಿ ಮಾಡುತ್ತಾರೆ. ಬಹಳ ವಿವರವಾಗಿ ಪ್ರತಿಯೊಂದು ಕಾಗುಣಿತವನ್ನು ಯಾವ ರೀತಿ ಉಚ್ಚರಿಸಬೇಕು; ಯಾವ ಇಂಗ್ಲಿಷ್ ಶಬ್ದದಲ್ಲಿ ಆ ಉಚ್ಚಾರದ ಅಕ್ಷರ ಬರುತ್ತದೆ ಅಂತ ಹೋಲಿಕೆ ಮಾಡುವ ಮೂಲಕ ವಿವರಿಸುತ್ತಾರೆ. ಮಹಾಪ್ರಾಣಗಳ ಬಗ್ಗೆ ಕೂಡ ವಿವರಣೆ ಬಹಳ

ಗಮನಾರ್ಹವಾಗಿದೆ. ವಿಜಾತೀಯ ಒತ್ತಕ್ಷರಗಳನ್ನು ಚೆನ್ನಾಗಿ ಪರಿಚಯಿಸಿದ್ದಾರೆ. ಅನುಸ್ವಾರದ ವಿವರಣೆಯನ್ನು ಕೂಡ ನೀಡಿದ್ದಾರೆ. ಅರ್ಧವ್ಯಂಜನ ವ್ಯಂಜನ (ಹಾಫ್ ಕನ್ಸೋನೆಂಟ್), ಅಕ್ಷರ, ವರ್ಣ, ಸಿಲೆಬಲ್ ಮುಂತಾದ ಪದಗಳು ಏನನ್ನು ಸೂಚಿಸುತ್ತವೆ ಎಂದು ಡಾ. ಭಟ್ಟರು ವಿಶದಪಡಿಸುತ್ತಾರೆ.

ಮುಂದೆ ಹಲವಾರು ಅಧ್ಯಾಯಗಳಲ್ಲಿ ಅವರು ವಿವಿಧ ಸನ್ನಿವೇಶಗಳನ್ನು ಆಯ್ದುಕೊಂಡು ಅಂಥ ಭಾಷಾ ಸನ್ನಿವೇಶಗಳಲ್ಲಿ ಬಳಸಬಹುದಾದ ಸಂಭಾಷಣೆಗಳ ಮಾದರಿಗಳನ್ನು ನೀಡಿದ್ದಾರೆ. ಮುಖ್ಯವಾಗಿ, ಪ್ರತಿ ಅಧ್ಯಾಯದ ಕೊನೆಗೆ ಆ ಅಧ್ಯಾಯದಲ್ಲಿ ಬರುವ ವ್ಯಾಕರಣ ಅಂಶಗಳನ್ನು ವಿವರಿಸಿದ್ದಾರೆ. ಡಾ. ಭಟ್ಟರು ಒಳ್ಳೆಯ ಅನುವಾದಕರು. ಜರ್ಮನ್ ಭಾಷೆಯೂ ಸೇರಿದಂತೆ ಹಲವು ಭಾಷೆಗಳನ್ನು ಬಲ್ಲವರು. ಹೀಗಾಗಿ ಅವರಿಗೆ ಭಾಷೆಯ ಬಳಕೆಯ ಒಳಗುಟ್ಟುಗಳು ಚೆನ್ನಾಗಿ ಗೊತ್ತಿವೆ.

ಇಬ್ಬರ ನಡುವೆ ಪ್ರಶ್ನೋತ್ತರ ರೂಪದಲ್ಲಿ ನಡೆಯಬಹುದಾದ ಯಾವುದೇ ಸಂಭಾಷಣೆಯಲ್ಲಿ ಒಂದು ಸ್ವಾರಸ್ಯದ ಸಂಗತಿಯುಂಟು. ಪ್ರಶ್ನೆಗಳನ್ನು ಕೇಳಲು ದೀರ್ಘವಾದ ವಾಕ್ಯಗಳನ್ನು ಮಾಡಬೇಕಾಗುತ್ತದೆ. ಉತ್ತರಿಸಲು ಒಂದು ಪದ ಸಾಕು; ವ್ಯಾಕರಣ ಬೇಕಾಗುವುದಿಲ್ಲ. ಉದಾಹರಣೆಗೆ–

ಅದೇ ರೀತಿ, ಇನ್ನೊಬ್ಬರಿಗೆ ನಾವು ಮಾಡುವ ಆದೇಶಗಳು ಅಥವಾ ಆಜ್ಞೆಗಳು, ಅಂದರೆ ಇಂಥದ್ದು ಮಾಡು ಅಂತ ಹೇಳುತ್ತೇವಲ್ಲ; ಆವಾಗಲೂ ಹೇಳುವವರಿಗೇ ಹೆಚ್ಚು ಭಾಷಿಕ ಶ್ರಮ ಹೊರತು ಎದುರಿನವರಿಗೆ ಹೆಚ್ಚು ಮಾತು ಬೇಕಾಗದು. ಇಂತಹ ಸೂಕ್ಷ್ಮಗಳನ್ನೆಲ್ಲ ತಿರುಲೇಶ್ವರ ಭಟ್ಟರ ಉದಾಹರಣೆಗಳಲ್ಲಿ ನಾವು ಕಾಣುತ್ತೇವೆ. ಒಟ್ಟಿನಲ್ಲಿ ಸರಳ ಉದಾಹರಣೆಗಳ ಮೂಲಕ ವಾಕ್ಯರಚನೆಯ ಸಾಮಾನ್ಯ ನಿಯಮಗಳನ್ನು ಡಾ. ಭಟ್ಟರು ಪರಿಚಯಿಸುತ್ತಾರೆ.

ವ್ಯವಹಾರದಲ್ಲಿ ಕನ್ನಡವನ್ನು ಬಳಸಬೇಕಾದರೆ ಯಾವೆಲ್ಲ ಭಾಷಿಕ ಅಂಶಗಳನ್ನು ತಿಳಿದುಕೊಳ್ಳಬೇಕೋ ಅವೆಲ್ಲವನ್ನೂ ಲೇಖಕರು ಈ ಸಣ್ಣ ಪುಸ್ತಕದಲ್ಲಿ ಅಡಕಗೊಳಿಸಿದ್ದಾರೆ. ಸಂಖ್ಯೆಗಳು, ಕಾರ್ಡಿನಲ್ ಮತ್ತು ಆರ್ಡಿನಲ್ ಸಂಖ್ಯೆಗಳನ್ನು ಕನ್ನಡದಲ್ಲಿ ಹೇಳುವ ಬಗೆಯನ್ನು ತಿಳಿಸಿದ್ದಾರೆ. ಕಂಪ್ಯೂಟರಿನಲ್ಲಿ ಕನ್ನಡವನ್ನು ಬಳಸುವುದು ಹೇಗೆ ಅನ್ನುವುದರ ಪರಿಚಯ ಮಾಡಿಕೊಡುತ್ತಾರೆ. ಆಮೇಲೆ ಮೊಬೈಲ್ ಫೋನಿನ ಸೆಟ್‌ನಲ್ಲಿ ಹೇಗೆ ಕನ್ನಡ ಬಳಸುವುದು ಅದನ್ನು ಹೇಳುತ್ತಾರೆ. ಇನ್ನೊಂದು ಮುಖ್ಯವಾದ ಅಂಶವೇನೆಂದರೆ, ಬೇರೆ ಬೇರೆ ಸನ್ನಿವೇಶಗಳಲ್ಲಿ ಕನ್ನಡ ಬಳಸುವ ಉದಾಹರಣೆಗಳನ್ನು ಕೊಡುವಾಗ ಕನ್ನಡದ ಜಾಯಮಾನದ ತುಸು ಹಿಂದಿನ ಕಾಲದ ಪದಗಳನ್ನು ಬಳಸುತ್ತಾರೆ. ಉದಾಹರಣೆಗೆ ರಾಮು, ಶಾಮು, ಲಲಿತೆ, ಕಮಲಮ್ಮ, ಶಾರದ, ಸರಸಿ– ಹೀಗೆ.

ಒಟ್ಟಿನಲ್ಲಿ ಕನ್ನಡ ಕಲಿಯಬಯಸುವ ಅನ್ಯಭಾಷಿಕರಿಗೆ ಇದು ಪ್ರಯೋಜನಕಾರಿಯಾಗ ಬಹುದಾದ ಪುಸ್ತಕ. ಮಲಯಾಳ, ತೆಲುಗು, ತುಳು ಹೀಗೆ ಬೇರೆ ಬೇರೆ ಭಾಷೆಗಳನ್ನು ಇಂಗ್ಲಿಷಿನ ಮೂಲಕ ಬೋಧಿಸುವ ಪುಸ್ತಕಗಳನ್ನು ರಚಿಸುವ ಇತರ ಲೇಖಕರಿಗೆ ಒಂದು ಮಾದರಿಯಾಗಿಯೂ ಸಲ್ಲಬಹುದಾದ ಪುಸ್ತಕ ಇದಾಗಿದೆ. ಈಚಿನ ದಿನಗಳಲ್ಲಿ ಕನ್ನಡ ಉಳಿಸಿ, ಬೆಳೆಸಿ ಮುಂತಾಗಿ ಕನ್ನಡದ ಪರವಾಗಿ ಘೋಷಣೆಗಳನ್ನು ಕೂಗುವವರು ಬೇಕಾದಷ್ಟು ಇದ್ದಾರೆ. ಅದೂ ಬೇಕು ಹೌದು. ಆದರೆ, ಭಾಷೆಯ ಕುರಿತಾದ ವಿದ್ವತ್

ಕೆಲಸಗಳನ್ನು ಮಾಡುವವರಿಗೆ ಪ್ರೋತ್ಸಾಹವೂ ಬೇಕು. ಆದರೆ ಅಂಥ ವಿದ್ವತ್ ಕೆಲಸಗಳನ್ನು ಗಮನಿಸುವವರ ಸಂಖ್ಯೆ ತೀರಾ ಸಣ್ಣದು. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದವರೂ ಕೂಡ ವ್ಯಾಕರಣ/ ಭಾಷಾರಚನೆ, ಭಾಷಾವಿಜ್ಞಾನ, ಛಂದಸ್ಸು, ಹಳೆಗನ್ನಡ ಮುಂತಾದ ವಿಷಯಗಳ ಬಗ್ಗೆ ತೀರ ಅವಜ್ಞೆಯನ್ನು ಹೊಂದಿರುವ ಕಾಲ ಇದು. ಬಹುಶಃ ಅವಜ್ಞೆ ಎಂದಷ್ಟೇ ಹೇಳಿದರೆ ಸಾಲದು; ಆ ಬಗ್ಗೆ ತಿರಸ್ಕಾರವಷ್ಟೇ ಅಲ್ಲ; ಪಠ್ಯಕ್ರಮಗಳಲ್ಲಿ ಅವೆಲ್ಲ ಇರಬಾರದೆಂಬ ವಿರೋಧವೂ ಇರುವ ಕಾಲವಿದು.

ಹೀಗಿರುವ ಪರಿಸ್ಥಿತಿಯಲ್ಲಿ, ಡಾ.ಎನ್.ಟಿ. ಭಟ್ಟರು ಏನು ಹೇಳಿದ್ದಾರೆ; ಹೇಗೆ ಹೇಳಿದ್ದಾರೆ ಎಂಬ ಅಕಡೆಮಿಕ್ ಕುತೂಹಲದಿಂದ ಕನ್ನಡದ ಕೆಲವೇ ಕೆಲವು ಭಾಷಾಸಕ್ತರು ನೋಡುವ ಪುಸ್ತಕವಾಗಿಯಷ್ಟೇ ಇಂತಹ ಪುಸ್ತಕ ಉಳಿದುಬಿಡಬಾರದು. ಕನ್ನಡೇತರರಿಗೆ ಇಂತಹ ಪುಸ್ತಕಗಳನ್ನು ತಲುಪಿಸುವ ಕೆಲಸ ಆಗಬೇಕು.

❖❖❖

ಸಂತೆ ಬಯಲಲಿದೆ ಒಂದು ದಾರಿ
ಯಾರು ನಡೆದಾಯಿತೋ ಈ ಕಾಲುದಾರಿ
ಹಾದಿ ಎಡಬಲದೊಳಗಿಹುದು ಹಾಡು ಪಾಡಿದ ಬೀದಿ
ಸಿಕ್ಕ ಬೀದಿಯ ಹೊಕ್ಕು ನಡೆಯುವುದೆ ಹಾದಿ

ಶೋಕಚಕ್ರ ನಾಟಕ : ಕೆಲವು ಟಿಪ್ಪಣಿಗಳು

ಡಾ ಪಿ.ಬಿ. ಪ್ರಸನ್ನ
705 ವಿಶ್ವಾಸ್ ಲ್ಯಾಂಡ್‌ಮಾರ್ಕ್, ಕಿನ್ನಿಮೂಲ್ಕಿ, ಉಡುಪಿ–576101

ಶ್ರೀರಂಗರ ಶೋಕಚಕ್ರ ನಾಟಕದ ಮೇಲೆ ಗಾಂಧಿಯುಗವು ಬೀರಿದ ಪ್ರಭಾವವನ್ನು ಪರಿಶೀಲಿಸುವುದು ಈ ಲೇಖನದ ಉದ್ದೇಶ. ಶ್ರೀರಂಗರು ಗಾಂದಿಯವರಿಂದ ಪ್ರೇರಣೆ ಹೊಂದಿದವರು. ಸ್ವತಃ ಅವರು ಗಾಂಧಿ ಅವರ ಸ್ವಯಂಸೇವಕರ ತಂಡದೊಂದಿಗೆ ಇದ್ದವರು. 1918–19ರಲ್ಲಿ ಅವರು ಗಾಂಧೀಜಿ ಅವರ ತಂಡದಲ್ಲಿ ಸ್ವಯಂ ಸೇವಕರಾಗಿ ದುಡಿದಿದ್ದರು. 1924ರಲ್ಲಿ ಅವರು ಗಾಂಧೀಜಿಯವರನ್ನು ಸುಮಾರು 20 ನಿಮಿಷಗಳ ಕಾಲ ಸಂದರ್ಶಿಸಿದ್ದರು. ಈ ಎಲ್ಲ ಕಾರಣಗಳಿಂದ ಶ್ರೀರಂಗರು ಗಾಂಧೀಜಿಯವರ ಬಗ್ಗೆ ಅಭಿಮಾನ ಹೊಂದಿದ್ದರು.

ಗಾಂಧೀಯುಗವು ಸತ್ಯ, ಅಹಿಂಸೆ, ಸ್ವಾರ್ಥರಹಿತ ರಾಜಕಾರಣ ಇತ್ಯಾದಿಗಳ ಬಗ್ಗೆ ಚಿಂತಿಸುತ್ತಿತ್ತು. ಆ ಯುಗದಲ್ಲಿ ದೇಶದ ಹಿತ ಮುಖ್ಯ ಆಗಿತ್ತು. ಗಾಂಧೀಜಿ ಅವರ ಕನಸುಗಳು ನನಸಾದರೆ ಸಾಕು ಎನ್ನುವ ಭಾವನೆ ಎಲ್ಲರಲ್ಲಿ ಇತ್ತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ತಕ್ಷಣ ಮನಸ್ಸು ಮಾಡಿದರೆ ಗಾಂಧೀಜಿ ಅವರು ದೇಶದ ಪ್ರಧಾನಿ ಆಗಬಹುದಿತ್ತು. ಆದರೆ ಅವರು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಸಂಭ್ರಮದಲ್ಲಿ ಭಾಗಿಯಾಗಿರಲಿಲ್ಲ. ಭಾರತ–ಪಾಕಿಸ್ತಾನ ವಿಭಜನೆ ಆದದ್ದರ ಬಗ್ಗೆ ಅಪಾರವಾಗಿ ನೊಂದುಕೊಂಡಿದ್ದರು. ಇನ್ನೇನು ದೇಶ ಒಂದು ಹಂತಕ್ಕೆ ಬರುತ್ತದೆ ಅಂದುಕೊಳ್ಳುವಾಗ ಜನವರಿ 30, 1948 ರಂದು ಗಾಂಧೀಜಿಯವರ ಹತ್ಯೆ ಆಯಿತು. ಶ್ರೀರಂಗರಿಗೆ ಈ ಘಟನೆ ತುಂಬ ಆಘಾತಕಾರಿ ಅನಿಸುತ್ತದೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಜವಹರ್‌ಲಾಲ್ ನೆಹರು ಅವರ ಆಳ್ವಿಕೆ, ಆಗಿನ ಸ್ಥಳೀಯ ರಾಜಕಾರಣ, ಚುನಾವಣೆಯ ಹೆಸರಿನಲ್ಲಿ ನಡೆಯತೊಡಗಿದ ಅನಾಚಾರಗಳು, ಪ್ರಜಾಪ್ರಭುತ್ವದಲ್ಲಿ ಆಯ್ಕೆ ಆಗತೊಡಗಿದ ಕುಟಿಲ ರಾಜಕಾರಣಿಗಳು ಇವೆಲ್ಲ ಈ ನಾಟಕದ ಪ್ರೇರಕ ಅಂಶಗಳಾಗಿವೆ.

ಮೌಲ್ಯಾಧಾರಿತ ರಾಜಕಾರಣಿ ಜಯರಾಯ ಹಾಗೂ ಮೌಲ್ಯಗಳೇ ಇಲ್ಲದೆ ಸಮಯಸಾಧಕ ಪ್ರವೃತ್ತಿಯಿಂದ ಮೆರೆಯುವ ಹನುಮಂತಪ್ಪ ಇವರುಗಳ ನಡುವೆ ನಡೆಯುವ ಸಂಘರ್ಷವೇ ಶೋಕಚಕ್ರ ನಾಟಕದ ಮುಖ್ಯ ವಸ್ತು. ಹೇಗಾದರೂ ಮಾಡಿ ಗಾಂಧಿಯುಗದ ಆದರ್ಶದ ರೂಪದಂತಿರುವ ಜಯರಾಯರನ್ನು ಸೋಲಿಸಬೇಕೆಂದು ಹನುಮಂತಪ್ಪ ಯತ್ನಿಸುತ್ತಿರುತ್ತಾನೆ. ಆತನಿಗೆ ಒಂದು ಹಂತದಲ್ಲಿ ಜಯವಾಗುತ್ತದೆ. ಆದರೆ ಆ ಜಯ ಶಾಶ್ವತವಾದದ್ದಲ್ಲ. ಅವನಲ್ಲಿಯೂ ಅಪರಾಧಿ ಪ್ರಜ್ಞೆ ಮೂಡಿ ಆತ ಕಣ್ಣು ಕತ್ತಲೆ ಬಂದು ಬೀಳುತ್ತಾನೆ. ಕೆಟ್ಟದ್ದನ್ನು ಬಯಸುವವರಿಗೂ ಕೂಡ ಕೆಟ್ಟದ್ದಾಗುತ್ತದೆ ಎನ್ನುವುದು ಒಂದು ಆದರ್ಶದ ಪರಿಕಲ್ಪನೆ. ಶ್ರೀರಂಗರು ಗಾಂಧಿಯುಗದ ಪ್ರಭಾವದಲ್ಲಿ ಇದ್ದವರಾದುದರಿಂದ ಇಂಥ ಉದಾರವಾದಿ ಚಿಂತನೆಯೊಂದಿಗೆ ನಾಟಕ ಅಂತ್ಯಗೊಳ್ಳುತ್ತದೆ ಎಂದರೆ ತಪ್ಪಾಗಲಾರದು.

ಶೋಕಚಕ್ರ ನಾಟಕದಲ್ಲಿ ಮೂರು ಅಂಕಗಳಿವೆ. ಸಾತ್ವಿಕ ಪಾತ್ರ ಜಯರಾಯ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಪ್ರಜಾಪ್ರಭುತ್ವದ ವ್ಯಂಗ್ಯದಂತಿರುವ ಹನುಮಂತಪ್ಪ ಇವರುಗಳ ಮುಖಾಮುಖಿ ಮೊದಲ ಅಂಕದಲ್ಲಿ ಆಗುತ್ತದೆ. ಜಯರಾಯ, ಅವರ ಹೆಂಡತಿ ರಂಗಮ್ಮ, ಮಗ ಶ್ಯಾಮ ಜಯರಾಯರ ಬಂಟ ಗೋವಿಂದಪ್ಪ, ಪತ್ರಿಕಾ ಪ್ರತಿನಿಧಿ ವೆಂಕಣ್ಣ ಇವರದ್ದೆಲ್ಲ ಒಂದು ಗುಂಪು. ಹನುಂತಪ್ಪ, ರಾಮಣ್ಣ , ಭೀಮಣ್ಣ, ಸೆಕ್ರೆಟರಿ, ಮೊದಲಾದವರದ್ದು ಇನ್ನೊಂದು ಗುಂಪು. ಸ್ವಾತಂತ್ರ್ಯ ದಿನಾಚರಣೆಯ ಸಿದ್ಧತೆಯ ದೃಶ್ಯದೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ಹನುಮಂತಪ್ಪ ಧ್ವಜಾರೋಹಣ ಮಾಡಬೇಕಿತ್ತು. ಆದರೆ ಆತನಿಗೆ ರಾಜಕೀಯವಾಗಿ ವಿರೋಧ ಹೆಚ್ಚು ಇರುತ್ತದೆ. ಹನುಮಂತಪ್ಪನ ವಿರೋಧಿಗಳು ಧ್ವಜಾರೋಹಣಕ್ಕೆ ಮತ್ತೊಂದು ಹೆಸರನ್ನು ಸೂಚಿಸಿದಾಗ ಅವನಿಗೆ ಕಸಿವಿಸಿ ಆಗುತ್ತದೆ. ತನಗೆ ಸಿಗದ ಅವಕಾಶ ಮತ್ಯಾರಿಗೂ ಸಿಗಬಾರದು ಎಂದು ಎಣಿಸುತ್ತಾನೆ. ಹಾಗಾಗಿ ಆತ ಸ್ವಾತಂತ್ರ್ಯ ಹೋರಾಟಗಾರ ಜಯರಾಯನನ್ನು ಮುಂದಿರಿಸಿಕೊಂಡು ತನ್ನ ದಾಳ ಉರುಳಿಸಲು ಯತ್ನಿಸುತ್ತಾನೆ. ಸ್ವಾತಂತ್ರ್ಯ ದಿನಾಚರಣೆಗೆ ಜಯರಾಯರನ್ನು ಹನುಮಂತಪ್ಪ ಆಹ್ವಾನಿಸುವ ಸಂದರ್ಭವೇ ತೀರ ನಾಟಕೀಯವಾಗಿದೆ. ಅತೀ ಎನಿಸುವ ಕೃತಕ ಪದಗಳನ್ನು ಹಾಕಿ ಮಾತನಾಡಿ ಜಯರಾಯರನ್ನು ಮೆಚ್ಚಿಸಲು ಹೋಗುತ್ತಾನೆ. ಹನುಮಂತಪ್ಪನ ಕುಟಿಲತನದ ಅರಿವು ಜಯರಾಯರಿಗೆ ಆಗುವುದಿಲ್ಲ. ರಂಗಮ್ಮನವರಂತೂ ಅವನ ನಡವಳಿಕೆ ಒಬ್ಬ ಸಭ್ಯನದ್ದು ಎಂದೇ ಭಾವಿಸಿರುತ್ತಾರೆ.

ಆದರೆ ಗಾಂಧಿಯುಗದ ಸಾಕ್ಷಿಯಂತಿದ್ದ ಅವರಿಗೆ ಹನುಮಂತಪ್ಪನ ಕೃತಕ ನಡವಳಿಕೆ, ಅವನ ದೇಶಾವರಿ ವಿನಯ ಯಾವುದು ಕೂಡ ಮುಖ್ಯ ಎಂದು ಅನಿಸುವುದಿಲ್ಲ. ಅವರಿಗೆ ಸ್ವಾತಂತ್ರ್ಯದ ದಿನಾಚರಣೆ ಒಂದು ಕೇವಲ ಆಚರಣೆ ಅಲ್ಲ. ಅದೊಂದು ಪವಿತ್ರವಾದ ದಿನ. ಆದರೆ ಅದರ ಸಂಭ್ರಮದಲ್ಲಿ ಮುಳುಗಿ ಹೋಗುವ ಸ್ಥಿತಿಯಲ್ಲಿ ಅವರು ಇರುವುದಿಲ್ಲ. ಪತ್ರಿಕಾ ವರದಿಗಾರ ವೆಂಕಣ್ಣನ ಬಳಿ ಅವರು ಸಂದರರ್ಶನ ನೀಡುತ್ತ, ಗಾಂಧೀಜಿ ಕಂಡ ಸ್ವರಾಜ್ಯದ ಕನಸು ಸರಿಯಾಗಿ ಜಾರಿಗೆಯಾಗಿಲ್ಲ. ಅವರು ಅಂದುಕೊಂಡಿದ್ದ ಸ್ವರಾಜ್ಯವೇ ಬೇರೆ, ದೊರಕಿರುವ ಸ್ವರೂಪವೇ ಬೇರೆ ಎಂದು ವಿಷಾದ ಪಡುತ್ತಾರೆ.

'ಮನೇ ಒಳಗಿನ ಹೆಗ್ಗಣ ಹೋಯ್ತು ಅಂದ್ರ ಕುಣಿದಾಡಬೇಕೋ ಅಥವಾ ಆ ಹೆಗ್ಗಣಾ ಇದ್ದ ಅಂಗಳದ ಬಿಲಾ ಮುಚ್ಚಬೇಕೋ? ಎಂದು ತಿಳಿಯದ ಜನ ಸಂಭ್ರಮ ಪಡುತ್ತಿದ್ದಾರೆ' ಎಂದು ಅವರು ನುಡಿಯುತ್ತಾರೆ. ಅವರಿಗೆ ತಮ್ಮ ಸ್ವಾರ್ಥ ಮುಖ್ಯವಲ್ಲ. ಊರಿನ ಹಿತ ಮುಖ್ಯ. 'ಸ್ವಾತಂತ್ರ್ಯ ಪಡಕೊಂಡಿವಿ ಅನಬ್ಯಾಡಿರಿ ಗಳಿಸಿದಿವಿ ಅನ್ನಿ' ಎಂದು ಹೇಳುತ್ತಾರೆ. ನಮ್ಮಲ್ಲಿ ದುರ್ಗುಣ ಹೋಗಬೇಕು. ನಮ್ಮ ಬಡತನ ಹೋಗಬೇಕು. ನಿಸ್ವಾರ್ಥ ಸಾಮಾಜಿಕ ಪ್ರಜ್ಞೆ ಮೂಡಬೇಕು. ಆಗ ಮಾತ್ರ ಗಾಂಧೀಜಿಯವರಿಗೆ ಜಯವಾಗಲಿ ಎಂದಿದ್ದು ಸಾರ್ಥಕವಾಗುತ್ತದೆ ಎನ್ನುತ್ತಾರೆ. ಅಲ್ಲದೆ, ಬ್ರಟಿಷರು ಭಾರತ ಬಿಟ್ಟು ತೊಲಗಿದ ತಕ್ಷಣ ನಮ್ಮ ಬಡತನ ತೊಲಗುವುದಿಲ್ಲ. ನಮ್ಮ ಕೆಲಸ ನಾವೇ ಮಾಡಿಕೊಳ್ಳಬೇಕು. ನಮ್ಮ ಬಟ್ಟೆ ನಾವೇ ತೊಳೆದುಕೊಳ್ಳಬೇಕು, ಶಾಲೆ ಪ್ರಶಸ್ತ ಆಗಬೇಕು, ರಸ್ತೆ ಸೊಗಸಾಗಿ ಇರಬೇಕು. ಆರೋಗ್ಯ ಕಾಪಾಡಲು ಆರೋಗ್ಯ ಕೇಂದ್ರ ತೆರೆಯಬೇಕು. ನಮ್ಮ ಬಟ್ಟೆ ನಾವೇ ನೂಲುವಂತಾಗಬೇಕು. ನಮ್ಮ ಊರು

ನಾವೇ ಸ್ವಚ್ಛ ಮಾಡಿಕೊಳ್ಳಬೇಕು. ನಮ್ಮ ಮಕ್ಕಳಿಗೆ ನಾವೇ ಪಾಠ ಹೇಳಿಕೊಡಬೇಕು. ನಮ್ಮ ಹಣ ಉಳಿಸಿಕೊಳ್ಳಲು ಇವೆಲ್ಲ ಸುಲಭ ಮಾರ್ಗಗಳು. ನಮಗೆ ಪಾರ್ಟಿ ಬೇಡ ಅಧಿಕಾರ ಬೇಡ. ನಮಗೆ ಬೇಕಾಗಿರುವುದು ನೆಮ್ಮದಿಯ ಜೀವನ ಎಂದೆಲ್ಲ ಗಾಂಧಿಯುಗದ ಆದರ್ಶಗಳನ್ನು ಜನರ ಮುಂದೆ ಇಡುತ್ತಾರೆ. ಅವರೆಲ್ಲ ಜಯರಾಯರ ಮಾತಿಗೆ ಬೆಂಬಲ ಸೂಚಿಸುತ್ತಾರೆ. ಜಯರಾಯರು ದೊಡ್ಡ ವಕೀಲರಾದರೂ ಆ ವೃತ್ತಿಯನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದವರು. ಅವರು ಮಾತು ಮಾತಿಗೂ ಗಾಂಧಿಯನ್ನು ಎಳೆದು ತಂದು ಜನರ ಮನ್ನಣೆ ಗಳಿಸುತ್ತಾರೆ ಇದರಿಂದ ಕುಟಿಲ ರಾಜಕಾರಣಿ ಹನುಮಂತಪ್ಪನಿಗೆ ಕಷ್ಟವಾಗುತ್ತದೆ. ಜಯರಾಯರ ಮಗನಾದ ಶ್ಯಾಮನಿಗೆ ಹನುಮಂತಪ್ಪನ ಆಷಾಢಭೂತಿತನದ ಪರಿಚಯವಿತ್ತು. ಹನುಮಂತಪ್ಪ ಒಬ್ಬ ಅವಕಾಶವಾದಿ ಎಂದೇ ಆತ ತಿಳಿದಿದ್ದ.

ಹನುಮಂತಪ್ಪನ ಅಸಲಿ ಮುಖದ ಪರಿಚಯ ಆಗುವುದು ನಾಟಕದ ಎರಡನೆಯ ಅಂಕದಲ್ಲಿ. ಈ ಅಂಕದಲ್ಲಿ ಎರಡು ದೃಶ್ಯಗಳಿವೆ. ಪಾರ್ಟಿ ಆಫೀಸಿನಲ್ಲಿ ಮುನ್ಸಿಪಾಲಿಟಿ ಚುನಾವಣೆ ಬಗ್ಗೆ ಚಿಂತನೆ ನಡೆಯುತ್ತಿರುತ್ತದೆ. ಅವರೆಲ್ಲರಿಗೂ ಮಗ್ಗುಲ ಮುಳ್ಳು ಜಯರಾಯರು. ಹನುಮಂತಪ್ಪನು ತಾನು ಜಯರಾಯನ ಬಳಿ, ನಿಮಗೆ ಎಲ್ಲರೂ ವಿರುದ್ಧ ಇದ್ದಾರೆ. ನೀವು ಇಲೆಕ್ಷನ್ನಿಗೆ ನಿಲ್ಲಬೇಡಿ ಎನ್ನುತ್ತಾನೆ. ಒಂದೊಮ್ಮೆ ನಿಂತರೆ ಆ ಹುದ್ದೆಯನ್ನೇ ರದ್ದು ಮಾಡುತ್ತೇನೆ ಎಂದು ವಿಪರೀತವಾದ ಅಧಿಕಾರದ ದಾಹದಿಂದ ನುಡಿಯುತ್ತಾನೆ. ಹನುಮಂತಪ್ಪ ಮತ್ತು ಅವರ ಬಳಗದವರು ಪಾರ್ಟಿ ಮೆಂಬರ್‌ಗಳಿಗೆ ಕುಳಿತುಕೊಳ್ಳಲು ಹಾಲ್ ಕಟ್ಟಿಸೋಣ ಎಂದರೆ ಜಯರಾಯನು ಶಾಲೆ ಕಟ್ಟಿಸಲು ಮುಂದಾಗುತ್ತಾನೆ. ಮುನಸಿಪಲ್ ಮೆಂಬರ್‌ಗಳಿಗೆ ಓಡಾಡಲು ವಾಹನ ತರಿಸೋಣ ಎಂದು ಅವರು ಹೇಳಿದರೆ, ಜಯರಾಯರು ರಸ್ತೆಗೆ ನೀರು ಹೊಡೆಸಲು ವಾಹನ ತರಿಸೋಣ ಎನ್ನುತ್ತಾರೆ. ಪ್ರತಿಯೊಂದಕ್ಕೂ ಗಾಂಧೀಜಿಯವರ ಹೆಸರು ಹೇಳುತ್ತ ಪ್ರಸಿದ್ಧಿ ಪಡೆದರೆ ತಾವು ನಿರುದ್ಯೋಗಿಗಳಾಗಬಹುದು ಎನ್ನುವುದು ಹನುಮಂತಪ್ಪ ಹಾಗೂ ಅವನ ಬಳಗದವರ ಅಂಜಿಕೆ.

ಎರಡನೆಯ ಅಂಕದ ದೃಶ್ಯ ಎರಡರಲ್ಲಿ ಜಯರಾಯರು ತಾನು ಪಾರ್ಟಿ ಆಫೀಸಿನಲ್ಲಿ ಏನು ಮಾತನಾಡಿದೆ? ಅದಕ್ಕೆ ಮೆಂಬರುಗಳು ಯಾವ ರೀತಿ ಉತ್ತರ ನೀಡಿದರು ಎಂಬುದನ್ನು ಹೇಳುತ್ತಾರೆ. ಊರಿನಲ್ಲಿ ಡ್ರೈನೇಜ್ ಇಲ್ಲ ಅಂದಾಗ ಒಬ್ಬ ಮೆಂಬರ್ ಅದನ್ನು ಮುಂಬೈಯಿಂದ ತರಿಸೋಣ ಎನ್ನುತ್ತಾನೆ. ಬರೇ ಪ್ರಶಸ್ತಿ ಪತ್ರ ಕೊಟ್ಟರೆ ಸಾಲದು ಎಂದಾಗ ಅದನ್ನು ರಿಜಿಸ್ಟರ್ ಮಾಡಿ ಕಳಿಸೋಣ ಎನ್ನುತ್ತಾನೆ. ಇವೆಲ್ಲ ಇಂದಿನ ಕಾಲಘಟ್ಟದಲ್ಲೂ ಕೂಡ ನಮಗೆ ಕೇಳಲು ಸಿಗುವ ಮಾತುಗಳು. ನಮ್ಮನ್ನು ಆಳುವ ಜನಪ್ರತಿನಿಧಿಗಳಿಗೆ ತಾವು ಸಭೆಯಲ್ಲಿ ಯಾರ ಬಗ್ಗೆ ಮಾತನ್ನಾಡುತ್ತಿದ್ದೇವೆ, ಏನನ್ನು ಹೇಳುತ್ತಿದ್ದೇವೆ ಎಂಬುದರ ಪರಿಜ್ಞಾನ ಇಲ್ಲದೇ ಹಾಸ್ಯಾಸ್ಪದ ವ್ಯಕ್ತಿಗಳಾಗುತ್ತಾರೆ. ನವೀಕರಣಗೊಳಿಸಿದ ತರಕಾರಿ ಮಾರುಕಟ್ಟೆಯ ಉದ್ಘಾಟನೆಗೆ ಮುನ್ಸಿಪಾಲಿಟಿ ಮೆಂಬರುಗಳು ಯಾರಾದರೂ ಮಂತ್ರಿಯನ್ನು ಕರೆಯೋಣ ಎಂದಾಗ ಜಯರಾಯರು ಬಾಗವಾನರ ಬಾಬುವೇ ತರಕಾರಿ ಮಾರುಕಟ್ಟೆಯ ನವೀಕರಣದ ಅಡಿಗಲ್ಲನ್ನು ಇಡಲಿ ಎನ್ನುತ್ತಾರೆ. ಮಾತ್ರವಲ್ಲ ಮಾರುಕಟ್ಟೆಯಲ್ಲಿ ತರಕಾರಿ ಮಾರಾಟ ಮಾಡಿದ ಅನುಭವ ಯಾವ ಮಂತ್ರಿಗೆ ಇದೆ? ಎಂದು ಪ್ರಶ್ನಿಸುತ್ತಾರೆ. ಮಹಾತ್ಮ ಅವರು ಹೇಳ್ತಿದ್ರು ದರಿದ್ರ

ನಾರಾಯಣನ ಸೇವೆಯೇ ದೇವರ ಸೇವೆ ಅಂತ. ತಾನು ಅದನ್ನೇ ನಂಬಿದವರು ಎನ್ನುತ್ತಾರೆ. ಹನುಮಂತಪ್ಪ ಹಾಗೂ ಅವನ ಬಳಗದವರಿಗೆ ಜಯರಾಯರ ಇಂಥ ಮಾತುಗಳಿಂದ ಮುಜುಗರ ಆಗುತ್ತದೆ.

ಈ ದೃಶ್ಯದಲ್ಲಿ ಇನ್ನೊಂದು ಘಟನೆ ನಡೆಯುತ್ತದೆ. ಮಹಾತ್ಮ ಗಾಂಧೀಜಿಯವರು ಇದ್ದ ಪ್ರಾರ್ಥನಾ ಸಭೆಯ ಮೇಲೆ ಬಾಂಬ್ ದಾಳಿ ಆದ ಸುದ್ದಿ ಬರುತ್ತದೆ. ಅದನ್ನು ಕೇಳಿದ ಜಯರಾಯರು ಹಾಗೂ ಹೆಂಡತಿ ರಂಗಮ್ಮ ಗಾಬರಿಯಾಗುತ್ತಾರೆ. ಸ್ವಾತಂತ್ರ್ಯ ಬಂದ ಐದು ತಿಂಗಳಿನಲ್ಲೇ ಗರ್ಭಪಾತ ಎಂದು ಮಾರ್ಮಿಕವಾಗಿ ಜಯರಾಯರ ಮಗ ಶ್ಯಾಮ ನುಡಿಯುತ್ತಾನೆ. ಬಳಿಕ ರೇಡಿಯೋ ಹಚ್ಚಿ ಕೇಳಿದಾಗ ಗಾಂಧೀಜಿಯವರಿಗೆ ಏನೂ ಆಗಿಲ್ಲ ಎಂದು ತಿಳಿದು ಅವರೆಲ್ಲ ನಿಟ್ಟುಸಿರು ಬಿಡುತ್ತಾರೆ. 'ಗಾಂಧೀಯವರು ಅಂದ್ರ ಮೂವತ್ತಮೂರು ಕೋಟಿ ಷಂಢರೊಳಗ ಪುರುಷತ್ವ ತುಂಬಿದ ಅಮರ ಮಾಯಾವಿ. ಅವರು ಕ್ಷೇಮ ಅಂದ್ರ ದೇಶಕ್ಕೇ ಕ್ಷೇಮ' ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಆಡುವ ಶ್ಯಾಮನ ಮಾತುಗಳು ನಮಗೆ ಮುಖ್ಯ ಎನಿಸುತ್ತವೆ. ಅವನು 'ಗಾಂಧೀಜಿಯ ಬೆನ್ನು ಹತ್ತಿದವರಿಗೆ ಶೋಕಚಕ್ರ. ಅವರನ್ನು ಬಿಟ್ಟವರಿಗೆ ಅಶೋಕ ಚಕ್ರ' ಎನ್ನುತ್ತಾನೆ. ಗಾಂಧೀಜಿಯವರು ತಮ್ಮ ಕಾಲದಲ್ಲಿಯೇ ಅಪ್ರಸ್ತುತಗೊಂಡದ್ದರ ಬಗ್ಗೆ ಶ್ರೀರಂಗರಿಗೆ ಇದ್ದ ವಿಷಾದ ಈ ರೀತಿಯಲ್ಲಿ ವ್ಯಕ್ತವಾಗಿದೆ ಎನ್ನಬಹುದು.

ನಾಟಕದ ಮೂರನೆಯ ಅಂಕ ನಿರ್ಣಾಯಕವಾದುದು. ಬಾಗವಾನರ ಬಾಬುವಿನಿಂದಲೇ ಮಾರುಕಟ್ಟೆಯ ಅಡಿಗಲ್ಲನ್ನು ಹಾಕಿಸುವ ನಿರ್ಣಯಕ್ಕೆ ಹನುಮಂತಪ್ಪನ ಬಳಗದವರೆಲ್ಲ ವಿರೋಧ ವ್ಯಕ್ತ ಪಡಿಸುತ್ತಾರೆ. ಪ್ರತಿಯೊಬ್ಬ ಸದಸ್ಯನೂ ಕೂಡ ತನ್ನ ಆಸೆ ಆಕಾಂಕ್ಷೆ ಈಡೇರದೇ ಇರುವ ಕಾರಣದಿಂದ ರಾಜೀನಾಮೆ ಕೊಡಲು ಮುಂದಾಗುತ್ತಾನೆ. ಹನುಮಂತಪ್ಪ ಜಯರಾಯನ ವಿರುದ್ಧ ಹೊಸ ಪಿತೂರಿ ಹೂಡುತ್ತಾನೆ. ಜಯರಾಯನು ತನ್ನ ಮನೆಯ ಹತ್ತಿರ ಮೋರಿ ಕಟ್ಟಿಸಿಕೊಂಡಿದ್ದಾನೆ ಎಂದೆಲ್ಲ ಸುಳ್ಳು ಸುದ್ದಿ ಹಬ್ಬಿಸುತ್ತಾನೆ. ಜಯರಾಯನ ಮೇಲೆ ಮಾಡಿದ ಆಪಾದನೆಗಳನ್ನು ಜನ ಸತ್ಯ ಎಂದೇ ನಂಬುತ್ತಾರೆ. ಜನವರಿ ಮೂವತ್ತರಂದು ಗಾಂಧಿ ಅವರ ಹತ್ಯೆ ಆಗುತ್ತದೆ. ಅದನ್ನೇ ನೆಪವಾಗಿ ಇಟ್ಟುಕೊಂಡು ಮಾರುಕಟ್ಟೆಯ ಚಪ್ಪರಕ್ಕೆ ಬೆಂಕಿ ಹಚ್ಚುತ್ತಾರೆ. ಗಲಾಟೆ ಸೃಷ್ಟಿ ಆಗುತ್ತದೆ. ಅಡಿಗಲ್ಲಿನ ಸಮಾರಂಭಕ್ಕೆ ಎಂದು ಹಾಕಿದ ಚಪ್ಪರಕ್ಕೆ ಬೆಂಕಿ ಬಿದ್ದದ್ದನ್ನು ಕಂಡ ರಂಗಮ್ಮ ಇಷ್ಟು ದಿನ ಮಹಾತ್ಮರು ತೋರಿದ ಬೆಳಕಲ್ಲಿ ನಡೆಯುತ್ತಿದ್ದೆವು. ಇಂದು ಬೆಂಕಿ ಸೃಷ್ಟಿ ಆಗಿದೆ ಎಂದು ಅರ್ಥ ಬರುವ ಮಾತುಗಳನ್ನು ಆಡುತ್ತಾಳೆ. ಗಾಂಧೀಜಿ ಅವರ ಹತ್ಯೆಯ ಕಾರಣದಿಂದ ಎಲ್ಲರಿಗೂ ರಜೆಯನ್ನು ಕೊಟ್ಟ ಜಯರಾಯರು ಗಲಾಟೆ ನಡೆಯುವ ಸ್ಥಳಕ್ಕೆ ಬರುತ್ತಾರೆ. ಆಕ್ರೋಶಕ್ಕೆ ಒಳಗಾದ ಜನ ಕಲ್ಲು ತೂರುತ್ತಾರೆ. ಗದ್ದಲದಲ್ಲಿ ಜಯರಾಯರ ದವಡೆಗೂ ಪೆಟ್ಟು ಬೀಳುತ್ತದೆ. ಡಾಕ್ಟರ ಹತ್ತಿರ ತೋರಿಸಿ ಗಾಯಕ್ಕೆ ಔಷಧಿ ಹಚ್ಚಿಕೊಂಡು ಜಯರಾಯರಾಯರು ಡಾಕ್ಟರರ ಕಾರಿನಲ್ಲೇ ಮನೆಗೆ ಬರುತ್ತಾರೆ. ಎಲ್ಲರೂ ರಾಜೀನಾಮೆ ಕೊಟ್ಟ ಕಾರಣದಿಂದ ನೀವು ಒಂಟಿಯಾದಿರಿ ಎಂದು ರಂಗಮ್ಮ ನುಡಿಯುತ್ತಾಳೆ. ಆಗ ಜಯರಾಯರು ನಾನೆಲ್ಲಿ ಒಂಟಿ? ಕೈ ಹಿಡಿದು ನಡೆಸುವ ಹೆಂಡತಿ, ಮನದ ಇಚ್ಛೆಯನ್ನು ಗ್ರಹಿಸುವ ಮಗ, ಗೋವಿಂದಪ್ಪ ಹೀಗೆ ಎಲ್ರೂ ಇರುವಾಗ ತಾನು ಒಂಟಿಯಲ್ಲ ಎಂದು ಜಯರಾಯರು ಹೇಳುತ್ತಾರೆ. ಹನುಮಂತಪ್ಪ ಎಲ್ಲ ಗಲಾಟೆಯನ್ನು ಸೃಷ್ಟಿ ಮಾಡಿದ್ದರೂ ಏನೂ

ಗೊತ್ತಿಲ್ಲದವರಂತೆ ಜಯರಾಯನ ಮನೆಗೆ ಬರುತ್ತಾನೆ. ತನ್ನ ಗೋಸುಂಬೆತನವನ್ನು ಪ್ರದರ್ಶಿಸುತ್ತಾನೆ. ಪಾರ್ಟಿ ಇಲ್ಲದೇ ಒಬ್ಬರೇ ಆಡಳಿತ ಮಾಡುವುದು ಬಲುಕಷ್ಟ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. ಜಯರಾಯರು ಅವನ ಗೋಸುಂಬೆ ಪ್ರವೃತ್ತಿಯನ್ನು ಗ್ರಹಿಸಿರುತ್ತಾರೆ. ಅವರು ಯಾವುದಕ್ಕೂ ಜಗ್ಗುವವರಲ್ಲ ಎಂದು ಅವನಿಗೆ ತಿಳಿಯುತ್ತದೆ. ಹಳೆಯ ಮುದುಕನಾದ ತನ್ನಂಥವರಿಗೆ ಬುದ್ಧಿ ಬರಲಿ ಎಂದು ಎರಡು ಏಟು ಕೊಟ್ಟರು ಎಂದು ಹೇಳುತ್ತ ಬಿದ್ದ ಪೆಟ್ಟಿನ ಬಗ್ಗೆ ಉದಾರವಾದಿ ನಿಲುವಿನಿಂದ ಮಾತನಾಡುತ್ತಾರೆ. ಹನುಮಂತಪ್ಪ ಜಯರಾಯನ ನಿಲುವಿನಿಂದ ವಿಚಲಿತನಾಗುತ್ತಾನೆ. ಅರೆ ಇದೇನು ಮಾಟ ಮಾಡಿದ ಹಾಗೆ, ತಲೆ ಚಕ್ರ ಬಂದ ಹಾಗೆ ಎಂದು ಹೇಳುತ್ತ ಕುಸಿಯುತ್ತಾನೆ. ಆಗ ಜಯರಾಯನ ಮಗ ಇದು ಅಂತಿಂಥ ಚಕ್ರ ಅಲ್ಲ ಶೋಕಚಕ್ರ ಎನ್ನುತ್ತಾನೆ.

ಶ್ರೀರಂಗರು 1956 ರಲ್ಲಿ ಬರೆದ ನಾಟಕ ಇದು. ಗಾಂಧಿ ಯುಗದಿಂದ ಪ್ರಭಾವಿತರಾಗಿದ್ದ ಶ್ರೀರಂಗರು ನಂತರ ನೆಹರು ಯುಗದ ಆಳ್ವಿಕೆಯಿಂದ ಭ್ರಮ ನಿರಸನಗೊಂಡವರು. ಸಂಸ್ಕೃತ, ಭಾರತೀಯ ಪರಂಪರೆ, ಸನಾತನ ಸಂಸ್ಕೃತಿ ಇತ್ಯಾದಿಗಳ ಕುರಿತು ಒಲವನ್ನು ಹೊಂದಿದ್ದರು. ಹಾಗಾಗಿ ಶೋಕಚಕ್ರದಂಥ ನಾಟಕದಲ್ಲಿ ಕೆಟ್ಟದ್ದನ್ನು ಬಯಸುವವರಿಗೆ ಕೆಡುಕೇ ಆಗುತ್ತದೆ ಎನ್ನುವ ಸ್ಥಾಪಿತ ನಂಬಿಕೆಯ ಮರುರೂಪಣೆಯನ್ನು ಮಾಡಿದ್ದಾರೆ. ವಾಸ್ತವವಾಗಿ ಆ ರೀತಿ ಆಗುತ್ತಿಲ್ಲ ಎನ್ನುವುದು ಗೊತ್ತಿರುವ ವಿಚಾರ. ಪ್ರಜಾಪ್ರಭುತ್ವದ ವ್ಯಂಗ್ಯ ನಿರೂಪಣೆ, ಸಾಂಪ್ರದಾಯಿಕ ಚಿಂತನೆ ಇವೆರಡೂ ಮೇಳೈಸಿದ ಕೃತಿ ಶೋಕಚಕ್ರ ನಾಟಕ ಎಂದರೆ ತಪ್ಪಾಗಲಾರದು.

(ದಿನಾಂಕ 12 ಅಕ್ಟೋಬರ್ 2021 ರಂದು ಅಕಾಡೆಮಿಯು ಸಂಯೋಜಿಸಿದ 'ಮನೋರಂಗದಲ್ಲಿ ಕನ್ನಡ ನಾಟಕಗಳು' ಮಾಲಿಕೆಯಲ್ಲಿ ಮಾಡಿದ ಭಾಷಣದ ಸಂಕ್ಷಿಪ್ತ ರೂಪ. ಈ ಟಿಪ್ಪಣಿಗಳನ್ನು ತಯಾರಿಸಲು ಅಗತ್ಯ ಮಾಹಿತಿಗಳನ್ನು ನೀಡಿದ ಶ್ರೀ ಮುರಳೀಧರ ಉಪಾಧ್ಯ ಹಿರಿಯಡಕ ಹಾಗೂ ಪೂರ್ಣಪ್ರಜ್ಞ ಕಾಲೇಜಿನ ಸಹ ಗ್ರಂಥಪಾಲಕರಾದ ಶ್ರೀ ವಿನಯ್ ಕುಮಾರ್ ಅವರಿಗೆ ಕೃತಜ್ಞನಾಗಿದ್ದೇನೆ.– ಲೇಖಕ)

❖❖❖

ನನ್ನ ನೆರಳೆ ಹೊಂಚಿ ನನ್ನ
ನೋಡುತಿರುವುದು
ನನ್ನ ಹಿಂದೆ ಅಲೆದು ಅಲೆದು
ಕಾಡುತಿರುವುದು

ರಾಘವಾಂಕನ ಹರಿಶ್ಚಂದ್ರ ಕಾವ್ಯ : ವಿಭಿನ್ನ ಆಯಾಮಗಳು

ಡಾ. ದೇವಿಕ ಎಸ್.
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯವು ಅನೇಕ ಪಲ್ಲಟಗಳಿಗೆ ಎಡೆಮಾಡಿಕೊಟ್ಟಿತ್ತು. ಜಗತ್ತಿನ ಇತಿಹಾಸದಲ್ಲಿ ಎಲ್ಲೂ ನಡೆಯದ ಸಾಮಾಜಿಕ ಕ್ರಾಂತಿಗೆ ಕಾರಣರಾದವರು ವಚನಕಾರರು. ವಚನಗಳು ಅಧ್ಯಾತ್ಮ ಚಿಂತನೆಯೊಂದಿಗೆ ಸಮಾಜವನ್ನು ತಿದ್ದುವ ಆಶಯವನ್ನು ಕೂಡ ಹೊಂದಿದ್ದವು. ಈ ರೀತಿಯ ಸಾಮಾಜಿಕ ಆಂದೋಲನ ಮಧ್ಯಕಾಲೀನ ಸಂದರ್ಭದ ಕವಿಗಳ ಮೇಲೆ ಮುಂದುವರೆದ ಹಂತದಲ್ಲಿ ಹೆಚ್ಚು ಪರಿಣಾಮ ಬೀರಿತು. ಭಕ್ತಿಕವಿಗಳು ಯಾವ ರಾಜಾಶ್ರಯವನ್ನೂ ಅಪೇಕ್ಷಿಸದೆ ತಮ್ಮದೇ ಆದ ಧಾರ್ಮಿಕ, ತಾತ್ತ್ವಿಕ ನೆಲೆಯಲ್ಲಿ ಭಕ್ತಿಯ ಸ್ವರೂಪವನ್ನು ಹುಡುಕಲು ಹೊರಟವರು.

ಶೈವಧರ್ಮ ಪ್ರಬಲವಾಗಿದ್ದು ಶರಣ ಚಳುವಳಿ ತನ್ನೊಳಗಿನ ಸಮಸ್ಯೆಗಳಿಂದ ಬೇರೆಯವರ ಹುನ್ನಾರಗಳಿಂದ ಶಿಥಿಲಗೊಂಡ ಮೇಲೆ ವೀರಶೈವಧರ್ಮದ ಪ್ರಾತಿನಿಧಿಕ ಕವಿ ಹರಿಹರ ನಮಗೆ ಸಿಗುತ್ತಾನೆ. ಹರಿಹರ ಅಪ್ಪಟ ಶಿವಭಕ್ತನಾಗಿದ್ದ ಕವಿ. ಈತನಿಗಿಂತ ಒಂದುನೂರು ವರ್ಷಗಳ ಹಿಂದಿನ ವಚನಕಾರರ ಬಗ್ಗೆ ತಮಿಳಿನ ಶೈವ ಪುರಾತನರ ಬಗ್ಗೆ ರಗಳೆಗಳನ್ನು ಬರೆದಿದ್ದಾನೆ. ವೀರಶೈವ ಧರ್ಮಕ್ಕೆ ಸಂಬಂಧಿಸಿದವರ ಬಗ್ಗೆ ರಗಳೆಗಳನ್ನು ಬರೆಯುವುದು ಜೀವನದ ಪರಮಧ್ಯೇಯ ಎಂದು ನಂಬಿದ್ದ ಕವಿ ಈತ.

ಈ ಸಂದರ್ಭದಲ್ಲಿ ನಮಗೆ ಬಹಳ ಮುಖ್ಯವಾದ ಮತ್ತು ಇಂದಿಗೂ ಚರ್ಚೆಗೆ ಗ್ರಾಸವಾಗಿರುವ ಕೃತಿ ರಾಘವಾಂಕನ 'ಹರಿಶ್ಚಂದ್ರಕಾವ್ಯ'. ರಾಘವಾಂಕನ ಹರಿಶ್ಚಂದ್ರ ಕಾವ್ಯ ಹಲವಾರು ದಿಕ್ಕುಗಳಿಂದ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಸಾಮಾನ್ಯವಾಗಿ ವಿಮರ್ಶಕರು ಈ ಕಾವ್ಯವನ್ನು ಕುರಿತು ವಿಮರ್ಶೆ ಮಾಡುವಾಗ ಕಾವ್ಯದಲ್ಲಿಯೇ ಉಲ್ಲೇಖಿತವಾಗಿರುವಂತೆ 'ಸತ್ಯವೆಂಬುದೇ ಹರ, ಹರನೆಂಬುದೇ ಸತ್ಯ' ಎಂಬ ಧ್ಯೇಯವಾಕ್ಯಕ್ಕೆ ಪೂರಕವಾಗುವಂತೆ ಚರ್ಚೆ ಮಾಡುತ್ತಾರೆ. 'ಸತ್ಯ' ಎನ್ನುವುದು ಸಮಾಜಕ್ಕೆ ಅನಿವಾರ್ಯವಾದ ಒಂದು ಸಾರ್ವಕಾಲಿಕ ಮೌಲ್ಯ. ಇದು ಸತ್ಯ ಎನ್ನುವುದು ಸಮಾಜಕ್ಕೆ ತುಂಬಾ ಮುಖ್ಯವಾದುದ್ದು ಎಂಬುದನ್ನು ನಮ್ಮ ಜಾನಪದರು ಹಾಡಿದ 'ಗೋವಿನಹಾಡು' ಗೀತೆಯಲ್ಲಿ ಉಲ್ಲೇಖಿಸಿದ್ದಾರೆ. ಆನಂತರದಲ್ಲಿ ಸಮಾಜದ ಎಲ್ಲ ವರ್ಗಗಳ ಜನರನ್ನು ಒಗ್ಗೂಡಿಸಲು ಹೊರಟಾಗ ಬಸವಣ್ಣನಿಗೆ ಈ ಮೌಲ್ಯದ ಕೊರತೆ ಕಂಡಿರಬೇಕು. ಈ ದೃಷ್ಟಿಯಿಂದಲೇ ಬಸವಣ್ಣನ 'ನುಡಿದರೆ ಮುತ್ತಿನ ಹಾರದಂತಿರಬೇಕು' ವಚನ ರಚನೆಯಾಗಿರುವಂತದು.

ಹರಿಶ್ಚಂದ್ರ ಸೂರ್ಯವಂಶದ ದೊರೆ. ವಂಶಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದು ಮತ್ತು ಅದಕ್ಕೆ ಏನಾದರೂ ವಿಘ್ನಗಳು ಬಂದರೆ ನಿವಾರಿಸುವುದು ಈತನ ಆದ್ಯ ಕರ್ತವ್ಯ. ದೇವೇಂದ್ರನ ಆಸ್ಥಾನದಲ್ಲಿ ಮರ್ತ್ಯಲೋಕದಲ್ಲಿರುವ ಜನರಲ್ಲಿರುವ ಸಾಮಾಜಿಕ

ಮೌಲ್ಯಗಳ ಬಗ್ಗೆ ಚರ್ಚೆ ನಡೆಯುತ್ತದೆ. ಆ ಸಂದರ್ಭದಲ್ಲಿ ವಸಿಷ್ಠ ಮತ್ತು ವಿಶ್ವಾಮಿತ್ರರ ಸಂವಾದದ ಸವಾಲುಗಳಿಗೆ ಹರಿಶ್ಚಂದ್ರ ಬಲಿಯಾಗುತ್ತಾನೆ. ಆತ ಸತ್ಯ ಎನ್ನುವ ಮೌಲ್ಯದ ಪ್ರತಿಪಾದಕನಾಗಿ ನಿಲ್ಲಬೇಕಾಗುತ್ತದೆ.

ಹರಿಶ್ಚಂದ್ರನ ಕಥೆ ವೇದಗಳಿಗಿಂತಲು ಹಳೆಯದು ಆದರೆ 12ನೇ ಶತಮಾನದ ಸಂದರ್ಭದಲ್ಲಿ ಈ ಕೃತಿ ಮತ್ತೆ ರಚನೆಗೊಂಡ ಹಿನ್ನೆಲೆಯನ್ನು ನಾವು ಗಮನಿಸಬೇಕಾಗುತ್ತದೆ. ರಾಘವಾಂಕನ 'ಹರಿಶ್ಚಂದ್ರಕಾವ್ಯ'ದಲ್ಲಿ ಸಪ್ತಮ ಸ್ಥಲವು ಆತನ ಉಜ್ವಲ ಕಾವ್ಯಪ್ರತಿಭೆಗೆ ಸಾಕ್ಷಿಯಾಗಿದೆ. ಕುವೆಂಪು ಅವರು 'ಹರಿಶ್ಚಂದ್ರಕಾವ್ಯದ ವಾಚನ ರಸಿಕರಿಗೊಂದು ರಸಯಾತ್ರೆ' ಎಂದು ಹೇಳಿದ್ದಾರೆ. ಆತನ ಇಡೀ ಕಾವ್ಯವೇ ಅದಕ್ಕೆ ಸಾಕ್ಷಿಯಾಗಬಹುದಾದರೂ, ಈ ಪ್ರಸಂಗ ಮಾತ್ರ, ತನ್ನ ಕಾವ್ಯಸೌಂದರ್ಯದಿಂದ ವೈಚಾರಿಕ ಸಂಘರ್ಷದಿಂದ, ಆತನ ಪ್ರತಿಭೆಗೆ ಕೈಗನ್ನಡಿಯಾಗಿದೆ. ಸಂದರ್ಭ ಹೀಗಿದೆ: ತಾನು ಸೃಷ್ಟಿಸಿದ ಹಂದಿ, ಹರಿಶ್ಚಂದ್ರನ ಬಾಣಗಳಿಂದ ಗಾಯಗೊಂಡು ಬಂದಿದೆ. ಅದನ್ನು ನೋಡಿ ಕುಪಿತನಾದ ವಿಶ್ವಾಮಿತ್ರ 'ಸಿಕ್ಕಿದನಲಾ ಭೂಪನ್ ಇಂದು. ನಾನಾಯ್ತು ತಾನಾಯ್ತು, ಕೆಡಿಸದೆ ಮಾಣೆನ್' ಎಂದು ಹೂಂಕರಿಸಿದಾಗ ಯುವತಿಯರಿಬ್ಬರು ಸೃಷ್ಟಿಯಾಗುತ್ತಾರೆ. ಆತನ ಆಜ್ಞೆಯಂತೆ, ಅವರಿಬ್ಬರು ಹರಿಶ್ಚಂದ್ರನಿದ್ದಲ್ಲಿಗೆ ಬಂದು, ಹಾಡಿ ನರ್ತಿಸಿ ಅವನನ್ನು ಸಂತೋಷಪಡಿಸುತ್ತಾರೆ. ಆದರೆ ಆತ ಕೊಡಲುದ್ದೇಶಿಸಿದ ಕೊಡುಗೆಯನ್ನು ನಿರಾಕರಿಸಿ ತಮ್ಮನ್ನು ಮದುವೆಯಾಗುವಂತೆ ಹಠ ಹಿಡಿಯುತ್ತಾರೆ. ಆದರೆ, ಹರಿಶ್ಚಂದ್ರ ಅವರನ್ನು ಮದುವೆಯಾಗದಿರುವುದಕ್ಕೆ ಕೊಡುವ ಕಾರಣ ಅವರ ಜಾತಿ! ಈ ಜಾತಿವಿಶ್ಲೇಷಣೆಯನ್ನು ರಾಘವಾಂಕ ಹೇಗೆ ನೆಡೆಸಿದ್ದಾನೆ? ಅದರ ಬಗ್ಗೆ ಆತನ ನಿಲುವೇನು? ಇಂತಹ ಒಂದು ವೈಚಾರಿಕ ಸಂಘರ್ಷವನ್ನು ಕಾವ್ಯದಲ್ಲಿ ರಾಘವಾಂಕ ಕಲಾತ್ಮಕವಾಗಿ ಅಭಿವ್ಯಕ್ತಿಸಿದ್ದಾನೆಯೆ? ಅದಕ್ಕೆ ಆತ ಕಂಡುಕೊಂಡ ಉಪಾಯವೇನು? ಎಂಬುದನ್ನು ನಾವು ಮನಗಾಣಬೇಕಾಗಿದೆ.

ಕಾವ್ಯದಲ್ಲಿ ವಿಶ್ವಾಮಿತ್ರ ಹರಿಶ್ಚಂದ್ರನನ್ನು ತನ್ನ ಮಾಯಾಜಾಲದ ಶಕ್ತಿಯಿಂದ ಸೃಷ್ಟಿಸಿದ ಪ್ರಾಣಿಗಳ ದೆಸೆಯಿಂದ ಆತನ ಆಶ್ರಮವನ್ನು ಪ್ರವೇಶ ಮಾಡುವ ಹಾಗೆ ಮಾಡುತ್ತಾನೆ. ಆ ಸಂದರ್ಭದಲ್ಲಿ ವಿಶ್ವಾಮಿತ್ರ ಸೃಷ್ಟಿಸಿದ ಯುವತಿಯರ ಪ್ರವೇಶವಾಗುತ್ತದೆ. ಮುನಿಗೆ ಹೊಂದದ ಗುಣಗಳು ಯಾವುವೆಂದರೆ, ಅತಿಕೋಪ, ಬದ್ಧದ್ವೇಷ, ಅನಿಮಿತ್ತ ವೈರ– ಇವುಗಳು. ಈ ಮೂರು ಕೆಟ್ಟಗುಣಗಳು ಯಾವುದೇ ಮುನಿಗೆ ಇರಬಾರದು. ಆದರೆ ವಿಶ್ವಾಮಿತ್ರನಲ್ಲಿ ಮನೆಮಾಡಿಕೊಂಡಿದ್ದ ಈ ಗುಣಗಳಿಂದ ಹುಟ್ಟಿದವರು ಈ ಯುವತಿಯರು.

ತಮ್ಮ ಗಾನ ನೃತ್ಯಗಳಿಂದ ರಾಜನನ್ನು ಸಂತೋಷಗೊಳಿಸಿದ ಗಾನರಾಣಿಯರು ಬಹುಮಾನ ಕೇಳುತ್ತಾರೆ. ಹರಿಶ್ಚಂದ್ರನು ಗಾನರಾಣಿಯರಿಗೆ ಮುತ್ತಿನ ಮಣಿಹಾರವನ್ನು ಉಡುಗೊರೆಯಾಗಿ ನೀಡಲು ಹೋದನು. ಅವನ ಕೊರಳ ಮುತ್ತಿನ ಸರ ಅವರಿಗೆ ಅಪ್ರಯೋಜಕವಾದದ್ದು. ಆಭರಣಕ್ಕೆ ಆಸೆ ಪಡದ ಗಾನರಾಣಿಯರು ಅಸಮ್ಮತಿಯ ಧ್ವನಿಯಲ್ಲಿ ಒತ್ತಾಯ ಪಡಿಸುತ್ತಾರೆ.

ಬಡತನದ ಹೊತ್ತು ಆನೆ ದೊರಕಿ ಫಲವೇನು?
ನೀರಡಸಿರ್ದ ಹೊತ್ತು ಆಜ್ಯ ದೊರಕಿ ಫಲವೇನು?
ರುಜೆ ಅಡಸಿ ಕೆಡೆದಿಹ ಹೊತ್ತು ರಂಭೆ ದೊರಕೊಂಡಲ್ಲಿ ಫಲವೇನು?

ಎಂದು ಮುಂತಾಗಿ ಮರುಪ್ರಶ್ನೆಗಳನ್ನು ಕೇಳುತ್ತಾ ಗಾನರಾಣಿಯರು ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸುತ್ತಾರೆ.

"ಈ ಪೊತ್ತಿನ ಸುಡುಸುಡನೆ ಸುಡುವ ಬಿರುಬಿಸಿಲ ಸೆಕೆ ಉಸುರ ಬಿಸಿ ಹೊಡದುದು ಉರಿಹೊತ್ತಿ ಬಾಯ್ಬತ್ತಿ ಡಗೆ ಸುತ್ತಿ ಸಾವಡಸುತ್ತಿದೆ" ಎಂದು ಹೇಳುವ ಅವರು ಕೇಳುವುದು ಹೀಗೆ– "ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜ"

ಅವರು ಮುತ್ತಿನ ಸತ್ತಿಗೆಯನ್ನು ಕೇಳಿದಾಗ ಹರಿಶ್ಚಂದ್ರನಿಗೆ ದಿಗಿಲಾಗುತ್ತದೆ.

"ರವಿಕುಲದ ಪೀಳಿಗೆಯೊಳ್ ಒಗೆದ ರಾಯರ್ಗೆ ಪಟ್ಟವ ಕಟ್ಟುವಂದು

ಇದು ಇಲ್ಲದೊಡೆ ಅರಸುತನ ಸಲ್ಲದು ಅವನಿಯೊಳು" ಎಂದು ಹೇಳುವ ಅವನು

"ಅರಿದು ಅರಿದು ಸತ್ತಿಗೆಯ ಕೊಡಬಹುದೆ?" ಎಂದು ಕೇಳುತ್ತಾನೆ. ಆ ಸತ್ತಿಗೆಯನ್ನು ಸೂರ್ಯ ವಂಶದವರಿಗಲ್ಲದೆ ಬೇರೆಯವರಿಗೆ ಕೊಡಲು ಬರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ ಗಾನರಾಣಿಯರ ಬೇಡಿಕೆಯನ್ನು ತಳ್ಳಿಹಾಕುತ್ತಾನೆ.

ಆನಂತರದಲ್ಲಿ ಗಾನರಾಣಿಯರು ತಮ್ಮನ್ನು ಮದುವೆಯಾಗಬೇಕಂದು ಕೇಳುತ್ತಾರೆ.

ಮುತ್ತಿನ ಸತ್ತಿಗೆಯನ್ನು ಕೊಡಲು ಹರಿಶ್ಚಂದ್ರ ನಿರಾಕರಿಸಿದ ನಂತರದ ಸಂದರ್ಭದಲ್ಲಿ ಪಂಚೇಂದ್ರಿಯಗಳ ಚರ್ಚೆ ಬರುತ್ತದೆ. ಈ ಚರ್ಚೆಯು ಹನ್ನೆರಡನೆಯ ಶತಮಾನದ ವಚನಗಳ ಹಿನ್ನೆಲೆಯನ್ನು ಹೊಂದಿರುವಂತಿದೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಸಾಮಾಜಿಕ ಪಲ್ಲಟಗಳ ಪ್ರಭಾವವನ್ನು ಇಲ್ಲಿ ಗಮನಿಸಬಹುದು.

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ

ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪನೆರೆ

ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ ಸುಳಿವತಂಗಾಳಿಯಿಂ

ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ

ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ

ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ ಎಂದರು

ಗಾನರಾಣಿಯರ ಪ್ರಕಾರ ಹಾಡನ್ನು ಆಲಿಸಿದ ಕಿವಿಗೆ ಹೊಲೆಯಿಲ್ಲ, ದೇಹದ ಸುವಾಸನೆ ಆಘ್ರಾಣಿಸಿದ ಮೂಗಿಗೆ ಹೊಲೆಯಿಲ್ಲ, ರೂಪವನ್ನು ನೋಡಿದ ಕಣ್ಣುಗಳಿಗೆ ಹೊಲೆಯಿಲ್ಲ, ನಮ್ಮ ಹಾಡಿ ಹೊಗಳಿದ ನಾಲಗೆಗೆ ಹೊಲೆಯಿಲ್ಲ ಈಗ ನಮ್ಮ ನಮ್ಮನ್ನು ಮದುವೆಯಾಗಲು/ಮುಟ್ಟಲು ಕೋರಿದಾಗ ನಿನ್ನ ಸ್ಪರ್ಶಕ್ಕೆ ಹೊಲೆತನವೇ? ಎಂದು ಪ್ರಶ್ನಿಸುತ್ತಾರೆ.

ಅಸ್ಪೃಶ್ಯತೆಯನ್ನು ಆಚರಿಸುವವರಿಗೆ ಈ ಪ್ರಶ್ನೆ ಕೊಡಲಿ ಏಟು. ಪಂಚೇಂದ್ರಿಯಗಳಲ್ಲಿ ನಾಲ್ಕು ಅಧಮ ಒಂದು ಅಧಿಕವೇ? ಎನ್ನುವ ಪ್ರಶ್ನೆಗೆ ಉತ್ತರಿಸಲಾಗದೆ ಹರಿಶ್ಚಂದ್ರ ಅಸಹಾಯಕನಾಗುತ್ತಾನೆ. ಹೀಗೆ ಉತ್ತರವಿಲ್ಲದವನಾದ ಹರಿಶ್ಚಂದ್ರ ಅವರಿಗೆ ಬಾಸುಂಡೆ ಬರುವ ಹಾಗೆ ಹೊಡೆಯುತ್ತಾನೆ. ನಂತರ ವಿಶ್ವಾಮಿತ್ರ ಹೇಳುವುದು ಕೂಡ ಅದನ್ನೇ. ನನ್ನ ಮಕ್ಕಳನ್ನು ಮದುವೆಯಾಗದಿದ್ದರೆ ರಾಜ್ಯ ಭ್ರಷ್ಟನನ್ನಾಗಿ ಮಾಡುತ್ತೇನೆ ಎಂದು ತೊಡಗಿದ ವಿಶ್ವಾಮಿತ್ರನ ಒತ್ತಾಯವನ್ನೂ ಹರಿಶ್ಚಂದ್ರ ಒಪ್ಪುವುದಿಲ್ಲ. ಮದುವೆಯನ್ನು ನಿರಾಕರಿಸಿ ರಾಜ್ಯ ಭ್ರಷ್ಟತೆಗೆ ಒಳಗಾಗುತ್ತಾನೆ. ಕತೆ ಮುಂದಿನದ್ದು ಎಲ್ಲರಿಗೂ ತಿಳಿದಿದೆ. ಆದರೆ ಮಧ್ಯೆ ಅವನಿಗೆ ಕಷ್ಟ ಬಂದ ಅನೇಕ ಸಂದರ್ಭಗಳಲ್ಲಿ ವಿಶ್ವಾಮಿತ್ರ ಗಾನರಾಣಿಯರನ್ನು ಮದುವೆಯಾಗಲು ಒಪ್ಪುವುದಾದರೆ ಸಮಸ್ತ ರಾಜ್ಯವನ್ನು ಹಿಂದಿರುಗಿಸುವುದಾಗಿ

ಹೇಳುತ್ತಾನೆ. ಆದರೆ ಹರಿಶ್ಚಂದ್ರ ಅದಕ್ಕೆ ಒಪ್ಪದೆ ಕಷ್ಟಗಳಿಗೆ ಗುರಿಯಾಗುತ್ತಾನೆ.

ಗಮನಿಸಬೇಕಾದ ಸಂಗತಿಯೇನೆಂದರೆ ಗಾನರಾಣಿಯರನ್ನು ಅವರ ಜಾತಿಯ ಕಾರಣದಿಂದಾಗಿ ಮದುವೆಯಾಗಲು ನಿರಾಕರಿಸಿದ ಹರಿಶ್ಚಂದ್ರನು ಕೊನೆಗೆ ತನ್ನನ್ನು ತಾನು ಸ್ಮಶಾನದ ಒಡೆಯನಾದ ಚಾಂಡಾಲನಿಗೆ ಮಾರಿಕೊಳ್ಳುತ್ತಾನೆ; ಅವನ ದಾಸನೇ ಆಗುತ್ತಾನೆ. ಅಲ್ಲಿ ಅವನಿಗೆ ವಂಶಪ್ರತಿಷ್ಠೆ ಅಡ್ಡಬರುವುದಿಲ್ಲ. ಅತ್ಯಂತ ನಿಷ್ಠೆಯಿಂದ ಮಸಣ ಕಾಯುವ ಕಾಯಕವನ್ನು ಅವನು ಮಾಡುತ್ತಾನೆ. ಮುಂದೆ ಚಂದ್ರಮತಿಯು ಮಗನ ಮೃತದೇಹವನ್ನು ಸುಡಲು ಬಂದ ಸಂದರ್ಭದಲ್ಲಿ ಕೂಡ ಅವನು ತನ್ನ ಕಾಯಕ ನಿಷ್ಠೆ ಮತ್ತು ಒಡೆಯನಿಗೆ ನಿಯತ್ತಾಗಿರಬೇಕು ಎನ್ನುವ ತತ್ತ್ವವನ್ನು ಬಿಟ್ಟುಕೊಡುವುದಿಲ್ಲ. ವ್ಯಕ್ತಿಯಾಗಿ ಹರಿಶ್ಚಂದ್ರ ಚಾಂಡಾಲವೃತ್ತಿಗೆ ಹೇಸುವುದಿಲ್ಲ. ಆದರೆ ವಿವಾಹಸಂಬಂಧಕ್ಕೆ ಮಾತ್ರ ಅವನಿಗೆ ಗಾನರಾಣಿಯರ 'ಹುಟ್ಟು' ಅಡ್ಡಬರುತ್ತದೆ.

ಪರಾಮರ್ಶನ ಗ್ರಂಥಗಳು

1. ಹರಿಶ್ಚಂದ್ರ ಕಾವ್ಯ ಸಂಗ್ರಹ – ಸಂ. ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ, ಮೈ.ವಿ.ವಿ.–1931
2. ಹರಿಶ್ಚಂದ್ರಕಾವ್ಯ – ಸಂ. ಎನ್. ಬಸವಾರಾಧ್ಯ ಮತ್ತು ಪಂಡಿತ್ ಬಸಪ್ಪ, ಮೈಸೂರು–1955
3. ರಾಘವಾಂಕನ ಸಮಗ್ರ ಕೃತಿಗಳು, ಸಂ ಎಂ.ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ–1999
4. ರಾಘವಾಂಕನ ಹರಿಶ್ಚಂದ್ರ ಕಾವ್ಯ – ಎನ್. ರಂಗನಾಥಶರ್ಮ–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2010
5. ಗಾಣರಾಣಿಯರು : ರಾಘವಾಂಕನ ಅದ್ಭುತ ಸೃಷ್ಟಿ! – ಲೇಖಕರು: ಬಿ.ಆರ್. ಸತ್ಯನಾರಾಯಣ –ಅವಧಿ ಪತ್ರಿಕೆ – ಜುಲೈ 11, 2013

❖❖❖

ಕನಸಿನಲ್ಲಿ ಕಂಡ ರೂಪ
ಕರಗಿ ಹೋದರೂ
ಮನಸಿನಲ್ಲಿ ಅಚ್ಚುಗೊಂಡು
ಮರಳಿ ಬಂದಿತು

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 12, Issue 3, January - March 2024
Included in UGC - CARE List
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
www.chinthanabayalu.in
Printed at
Aakrithi Prints
Light House Hill Road, Mangaluru - 575 001
Pages : 128

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್

ಬಂಟ್ವಾಳ ಮೂಡ ಶಾಖೆಯಲ್ಲಿ

ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com